ಶ್ರೀ ಕರಿಗಿರಿ ಮಹಾತ್ಮೆ

(ದೇವರಾಯನ ದುರ್ಗದ ಮಹಾತ್ಮೆ)



ವಿದ್ವಾನ್ ಶ್ರೀ ಕೆ.ಎಲ್. ಪುಷ್ಕರಾಚಾರ್ಯ

ಶ್ರೀಬ್ರಹ್ಮಾಂಡ ಪುರಾಣೋಕ್ತ

ಶ್ರೀಕರಿಗಿರಿ ಮಾಹಾತ್ಮ್ಯೆ

(ದೇವರಾಯನ ದುರ್ಗದ ಮಹಾತ್ಮೆ)

ಲೇಖಕರು

ವೇದವಾರಿಧಿ, ಶಾಸ್ತ್ರನಿಧಿ, ಪುರಾಣಭಾಸ್ಕರ,

ವಿದ್ವಾನ್॥ ಶ್ರೀ ಕೆ. ಎಲ್. ಪುಷ್ಕರಾಚಾರ್ಯ **M.A.**

ಪ್ರಕಾಶಕರು:

ಶ್ರೀ ಹಂಸಧ್ವಜ ಪ್ರತಿಷ್ಠಾನ

ನಂ. 50/1, 3ನೇ ಮುಖ್ಯ ರಸ್ತೆ,

ಚಾಮರಾಜಪೇಟೆ, ಬೆಂಗಳೂರು

560018.

Ph: 26511011

Shri Karigiri Mahatme

Published By:

Sri Hamsadhvaja Prathishtana,
No. 50/1, 3rd Main Road, Chamaraj Pet
Bangalore - 560 018
Ph: (80) 26511011, Mob: 94483 14773

Translated by :
Sri Vidwan K. L. Pushkaracharya

Conglomeration by:
Sri Purushottamachar S. Kadagarttur

Price :

Printed at:
Omkar Offset Printers
No.3/4, 1st Main Road
New Tharagupet, Bangalore-560 002.
Phone : (080) 26709026, 26708186
E-mail : omkar@blr.vsnl.net.in
Website : www.omkarprinters.com

ಪ್ರಕಾಶಕರ ನುಡಿ

ಶ್ರೀ ಮನ್ಮಧ್ವಾಚಾರ್ಯರ ಶಿಷ್ಯರಾದ ಶ್ರೀ ವಿಷ್ಣುತೀರ್ಥರ ಪರಂಪರೆಯಲ್ಲಿ ಬಂದ ಮಹಾಯೋಗಿಗಳಾದ ಶ್ರೀರತ್ನಗರ್ಭ ತೀರ್ಥರ (ನಾರಳ ಗ್ರಾಮ) ವಿಶೇಷಾನುಗ್ರಪದಿಂದ ಅನೇಕ ಸಿದ್ಧಿಗಳನ್ನು ಹೊಂದಿ, ಮೈಸೂರು ಶ್ರೀ ಕೃಷ್ಣರಾಜ ಒಡೆಯರ ರಾಜಗುರುಗಳಾಗಿ, ಮಹಾಮೇಧಾವಿಗಳಾದ ಪಂಡಿತಪ್ರವರ ಶ್ರೀ ಹೆಚ್. ಸುಬ್ಬರಾಯರೇ ಮೊದಲಾದ ಅನೇಕ ಗಣ್ಯರಿಗೆ ವೇದಾಂತಾದಿ ಶಾಸ್ತ್ರಗಳನ್ನು ಭೋಧಿಸಿ, ಧ್ಯಾನಯೋಗಿಗಳೆಂದು ಖ್ಯಾತರಾದ ಮೈಸೂರು ಶಾಮಣ್ಣನವರ ಸುಪುತ್ರರೇ ಶ್ರೀ ಕೆ. ಎಲ್. ಪುಷ್ಕರಾಚಾರ್ಯರು.

ಮೈಸೂರಿನ ಪ್ರಸಿದ್ಧ ಯತಿಶ್ರೇಷ್ಠರು, ವೇದಾಂತಾದಿ ಶಾಸ್ತ್ರಗಳಲ್ಲಿ ನಿಪುಣರು, ಮಹಾ ಪ್ರಮೇಯಪ್ರಜ್ಞರೂ ಆದ ಶ್ರೀ ಶ್ರೀ ೧೦೮ ಶ್ರೀಮತ್ ದೇವೇಂದ್ರತೀರ್ಥರಲ್ಲಿ ಶಾಸ್ತ್ರಾಧ್ಯಯನ ಮಾಡಿ ಪ್ರಮುಖ ಶಿಷ್ಯರಾಗಿ, ಬೆಂಗಳೂರಿನ ಪ್ರಸಿದ್ಧ ವಿದ್ವಾಂಸರಾದ ಶ್ರೀ ಬಾಳೇಬೈಲು ಪದ್ಮನಾಭಾಚಾರ್ಯರಲ್ಲಿಯೂ ಇವರು ಅಧ್ಯಯನ ಮಾಡಿದ್ದಾರೆ. ಋಗ್ವೇದ ವಿದ್ವತ್ತನ್ನೂ, M.A. ಪದವಿಯನ್ನೂಗಳಿಸಿ ಸದಾಚಾರ ಸಂಪನ್ನರಾಗಿ ವೈದೀಕ ಸಂಪ್ರದಾಯದಲ್ಲಿಯೇ ಜೀವನ ನಡೆಸುತ್ತಾ, ಅನೇಕ ಸಂಘ ಸಂಸ್ಥೆಗಳಿಂದ ಮತ್ತು ಮಠಾಧೀಶ್ವರುಗಳಿಂದಲೂ ಸನ್ಮಾನಿಸಲ್ಪಟ್ಟು **ವೇಧವಾರಿಧಿ, ಶಾಸ್ತ್ರನಿಧಿ, ಪ್ರವಚನ ಶಿರೋಮಣಿ, ವ್ಯಾಸ-ದಾಸ ದರ್ಶನ ವಾಚಸ್ಪತಿ, ಶಾಸ್ತ್ರೋಪನ್ಯಾಸ ವಿಚಕ್ಷಣಃ** ಇತ್ಯಾದಿ ಬಿರುದಾಂಕಿತರೂ ಆಗಿದ್ದಾರೆ. ಹಾಗೂ ಶ್ರೀ **ವ್ಯಾಸರಾಜ ವಿದ್ಯಾ ಪುರಸ್ಕಾರ ಪ್ರಶಸ್ತಿ, ಶ್ರೀ ಕೃಷ್ಣ ವಾದಿರಾಜಾನುಗ್ರಹ ಪ್ರಶಸ್ತಿ, ಶ್ರೀ ಕೃಷ್ಣಾನುಗ್ರಹ ಪ್ರಶಸ್ತಿ** ಮೊದಲಾದ ಪ್ರಶಸ್ತಿಗಳನ್ನೂ ಪಡೆದಿದ್ದಾರೆ.

ಕರ್ನಾಟಕ, ಆಂಧ್ರ, ತಮಿಳುನಾಡು ಇತ್ಯಾದಿ ಪ್ರದೇಶಗಳಲ್ಲಿ ಮೂವತ್ತು ವರ್ಷಗಳಿಂದ ಅಖಂಡವಾಗಿ ಸಂಚರಿಸಿ, ತಮ್ಮ ಅಮೋಘವಾದ ವಾಗ್ಝರಿಯಿಂದ ಸಾವಿರಾರು ಯುವಕರನ್ನೂ ಆಕರ್ಷಿಸಿ ದ್ವೈತ ಸಿದ್ಧಾಂತದ ತತ್ವಾಭಿರುಚಿಯುಳ್ಳವರನ್ನಾಗಿ ಮಾಡುವುದಲ್ಲದೇ, ವೇದ, ಶಾಸ್ತ್ರ, ಪುರಾಣ, ದಾಸ ಸಾಹಿತ್ಯಾದಿ ಪ್ರೌಢ ಪ್ರಬಂಧಗಳನ್ನು ಅನೇಕ ಕಿರುಲೇಖನಗಳನ್ನು ಬರೆದಿರುತ್ತಾರೆ. ಭಾಗವತಾದಿ ಪುರಾಣ ಪ್ರವಚನವೇ ತಮ್ಮ ಪ್ರಧಾನ ಜೀವಿತವನ್ನಾಗಿ ರೂಪಿಸಿಕೊಂಡು, ಇಂದಿನ ವೈಜ್ಞಾನಿಕ

ಮನೋಭಾವನೆಯು ಯುವಕರಿಗೆ ನೂರಾರು ಪುರಾಣ ಪ್ರಸಂಗಗಳನ್ನು ಸಮನ್ವಯಿಸುವುದಲ್ಲದೆ ಮರು ಪ್ರಶ್ನೆಗೆ ಅವಕಾಶ ಕೊಡದಂತಿರುವ ಇವರ ದೈವದತ್ತ ಶೈಲಿಯು ಅಸದೃಶ ಮತ್ತು ಅನುಪಮ. ಇಂತಹ ಆಚಾರ್ಯರು ನಮ್ಮ ಗುರುಗಳೂ ಆಗಿರುವುದು ನಮ್ಮ ಮಹಾಭಾಗ್ಯವೇ ಸರಿ. ಇವರು ಪ್ರಾಚೀನ ಪರಂಪರೆಯ ರೀತಿಯಲ್ಲಿ ಪುರಾಣಗಳನ್ನು ವಿಮರ್ಶಿಸಿ ಅನೇಕ ಕ್ಷೇತ್ರಖಾಂಡಸ್ಥ ವಿಷಯಗಳನ್ನು ಪ್ರಸ್ತುತ ಕಾಲಕ್ಕೆ ಅನ್ವಯವಾಗುವಂತೆ ಸಿದ್ಧಪಡಿಸಿದ್ದಾರೆ. ಆದ್ದರಿಂದ ಮೊಟ್ಟಮೊದಲಿಗೆ ಬ್ರಹ್ಮಾಂಡ ಪುರಾಣೋಕ್ತ ಕ್ಷೇತ್ರಖಾಂಡಸ್ಥ ಕರಿಗಿರಿ ಮಹಾತ್ಮೆಯನ್ನು ಅನುವಾದಿಸಿ ಪುಸ್ತಕರೂಪದಲ್ಲಿ ಹೊರತರುವಂತೆ ವಿನಂತಿಸಿಕೊಂಡೆವು. ಅವರು ಹಂಸಧ್ವಜ ಪ್ರತಿಷ್ಠಾನದಿಂದ ಈ ಗ್ರಂಥವನ್ನು ಮುದ್ರಿಸಲು ಸಂತೋಷದಿಂದ ಅನುಮತಿಯನ್ನು ನೀಡಿದ್ದಾರೆ. ಇದು ನಮಗೆ ಅವರು ಮಾಡಿದ ಪರಮಾನುಗ್ರಹ. ಇದಕ್ಕಾಗಿ ಪ್ರತಿಷ್ಠಾನವತಿಯಿಂದ ಗುರುಗಳಿಗೆ ಸಾಷ್ಟಾಂಗ ನಮಸ್ಕಾರಗಳು.

ಈ ಗ್ರಂಥದ ಬಿಡುಗಡೆಗಾಗಿ ಅನೇಕ ಭಕ್ತಮಹಾಶಯರುಗಳು ತಮ್ಮ ತನುಮನಧನ ಸಹಾಯ ಮಾಡಿರುತ್ತಾರೆ. ಅವರೆಲ್ಲರಿಗೂ ಶ್ರೀ ಲಕ್ಷ್ಮೀನರಸಿಂಹ ದೇವರು ಜ್ಞಾನ, ಭಕ್ತಿ, ವೈರಾಗ್ಯಾದಿಗಳನ್ನು ಕೊಟ್ಟು ಸನ್ಮಂಗಳವನ್ನುಂಟು ಮಾಡಲೆಂದು ಪ್ರಾರ್ಥಿಸುತ್ತೇವೆ.

ಪುರುಷೋತ್ತಮ

ಪ್ರಕಾಶಕ,
ಶ್ರೀ ಹಂಸಧ್ವಜ ಪ್ರತಿಷ್ಠಾನ,
ಚಾಮರಾಜಪೇಟೆ, ಬೆಂಗಳೂರು.

॥ ಶ್ರೀ ಗುರುಭ್ಯೋನಮಃ ಹರಿಃ ಓಂ ॥

ಶ್ರೀ ಕರಿಗಿರಿ ಮಹಾತ್ಮೆ

ಸ್ಥೂಲ ಪರಿಚಯ

॥ ಶ್ರೀಮದ್-ಹನುಮ-ಭೀಮ-ಮಧ್ವ-ವಾದಿರಾಜಾಂತರ್ಗತ ಶ್ರೀರಾಮ-ಕೃಷ್ಣ-
ವೇದವ್ಯಾಸ-ಹಯಗ್ರೀವಾತ್ಮಕ ಲಕ್ಷ್ಮೀ ನರಸಿಂಹಾಯ ನಮಃ ॥

ಧ್ಯಾಯೇನ್ನೃಸಿಂಹಮುರುವೃತ್ತ ರವಿತ್ರಿನೇತ್ರಂ
ಜಾನುಪ್ರಸಕ್ತಕರಯುಗ್ಮ ಮಥಾಪರಾಭ್ಯಾಮ್ ।
ಚಕ್ರಂ ಧರಂ ಚ ದಧತಂ ಪ್ರಿಯಯಾ ಸಮೇತಂ
ತಿಗ್ಮಾಂಶು ಕೋಟ್ಯಧಿಕ ತೇಜ ಸಮಗ್ರ್ಯ ಶಕ್ತಿಮ್ ॥
ಶುಭವಿಭ್ರಮೇ ಭುವಿಮನೋರಮೇ
ರಮೇ ವಿದಿತಾಗಮೇ ಜಿತಸಮಸ್ತಚಿತ್ತಭ್ರಮೇ ।
ವಿಗತಶ್ರಮೇ ಹರಿಪಾದಾಬ್ಜಸೇವ್ಯೋದ್ಯಮೇ
ಶ್ರುತವಿಕ್ರಮೇ ನಿರುಪಮೇ ನಮೋನಿರ್ಮಮೇ
ಪ್ರಥಮೋ ಹನೂಮನ್ನಾಮ ದ್ವಿತೀಯೋ ಭೀಮ ಏವಚ ।
ಪೂರ್ಣಪ್ರಜ್ಞಸ್ತೃತೀಯಸ್ತು ಭಗವತ್ಕಾರ್ಯಸಾಧಕಃ ॥
ತಪೋವಿದ್ಯಾವಿರಕ್ತ್ಯಾದಿ ಸದ್ಗುಣೋಘಾಕರಾನಹಂ ।
ವಾದಿರಾಜ ಗುರೂನ್ವಂದೇ ಹಯಗ್ರೀವದಯಾಶ್ರಯಾನ್ ॥
ದುರ್ವಾದಿಧ್ವಾಂತರವಯೇ ವೈಷ್ಣವೇಂದೀರವೇಂದವೇ ।
ಶ್ರೀರಾಘವೇಂದ್ರ ಗುರವೇ ನಮೋಽತ್ಯಂತ ದಯಾಲವೇ ॥
ಹಯಗ್ರೀವ ಪದಾಸಕ್ತಾನ್ ಹಂಸೇಂದ್ರೈರಪಿ ಮಾನಿತಾನ್ ।
ದೇವೇಂದ್ರದೇಶಿಕಾನ್ ವಂದೇ ದ್ವೈತ ತತ್ವಾರ್ಥ ಸಿದ್ಧಯೇ ॥
ಆಪಾದಮೌಳಿಪರ್ಯಂತಂ ಗುರೂಣಾಮಾಕೃತಿಂ ಸ್ಮರೇತ್ ।
ತೇನ ವಿಘ್ನಾಃ ಪ್ರಣಶ್ಯಂತಿ ಸಿದ್ಧ್ಯಂತಿ ಚ ಮನೋರಥಾಃ ॥

ಶ್ರೀಮದಾನಂದತೀರ್ಥರ ಜ್ಞಾನೋಪಾಸನೆಯ ಮೂರ್ತಿಯಾದ ಶ್ರೀಲಕ್ಷ್ಮೀ ಹಯವದನಾತ್ಮಕ ಶ್ರೀವೇದವ್ಯಾಸರು, ಅನಂತ ವೇದಗಳನ್ನು ಋಗ್ಯಜುರ್ಸಾಮ ಅಥರ್ವಣ ಎಂಬುದಾಗಿ ನಾಲ್ಕು ವಿಭಾಗ ಮಾಡಿದುದಲ್ಲದೆ, ವೇದಾರ್ಥನಿರ್ಣಾಯಕವಾದ ಶ್ರೀಮತ್ ಬ್ರಹ್ಮಸೂತ್ರಗಳನ್ನು ರಚಿಸಿ, ವೇದಾದಪಿ

ಪರಂಚಕ್ರೆ ಎಂಬಂತೆ ಶ್ರೀಮನ್ಮಹಾಭಾರತವನ್ನೂ ರಚಿಸಿದ್ದಾರೆ.

ಪುರಾಣರಾಜನೆನಿಸುವ ಶ್ರೀಮದ್ಭಾಗತವನ್ನು, ಹದಿನೆಂಟು ಪುರಾಣಗಳನ್ನು, ಉಪಪುರಾಣಗಳನ್ನೂ ರಚಿಸಿ, ಇವುಗಳ ಅರ್ಥವಿಶೇಷಗಳನ್ನು - ಉಪಾಸನಾಮಾರ್ಗವನ್ನು ಶ್ರೀಮದಾನಂದ ತೀರ್ಥರೇ ಮೊದಲಾದ ದೇವತಾ ಶ್ರೇಷ್ಠರುಗಳಿಗೆ ಸ್ವತಃ ತಾವೇ ಭೋದಿಸಿ, ಅವರುಗಳ ದ್ವಾರಾ ಜಗತ್ತಿಗೆ ಉಪದೇಶ ಹೊಂದುವಂತೆ ವ್ಯವಸ್ಥೆಯನ್ನೂ ಮಾಡಿ, ಮೋಕ್ಷಾಪೇಕ್ಷಿಗಳನ್ನು ಉದ್ಧಾರ ಮಾಡಿದ್ದಾರೆ.

ನೈಷ್ಕರ್ಮ್ಯಮಪ್ಯಚ್ಯುತ ಭಾವ ವರ್ಜಿತಮ್ ।
ನ ಶೋಭತೇ ಜ್ಞಾನಮಲಂ ನಿರಂಜನಮ್ ॥

ಎಂಬ ಭಾಗವತೋಕ್ತಿಯಂತೆ ಶ್ರೀ ಹರಿಯ ಮಹಿಮೆಯನ್ನು ನಿರೂಪಣೆ ಮಾಡದ ಶಾಸ್ತ್ರ ರಚನೆಯೇ ನಿಷ್ಪ್ರಯೋಜನ. ಶ್ರೀ ಹರಿಯಲ್ಲಿ ಭಕ್ತಿ ಇಲ್ಲದೇ ಹೋದಲ್ಲಿ, ಶ್ರೀಹರಿ ವಿಶಯಕ ಪರೋಕ್ಷಜ್ಞಾನವೂ ವ್ಯರ್ಥವೇಸರಿ.

ಭಕ್ತ್ಯರ್ಥಂ ಭಗವನ್ಮಹಿಮೋಕ್ತಿಃ ಎಂಬಂತೆ ಭಕ್ತಿಯ ಮೂಲಕವೇ ಮೋಕ್ಷವು. ಇದರ ಸಾಧನೆಗಾಗಿ ಕರುಣಾಳುಗಳಾದ ಶ್ರೀ ಬಾದರಾಯಣರು ಭಕ್ತಿಯ ಆಕರ ಗ್ರಂಥಗಳೆಂದೆನಿಸುವ ಪುರಾಣಗಳನ್ನು ಈ ಹಿನ್ನೆಲೆಯಲ್ಲಿ ರಚಿಸಿದ್ದಾರೆ.

ಇತಿಹಾಸ ಪುರಾಣಾಭ್ಯಾಂ ವೇದಂ ಸಮುಪಭೃಂಹಯೇತ್ ।
ಯೋ ವಿದ್ಯಾಶ್ಚತುರೋ ವೇದಾನ್ ಸಾಂಗೋಪನಿಷದೋದ್ವಿಜಃ ।
ನಚೇತ್ಪುರಾಣ ಸಂವಿದ್ಯಾನ್ನೈವ ಸಸ್ಯಾದ್ವಿಚಕ್ಷಣಃ ॥

ಎಂಬ ಭಾರತೋಕ್ತಿಯಂತೆ ಪುರಾಣಾಗಳೂ ವೇದಾರ್ಥಗಳನ್ನೇ ಬೋಧಿಸುತ್ತವೆ. ಪುರಾಣಗಳ ಸಹಾಯವಿಲ್ಲದೆ ವೇದಾರ್ಥಗಳನ್ನು ಮಾಡಬಾರದೆಂದೂ, ನಾಲ್ಕು ವೇದಗಳನ್ನು ಅಂಗಶಾಸ್ತ್ರ ಸಹಿತವಾಗಿ ತಿಳಿದಿದ್ದರೂ, ಉಪನಿಷತ್ ವಿದ್ಯಾಚತುರನಾಗಿದ್ದರೂ, ಪುರಾಣ ವಿದ್ಯಾರಹಿತನಾಗಿದ್ದರೆ ಅವನು ಎಂದಿಗೂ ಜ್ಞಾನಿಯಾಗಲಾರನೆಂದೂ ಸ್ವತಃ ಶ್ರೀವೇದವ್ಯಾಸರೇ ಭಾರತದಲ್ಲಿ ತಿಳಿಸುವುದರಜೊತೆಗೆ ಪುರಾಣಗಳ ಸ್ಥಾನ-ಮಾನಗಳನ್ನೂ ತಿಳಿಸಿದ್ದಾರೆ. ಅದರಂತೆಯೇ ಶ್ರೀಮದಾಚಾರ್ಯರೂ ತಮ್ಮ ಶ್ರೀಮದ್-ಭಾಷ್ಯದಲ್ಲಿ ಪ್ರತಿಯೊಂದು ಬ್ರಹ್ಮಸೂತ್ರಗಳ

ಅರ್ಥ ವಿವರಣೆಯ ಸಂದರ್ಭದಲ್ಲಿಯೂ ಒಂದು ಶ್ರುತಿಯನ್ನು ಪ್ರಮಾಣವನ್ನಾಗಿ ಕೊಟ್ಟರೆ, ಅದೇ ಶ್ರುತ್ಯರ್ಥ ಪ್ರತಿಪಾದಕವಾದ ಒಂದೊಂದು ಪುರಾಣವಾಕ್ಯವನ್ನೂ ಕೊಟ್ಟು, ಶ್ರುತಿ-ಪುರಾಣಗಳ ಅರ್ಥ ಸಮನ್ವಯತೆ ಮತ್ತು ಪುರಾಣಗಳ ಸ್ಥಾನಮಹತ್ವವನ್ನೂ ತೋರಿಸಿ, ಶ್ರೀವೇದವ್ಯಾಸರ ಹೃದಯವನ್ನೇ ಜಗತ್ತಿಗೆ ಪ್ರದರ್ಶಿಸಿದ್ದಾರೆ.

ವೈಷ್ಣವೀಯಂ ನಾರದೀಯಂ ಚ ತಥಾ ಭಾಗವತಂ ಶುಭಮ್ ।
ಗಾರುಡಂ ಚ ತಥಾ ಪಾದ್ಮಂ ವರಾಹಂ ಶುಭದರ್ಶನೇ ।
ಸಾತ್ವಿಕಾನಿ ಪುರಾಣಾನಿ ವಿಜ್ಞೇಯಾನಿ ಶುಭಾನಿವೈ ॥
ಬ್ರಹ್ಮಾಂಡಂ ಬ್ರಹ್ಮವೈವರ್ತಂ ಮಾರ್ಕಂಡೇಯಂ ತಥೈವಚ ।
ಭವಿಷ್ಯಂ ವಾಮನಂ ಬ್ರಾಹ್ಮ್ಯಂ ರಾಜಸಾನೋ ನಿಬೋಧಮೇ ॥
ಮಾತ್ಸ್ಯಂ ಕೌರ್ಮ್ಯಂ ತಥಾ ಲೈಂಗ್ಯಂ ಶೈವಂ ಸ್ಕಾಂಧಂ ತಥೈವ ಚ ।
ಆಗ್ನೇಯಂ ಚ ಷಡ್ವೈತಾನಿ ತಾಮಸಾನಿ ನಿಬೋಧಮೇ ॥

ಎಂಬ ಪದ್ಮ ಪುರಾಣೋಕ್ತ ವಾಕ್ಯದಂತೆ ಮೇಲುನೋಟಕ್ಕೆ ಸಾತ್ವೀಕ, ರಾಜಸ, ತಾಮಸ ಪುರಾಣಗಳೆಂದು ವಿಭಾಗಿಸಲ್ಪಟ್ಟ ಮಾತ್ರಕ್ಕೆ ಅವುಗಳು ಹಾಗೆಯೇ ಗ್ರಾಹ್ಯವೆಂದಾಗಲೀ, ಸಾತ್ವೀಕ ಪುರಾಣದಲ್ಲಿ ರಾಜಸ, ತಾಮಸ ಭಾಗಗಳಿಲ್ಲವೆಂದಾಗಲಿ ಅಥವ ರಾಜಸ, ತಾಮಸ ಪುರಾಣಗಳಲ್ಲಿ ಸಾತ್ವೀಕಾಂಶಗಳು ಇಲ್ಲವೆಂದಾಗಲಿ ತಿಳಿಯಬಾರದು. ತ್ರಿವಿಧ ಜೀವರಾಶಿಗಳ ಸಾಧನಕ್ಕಾಗಿ ರಚಿತಗೊಂಡ ಈ ಪುರಾಣಗಳ ಯಥಾರ್ಥ ತತ್ವ ಜ್ಞಾನವಾಗಬೇಕಾದರೆ

ಉಕ್ತಂ ಲಕ್ಷಣ ಶಾಸ್ತ್ರೇ ಚ ಕೃಷ್ಣದ್ವೈಪಾನನೋದಿತೇ ।
ತ್ರಿಭಾಷಾಯೋನ ಜಾನಾತಿ ರೀತೀನಾಂ ಶತಮೇವಚ ।
ವ್ಯತ್ಯಾಸಾದೀನ್ ಸಪ್ತಭೇದಾನ್ ವೇದಾದ್ಯರ್ಥಂ ತು ಯೋವದೇತ್ ।
ಸ ಯಾತಿ ನರಕಂ ಘೋರಮನ್ಯಥಾಽಜ್ಞಾನ ಸಂಭವಮ್ ॥

ಎಂಬ ಶ್ರೀಮದಾಚಾರ್ಯರ ನಿರ್ಣಯೋಕ್ತಿಯ ನ್ಯಾಯ ಚೌಕಟ್ಟಿನಲ್ಲಿ ಎಲ್ಲ ಪುರಾಣಗಳನ್ನು ಅಳವಡಿಸಿಕೊಂಡು ಅರ್ಥೈಸುವವರಿಗೆ ಸಾತ್ವೀಕ ಪ್ರಚುರ ಯಥಾರ್ಥ ಜ್ಞಾನಕಾರಕಗಳೇ ಆಗಿವೆ. ಇಂತಹ ಪುರಾಣಗಳಲ್ಲಿ ಪ್ರಮುಖವಾಗಿ ಜ್ಞಾನಖಾಂಡ,

ಕರ್ಮಖಾಂಡ, ಧರ್ಮಖಾಂಡ, ವ್ರತಖಾಂಡ, ಕ್ಷೇತ್ರಖಾಂಡ ಎಂಬುದಾಗಿ ಐದು ವಿಧವಾಗಿ ವಿಭಾಗಿಸಿದ್ದಾರೆ. ಕೇವಲ ಜ್ಞಾನಖಾಂಡ ಪ್ರಕರಣವೇ ಸೂತ್ರಭ್ಯಾಷ್ಯದಲ್ಲಿ ಶ್ರೀಮದಾಚಾರ್ಯರಿಂದ ಉದಾಹರಿಸಲ್ಪಟ್ಟಿರುವ ಭಾಗಗಳು. ಉಳಿದ ಖಾಂಡಗಳನ್ನು ಎಲ್ಲೆಲ್ಲಿಯೂ ಹಾಸುಹೊಕ್ಕಾಗಿ ಕಾಣುತ್ತೇವೆ. ಒಟ್ಟು ಪುರಾಣಗಳ ಗಾತ್ರ ೪ ಲಕ್ಷ ಶ್ಲೋಕ ರೂಪ.

ವ್ರತಖಾಂಡಗಳಲ್ಲಿ ವಿಷ್ಣು–ವೈಷ್ಣವ ದೇವತೆಗಳನ್ನು ಕುರಿತು ಯುಗಾನುಸಾರವಾಗಿ ಮಾಡುವ ನೂರಾರು ವ್ರತಗಳನ್ನು ವರ್ಣಿಸಿದ್ದಾರೆ. ವ್ರತಗಳ ಪರಸ್ಪರ ತಾರತಮ್ಯವನ್ನೂ, ಆಚರಿಸುವ ಕಾಲ–ದೇಶ–ವರ್ಣ–ಆಶ್ರಮ–ಅಧಿಕಾರ, ಅವಸ್ಥೆ ಮತ್ತು ವಿಧಾನಗಳನ್ನು ಸ್ಫುಟವಾಗಿ ತಿಳಿಸಿದ್ದಾರೆ. ಮುಖ್ಯವಾಗಿ ಆಚರಿಸಿದ ವ್ರತಗಳ ಫಲವನ್ನು ಮತ್ತು ಆ ವ್ರತಗಳು ನಿವಾರಿಸುವ ಸಂಕಷ್ಟಗಳನ್ನು ಮನದಟ್ಟಾಗುವಂತೆ ವರ್ಣಿಸಿದ್ದಾರೆ. ಮೇಲ್ನೋಟಕ್ಕೆ ಇವುಗಳೂ ಸಹ ಕೇವಲ ಕಾಮ್ಯವ್ರತಗಳಂತೆಯು, ಸಂಕಷ್ಟಕ್ಕೆ ಸಿಲುಕಿದವರು ಮಾತ್ರ ಇವುಗಳನ್ನು ಆಚರಿಸುವರೆಂಬ ಭಾವನೆಯೂ, ಸಂಪ್ರದಾಯವಿದ್ದವರು ಮಾತ್ರ ಮಾಡಬೇಕಾದವುಗಳು ಎಂಬಂತೆಯೂ, ಈ ವ್ರತಾಚರಣೆಗಳಿಂದ ತತ್ವಜ್ಞಾನ ಪ್ರಾಪ್ತಿ ಆಗುವುದಿಲ್ಲವೆಂಬ ಭ್ರಮೆಯೂ ಬರುವುದಕ್ಕೆ ಅವಕಾಶ ಉಂಟು. ಆದರೆ ಈ ಎಲ್ಲ ವೈಷ್ಣವ ವ್ರತಗಳನ್ನು ಪ್ರಕಾಶ ಪಡಿಸಿದವನು, ವ್ರತೋಪದೇಶಕನು, ಮುಖ್ಯವಾಗಿ ವ್ರತ ಪ್ರತಿಪಾದ್ಯನು ಮತ್ತು ವ್ರತ ಫಲದಾಯಕನೂ ಕೊನೆಗೆ ವ್ರತಿ ಎಂದೆನಿಸುವವನೂ ಶ್ರೀಹರಿಯೇ ಎನ್ನುವುದನ್ನು ಚೆನ್ನಗಿ ವಿಮರ್ಶೆ ಮಾಡಿ ಅರಿತರೆ ಎಲ್ಲವೂ ಜ್ಞಾನಖಾಂಡವೇ ಆಗುತ್ತದೆ.

ಇದರಂತೆ ಧರ್ಮ–ಕರ್ಮ–ಕ್ಷೇತ್ರಖಾಂಡದಲ್ಲಿಯೂ ಅನೇಕ ಧರ್ಮಾಧರ್ಮ ವಿಚಾರಗಳನ್ನು, ಧರ್ಮೋಪದೇಶಗಳನ್ನು, ನಿತ್ಯಾಽನಿತ್ಯಕರ್ಮಭೇದ ರಹಸ್ಯಗಳನ್ನು, ಅವುಗಳ ಫಲಗಳನ್ನು ಮತ್ತು ಆಚರಿಸದೇ ಇದ್ದರೆ ಅದರಿಂದಾಗುವ ಅನರ್ಥಗಳನ್ನೂ ವರ್ಣಿಸಿ, ಜೀವರ ಸಾಧನೆಗೆ ಅನುಕೂಲ ಮಾಡಿಕೊಟ್ಟಿದ್ದಾರೆ ಶ್ರೀವ್ಯಾಸರು. ದಟ್ಟವಾದ ಮಳೆಯ ಹನಿಗಳ ನಡುವೆ ಗಟ್ಟಿಯಾದ ಹಿಮದ ಆಲೀಕಲ್ಲು ಉದುರುವಂತೆ, ವೇದ ಶಾಸ್ತ್ರಾರ್ಥಗಳ ಗಟ್ಟಿಯಾದ ತತ್ವರಾಶಿಯನ್ನು ಮಧ್ಯೆ ಮಧ್ಯೆ ವ್ರತ, ಧರ್ಮ, ಕರ್ಮ, ಕ್ಷೇತ್ರಖಾಂಡಗಳಲ್ಲಿಯೂ ವರ್ಣಿಸುತ್ತಾರಾದ್ದರಿಂದ ಜ್ಞಾನಖಾಂಡಕ್ಕೆ ಎಷ್ಟು ಮಹತ್ವವೋ ಅಷ್ಟೇ ಮಹತ್ವವನ್ನು ಈ ಖಾಂಡಗಳಿಗೂ ಜ್ಞಾನಿಗಳು ಒಪ್ಪುತ್ತಾರೆ.

ಸ್ಥೂಲ ಪರಿಚಯ

ಶ್ರೀಮದ್ ಭಾಗವತವೇ ಮೊದಲಾದ ಅನೇಕ ಪುರಾಣಗಳ ಕ್ಷೇತ್ರಖಾಂಡಗಳಲ್ಲಿ, ಭಗವತ್ಸನ್ನಿಧಾನಕ್ಕೆ ಪಾತ್ರವಾದ ಕ್ಷೇತ್ರಗಳು, ಆಯಾಯ ಕ್ಷೇತ್ರಮೂರ್ತಿಗಳು, ಪೃಥಿವಿಯ ಪುಣ್ಯಮಯ ವಿಸ್ತಾರ ಆಯಕಟ್ಟುಗಳು, ಭೂಗೋಳ–ಖಗೋಳಗಳ ಸ್ಥೂಲ–ಸೂಕ್ಷ್ಮ ಪರಿಚಯಗಳು, ಮಹಾರಣ್ಯ ವಿಶೇಷಗಳು, ವನಗಳು, ಮಹಾ ಪುಣ್ಯನದಿಗಳು, ಪವಿತ್ರ ತೀರ್ಥಗಳು, ಅಲ್ಲಿಯ ಮಹಿಮೆಗಳು, ಅವುಗಳ ಉತ್ಪತ್ತಿಯ ಮೂಲ ಕಾರಣಗಳು, ಈ ಕ್ಷೇತ್ರಸಂದರ್ಶನಗಳಿಂದ ಆಗುವ ಫಲಗಳು ನೀಗುವ ಅನಿಷ್ಟಗಳು ಮುಂತಾದ ಅನೇಕ ರಹಸ್ಯಮಯ ವಿಚಾರಧಾರೆಗಳನ್ನು ಹೆಣೆದಿದ್ದಾರೆ. ಆ ಕ್ಷೇತ್ರಗಳಲ್ಲಿ ಅನುಸಂಧಾನಿಸುವ ಭಗವದ್ಮೂರ್ತಿಗಳ ವಿಭೂತಿ ರೂಪಗಳನ್ನೂ ಶ್ರೀವ್ಯಾಸರು ತಿಳಿಸಿದ್ದಾರೆ. ಜಡವಾದ ನದಿಗಳು, ಪರ್ವತಗಳು, ಭೂಭಾಗಗಳು ಇವುಗಳಿಗೆ ಸ್ವತಃ ಯಾವ ಮಹಿಮೆಯೂ ಕೂಡಲಾರದು. ಅನುಸಂಧಾನಿಸುವ ಕ್ರಮವು ಬಹಳ ಮುಖ್ಯ. ಅದೇ ರೀತಿ ಭಕ್ತಿಯ ಭರವಸೆಯೂ ಇರಬೇಕು.

ಖಂ ವಾಯುಮಗ್ನಿಂ ಸಲಿಲಂ ಮಹೀಂಶ್ಚ
ಜ್ಯೋತೀಂಷಿ ಸತ್ವಾನಿ ದಿಶೋದ್ರುಮಾದೀನ್ ।
ಸರಿತ್ ಸಮುದ್ರಾಂಶ್ಚ ಹರೇಃ ಶರೀರಂ
ಯತ್ಕಿಂಚ ಭೂತಂ ಪ್ರಣಮೇದನನ್ಯಮ್ ॥

ಎಂಬ ಭಾಗವತೋಕ್ತಿಯಂತೆ ತಥಾ "ಸ್ಥಾವರಾಣಾಂ ಹಿಮಾಲಯಃ" ಎಂಬ ಗೀತೋಕ್ತಿಯಂತೆಯೂ, "ಜಲ ಕಾಷ್ಠ ಶೈಲ ಗಗನ ನೆಲ ಪಾವಕ ವಾಯು ತರು ಫಲ ಪುಷ್ಪ ಬಳ್ಳಿ ಒಳಗೆ ಹರಿ ವ್ಯಾಪ್ತ ನೆಂದು ತಿಳಿದವರಿಗೆ ಆನಂದ ಆನಂದ" ಎಂಬ ಶ್ರೀ ವಿಜಯರಾಯರ ಪದದಂತೆಯೂ, ಪರಮಾತ್ಮನ ಮಹಾ ವಿಭೂತಿ ರೂಪಗಳು ಇವುಗಳೊಳಗೆ ನಿತ್ಯ ಸನ್ನಿಹಿತವಾಗಿದ್ದು, ಪರಮಾತ್ಮನ ಪ್ರತೀಕಗಳೆಂದು ಕರೆಸಿಕೊಂಡು ಗೋ, ಭೂ, ತುಲಸೀ, ಕುಶ, ಅಶ್ವತ್ಥ, ಶಾಲಿಗ್ರಾಮ, ಬ್ರಾಹ್ಮಣವತ್ ಭಗವನ್ಮಹಿಮಾ ಪ್ರತಿಪಾದಕಗಳಾಗಿರುತ್ತವೆ. ಇವುಗಳ ಅಭಿಮಾನಿದೇವತೆಗಳಲ್ಲಿ ಶ್ರೀಹರಿ ಸನ್ನಿಹಿತನಾಗಿದ್ದು, ಆಯಾ ಕಾಲಗಳಲ್ಲಿ ಅವುಗಳ ಸೃಷ್ಟಿ–ಸ್ಥಿತಿ–ಲಯಗಳ ದ್ವಾರಾ ಮಹಿಮೆಯನ್ನು ಅಭಿವ್ಯಕ್ತಪಡಿಸಿ, ತನಗೆ ಯಾವ ಪ್ರಯೋಜನವೂ ಇಲ್ಲದೇ ಕೇವಲ ಸರ್ವಜೀವರ ಸಾಧನೆಗಳಿಗಾಗಿ ಈ ಮಹಾಕ್ಷೇತ್ರಗಳನ್ನು ನಿರ್ಮಾಣ ಮಾಡಿ, ಸ್ವರಮಣನಾದ ಶ್ರೀಹರಿಯು ಜೀವರ ಸಂತೊಷದಲ್ಲಿ ತಾನೂ ಭಾಗಿಯಾಗಿ ಅವರ ಸೇವಾದಿಗಳನ್ನು ಸ್ವೀಕರಿಸುತ್ತಾನೆ. ಈ ಕಾರಣಕ್ಕಾಗಿಯೇ ಬ್ರಹ್ಮಾದಿದೇವತೆಗಳು,

ಋಷಿಮುನಿಪುಂಗವರು, ಗಂಧರ್ವರು, ಸಿದ್ಧರು, ಯಕ್ಷ-ಕಿನ್ನರ ಕಿಂಪುರುಷಾದಿಗಳು, ವಿಧ್ಯಾಧರಾದಿ ಯೋಗಿಗಳು, ಪರಮಹಂಸರುಗಳು ತೀರ್ಥಯಾತ್ರೆಯ ಶುಭಸಂಪ್ರದಾಯವನ್ನು ಅನುಸರಿಸಿಕೊಂಡು, ಈ ಕ್ಷೇತ್ರಗಳಲ್ಲಿರುವ ತೀರ್ಥಗಳಲ್ಲಿ ಮಿಂದು ಪುನೀತರಾಗುತ್ತಾರೆ. ಕ್ಷೇತ್ರಮೂರ್ತಿಯ ದರ್ಶನ-ಸ್ಪರ್ಶನಗಳಿಂದ ಜ್ಞಾನವಂತರಾಗುತ್ತಾರೆ. ಯಜ್ಞ-ಯಾಗಾದಿಗಳು ಮತ್ತು ಜ್ಞಾನಸತ್ರಗಳ ದ್ವಾರಾ ಕ್ಷೇತ್ರಮೂರ್ತಿಯನ್ನು ಸಂತೋಷ ಪಡಿಸಿ, ಸಾಧಕರಿಗೆ ಮಾರ್ಗದರ್ಶಕರಾಗುತ್ತಾರೆ. ಅನ್ನದಾನವೇ ಮುಖ್ಯವಾಗಿ ಮಾಡುವುದಲ್ಲದೆ ವಸ್ತ್ರ, ಭೂ, ತಿಲ, ಹಿರಣ್ಯ, ಶಾಲಿಗ್ರಾಮವೇ ಮೊದಲಾದ ದಾನವೂ ಯಜ್ಞಗಳಿಗೆ ಸಮಾನವಾದುದು ಎಂಬ ಪ್ರಮೇಯವನ್ನು ತಿಳಿಸುತ್ತಾರೆ.

ವಾಯುಮಾರಭ್ಯ ಕಲ್ಕ್ಯಂತಾಃ ಜನಿಮಂತ್ರೋತ್ರ ಭಾರತೇ ।
ಕೇವಲಮತ್ರೈವ ಸಾಧನ ಕ್ಷೇತ್ರೇ ಭಾರತೇ ॥ (ವಾಮನ ಪುರಾಣ)
ಹಿಮಾಲಯಂ ಸಮಾರಭ್ಯ ಯಾವದಿಂದುಸರೋವರಮ್ ।
ತಂ ದೇವನಿರ್ಮಿತಂ ದೇಶಂ ಪುಣ್ಯಭೂಮಿಂ ಪ್ರಚಕ್ಷತೇ ॥ (ಬ್ರ. ಪು)
ತತ್ರಾಪಿ ಭಾರತಂ ಶ್ರೇಷ್ಠಂ ಜಂಬೂದ್ವೀಪೇ ಮಹಾಮುನೇ ।
ಯತೋ ಹಿ ಕರ್ಮಭೂರೇಷಾ ಯತೋಽನ್ಯಾ ಭೋಗಭೂಮಯಃ ॥
ವಿಶೇಷಾತ್ ಭಾರತೇ ಪುಣ್ಯಂ ಚರೇಯುಃ ಪಾಪಮಪ್ಯಥ ।
ತಥೈವ ಭಗವದ್ಭಕ್ತಿಂ ಪೃಥಿವ್ಯಾಂ ನಾನ್ಯವರ್ಷಗಾಃ ॥ (ಭಾಗ. ತಾ)

ಈ ಮೇಲಿನ ಪ್ರಾಮಾಣಗಳಂತೆ ಈ ಪವಿತ್ರ ಭಾರತಭೂಮಿಯೊಂದೇ ಕರ್ಮಭೂಮಿ. ಪ್ರಾಚೀನ ಕಾಲದಿಂದಲೂ ತತ್ವಜ್ಞಾನದ ತವರೂರು. ಪುಣ್ಯಕ್ಷೇತ್ರಗಳ ಆಕರ, ಸರ್ವಸಂತರ ನೆಲೆವೀಡು, ಸಾಧಕರ ತಪೋಭೂಮಿ. ಕರ್ಮಯೋಗಿಗಳ ಕಮ್ಮಟ. ಋಷಿಗಳು ವೇದಮಂತ್ರಗಳನ್ನು ಸಾಕ್ಷಾತ್ಕರಿಸಿಕೊಂಡು ಮಂತ್ರದೃಷ್ಟಾರರಾದುದು ಈ ಭೂಮಿಯಲ್ಲಿಯೇ. ಭಗವಂತನ ಅವತಾರಗಳ ಭೂಮಿಯೂ ಇದೆ. ದೇವತೆಗಳ ಅವತಾರಕ್ಕೆ ಹಾಗು ಸಾಧನೆಗೆ ಆಶ್ರಯವೂ ಈ ಪವಿತ್ರ ಕರ್ಮಭೂಮಿ ಭಾರತವೇ. ಅಥಏವ ಶ್ರೀಮನ್ನಾರಾಯಣನ ಸೇವಾಸಕ್ತ ಪರಿವಾರ (ವಿಷ್ಣು ಭಕ್ತರು) ಈ ಪವಿತ್ರ ಭಾರತ ವರ್ಷದಲ್ಲಿ ಕಾಲಕಾಲಕ್ಕೆ ಅವತರಿಸುತ್ತಾರೆ.

ಕಲ್ಪಾಯುಷಾಂ ಸ್ಥಾನ ಜಯಾತ್ಪುನರ್ಭವಾತ್ ।
ಕ್ಷಣಾಯುಷಾಂ ಭಾರತ ಭೂಜಯೋವರಃ ॥
ಕ್ಷಣೇನ ಮರ್ತ್ಯೇನ ಕೃತಂ ಮನಸ್ವಿನಃ ।
ಸನ್ಯಸ್ಯ ಸಂಯಾಂತ್ಯುಭಯಂ ಪದಂ ಹರೇಃ ॥ (ಭಾಗವತ)

ನಶ್ವರವಾದ ಸುಖ ಸಂಪತ್ತನ್ನಿತ್ತು, ಪುಣ್ಯ ಕ್ಷೀಣಾನಂತರದಲ್ಲಿ ಪುನರ್ಜನ್ಮಕ್ಕೆ ಕಾರಣೀಭೂತವಾದ ಸ್ವರ್ಗಾದಿಗಳಲ್ಲಿ ಕಲ್ಪಾಂತರದವರೆಗೂ ವಾಸಿಸಿದರೇನು? ಜನ್ಮಮಾತ್ರದಿಂದ ಭಗವತ್ಭಕ್ತರ ದರ್ಶನವನ್ನು ಪಡೆದು, ಅದರಿಂದ ಜ್ಞಾನೋಪದೇಶವನ್ನು ಹೊಂದಿ, ಭಕ್ತಿಭರಿತರಾಗಿ, ಶ್ರೀಹರಿಯ ಪ್ರಸಾದವನ್ನು ಪಡೆದು, ಶಾಶ್ವತ ಸುಖಪ್ರದವಾದ ಮೋಕ್ಷವನ್ನು ಹೊಂದಲು ಅವಕಾಶವಿರುವ ಈ ಭಾರತ ಖಂಡದಲ್ಲಿ ಕ್ಷಣಕಾಲವಾದರೂ ಜೀವಿಸಿದ್ದರೆ ಸಾರ್ಥಕವಲ್ಲವೆ? ಅದರಂತೆ ದೇವತೆಗಳು ಕೂಡ ಇಲ್ಲಿ ಅವತರಿಸಲು ತವಕಿಸುತ್ತಾರೆ. ಶ್ರೀಹರಿ ಕಾಲವನ್ನು ಒದಗಿಸಿಕೊಟ್ಟಾಗ ಮೋಕ್ಷಾನಂದವನ್ನು ಹೊಂದಿ, ಶ್ರೀಹರಿಯು ನಮ್ಮಲ್ಲಿ ಮಾಡಿದ ಮಹಾಕರುಣೆ ಎಂದು ತನ್ಮಯರಾಗುತ್ತಾರೆ. ಇಲ್ಲಿರುವ ಪರ್ವತಗಳು, ಮಹಾನದಿಗಳು, ವನಗಳು, ತೀರ್ಥಗಳು ಎಲ್ಲವೂ ಶ್ರೀಹರಿಯ ವಿಶೇಷ ಸಾನ್ನಿಧ್ಯವುಳ್ಳವುಗಳಾಗಿ, ವೇದಪುರಾಣೋಕ್ತ ಮಹಿಮಾ ಉಳ್ಳವುಗಳಾಗಿವೆ. ಇಂತಹ ತೀರ್ಥಗಳಲ್ಲಿ ತಪಸ್ಸ್ನಾನ್ನಾಚರಿಸಿ, ಕ್ಷೇತ್ರಮೂರ್ತಿಯನ್ನು ಸಾಕ್ಷಾತ್ಕರಿಸಿಕೊಂಡು, ತಾವು ಸಿದ್ಧಿಯನ್ನು ಹೊಂದುವವರಾಗಿ, ಜಗತ್ತನ್ನೇ ಪಾವನ ಮಾಡುವ ಮಹಾತ್ಮನಿದ್ದಾನೆ ನಂಬಿರಿ ಎಂಬುವ ಅಭಯವನ್ನು ನೀಡುತ್ತಾರೆ. ಆದ್ದರಿಂದಲೇ ಇಂತಹ ಪುಣ್ಯಕ್ಷೇತ್ರಗಳ ಪರ್ಯಟನ ಸೇವೆಯು ಶಿಷ್ಟಾಚಾರವಾಗಿ, ಭಗವತ್ ಪ್ರೀತಿ ಸಾಧನ ವಿಶೇಷವಾಗಿ ಇಂದಿಗೂ ನಡೆದು ಬಂದಿರುವ ಹಾಗೂ ನಡೆಯುತ್ತಿರುವ ವಿಶೇಷಾನುಷ್ಠಾನವಾಗಿದೆ.

ಹಿಮಾಲಯದ ಬದರಿಕಾಶ್ರಮದಿಂದ ಹಿಡಿದು ಕನ್ಯಾಕುಮಾರಿಯವರೆವಿಗೂ ನೂರಾರು ಪುಣ್ಯಕ್ಷೇತ್ರಗಳ ವ್ಯೂಹವೇ ವಿರಾಜಿಸುತ್ತಿವೆ. ಪ್ರಸಿದ್ಧವಾಗಿ ಬದರಿ, ಕಾಶಿ, ಕೇದಾರ, ಮಾಯಾ, ಜಗನ್ನಾಥ, ಮಥುರಾ, ದ್ವಾರಕ, ಅಯೋಧ್ಯಾ, ಪುಷ್ಕರ, ಪ್ರಭಾಸ, ಕುರುಕ್ಷೇತ್ರ, ಗಯಾ, ರಾಮೇಶ್ವರ, ಶ್ರೀರಂಗ, ಪದ್ಮನಾಭ, ಕಂಚಿ, ವೇಂಕಟಗಿರಿ (ತಿರುಪತಿ), ಶ್ರೀಮುಷ್ಣವೇ ಮೊದಲಾದ ಪ್ರಸಿದ್ಧ ಸ್ವಯಂವ್ಯಕ್ತ ಕ್ಷೇತ್ರಗಳ ಮಧ್ಯದಲ್ಲಿ ಮಹಾಪ್ರಸಿದ್ಧ ಆರು ಪುರಾಣೋಕ್ತ ಮಹಿಮೆಯುಳ್ಳ ಸ್ವಯಂ ವ್ಯಕ್ತ ಶ್ರೀನಾರಸಿಂಹನ ಮೂಲಕ್ಷೇತ್ರವೇ ಕರಿಗಿರಿ ಕ್ಷೇತ್ರವು.

ಕರಿಗಿರಿಯ ಮಹಿಮೆ ಎಂದರೆ ಶ್ರೀಹರಿಯ ಮಹಿಮೆಯೇ ಸರಿ. ಮೊದಲೇ ತಿಳಿಸಿದಂತೆ ಜಡವಾದ ಪರ್ವತಕ್ಕೆ ಸ್ವತಃ ಯಾವ ಮಹಿಮೆಯೂ ಕೂಡಲಾರದು. ಕರಿಗಿರಿಯಲ್ಲಿ ಲಕ್ಷ್ಮೀಸಹಿತನಾದ ಶ್ರೀ ನಾರಸಿಂಹನು ಭಕ್ತರ ಉದ್ಧಾರಕ್ಕಾಗಿ ನಿತ್ಯ ಸನ್ನಿಹಿತನಾಗಿದ್ದಾನೆ. ಕರಿಗಿರಿಗೆ ಇತರ ಎಲ್ಲ ಪರ್ವತಗಳಿಗಿಲ್ಲದ ಮಹಾತ್ಮೆಯನ್ನು ತಂದು ಕೊಡುವುದರಲ್ಲಿ ಪರಮಾತ್ಮನ ವಿಶೇಷ ವಿಭೂತಿರೂಪವೇ ಕಾರಣವಾಗಿರುತ್ತದೆ. ಅಥ ಏವ ಆದಿಪರ್ವತ, ಪರ್ವತರಾಜ ಎಂದೆಲ್ಲಾ ಪುರಾಣಗಳಲ್ಲಿ ಕರೆದಿದ್ದಾರೆ. ಭಗವನ್-ಮಹಿಮಾ ಪ್ರತಿಪಾದಕವಾದ ಕರಿಗಿರಿಯ ಚರಿತ್ರೆಯು ಅನ್ಯಾದೃಷ್ಯ. ಈ ಕ್ಷೇತ್ರಮಹಾತ್ಮೆಯು ಶ್ರೀ ವೇದವ್ಯಾಸ ಕೃತ ವೇದಾರ್ಥ ಸಾಧಕಗಳಾದ ೨೮ ಪುರಾಣಗಳ ಪೈಕಿ ಬ್ರಾಹ್ಮ್ಯ, ಸ್ಕಾಂದ, ವಾಮನ, ಭವಿಷ್ಯೋತ್ತರ, ವಿಷ್ಣು ಪುರಾಣಗಳಲ್ಲಿ ಸಂಕೋಚವಾಗಿಯೂ, ಹನ್ನೆರಡುಸಾವಿರ ಶ್ಲೋಕಗಳಿಂದ ೧೨ ಭಗವಂತನ ವಿಭೂತಿರೂಪಗಳಿಂದ ಹೆಣೆಯಲ್ಪಟ್ಟ ಶ್ರೀಬ್ರಹ್ಮಾಂಡ ಪುರಾಣದ ಕ್ಷೇತ್ರಖಾಂಡದಲ್ಲಿ ೮೦೦ ಶ್ಲೋಕಗಳ ೧೨ ಅಧ್ಯಾಯಾತ್ಮಕವಾಗಿ ಬಹು ವಿಸ್ತಾರವಾಗಿ ರೂಪುಗೊಂಡಿದೆ. ಸಂಸಾರಿಗಳ ಅನಾಧಿ ದುಃಖ ನಾಶವನ್ನು ಮಾಡಿ ಅವರವರ ಇಚ್ಛೆಯನ್ನು ಸಾಧಿಸಿಕೊಟ್ಟು, ಉತ್ಕೃಷ್ಟ ರೀತಿಯಲ್ಲಿ ಸಂಸಾರ ಸಾಗರದಿಂದ ಉದ್ಧರಿಸಿ, ಮೋಕ್ಷದಾಯಕನಾದ ಅಪ್ರಮೇಯ ಶ್ರೀನಾರಸಿಂಹನ ಅನಂತಕಲ್ಯಾಣ ಗುಣಗಳನ್ನು ಅವನ ಮಹಿಮೆಯನ್ನೂ ಪ್ರಮೇಯ ಪೂರ್ವಕ ಪ್ರತಿಪಾದಿಸುತ್ತದೆ. ಪ್ರಕೃತ ಕಥಾದೃಷ್ಟಿಯಿಂದಲೂ ಜನಸಾಮಾನ್ಯರ ವಿಷಯಾಸಕ್ತ ಮನಸ್ಸನ್ನು ತನ್ನೆಡೆಗೆ ಆಕರ್ಷಿಸಿ, ಭಕ್ತಿಯ ಸುಳಿಗೆ ಸಿಲುಕಿಸುತ್ತದೆ. ಕರಿಗಿರಿಯ ಮಹಾತ್ಮೆಯು ವಿಷ್ಣುವು-ಬ್ರಹ್ಮದೇವರಿಗೆ, ಬ್ರಹ್ಮದೇವರು-ಶೇಷದೇವರಿಗೆ, ವಶಿಷ್ಠರು-ನಿಮಿರಾಜರಿಗೆ, ನಾರದರು-ತೃತಮುನಿಗೆ, ದೂರ್ವಾಸರು-ಸನಕಾದಿಗಳಿಗೆ, ಸೂತರು-ಶೌನಕಾದಿಗಳಿಗೆ ಹೀಗೆ ಆರು ಪುರಾಣಗಳಿಂದ ಆರು ಕ್ರಮಮಾರ್ಗಗಳಿಂದ ಹೇಳಲ್ಪಟ್ಟ ತತ್ತ್ವಜ್ಞಾನ ಗಂಗೆಯಾಗಿದೆ.

ಯಸ್ಯ ಶ್ರವಣ ಮಾತ್ರೇಣ ರಾಜಸೂಯಫಲಂ ಲಭೇತ್ । ಬ್ರಹ್ಮ. ವ.।

ಯಾವುದರ ಭಕ್ತಿಯುಕ್ತಶ್ರವಣ ಮಾತ್ರದಿಂದಲೇ ರಾಜಸೂಯಾದಿ ಸಮಸ್ತ ಫಲವುಂಟಾಗುವುದೋ ಅಂತಹ ಮಹಿಮೆವುಳ್ಳದ್ದು ಕರಿಗಿರಿಯೆಂದು ಬ್ರಹ್ಮದೇವರು ಕೊಂಡಾಡಿದ್ದಾರೆ. ಕಲಿಯುಗದಲ್ಲಿ ಭವಿಷ್ಯೋತ್ತರ ಪುರಾಣಾಂತರ್ಗತ ವೇಂಕಟಗಿರಿ ಮಹಾತ್ಮೆಯು ಹೇಗೆ ಪ್ರಮುಖವೋ ಹಾಗೆಯೇ ಕಲಿಯುಗದಲ್ಲಿ ಬ್ರಹ್ಮಾಂಡ ಪುರಾಣೋಕ್ತ ಕರಿಗಿರಿ ಮಹಾತ್ಮೆಯೂ ಪ್ರಮುಖವಾದದ್ದು.

ಕಥಿತಂ ರಂಗಮಾಹಾತ್ಮ್ಯಂ ತ್ವಯಾ ಹಸ್ತಿಗಿರೀಶಿತುಃ ।
ಜಗನ್ನಾಥಸ್ಯ ವೈ ವಿಷ್ಣೋಃ ಮಾಹಾತ್ಮ್ಯಮತುಲಂ ಮುನೇ ।
ಇದಾನೀಂ ಶ್ರೋತುಮಿಚ್ಛಾಮಿ ಮಹಾತ್ಮ್ಯಂ ವೇಂಕಟೇಶಿತುಃ ॥

ಎಂಬ ಉಕ್ತಿಯಂತೆ ಶೌನಕಾದಿಗಳು ವೇಂಕಟಗಿರಿ ಮಹಾತ್ಮೆಗಿಂತಲೂ ಮೊದಲೇ ಕರಿಗಿರಿಯ ಮಹಾತ್ಮೆಯನ್ನು ಕೇಳಿದ್ದಾರೆಂದು ವೇಂಕಟೇಶ ಮಹಾತ್ಮೆಯಲ್ಲಿಯೇ ಹೇಳಿದೆ. ಇದರಿಂದ ಕರಿಗಿರಿಯು ಎಷ್ಟು ಪ್ರಾಚೀನವೆಂಬುದು ತಿಳಿಯುತ್ತದೆ. ಇದಲ್ಲದೆ ಬ್ರಹ್ಮಾಂಡ ಪುರಾಣದ ಕ್ಷೇತ್ರಖಾಂಡದ ೧೧ನೇ ಅಧ್ಯಾಯದಲ್ಲಿ ಹೇಳಿರುವಂತೆ

ಶೇಷಾದ್ರಿ ನಿಲಯೋ ದೇವಃ ಶ್ರೀನಿವಾಸಸ್ಸನಾತನಃ ।
ಆಯಯೌ ಖಗಮಾರುಹ್ಯ ವೇಂಕಟಾದ್ರೇಶ್ಚ ಭೂದರಾತ್ ॥
ಕರಿಗಿರಿಂ ಗಂತುಕಾಮೋ ಪದ್ಮಾವತ್ಯಾ ಸಮನ್ವಿತಃ ।
ಕುಸುಮಾದ್ರಿಂ ತಥಾ ಪ್ರಾಪ್ಯ ವೇಂಕಟೇಶಸ್ಸನಾತನಃ ॥
ನಾರಸಿಂಹಂ ತದಾ ದೃಷ್ಟ್ವಾ ಋಷೀಣಾಂ ಪುರತೋವಿಭುಃ ।
ಏಕೀಭೂಯಪುನರ್ದೇವಃ ಸರ್ವೇಷಾಂ ಪುರತೋ ಭುವಿ ॥
ಸಿಂಹಾಚಲೇ ತು ರೂಪಂ ಸ್ವಂ ಏಕಂ ಸಂಸ್ಥಾಪ್ಯ ವಿಶ್ವಭುಕ್ ।
ಅಪರಂ ರೂಪಮಾಸ್ಥಾಯ ವೇಂಕಟೇಶಃ ಪ್ರತಾಪವಾನ್ ॥
ಜಗಾಮ ವೇಂಕಟಾದ್ರಿಂ ಚ ಕೇಶವಂ ಪ್ರಾಪ್ಯ ಸ ಪ್ರಭುಃ ।
ದೇವೈಶ್ಚ ಋಷಿಭಿಸ್ಸಾರ್ಥಂ ಸಂವಸನ್ ಮಲಯಾಚಲೇ ॥
ಏಕ ರೂಪೇಣ ಶೇಷಾದ್ರೌ ವೇಂಕಟೇಶೋ ಮಹಾಪ್ರಭುಃ ।
ವಾಸಂ ಚಕಾರ ಭಗವಾನ್ ಸರ್ವ ದೇವೈಸ್ಸುಪೂಜಿತಃ ॥
ಅನ್ಯರೂಪಂ ಸಮಾಶ್ರಿತ್ಯ ವೇಂಕಟೇಶಸ್ಸನಾತನಃ ।
ಕುಸುಮಾಚಲೇ ವಸನ್ ದೇವಃ ಸರ್ವದೇವೈರಲಂಕೃತಃ ॥
ಸನಂದನಾದ್ಯೈರ್ಮುನಿಭಿಸ್ತೂಯಮಾನಸ್ಸನಾತನಃ ।
ಆಸ್ತೇ ತತ್ರ ನೃಪಶ್ರೇಷ್ಠ ಕರಿಗಿರೌ ಚ ಪುರಾತನಃ ॥

ಶ್ರೀನಿವಾಸನು ಗರುಡರೂಢನಾಗಿ ಪದ್ಮಾವತೀ ಸಮೇತನಾಗಿ, ಈ ಕರಿಗಿರಿಯ ತಿರುಪತಿ

ಶ್ರೀಲಕ್ಷ್ಮೀನರಸಿಂಹ ಸ್ವಾಮಿಯನ್ನು ನೋಡಲು ಬಂದನೆಂದು, ನಂತರ ಒಂದು ರೂಪದಿಂದ ನಾರಸಿಂಹನಲ್ಲಿಯೇ ಸ್ಥಿತನಾಗಿ, ಸರ್ವದೇವತೆಗಳಿಂದ ಪೂಜಿಸಲ್ಪಡುವ ಮಲಯಾಚಲವೆಂದೆನಿಸುವ ವೇಂಕಟಾದ್ರಿಗೆ ಒಂದುರೂಪದಿಂದ ಹೋದನೆಂದೂ ಹೇಳಿದೆ. ಅದ್ಯಾಪಿ ಕರಿಗಿರಿಯಲ್ಲಿ (ಕುಸುಮಾಚಲ) ಸರ್ವದೇವತೆಗಳಿಂದಲೂ, ಸನಕ ಸನಂದನಾದಿ ಮುನಿಗಳಿಂದ ಸ್ತೋತ್ರಾರ್ಹನಾಗಿ ಕರಿಗಿರಿಯಲ್ಲಿಯೇ ವಾಸವಾಗಿದ್ದಾನೆಂದೂ ಹೇಳಿದ್ದಾರೆ. ಇದರಿಂದ ಕಲಿಯುಗದಲ್ಲಿ ಕರಿಗಿರಿ ಪರ್ವತವು ವೇಂಕಟಗಿರಿ ಪರ್ವತವೂ ಎಷ್ಟು ನಿಕಟ ಸಂಪರ್ಕವುಳ್ಳ ಕ್ಷೇತ್ರಗಳೆಂಬುದು ಪುರಾಣ ತತ್ವ ಚಿಂತನೆಯುಳ್ಳವರಿಗೆ ಅರಿವಾಗುವುದು.

ಇನ್ನು ಅರ್ವಾಚೀನವಾಗಿ ಅನೇಕ ಅಪರೋಕ್ಷ ಜ್ಞಾನಿಗಳು ಈ ಕ್ಷೇತ್ರವನ್ನು ಸೇವಿಸಿ, ಶ್ರೀಲಕ್ಷ್ಮೀನರಸಿಂಹನನ್ನು ಮನಸಾರೆ ಕೊಂಡಾಡಿದ್ದಾರೆ.

ಶ್ರೀನಿವಾಸೇಚ್ಛಯಾ ಪ್ರಾಪ್ತಂ ವೈಭವಂ ವೀಕ್ಷ್ಯತನ್ಮಹತ್ ।
ಓಮಿತ್ಯುಕ್ತ್ವಾ ಭಕ್ತಿಭರಸ್ತಂತ್ರಸಾರೋಕ್ತಮಾರ್ಗತಃ ।
ಅಪೂಜಯಚ್ಛ್ರೀನಿವಾಸಂ ವ್ಯಾಸರಾಜೋದ್ವಿಶೇತ್ ಸಮಾಃ ।
ವಿಭವೈರ್ಬಹುಭಿಶ್ಚೈವ ತದಾಭಕ್ತಿಪುರಸ್ಸರಮ್ ॥

ಎಂಬ ಆರ್ಯೋಕ್ತಿಯಂತೆ ಜಗದ್ಗುರು ಶ್ರೀಮಧ್ವಾಚಾರ್ಯರ ಮೂಲ ಮಹಾಸಂಸ್ಥಾನದ ಶ್ರೀ ರಾಜೇಂದ್ರತೀರ್ಥ ಪೂರ್ವಾದಿ ಮಠದ ಪರಂಪರೆಯಲ್ಲಿ ಬಂದ ಶ್ರೀ ಬ್ರಹ್ಮಣ್ಯತೀರ್ಥರ ಕರಕಮಲ ಸಂಜಾತರೂ ಮುನಿತ್ರಯರಲ್ಲಿ ಒಬ್ಬರಾದ, ಕರ್ನಾಟಕ ವಿದ್ಯಾ ಸಿಂಹಾಸನಾಧಿಶ್ವರರಾದ, ಶ್ರೀ ಮದ್ವ್ಯಾಸರಾಜತೀರ್ಥರು ಶ್ರೀನಿವಾಸನ ಇಚ್ಛೆಯಿಂದಲೇ ಅವನ ಅರ್ಚನೆಯನ್ನು ಮಾಡುವ ಸುಯೋಗವು ತಾನಾಗಿ ಬಂದದ್ದು ನೋಡಿ, ಹಾಗೆಯೇ ಆಗಲಿ ಎಂದು ಒಪ್ಪಿಕೊಂಡು ಭಕ್ತಿಭರಿತರಾಗಿ ತಂತ್ರಸಾರೋಕ್ತ ಕ್ರಮದಿಂದ ಹನ್ನೆರಡು ವರ್ಷಗಳ ಕಾಲ ಶ್ರೀನಿವಾಸನ ಪೂಜೆಯನ್ನು ನಡೆಸಿದರೆಂಬುದು ಸರ್ವರಿಗೂ ವಿಧಿತ ವಿಷಯುವು. ಅದೇ ಶ್ರೀವ್ಯಾಸರಾಜರು ಈ ಕರಿಗಿರಿ ಶ್ರೀಲಕ್ಷ್ಮೀನರಸಿಂಹನನ್ನು ಆರು ವರ್ಷಗಳ ಕಾಲ ತಂತ್ರಸಾರೋಕ್ತ ಕ್ರಮದಿಂದ ಪೂಜೆ ಮಾಡಿದ್ದಾರೆಂಬುದು ಅವರ ಒಂದು ಪದ್ಯವೇ ತಿಳಿಸುತ್ತದೆ.

ಮುರಹರ ಸಿರಿವರ ಗಿರಿಧರ ನರಹರಿ ಎಂದು ಕರೆಯೇ ।

ಕರುಣದಿ ಬಂದು ಕರಿಯ ಕಾಯ್ದ್ದಿ ಕರಿಗಿರಿ ದೊರೆಯೇ ।
ಮೂರೆಡು ಸಂವತ್ಸರ ಕಳೆಯೆ ಅಂತಕನ ಭಯವಿಲ್ಲ ಹರಿಯೇ ।
ನರಕಾಂತಕ ಸಿರಿಕೃಷ್ಣ ಮುಂದೆತ್ತಣ ಪಯಣ ನಾನರಿಯೇ ॥

[ಕರಿಯ ಕಾಯ್ದ್ದಿ ಎಂದರೆ ಆನೆಯಾಗಿದ್ದದೇವದತ್ತ–ಧನಂಜಯರ ಶಾಪವಿಮೋಚನೆ]

ಶ್ರೀಪಾದರಾಜರ ಪಂಚರತ್ನಮಾಲಿಕಾ ಸ್ತೋತ್ರದಲ್ಲಿ, ಶ್ರೀವ್ಯಾಸರಾಜರು ತಮ್ಮ ವಿದ್ಯಾಗುರುಗಳ ಬೃಂದಾವನ ದರ್ಶನದ ಫಲವನ್ನು ಹೇಳುವ ಸಂದರ್ಭದಲ್ಲಿಯೂ

ಕಾಶೀ ಕೇದಾರ ಮಾಯಾ ಕರಿಗಿರಿ ಮಥುರಾ ದ್ವಾರಕಾ ವೇಂಕಟಾದ್ರೀ ।
ಶ್ರೀಮುಷ್ಣಕ್ಷೇತ್ರಪೂರ್ವ ತ್ರಿಭುವನ ವಿಲಸತ್ಪುಣ್ಯಭೂಮೀ ನಿವಾಸಃ ॥

ಎಂದು ವರ್ಣಿಸಿ ಕರಿಗಿರಿಯ ಸ್ಥಾನ–ಮಾನಗಳನ್ನು ತಿಳಿಸಿದ್ದಾರೆ. ಮತ್ತು ಕರಿಗಿರಿಯ ಜಯಮಂಗಳಾ ತೀರದಲ್ಲಿ ಮುಖ್ಯಪ್ರಾಣದೇವರನ್ನು ಪ್ರತಿಷ್ಠಾಪಿಸಿದ್ದಾರೆ. ಶ್ರೀವ್ಯಾಸರಾಗರ ಶಿಷ್ಯರಾದ ಶ್ರೀವಿಜಯೀಂದ್ರ ತೀರ್ಥರೂ ಸಹ ಗುರುಗಳ ಜೊತೆಯಲ್ಲಿ ಶ್ರೀನರಸಿಂಹನನ್ನು ಪೂಜಿಸಿ, ಪರ್ವತ ತಪ್ಪಲಿನಲ್ಲಿ (ತುಮಕೂರು) ಪ್ರಾಣದೇವರನ್ನು ಪ್ರತಿಷ್ಠಾಪಿಸಿದ್ದಾರೆ. ಮತ್ತು ಕರಿಗಿರಿ ಪರ್ವತವು ಋಜುತಪೋಭೂಮಿಯೆಂದೂ ತಿಳಿಸಿದ್ದಾರೆ.

ಯಾ ಪರ್ವತೇಷ್ವೋಷಧೀಷ್ವಪ್ಸು ಯಾಮಾನುಷೇಷ್ವಸಿತಸ್ಯ ರಾಜಾ
ಬೃಹತೀ ಇವ ಸೂನವೇ ॥ (ಶೃತಿ)

ಪರ್ವತ, ನದಿ, ವನ, ಗುಹೆ, ಔಷಧಿ (ಗಿಡಮೂಲಿಕೆಗಳು) ವನಸ್ಪತಿ, ಮನುಷ್ಯರು ಹೀಗೆ ಎಲ್ಲಅಧಿಷ್ಠಾನಗಳಲ್ಲೂ "ಬೃಹತೀಸಹಸ್ರವಾಚ್ಯಶ್ಚಚಿದ್ರೂಪಃ ಪರೋವಿಭುಃ" ಎಂಬ ಋಜು ಲಕ್ಷಣದಂತೆ ಬೃಹತೀ ಸಹಸ್ರ ಪ್ರತಿಪಾದ್ಯನಾದ ಶ್ರೀಹರಿಯನ್ನು ಅಪ್ರತೀಕಾಲಂಬನರಾಗಿ ಕಾಣುವ ಮತ್ತು ಸರ್ವತ್ರ ನಮಿಸುವ ಭಾವೀ ಸಮೀರ ಶ್ರೀಮದ್ವಾದಿರಾಜತೀರ್ಥರು, ವೇಂಕಟಗಿರಿಯಲ್ಲಿ ಶ್ರೀನಿವಾಸನ ಪೂಜೆಗೈದಂತೆ ಇಲ್ಲಿಯೂ ಪೂಜೆಗೈದು, ಗಹ್ವರಸ್ಥ ಶ್ರೀಪಾದತೀರ್ಥದ ತಟದಲ್ಲಿ ಇಂದಿಗೂ ತಪಸ್ಸನ್ನಾಚರಿಸುತ್ತಿದ್ದಾರೆ. ಈ ಮೇಲಿನ ಶೃತ್ಯರ್ಥವನ್ನೇ

ಹರಿದ್ರೋಹ ಗುರುದ್ರೋಹ ಸುರದ್ರೋಹ ಹರೇಪರೇ ।

ಗಿರಿಗಹ್ವರ ಕಾಸಾರೇ ತಪಃ ಕುರ್ಯಾಂ ಹರೇರಿತಿ ||
ಗಿರಿಜಾಪತಿಮಾರಾಧ್ಯ ವಿರಜಾರ್ಕಾಯುತದ್ಯುತಿಮ್ ।
ಸುರಜಾತಚರಂ ದೇವಂ ಅರಿಜಾತಹರಂ ಪರಮ್ ।
ತೇನ ಚ ಬ್ರಹ್ಮಣಾ ಸಾಕಂ ಹರಿಮಾರಾಧ್ಯ ಭೂರಿಶಃ ।
ತಾಭ್ಯಾಂ ಮಹಾನುಭಾವಾಭ್ಯಾಂ ಮುಚೇಽಹಂ ಕರ್ಮಬಂಧನಾತ್ ।

ಎಂದು ವೃಂದಾವನಾಖ್ಯಾನದಲ್ಲಿ ಶ್ರೀರಾಜರಿಂದಲೇ ವರ್ಣಿಸಲ್ಪಟ್ಟಿದೆ. ಈ ವಿಷಯಕ್ಕೆ ಪ್ರತ್ಯಕ್ಷ ಸಾಕ್ಷಿಯ ಕುರುಹುಗಳು ಗುಹಸ್ಥ ಶ್ರೀಪಾದತೀರ್ಥದಲ್ಲಿಯೇ ಇಂದಿಗೂ ಕಂಗೊಳಿಸುತ್ತಿವೆ.

ಶ್ರೀ ವ್ಯಾಸರಾಜರು ಕರಿಗಿರಿಯ ಶ್ರೀನರಸಿಂಹನನ್ನು ಪೂಜಿಸುತ್ತಿದ್ದ ಸಮಯದಲ್ಲಿ ಶಿಷ್ಯರಾದ ಶ್ರೀಪುರಂದರದಾಸರು, ಈ ಕ್ಷೇತ್ರದ ಪುರಾಣಾರ್ಥಗಳನ್ನೇ ಹೊರಸೂಸುವ ದೇವರನಾಮವನ್ನು ರಚಿಸಿ ಹಾಡಿದ್ದಾರೆ.

ಸ್ಮರಿಸುವ ಜನಕೆಲ್ಲಾ ಭವಭಯ ಪರಿತಾಪಗಳಿಲ್ಲ || ಪ ||
ಶರಣಾಗತ ಜನವತ್ಸಲನೆನಿಸಿದ ಕರಿಗಿರಿದುರ್ಗದ ನರಹರಿ ನಿನ್ನನು ||
ಪೂರ್ವಸುಕೃತದಿಂದ ಸುಜನಕೆ ತೋರ್ವೆ ನೀ ಮುದದಿಂದ ।
ಸಾರ್ವಕಾಲದೊಳು ಮಹದಾನಂದದಿ ದೂರ್ವಾಸರು ಪೂಜಿಪ ಮೂರುತಿ ನಿನ್ನನು || ೧ ||
ಕಾಶಿತೀರ್ಥದಿಂದ ಚಕ್ರಪರಾಶರ ತೀರ್ಥದಿಂದ ।
ಲೇಸಾದ ಮಾರುತ ಪಾದತೀರ್ಥ ನರಕೇಸರಿ ತೀರ್ಥದಿಂದೊಪ್ಪುವ ನಿನ್ನನು || ೨ ||
ನೀನಿಹ ಕ್ಷೇತ್ರದೊಳು ಸೇರಿಹ ವಾನರ ಪಕ್ಷಿಗಳು ।
ಮಾನವಾದಿ ಬಹುಪ್ರಾಣಿಸಮೂಹಕೆ ಏನುಪುಣ್ಯಫಲವಿರುವುದೋ ತಿಳಿಯದು || ೩ ||
ಅತ್ತಿಯ ಮರದಲ್ಲಿ ಕಾಯ್ಗಳು ಹತ್ತಿರುವಂದದಲಿ ।
ವೊತ್ತ ವೊತ್ತವಾದ ಬ್ರಹ್ಮಾಂಡ ನಿನ್ನೊಳು ಹತ್ತಿಕೊಂಡಿಪ್ಪುದನಂತ ಕೋಟಿ ಎಂದು || ೪ ||

ಅಡವಿಯ ಮೃಗಗಳಿಗೆ ಬಹು ಬಗೆ ಗಿಡಲತೆ ಮರಗಳಿಗೆ ।
ಒಡೆಯ ನೀನಲ್ಲದೆ ಅನ್ನೋದಕಗಳ ಕೊಡುವರೇ ಮನುಜರು ನೀಗತಿ
ಸಲಹೆಂದು ॥ ೫ ॥
ಕ್ಷುದ್ರ ದೈತ್ರರ ಗಂಡ ಕರುಣ ಸಮುದ್ರ ತಿಮಿರ ಚಂಡ ।
ರೌದ್ರಾದಿ ಅಸುರರ ಮರ್ಧಿಸಿ ಲೋಕೋಪದ್ರವ ಬಿಡಿಸಿದ
ರುದ್ರಾಂತರ್ಗತ ನಿನ್ನನು ॥ ೬ ॥
ಭೂತಗ್ರಹಾದಿಗಳು ಸೋಕಿದ ಭೀತಿ ಜ್ವರಾದಿಗಳು ।
ಚೇತೋಮುಖ ನಿನ್ನನು ನೋಡಲು ಇನ್ನಾ ಪಾತಕವಳಿದು ಯಾತನೆ
ಕಳೆವುದು ॥ ೭ ॥
ಲಕ್ಷ್ಮೀಸಹಿತನಾಗಿ ಭಕ್ತರ ರಕ್ಷಿಸಿವುದಕಾಗಿ ।
ಲಕ್ಷಣಯುಕ್ತದಿ ಬಂದು ನಿಂದೆ ಶ್ರೀಲಕ್ಷ್ಮೀ ನರಸಿಂಹ ನಿನ್ನ ಅದ್ಭುತ
ಚರಿತೆಯ ॥ ೮ ॥
ಕರಿಗಿರಿ ನರಸಿಂಹ ಭಕ್ತರ ದುರಿತ ದಂತಿ ಸಿಂಹ ।
ಪರಿಪಾಲಿಸು ನಾ ಮೊರೆಹೊಕ್ಕೆನೋ ನಿನ್ನ ಗುರುವೇ ಪುರಂದರ ವಿಠಲ
ನಿನ್ನನ್ನು ॥ ೯ ॥

ಹೀಗೆ ಪುರಂದರದಾಸರಲ್ಲದೆ ವಿಜಯದಾಸರು, ಗೋಪಾಲದಾಸರು, ಜಗನ್ನಾಥದಾಸರೇ ಮೊದಲಾದ ಅನೇಕ ಹರಿದಾಸವರೇಣ್ಯರುಗಳು ಈ ಕ್ಷೇತ್ರವನ್ನು ಸೇವಿಸಿ, ಕ್ಷೇತ್ರಮಹಿಮೆಯನ್ನು ವರ್ಣಿಸಿದಾರೆ.

ಕೇದಾರ ರಾಮೇಶ್ವರ ಕೇರಳ ಭೂತಳದ ।
ಪಾದಾರವಿಂದ ಕ್ಷೇತ್ರ ಪ್ರತಿಕ್ಷೇತ್ರವ ।
ಆದರದಿ ಲಕ್ಷದಿಪ್ಪತ್ತೈದು ಸಾವಿರ ಕೃತಿಯ ।
ವೇದಶಾಸ್ತ್ರ ಪುರಾಣ ಸಮ್ಮತದಿಂದ ।
ವಾಸುದೇವನ ನಾಮಾವಳಿಯ ಕ್ಲಿಪ್ತಿಯನು ।
ಶ್ರೀವ್ಯಾಸರಾಯರ ದಯದಿಂದ ಬಣ್ಣಿಪೆನು ।

ತೀರ್ಥಕ್ಷೇತ್ರಗಳ ಮಹಿಮೆಯನ್ನೇ ಕುರಿತು ಒಂದು ಲಕ್ಷ ಇಪ್ಪತ್ತೈದು ಸಾವಿರ ಕೃತಿಗಳನ್ನು ರಚಿಸಿದ್ದೇನೆಂದು ಅವರೇ ಹೇಳಿಕೊಂಡಿದ್ದಾರೆ. ಈ ಪೈಕಿ ಪಾದಾರವಿಂದ ಕ್ಷೇತ್ರವೇ ಶ್ರೀಪಾದತೀರ್ಥ ಕ್ಷೇತ್ರ ಪುಷ್ಕರಾದ್ರಿಯು.

ಇದರಂತೆ ವಿಜಯದಾಸರೂ ಕೂಡ ಈ ಕ್ಷೇತ್ರವನ್ನು ವರ್ಣಿಸುತ್ತಾ –

ಪುಷ್ಕರಾದ್ರಿಯ ನೋಡಿ ಪುಣ್ಯವಂತರ ಕೂಡಿ ।
ದುಷ್ಕರ್ಮಗಳ ಅಳಿದು ದುರ್ಜನ ಸಂಗ ಹಳಿದು ।
ನಿಷ್ಕಾಮವರವೇ ಉಂಟು ನಿತ್ಯಮುಕ್ತಿಗೆ ಗಂಟು ।
ಪುಷ್ಕರಾದಿ ದ್ವೀಪದ ಫಲವು ಪೊಡೆಮಾಡ್ದ ।
ಒಂದೇ ಪ್ರದಕ್ಷಿಣೆಯಿಂದಹುದು ನಿತ್ಯ ।

ಇದೇ ವಾರಣಾಸಿ ಉದಧಿ ಬಂಧನ (ಸೇತು ಬಂಧನಾ) ।
ಇದೇ ದ್ವಾರಕಾ ಪುರಿ ಪದುಮನಾಭಾ ।
ಇದೇ ಗಯಾ ಪ್ರಯಾಗ ಯದುಕುಲಪತಿ ಕ್ಷೇತ್ರ ।
ಇದೇ ರಾಮನಗರೀ (ಅಯೋಧ್ಯಾ) ಮಥುರಾ ಗೋಕುಲಾ ।
ಇದೇ ಕುಂಜರಗಿರಿ ಸದಮಲ ಕುರುಕ್ಷೇತ್ರ ।
ಇದೇ ಸಕಲಕ್ಷೇತ್ರ ನಿರ್ಮಲಯಾತ್ರಾ ।
ಇದಕೆ ಅಧಿಕವಿಲ್ಲ ಇದಕೆ ಸಮಾನವಿಲ್ಲಾ ।
ಇದೇ ನಿರ್ವಾಣಕೆ ಮೊದಲ ಸೋಪಾನವು ।

ಧರೆಗಿದು ವೈಕುಂಠಪುರವಿದು ನಿಜವೆಂದು ।
ಸುರರು ಕಿನ್ನರರು ಸಿದ್ಧರು ಯಕ್ಷರು ಸಾಧ್ಯರು ।
ಗಂಧರ್ವರು ವರಮುನಿಗಳು ವರಾಂಗನೆಯರು ।
ಭೂಸುರರು ಮೊದಲಾದ ಪರಿಪರಿಜ್ಞಾನಿಗಳು ।
ಚರಿಸುವರು ಈ ಕ್ಷೇತ್ರಕೆ ವಿಸ್ತರ ವೈರಾಗ್ಯದಲಿ ।

ಪರಮ ಪುರುಷ ನೃಹರಿ ವಿಜಯವಿಠಲನ ।
ಸ್ಮರಿಸಿ ಕರಿಗಿರಿಯಲಿ ಪರಗತಿ ಬಯಸುತ್ತಾ ।

ಅನಂತ ಜನುಮಕೆ ಸಾಧನ ಕೂಡಾದಲ್ಲದೆ ।
ಈ ಕರಿನಗ ದಾರಿಗೂ ದರುಶನವಾಗದು ।
ಏನೆಂಬೇನಯ್ಯಾ ಇದರ ಮಾಹಾತ್ಮೆಯನು ।
ದುರ್ವಾಸರು ಸನಾಕಾದಿಗಳಿಗೆ ಪೇಳಿ ಮೈಮರೆದ ।
ಮನುಷ್ಯಾನ್ನ ಜನಕೆ ಎಣಿಸಿ ಪೇಳುವದರಿಯೇ ।
ನಾನೆಂತು ವರ್ಣಿಪೆನೋ ಕೊನೆ ಮೊದಲಿಲ್ಲದ ।
ನಾಗಾಚಲ ವಿಜಯ ವಿಠಲ ದೊರೆಯೇ ।

ಎಂದು ಅನಂತ ಜನ್ಮಜನ್ಮಗಳ ಪುಣ್ಯ ಸಾಧನೆಯಾಗದ ಹೊರತು ಈ ಕರಿಗಿರಿಯ ಸ್ಥಳದರ್ಶನ ಯಾರಿಗೂ ಸಾಧ್ಯವಿಲ್ಲವೆನ್ನುವ ಪುರಾಣಾರ್ಥಗಳನ್ನೇ ವರ್ಣಿಸಿದ್ದಾರೆ.

ಇಲ್ಲಿಗೆ ಬಂದು ಸತ್ಕರ್ಮವನು ಮಾಡಿದಡೆ ।
ಎಲ್ಲ ಕ್ಷೇತ್ರದಲಿ ಮಾಡಿದ ಫಲಕ್ಕಿಂತ ।
ಎಳ್ಳೆನಿತು ಮಿಗಿಲೆನಿಸಿ ಪುಣ್ಯತಂದುಣಿಸುವುದು ।
ಎಲ್ಲೆಲ್ಲಿದ್ದರೂ ಸ್ಮರಣೆ ಮಾಡಿರೋ ಜನರು ।
ಸುಗಂಧ ಪರ್ವತ(ಕರಿಗಿರಿ) ವಾಸ ಪುರುಷೋತ್ತಮನೊಳಗೇವಾಸ ।
ನಿಗಮಾದಿಗಳಿಗೆ ಅತಿದೂರನೋ ಈ ಸಿಂಹ ।
ಸುಗುಣ ನಿಧಿ ವಿಜಯವಿಠಲನು ಸರ್ವದಾ ॥

ಈ ಕ್ಷೇತ್ರದಲ್ಲಿ ಮಾಡುವ ಮಹಾದಾನಾದಿ ಯಜ್ಞಗಳ ಫಲವು ಎಲ್ಲ ಕ್ಷೇತ್ರಗಳಿಗಿಂತ ಮಿಗಿಲು, ಯಾವ ಕ್ಷೇತ್ರದಲ್ಲಿದ್ದರೂ ಕರಿಗಿರಿ ಶ್ರೀನರಸಿಂಹನನ್ನು ಸ್ಮರಿಸಿದರೆ, ಪುರುಷೋತ್ತಮನೊಳಗೇ ವಾಸ ಅಂದರೆ ವೈಕುಂಠಾದಿ ಮುಕ್ತ ಸ್ಥಾನಗಳು ಶ್ರೀ ಹರಿಯ ರೂಪವೇ ಆಗಿವೆ. ಅವನಲ್ಲಿ ವಾಸವೆಂದರೆ ಆ ಲೊಕಗಳ ಪ್ರಾಪ್ತಿ ಎಂಬ ಮಾರ್ಮಿಕ ಪ್ರಮೇಯಗಳನ್ನು ತಿಳಿಸಿದ್ದಾರೆಯೇ ವಿನಹಃ ಅದ್ವೈತ ತತ್ವದಂತಲ್ಲ.

ಮೂರ್ಜಗದೊಳಗೆ ಇದೇ ಸರ್ವಯಾತ್ರೆಗೆ ಮಿಗಿಲು ।
ಸಜ್ಜನನಾದವ ಈ ಕರಿನಗಾದಲ್ಲಿ ಬಂದು ।
ಹೆಜ್ಜೆಯಿಡಲು ಅವನ ಕುಲಕೋಟಿ ಉದ್ಧಾರ ।
ಆರ್ಜವ ಮಾರ್ಗದಲಿ ಸಂಚರಿಸುವನು ಬಿಡದೆ ।
ಮಜ್ಜನಾದಿಕರ್ಮ ಅಲ್ಪ ಮಾಡಿದರೂ ಸರಿಯೇ ।
ನಿರ್ವ್ಯಾಜವಾದ ಪುಣ್ಯ ಮೇರುತುಲ್ಯವಾಗೋದು ।
ಈ ನಾಗನಗಯಾತ್ರೆಯ ಜತೆ ಮಾಡಿದ ಜನರಿಗೆ ।
ನಾಗಶಯನ ಜಗನ್ನಾಥವಿಠಲರೇಯ ಒಲಿವಾ ॥

ಶ್ರೀ ಜಗನ್ನಥದಾಸರು, ದಿವಾನ ಪೂರ್ಣಯ್ಯನವರ ಜೊತೆಗೆ ಈ ಕ್ಷೇತ್ರವನ್ನು ಸಂದರ್ಶಿಸಿದಾಗ ಈ ಮೇಲಿನ ಪದ್ಯವನ್ನು ರಚಿಸಿದರೆಂದು ಪ್ರತೀತಿಯಿದೆ. ಹೀಗೆ ಅನೇಕ ಅಪರೋಕ್ಷಜ್ಞಾನಿಗಳು ಶ್ರೀ ಕರಿಗಿರಿಯ ನಾರಸಿಂಹನನ್ನು ಸ್ತುತಿಸಿ, ಅವನ ಅತ್ಯರ್ಥ ಪ್ರಸಾದಕ್ಕೆ ಪಾತ್ರರಾಗಿದ್ದಾರೆ. ಐತಿಹಾಸಿಕವಾಗಿ ಮತ್ತು ಚಾರಿತ್ರಿಕವಾಗಿ ಕರಿಗಿರಿಯ ಅನೇಕ ವಿಶೇಷ ವಿಚಾರಧಾರೆಗಳನ್ನು ಈಗಾಗಲೇ ಅನೇಕ ಸಂಶೋಧಕ ವಿದ್ವಾಂಸರು ಬರೆದು ಮುದ್ರಿಸಿದ್ದಾರೆ. ಅವುಗಳನ್ನು ಇಲ್ಲಿ ಪ್ರಸ್ತಾಪಿಸುವುದು ಅನಗತ್ಯ. ಕೇವಲ ಪಾರಮಾರ್ಥಿಕ ಫಲಕ್ಕಾಗಿ, ಪುರಾಣೋಕ್ತ ಪ್ರಕಾರ ಕರಿಗಿರಿಯ ಮಹಾತ್ಮೆಯನ್ನು ಮಾತ್ರ ಅಳವಡಿಸಲು ಬಯಸಿ, ನನ್ನ ಕುಲಸ್ವಾಮಿಯ ಚರಿತ್ರೆಯನ್ನು ಸ್ಥೂಲ ಮತ್ತು ವಿಸ್ತಾರವಾಗಿ ಬರೆಯಲು ಉಪಕ್ರಮಿಸುತ್ತೇನೆ.

ಷಟ್ಪುರಾಣೋಕ್ತ ಕರಿಗಿರಿಯ ಕ್ಷೇತ್ರವು ಮತ್ತು ಅವುಗಳ ನಾಮಾಂತರದ ವಿವರಣೆಗಳು :–

ಆದೌನಾರಾಯಣೋ ದೇವಃ ಬ್ರಹ್ಮಾಣಂ ಸೃಷ್ಟವಾನ್ ಪ್ರಭುಃ ।
ಸಸರ್ಜ ಲೋಕಾನ್ ಸ್ವರ್ಗಾದೀನ್ ಪಾತಾಲಾದೀಂಶ್ಚ ಸರ್ವಶಃ ।
ವಿಶೇಷಂ ತತ್ರವಕ್ಷ್ಯಾಮಿ ಶೃಣುರಾಜ ಕುಲೋದ್ಭವ ।
ಯಸ್ಯ ಶ್ರವಣ ಮಾತ್ರೇಣ ರಾಜಸೂಯ ಫಲಂ ಲಭೇತ್ ।
ಆಸ್ತೇ ಕರಿಗಿರಿಃ ಕಶ್ಚಿತ್ತ್ರಿಭಿಷ್ಯೃಗೈಸ್ಸಮುಚ್ಛ್ರಿತಃ ।
ಶೇಷಸಿಂಹಗಜಾಕಾರಃ ಖಗೇಂದ್ರ ಇವ ದೃಶ್ಯತೇ ॥ (ಬ್ರ. ಪು.)

ಆದಿಯಲ್ಲಿ ಶ್ರೀಮನ್ನಾರಾಯಣನಿಂದ ಬ್ರಹ್ಮದೇವರು ಮತ್ತು ಸಮಸ್ತ ಬ್ರಹ್ಮಾಂಡವು, ಅದರಲ್ಲಿನ ಸ್ವರ್ಗಾದಿ ಊರ್ಧ್ವಲೋಕಗಳು, ಪಾತಾಳಾದಿ ಅಧೋಲೋಕಗಳು, ಆಯಾಯಾ ಲೋಕಾಧಿಪತಿಗಳು, ದೇವತಾಸಮೂಹಗಳು, ಗಂಧರ್ವಾದಿಗಳು – ಮನುಜರು, ಪರ್ವತಗಳು, ಪುಣ್ಯನದಿಗಳು, ಅನೇಕ ತೀರ್ಥಗಳು, ಪುಣ್ಯಾಶ್ರಮಗಳು ಮುಂತಾದವುಗಳು ಸೃಷ್ಟಿಸಲ್ಪಟ್ಟವು. ಅಂತಹ ಸೃಷ್ಟಿಗೆ ಬಂದ ಶ್ರೀಪಾದತೀರ್ಥ ತಟದಲ್ಲಿ, ಶ್ರೀಹರಿಯಿಂದ ಆಜ್ಞಾಸಿಲ್ಪಟ್ಟ ಶ್ರೀ ಬ್ರಹ್ಮದೇವರು ಹತ್ತುಸಾವಿರ ವರ್ಷಗಳು ತೀರ್ಥಸ್ನಾನ ಮಾಡಿ, ತಪಸ್ಸನ್ನು–ಯಜ್ಞವನ್ನು ಮಾಡಿದರು. ಸಂತುಷ್ಟನಾದ ಶ್ರೀಹರಿಯು ಧರ್ಮರಕ್ಷಣೆಗಾಗಿಯೂ, ದೇವತೆಗಳ–ಋಷಿಗಳ ಜ್ಞಾನಕ್ಕೋಸ್ಕರವಾಗಿಯೂ, ರಾಕ್ಷಸರೇ ಮೊದಲಾದ ದುಷ್ಟರ ನಾಶಕ್ಕಾಗಿಯೂ, ಲಕ್ಷ್ಮೀಸಮೇತನಾಗಿ ನರಸಿಂಹರೂಪದಿಂದ ಆವಿರ್ಭವಿಸಿದನು. ಆ ಸಮಯದಲ್ಲಿ ಬ್ರಹ್ಮದೇವರು ತಮ್ಮ ಕಮಂಡಲದಲ್ಲಿ, ಶ್ರೀಪಾದತೀರ್ಥದ ಜಲವನ್ನು ತುಂಬಿ ಜ್ಞಾನಾನಂದಮಯವಾದ ಹರಿಯ ಎರಡು ಪಾದಗಳಿಗೆ ಅಭಿಷೇಕ ಮಾಡಿದರು. ಅಭಿಷೇಕದ ಜಲವು ಶ್ರೀಪಾದತೀರ್ಥಕ್ಕೆ ಹರಿಯಿತು. ಅಂದಿನಿಂದ ಅದಕ್ಕೆ ನರಸಿಂಹ ತೀರ್ಥವೆಂದು ಹೆಸರಾಯಿತು. ಹೀಗೆ ಸ್ವತಃ ಶ್ರೀಸ್ವಾಮಿಯೇ ಬ್ರಹ್ಮದೇವರಿಗೆ ಒಲಿದು ನಿಂತ ಮಹಾ ಸ್ವಯಂವ್ಯಕ್ತ ಕ್ಷೇತ್ರವೇ ಕರಿಗಿರಿಯು. ಆದಿಕಾಲದಲ್ಲಿ ಬ್ರಹ್ಮದೇವರ ವರಬಲದಿಂದ ಮತ್ತನಾಗಿ ತಾಪಸೋತ್ತಮರುಗಳಿಗೆ ಹಿಂಸೆಕೊಡುತ್ತಿದ್ದ ಕುಂಬಾಸುರ ನನ್ನು ಈ ಪರ್ವತದಲ್ಲಿ ಶ್ರೀಹರಿಯು ನರಸಿಂಹ ರೂಪದಿಂದ ಸಂಹಾರಮಾಡಿದನು. ಆಗ ಬ್ರಹ್ಮಾದಿದೇವತೆಗಳು ಪುಷ್ಪವೃಷ್ಟಿಯನ್ನು ಮಾಡಿದರು. ಇಡೀ ಪರ್ವತವೇ ಸಂಪೂರ್ಣ ದೇವಲೋಕದ ಮಂದಾರ–ಪಾರಿಜಾತಾದಿ ಪುಷ್ಪಗಳಿಂದ ಮುಚ್ಚಲ್ಪಟ್ಟು ಪುಷ್ಪರಾಶಿಯಂತೆ ಕಂಗೊಳಿಸಿತು. ಆಗ ದೇವತೆಗಳು ಇದನ್ನು ಕುಸುಮಾಚಲ, ಪುಷ್ಕರಾದ್ರಿ ಎಂದು ಕರೆದರು. ಈ ಕುಸುಮಗಳ ಗಂಧವು ಎಲ್ಲಡೆ ವ್ಯಾಪಿಸಿ, ನಭೋಮಂಡಲವನ್ನು ಮುಟ್ಟಿತು. ಈ ವ್ಯಾಜದಿಂದ ಸುಗಂಧಪರ್ವತವೆಂದೂ ಖ್ಯಾತಿಯಾಯಿತು. ಕುಂಭಾಸುರನ ಸಂಹಾರದ ಕಾರಣ ಕುಂಭೀಬೆಟ್ಟವೆಂದು ಕರೆಯಲ್ಪಟ್ಟಿತು. ಕೃತಯುಗದಲ್ಲಿ ಉತ್ಕೀಲಪರ್ವತವೆಂದು ತ್ರೇತಾಯುಗದಲ್ಲಿ ಸಿಂಹಾದ್ರೀಯೆಂದು, ದ್ವಾಪರದಲ್ಲಿ ಸಿದ್ಧಗಿರಿಯೆಂದು, ಕಲಿಯುಗದಲ್ಲಿ ಕರಿಗಿರಿ ಎಂದು ಪ್ರಸಿದ್ಧವಾಗಿದೆ.

ಒಂದೊಂದು ಯುಗಕೆ ಒಂದೊಂದು ಪೆಸರು ಚಂದವಾಗಿಪ್ಪವು ।
ಪೊಗಳಿದವರಿಗೀಗಾನಂದವೇ ಕೊಡುತಲಿ ಅತಿಶಯವೆನಿಸಿ ।

ಕೃತಯುಗದಲ್ಲಿ ಉತ್ಕೀಲ ತ್ರೇತೆಯಲಿ ಸಿಂಹಾದ್ರಿ ದ್ವಾಪರದಲಿ ।
ಸಿದ್ಧಗಿರಿ ಕಲಿಯುಗದಿ ಕರಿಗಿರಿ ಎಂದರಿತವಗೆ ಸುಲಭ ।
ದೇವರ ದೇವ ವಿಜಯವಿಠಲರೇಯ ಗತಿಕೊಟ್ಟೂ ರಕ್ಷಿಪನು ॥

ಎಂಬ ಶ್ರೀವಿಜಯದಾಸರ ಪದ್ಯದಲ್ಲಿ ಪುರಾಣಾರ್ಥವನ್ನೇ ಕಾಣಬಹುದು. ವೃಷಭಾಚಲ (ನಂದಿಬೆಟ್ಟ), ನಾರಾಯಣಾಚಲ (ಕೂರ್ಮಾದ್ರಿ), ಶ್ರೀರಾಮಾಚಲ (ಮಧುಗಿರಿ ಬೆಟ್ಟ), ತೃಣಾಚಲ (ಸಿದ್ಧರಬೆಟ್ಟ), ಭೀಮಾಚಲ (ಭೀಮರಾವುತಪಲ್ಲಿ), ಕೇಶವಾಚಲ (ಚನ್ನಗಿರಿಬೆಟ್ಟ), ಪುಂಗವಾದ್ರಿ (ಶಿವಗಂಗೆ ಬೆಟ್ಟ), ಜಾಬಾಲಾದ್ರಿ (ಸಾವನದುರ್ಗ) ಎಂಬ ಅಷ್ಟದಿಕ್-ದೇವತೆಗಳಂತೆ ಕಂಗೊಳಿಸುವ ಉಪಪರ್ವತಗಳ ಮಧ್ಯದಲ್ಲಿ, ನರಸಿಂಹನ ಮೂರು ಕಣ್ಣುಗಳಂತೆ, ಮೂರು ಉಚ್ಛಶೃಂಗಗಳಿಂದ ಈ ಕರಿಗಿರಿ ಪರ್ವತವು ಕೂಡಿದೆ. ಶ್ರೀಪಾದತೀರ್ಥ, ನರಹರಿ ತೀರ್ಥ, ಪರಾಶರ, ಇಂದ್ರ, ವೃಷಭ, ಗಜೇಂದ್ರ, ಶ್ರೀರಾಮತೀರ್ಥ (ಧನಸ್ಸು ತೀರ್ಥ), ಕಾಶೀತೀರ್ಥ, ಸುದರ್ಶನತೀರ್ಥಗಳೆಂಬ ನವತೀರ್ಥಗಳಿಂದಲೂ, ಎರಡು ಮಹಾ ಪುಣ್ಯಕರವಾದ ಜಯ-ಮಂಗಳ ನದಿಗಳಿಂದಲೂ ಆವೃತವಾಗಿ, ಬ್ರಹ್ಮದೇವರೇ ಮೊದಲಾದ ದೇವತೆಗಳಿಂದ, ಸಮಸ್ತ ಋಷಿ-ಮುನಿ-ಗಂಧರ್ವರೇ ಮೊದಲಾದ ಅಪ್ಸರಾ ಸ್ತ್ರೀಯರುಗಳಿಂದ ಸೇವಿಸಲ್ಪಟ್ಟಿದೆ. ಪೂರ್ವದಿಕ್ಕಿನಿಂದ ಗಜಾಕಾರವಾಗಿಯೂ, ಪಶ್ಚಿಮ ದಿಕ್ಕಿನಿಂದ ಸಿಂಹಾಕಾರವಾಗಿಯೂ, ಉತ್ತರ-ದಕ್ಷಿಣ ದಿಕ್ಕುಗಳಿಂದ ಗರುಡಾಕಾರ, ಶೇಷಾಕಾರವಾಗಿಯೂ ಕಂಗೊಳಿಸುತ್ತಿದೆ.

ತತ್ರ ಶೈಲೇ ಮಹಾವಿಷ್ಣುಃ ಬ್ರಹ್ಮಾದ್ಯೈಸ್ಸೇವಿತೋ ಮುದಾ ।
ಆಸ್ತೇ ತತ್ರಮುನಿಶ್ರೇಷ್ಠಾಃ ಕುಸುಮಾಚಲ ನಾಮಕೇ ॥ (ವಾಮನ. ಪು)
ಚತುರ್ಯುಗೇಷು ದೇವೈಶ್ಚ ಪರಾಶರಶುಕಾದಿಭಿಃ ॥ (ಬ್ರಾ. ಪು)
ಸಿದ್ಧಾಮುನಿಗಣಾಸ್ತತ್ರ ತಪಃ ಕುರ್ವಂತಿ ನಿತ್ಯಶಃ (ವಾಮನ. ಪು)
ದೂರ್ವಾಸ ಋಷಿಣಾ ರಾಜನ್ ಪೂಜಿತೋ ವೈ ಜನಾರ್ಧನಃ ।
ಲಕ್ಷ್ಮ್ಯಾಲಿಂಗಿತ ವಾಮಾಂಗೋ ಶಂಖಚಕ್ರಧರೋ ಹರಿಃ ॥ (ವಿ. ಪು.)
ಅತಿ ಪ್ರೀತಿರ್ಮಹಾವಿಷ್ಣೋಸ್ತತ್ರ ಕರಿಭೂಧರ ನಾಮಕೇ ॥ (ಸ್ಕಾ. ಪು)
ಸರ್ವತೀರ್ಥ ಮಯಃ ಪುಣ್ಯಃ ಪಾವನೋ ಕರಿಭೂದರಃ ॥(ಬ್ರಾ. ಪು)

ಕುಸುಮಾಚಲ ಮಹಾತ್ಮ್ಯಂ ಲೇಶೋಽಯಂ ವರ್ಣಿತೋ ಮಯಾ ।
ಕೃತ್ಸ್ನಂದ್ವಕ್ತುಂ ಬ್ರಹ್ಮಣಾಽಪಿ ನಾಲಂ ವರ್ಷ ಶತೈರಪಿ ॥ (ಬ್ರ. ಪು.)
ಏವಂ ವೇದಮಯಃ ಸಾಕ್ಷಾದ್ಗಿರೀಂದ್ರಃ ಕರಿಭೂಧರಃ । (ವಿಷ್ಣು ಪು.)
ಪುರತಃ ಪೃಷ್ಠತಶ್ಚೈವ ವೇದಘೋಷಂ ಕರೋತಿಯಃ ।
ತಸ್ಯ ಪುಣ್ಯಫಲಂ ವಕ್ತುಂ ವಿಷ್ಣುನಾಪಿ ನ ಶಕ್ಯತೇ ॥ (ವಿಷ್ಣು ಪು.)
ಸರ್ವಪಾಪ ಪ್ರಶಮನಂ ಸರ್ವ ಪುಣ್ಯ ವಿವರ್ಧನಮ್ (ಮಾ. ಪು.)
ಹಸ್ತಿ ಶಿಖರ ದರ್ಶನಾತ್ ಸರ್ವ ಪಾಪಂ ಪ್ರಣಶ್ಯತಿ (ಮಾ. ಪು.)
ಹಸ್ತಿ ಶಿಖರ ಸ್ಪರ್ಶನಮಾತ್ರಾತ್ ಸರ್ವಶ್ರೇಯೋಭಿವರ್ಧತೇ॥ (ಗ. ಪು.)
ನಿತ್ಯೈರ್ಮುಕ್ತಶ್ಚ ದೇವೈಶ್ಚ ಕಾಮರೂಪೈಶ್ಚ ಸಂಯುತಃ ॥ (ಬ್ರ. ಪು)
ದೇವತಾನಾಂ ಋಷೀಣಾಂಚ ಗಂಧರ್ವಾಣಾಮಪ್ಸರಸಾಂ ತಥಾ ॥
ಕ್ರೀಡಾಸ್ಪದಂ ಕ್ಷೇತ್ರಂ ಬ್ರಹ್ಮಾಂಡೇ ನಾಸ್ತಿ ಕಿಂಚನ ॥ (ಬ್ರ. ಪು)
ಗಿರೇಸ್ತಸ್ಯ ಚ ಮಹಾತ್ಮ್ಯಂ ಸುಖದಂ ಶ್ರವಣಾತ್–
ರೋಮಹರ್ಷಣಮ್ । ವಕ್ಷ್ಯಾಮಿ ಗೋಪ್ಯಂ ಚ ನಾರಸಿಂಹಸ್ಯ
ವೈಭವಮ್ ॥ (ಭ. ಪು.)
ಅಹಂ ಪೂರ್ವಂ ಮಯಾ ಭೂಪ ಬ್ರಹ್ಮಣಾ ಚ ಶ್ರುತಂ ಮಹತ್ ॥
ನವಷಷ್ಠಿಕೋಟಿ ತೀರ್ಥಾನಿ ಪುಣ್ಯಾನ್ಯತ್ರ ನಗೋತ್ತಮೇ ॥
ಮುಕ್ತಿದಾನ್ಯತ್ರ ನವೈವಾ ॥ ಸದ್ಯಃ ಕೈವಲ್ಯದಾಯಕಾಃ ॥ (ಬ್ರಹ್ಮಾ. ಪು)
ಭೂಪ್ರದಕ್ಷಿಣ ಯತ್ಪುಣ್ಯಂ ತತ್ಪುಣ್ಯಮವಾಪ್ನುಯಾತ್ ॥ (ಪ. ಪು.)
ಪ್ರಭಾತ ಕಾಲೇ ರಾಜೇಂದ್ರ ಯಃ ಕೀರ್ತಯತಿ ಭೂಧರಮ್ ।
ಫಲಂ ಭವೇದ್ಧ್ರುವಂ ಗಂಗಾ ಸೇತುಯತ್ರಾ ಸಹಸ್ರಜಮ್ ॥ (ಬ್ರ. ಪು.)
ತನ್ನಾಮಾನಿ ಪಠೇಯುರ್ಯೇ ಮುಚ್ಯಂತೇ ತೇಽಘಬಂಧನಾತ್ ॥

ಈ ರೀತಿಯಾಗಿ ಆರು ಪುರಾಣಗಳಲ್ಲಿ ಕರಿಗಿರಿಯ ವರ್ಣನೆಯನ್ನು ಮಾಡಿದ್ದಾರೆ. ಈ ಪರ್ವತದ ನಾಮಾಂತರಗಳು ಮತ್ತು ಅವುಗಳ ಸ್ಥೂಲ ವಿವರಣೆಯನ್ನು ಯಾರು ಪ್ರತಿನಿತ್ಯ ಪ್ರಭಾತ ಕಾಲದಲ್ಲಿ ಶ್ರವಣ–ಪಠಣ ಮಾಡುತ್ತಾರೋ ಅವರುಗಳ ಸಕಲ

ಪಾಪಗಳೂ ನಾಶವಾಗುವುದರಲ್ಲಿ ಸಂದೇಹವೇ ಇಲ್ಲವೆಂದು ಬ್ರಹ್ಮದೇವರು - ವಸಿಷ್ಠಾದಿ ಋಷಿಗಳಿಗೆ ಹೇಳಿದ್ದಾರೆ.

ಶ್ರೀ ಕುಸುಮಾಚಲ

ಬ್ರಹ್ಮದೇವರ ವರಬಲದಿಂದ ಅವಧ್ಯನಾದ ಕುಂಭಾಸುರನನ್ನು ಈ ಪರ್ವತದಲ್ಲಿ ನಾರಸಿಂಹ ರೂಪದಿಂದ ದಾರುಣವಾಗಿ ಸಂಹರಿಸಿದಾಗ, ಬ್ರಹ್ಮಾದಿ ದೇವತೆಗಳು ಕಮಲ ಪುಷ್ಪವೃಷ್ಠಿಯನ್ನು ಮಾಡಿದರು. ಪರ್ವತವು ಸಂಪೂರ್ಣವಾಗಿ ಆ ಪುಷ್ಪಗಳಿಂದ ಮುಚ್ಚಲ್ಪಟ್ಟು ಪುಷ್ಪರಾಶಿಯಾಗಿ ಕಂಗೊಳಿಸಿತು. ಅಂದಿನಿಂದ ದೇವತೆಗಳು ಇದಕ್ಕೆ ಕುಸುಮಾಚಲ ಅಥವಾ ಪುಷ್ಪಾಚಲವೆಂದು ಕರೆದರು. ಇದೇ ಪರ್ವತದ ಆದಿ ನಾಮವು.

ಶ್ರೀ ಉತ್ಕೀಲ ಪರ್ವತ

ಕುವಿದಂಗ ನಮಸಾಯೇವೃದಾಸಃ ಪುರಾದೇವಾಽನವದ್ಯಾಸನ್ ತೇ
ವಾಯವೇ ...। (ಶೃತಿ)

ಎಂಬ ಶೃತ್ಯರ್ಥದಂತೆ ಶ್ರೇಷ್ಠವಾದ ತತ್ವಜ್ಞಾನ ಪ್ರಾಪ್ತಿಗಾಗಿ ಸರ್ವದೇವತೆಗಳು ವಾಯುದೇವರನ್ನು ಮೊರೆ ಹೊಕ್ಕರು. ಆಗ ವಾಯುದೇವರು ಈ ಪರ್ವತದಲ್ಲಿ ತಪಸ್ಸು ಮಾಡಲು ಆದೇಶಿಸಿದರು. ಅದರಂತೆ ತಪಸ್ಸನ್ನಾಚರಿಸಲು, ಅವರುಗಳಿಗೆ ಗುಪ್ತವಾಗಿ ಜ್ಞಾನೋಪದೇಶವನ್ನು ವಾಯುದೇವರು ಮಾಡಿ, ಅವರವರ ಯೋಗ್ಯತೆಗೆ ತಕ್ಕಂತೆ ಜ್ಞಾನಪೂರ್ಣರನ್ನಾಗಿ ಮಾಡಿದರು. ಅಂದಿನಿಂದ ಇಲ್ಲಿ ಯಾರು ತಪಸ್ಸು, ಯಜ್ಞ-ಯಾಗಾದಿಗಳನ್ನು ಮಾಡುತ್ತಾರೋ ಅವರಿಗೆಲ್ಲಾ ತತ್ವಜ್ಞಾನವು ಬಹಳ ಬೇಗ ಸಿದ್ಧಿಯಾಗುತ್ತದೆಯಾದ್ದರಿಂದ ಇದಕ್ಕೆ ಉತ್ಕೀಲ ಪರ್ವತವೆಂದು ಹೆಸರಾಯಿತು. ಆದ್ದರಿಂದಲೇ ಸರ್ವದೇವತೆಗಳು, ಋಷಿ-ಮುನಿಪುಂಗವರು, ಗಂಧರ್ವ-ಯಕ್ಷ-ಕಿನ್ನರ-ಕಿಂಪುರುಷರುಗಳು, ಪರಮಹಂಸಸನ್ಯಾಸಿಗಳು ಇಲ್ಲಿ ವಿಶೇಷವಾಗಿ ಜಪ-ತಪಾದಿಗಳನ್ನು ಮಾಡಿ, ಸಿದ್ಧಿಯನ್ನು-ತತ್ವಜ್ಞಾನವನ್ನೂ ಬಹುಬೇಗನೇ ಪಡೆಯುತ್ತಾರೆ. ಹೀಗೆ ಪುರಾಣದಲ್ಲಿ ವರ್ಣಿಸಿರುವ ಪ್ರಮೇಯದಂತೆ, ಶ್ರೀ ವ್ಯಾಸರಾಜರು, ಶ್ರೀ ವಾದಿರಾಜರು, ಶ್ರೀ ವಿಜಯೀಂದ್ರರು, ಪುರಂದರದಾಸರೇ ಮೊದಲಾದ ಹರಿದಾಸ ವರೇಣ್ಯರುಗಳು ಈ ಪರ್ವತದಲ್ಲಿ ಜಪ - ತಪಾದಿಗಳನ್ನು ಮಾಡಿ ಶ್ರೀಲಕ್ಷ್ಮೀನರಸಿಂಹ ದೇವರನ್ನು ತುಷ್ಠಿಗೊಳಿಸಿರುವುದನ್ನು ಸ್ಮರಿಸಬಹುದು.

ಶ್ರೀ ಸಿಂಹಾದ್ರಿ

ಶ್ರೀಹರಿಯಿಂದ ಆಜ್ಞಾಪಿಸಲ್ಪಟ್ಟ ಬ್ರಹ್ಮದೇವರು ಈ ಪರ್ವತದಲ್ಲಿರುವ ಶ್ರೀಪಾದತೀರ್ಥ ತಟದಲ್ಲಿ ಹತ್ತು ಸಾವಿರವರುಷ ತಪಸ್ಸನ್ನು ಆಚರಿಸಿದರು. ತುಷ್ಟನಾದ ಶ್ರೀಹರಿ ಯಜ್ಞವನ್ನೂ ಮಾಡೆಂದು ಆಜ್ಞಾಪಿಸಿದನು. ಅದರಂತೆ ಬ್ರಹ್ಮದೇವರು ಸಮಸ್ತ ಋಷಿಸ್ತೋಮ ಸಹಿತವಾಗಿ ಯಜ್ಞವನ್ನು ಮಾಡಿದರು. ಆಗ ಯಜ್ಞವಾಟದಿಂದ ಶ್ರೀಹರಿಯು ಲಕ್ಷ್ಮೀಸಹಿತನಾಗಿ ನರಸಿಂಹರೂಪದಿಂದ ಆವಿರ್ಭವಿಸಿ ದರ್ಶನ ಕೊಟ್ಟು ಇದು ನನ್ನ ಈ ರೂಪದ ಮೂಲಕ್ಷೇತ್ರವೆಂದು ಹೇಳಿದನು. ಇಂದಿಗೂ ಲಕ್ಷ್ಮೀಸಹಿತನಾದ ನರಸಿಂಹ ರೂಪದಿಂದಲೇ ಇದ್ದಾನೆಯಾದ್ದರಿಂದಲೂ ಸಿಂಹಾದ್ರಿ ಎಂದು ಕರೆಯುತ್ತಾರೆ. ಇಡೀ ಪರ್ವತವೇ ಪೂರ್ವ ದಿಕ್ಕಿನಿಂದ ಭಯಂಕರ ಸಿಂಹರೂಪವಾಗಿ ಕಾಣುತ್ತದೆಯಾದ್ದರಿಂದಲು ಸಿಂಹಾದ್ರಿ ಎನ್ನುವರು.

ಶ್ರೀ ಸಿದ್ಧಗಿರಿ

ಅನೇಕ ದೇವತೆಗಳು, ಋಷಿಗಳು ಬ್ರಹ್ಮದೇವರನ್ನು ಕುರಿತು ಸ್ವಾಮಿ , ನಮ್ಮ ನಮ್ಮ ಯೋಗ್ಯತೆಗೆ ತಕ್ಕಂತೆ ನಮ್ಮ ಇಚ್ಛಾವಿದ್ಯೆಗಳು ಬಹುಬೇಗ ಸಿದ್ಧಿಯಾಗುವಂತಹ ಕ್ಷೇತ್ರವನ್ನು ಹೇಳಬೇಕು. ಅಲ್ಲಿಗೆ ನಾವು ಹೋಗಿ ವಿದ್ಯೆಗಳ ಸಿದ್ಧಿಯನ್ನು ಹೊಂದುತ್ತೇವೆ ಎಂದು ಪ್ರಾರ್ಥಿಸಲು, ಬ್ರಹ್ಮದೇವರಿಂದ ಹೇಳಲ್ಪಟ್ಟ ಕಲಿಮಲಧ್ವಂಸಕವಾದ ಸಿಂಹಾದ್ರಿಗೆ ಬಂದು ತಪಸ್ಸನ್ನಾಚರಿಸಿದರು. ನಂತರ ಅನೇಕ ವಿಧವಾದ ಮಂತ್ರ, ತಂತ್ರವಿನ್ಯಾಸಗಳು, ವೇದದ್ರಷ್ಟಾರತ್ವ, ಪರಮ ಯೊಗಸಿದ್ಧಿಗಳು, ಔಷಧ-ಮೂಲಿಕೆಗಳ ರಸ ರಹಸ್ಯಗಳು, ಮೊದಲಾದ ಸಿದ್ಧಿಗಳನ್ನು ಹೊಂದಿದರು, ಈಗಲೂ ಈ ಕ್ಷೇತ್ರವು ಸಿದ್ಧಿಪ್ರದಾಯಕವಾದ್ದರಿಂದಲೂ ಇದನ್ನು ಸಿದ್ಧಗಿರಿ ಎನ್ನುವರು.

ಶ್ರೀ ಕರಿಗಿರಿ

ದೇವದತ್ತ-ಧನಂಜಯರೆಂಬ ಸತ್ಯಲೋಕದ ದೇವಗಂಧರ್ವರುಗಳು, ಬ್ರಹ್ಮ ಸಭೆಯಲ್ಲಿಉತ್ಕೃಷ್ಟ ರೀತಿಯಲ್ಲಿ ಗಾನ ಮಾಡುತಿದ್ದ ಕಾಲದಲ್ಲಿ ಮಧೋನ್ಮತ್ತರಾಗಿ ಬ್ರಹ್ಮದೇವರ ಎದುರಿನಲ್ಲಿಯೇ ಬ್ರಹ್ಮಪುತ್ರರಾದ ಭೃಗು ಋಷಿಗಳನ್ನು ಅವಮಾನಿಸಿದರು. ಕೋಪಗೊಂಡ ಭೃಗುವು ಆ ಗಂಧರ್ವರಿಗೆ ಒಂದು ರೂಪದಿಂದ ಮತ್ತವಾದ

ಆನೆಯಾಗಿಯೂ, ಮತ್ತೊಂದು ರೂಪದಿಂದ ಜಡವಾದ ಗಿರಿಯಾಗಿಯೂ ಇಬ್ಬರೂ ಭೂಲೋಕದಲ್ಲಿ ಹುಟ್ಟಿ ಎಂದು ಶಾಪವನ್ನು ಕೊಟ್ಟರು. ಶಾಪಗ್ರಸ್ಥರಾದ ಇವರು ಆನೆ ಮತ್ತು ಗಿರಿಯ ರೂಪದಿಂದ ಬಿದ್ದಿರುವವರಾಗಿದ್ದಾರೆ. ಅಂದಿನಿಂದ ಇದಕ್ಕೆ ಕರಿಗಿರಿ ಎಂದು ಪ್ರಸಿದ್ಧಿಯಾಯಿತು. ವಿಶಾಪವನ್ನ ಕೊಟ್ಟ ಭೃಗು ಋಷಿಗಳು ಮುಂದೆ ನಿಮ್ಮ ಪರ್ವತಕ್ಕೆ ವನವಾಸವನ್ನು ಮುಗಿಸಿಕೊಂಡು ಸೀತಾ ಸಹಿತನಾದ ಶ್ರೀರಾಮಚಂದ್ರ ದೇವರು ಶ್ರೀನರಹರಿಯ ದರ್ಶನಾರ್ಥವಾಗಿ ಬರುತ್ತಾರೆ. ಆಗ ನಿಮಗೆ ಶಾಪ ವಿಮುಕ್ತಿಯಾಗುತ್ತದೆಂದು ಪುರಾಣದಲ್ಲಿ ಕಥೆ ಇದೆ. ಅದರಂತೆ ಈ ಪರ್ವತಕ್ಕೆ ಪರ್ಯಾಯವಾಗಿ ಹಸ್ತಿಗಿರಿ, ಇಭಾಚಲ, ವ್ಯಾಲಗಿರಿ, ಕುಂಜರಗಿರಿ, ಗಜಗಿರಿ, ನಾಗಾಚಲ, ಇತ್ಯಾದಿಯಾಗಿ ನಾಮಾಂತರಗಳು ಬಂದಿವೆ.

ಶ್ರೀ ಪುಷ್ಕರಾದ್ರಿ

ಫಾಲ್ಗುಣ ಮಾಸದ ಪೂರ್ವಫಲ್ಗುಣಿ ಸಿಂಹಲಗ್ನದಲ್ಲಿ ಬ್ರಹ್ಮದೇವರು ಸ್ವತಃ ತಾವೇ ಶ್ರೀಲಕ್ಷ್ಮೀನರಸಿಂಹನಿಗೆ ರಥೋತ್ಸವನ್ನು ಈ ಪರ್ವತದಲ್ಲಿ ಮಾಡುವ ಸಮಯದಲ್ಲಿ, ಮುಕ್ತಾಮುಕ್ತ ದೇವತೆಗಳು ಕಮಲಪುಷ್ಪಗಳಿಂದ (ಸಹಸ್ರ ಪತ್ರ) ವೃಷ್ಟಿಗೈದು ಸ್ತೋತ್ರ ಮಾಡಿದರು. ಆಗ ರಥಸ್ಪರ್ಶವಾದ ಒಂದೊಂದು ಕಮಲಗಳೂ ಅನಂತವಾಗಿ ಸಿಂಹಾಕಾರವಾದ ಪರ್ವತವನ್ನೆಲ್ಲಾ ಆವರಿಸಿ ಕಮಲರಾಶಿಯಾಗಿ ಕಂಗೊಳಿಸಿತು. ಅಂದಿನಿಂದ ಇದಕ್ಕೆ ಪುಷ್ಕರಾದ್ರಿ, ಕಮಲಾದ್ರಿ, ಅರವಿಂದ ಪರ್ವತ ಎಂಬ ಹೆಸರುಗಳು ಬಂದಿತು. ಭಕ್ತಿಯುಕ್ತ ಪುಷ್ಪ ಸ್ಪರ್ಶ ಮಾತ್ರದಿಂದಲೇ ಅನಂತ ಫಲದಾಯಕ ತಾನೆಂದು ನಿರೂಪಿಸಿದ ಈ ಪರ್ವತ ಮತ್ತು ಇಲ್ಲಿರುವ ತೀರ್ಥಗಳಲ್ಲಿ ಕಮಲ ಪುಷ್ಪವೇ ಪ್ರಧಾನವಾಗಿ ದೇವತೆಗಳಿಗೆ ಗೋಚರಿಸುತ್ತವೆ ಎಂದು ಪುರಾಣಗಳು ವರ್ಣಿಸುತ್ತವೆ.

ಶ್ರೀ ಅನಂತಾದ್ರಿ

ತೃತನೆಂಬ ಋಷಿಯಿಂದ ಪರ್ವತವಾಗುವಂತೆ ಶಾಪಗ್ರಸ್ಥರಾದ ಶೇಷದೇವರು ಪರ್ವತಾಕಾರವಾಗಿರುವರು. ಶ್ರೀಲಕ್ಷ್ಮೀನರಸಿಂಹನ ಸೇವೆಗೈದು, ಶ್ರೀಹರಿಯಿಂದ ಅನುಗ್ರಹಿಸಲ್ಪಟ್ಟು, ಸಿಂಹಾಕಾರ ರೂಪವಾದ ಪರ್ವತಕ್ಕೆ ಶೇಷಪೀಠರಾಗಿದ್ದಾರೆ. ಈಗಲೂ ದಕ್ಷಿಣದಿಕ್ಕಿನಿಂದ ಪರ್ವತವು ಶೇಷಾಕಾರವಾಗಿ ಕಂಗೊಳಿಸುತ್ತಿದೆ. ಈ ವ್ಯಾಜದಿಂದ ನಾಗಾದ್ರಿ, ಉರಗಾದ್ರಿ, ಶೇಷಾಚಲ ಎಂಬುದಾಗಿ ಹೆಸರು ಬಂದಿದೆ. ಇದಲ್ಲದೆ

ಶೇಷದೇವರು ಪೃಥಿವಿಯ ಎಲ್ಲ ಪರ್ವತಗಳ ಸನ್ನಿಧಾನವೂ ಈ ಶೇಷಗಿರಿ (ನಾಗಾದ್ರಿ) ಯಲ್ಲಿ ನಿತ್ಯವೂ ಇರಬೇಕೆಂದು ಶ್ರೀನಾರಸಿಂಹನನ್ನು ವರ ರೂಪದಲ್ಲಿ ಕೇಳಿಕೊಂಡರು.

ಮಂದರೋ ಹಿಮವಾನದ್ರಿರ್ಮಾಹೇಂದ್ರೋ ಗಂಧಮಾದನಃ ।
ವಿಂಧ್ಯಾಚಲೋಽಥ ಮೈನಾಕ ಇಂದ್ರಕೀಲಕ ಏವ ಚ ॥
ಸುನಾಭ ಪಾರಿಯಾತ್ರಶ್ಚ ವಜ್ರನಾಭಸ್ತಥಾ ಗಿರಿಃ ।
ಶ್ರೀಪರ್ವತಃ ಶೇಷಗಿರಿಃ ತಥಾ ಹೇಮಗಿರಿಃ ಸ್ವಯಮ್ ॥
ಗೋವರ್ಧನೋ ಗೋವೃಷಶ್ಚ ಗೋಮಂತಃ ಪರ್ವತೋತ್ತಮಃ ।
ಧೀರಃ ಸುರನಿಧಿರ್ಮೇರುರ್ಗಿರಿಸ್ಸಹಿತೋ ರಮನ್ ॥

ಎಂಬಂತೆ ಶ್ರೀನರಸಿಂಹ ಸ್ವಾಮಿಯು ವರವನ್ನು ದಯಪಾಲಿಸಿದನು. ವರಕ್ಕನುಗುಣವಾಗಿ ಪೃಥಿವಿಯ ಸರ್ವಪರ್ವತಗಳ ಸನ್ನಿಧಾನವೂ ಈ ಕರಿಗಿರಿಯಲ್ಲಿ ನಿತ್ಯ ಸನ್ನಿಹಿತವಾಗಿರುವುದರಿಂದಲೂ ಅನಂತಾದ್ರಿ ಎಂದು ಹೆಸರು ಬಂದಿದೆ.

ಶ್ರೀ ಜ್ಞಾನಾದ್ರಿ

ಶ್ರೀಬ್ರಹ್ಮದೇವರೇ ಮೊದಲ್ಗೊಂಡು ತೃಣಜೀವಿ ಪರ್ಯಂತ ಅವರವರ ಸ್ವರೂಪಾನಂದಾವಿರ್ಭಾವಕ್ಕೆ ಈ ಪರ್ವತಲ್ಲಿರುವ ಶ್ರೀಲಕ್ಷ್ಮೀನರಸಿಂಹನೇ ಬಿಂಬನಾದ ಕಾರಣನಾದ್ದರಿಂದಲೂ, ಶ್ರೀಹರಿ ವಿಷಯಕಜ್ಞಾನದಿಂದಲೇ ಇಲ್ಲಿ ಸೇವಿಸಬೇಕಾದುದರಿಂದಲೂ, ಸೇವಿಸುವಭಕ್ತರಿಗೆ ಜ್ಞಾನವೇ ಫಲವಾದ್ದರಿಂದಲೂ ಜ್ಞಾನಾದ್ರಿ ಎಂಬುವರು.

ಶ್ರೀ ವೃಷಾದ್ರಿ

ಯಮಧರ್ಮರಾಜರು ಈ ಪರ್ವತದಲ್ಲಿ ತಪಸ್ಸು ಮಾಡಿ, ಶ್ರೀಹರಿಯನ್ನು ಸಾಕ್ಷಾತ್ಕರಿಸಿಕೊಂಡು ತಮ್ಮ ಇಚ್ಛೆಯಾದ ಶ್ರೀಹರಿಯ ಪುತ್ರಭಾವವನ್ನು ಬಯಸಿದರು. ಅನುಗ್ರಹಿಸಿದ ಶ್ರೀಹರಿಯು ಅವರಲ್ಲಿ ನರನಾರಾಯಣ ರೂಪದಿಂದ ಅವತರಿಸಿದನು. ಆದ್ದರಿಂದ ಈ ಪರ್ವತವನ್ನು ವೃಷಾದ್ರಿ ಮತ್ತು ನಾರಾಯಣಾದ್ರಿ ಎಂದೂ ಕರೆದಿದ್ದಾರೆ.

ಶ್ರೀ ತೀರ್ಥಾದ್ರಿ

ತೀರ್ಥಪಾದನೆಂದೆನಿಸುವ ಶ್ರೀಲಕ್ಷ್ಮೀನರಸಿಂಹನ ಸಾನ್ನಿಧ್ಯವುಳ್ಳ ೯೬ ಕೋಟಿ ಪರಮಪಾವನ ತೀರ್ಥ ಸಮೂಹಕ್ಕೆ ಕರಿಗಿರಿ ಪರ್ವತವು ಉಗಮಸ್ಥಾನವಾದ್ದರಿಂದ ಇದನ್ನು ತೀರ್ಥಾದ್ರಿ ಎನ್ನುವರು. ಈ ಪುರಾಣಾರ್ಥವನ್ನೇ ಶ್ರೀ ಪುರಂದರದಾಸರೂ ಕೂಡ ತಮ್ಮ ಪದ್ಯದಲ್ಲಿ ಹೀಗೆ ವರ್ಣಿಸುತ್ತಾರೆ.

ತೊಂಬತ್ತಾರು ಕೋಟಿ ತೀರ್ಥಂಗಳುಂಟು ।
ಸುಂದರವಾಗಿ ಒಪ್ಪುತಿವೆ ಈ ಕರಿನಗಾದಲ್ಲಿ ।
ಪರಮ ಮುಖ್ಯ ತೀರ್ಥ ಶ್ರೀಪಾದ ತೀರ್ಥದಲಿ ।
ತೀರ್ಥಪಾದನಾಗಿಪ್ಪ ಪುರಂದರವಿಠಲ ತಾನಾಗಿ ।

ಮೂವತ್ತು ತೀರ್ಥಗಳು ಇಂದಿಗೂ ವ್ಯಕ್ತವಾಗಿ ಈ ಪರ್ವತ ಮತ್ತು ಇದರ ಉಪಪರ್ವತಗಳಲ್ಲಿ ವಿರಾಜಿಸುತ್ತಿವೆ.

ಶ್ರೀ ಕ್ರೀಡಾದ್ರಿ

ದೇವತಾನಾಂ ಋಷೀಣಾಂ ಚ ಗಂಧರ್ವಾಣಾಮಪ್ಸರಸಾಂ ತಥಾ ।
ಕ್ರೀಡಾಸ್ಪದಂ ಕ್ಷೇತ್ರಂ ಬ್ರಹ್ಮಾಂಡೇ ನಾಸ್ತಿ ಕಿಂಚನ ॥

ಎಂಬ ಪುರಾಣೋಕ್ತಿಯಂತೆ ಸಕಲ ದೇವತೆಗಳು, ಋಷಿಗಳು, ಗಂಧರ್ವರುಗಳು, ವರಾಂಗನೆಯರು, ಅಪ್ಸರಾಸ್ತ್ರೀಯರುಗಳು ಅವರವರ ಯೋಗ್ಯತಾನುಸಾರ, ಶ್ರೀಹರಿಯ ಮಹಿಮೆಯನ್ನು ಕೊಂಡಾಡುತ್ತಾ, (ಆತ್ಮಾರಾಮರುಗಳಂತೆ) ಈ ಪರ್ವತದಲ್ಲಿ ಪರಸ್ಪರ ಕ್ರೀಡಿಸುತ್ತಾರಾದ್ದರಿಂದ ಕ್ರೀಡಾದ್ರಿ ಎಂದು ಕರೆದಿದ್ದಾರೆ.

ಶ್ರೀ ಕೇಶವಾದ್ರಿ

ಕೇಶವನೆಂಬ ಋಷಿಯು ತನ್ನ ಶಾಪ ವಿಮೋಚನೆಗಾಗಿ ಈ ಪರ್ವತಕ್ಕೆ ಬಂದು ಬಹಳ ಕಾಲ ತಪಸ್ಸನ್ನಾಚರಿಸಿ, ಶ್ರೀ ಸ್ವಾಮಿಯನ್ನು ಸಾಕ್ಷಾತ್ಕರಿಸಿಕೊಂಡು ಶಾಪ ವಿಮುಕ್ತನಾದನು. ಅವನು ತಪಸ್ಸು ಮಾಡಿದ ಸ್ಥಳದಲ್ಲಿ ಶ್ರೀಹರಿಯು ಕೇಶವ ರೂಪದಿಂದ ಆವಿರ್ಭವಿಸಿದನು. ಇಂದಿಗೂ ಆ ರೂಪವು ಮತ್ತು ಋಷಿಯ ನಾಮಾಂಕಿತದಿಂದ

ಪರ್ವತವು ಇದೆ. ಇದನ್ನು ಕೇಶವಾಚಲವೆನ್ನುವರು. ಈಗ ಚೆನ್ನಕೇಶವಪುರವಾಗಿದೆ.

ಶ್ರೀ ರಂಗನಾಥಾಚಲ (ರಂಗಾದ್ರಿ)

ಈ ಪರ್ವತದ ತಪ್ಪಲು ಪ್ರದೇಶದಲ್ಲಿ ರಂಗನಾಥನೆಂಬ ದೊರೆಯು ಪೈಂಗಲನೆಂಬ ಋಷಿಗಳ ಆದೇಶದಂತೆ ತಪಸ್ಸು ಮಾಡಿ, ಅವನಿಗೆ ಬಂದ ಶಾಪವನ್ನು ಕಳೆದುಕೊಂಡನು. ನಂತರ ವಿಶೇಷ ಅನುಗ್ರಹಕ್ಕಾಗಿ ಸಾವಿರ ವರ್ಷ ತಪಸ್ಸು ಮಾಡಿ, ರಂಗನಾಥರೂಪದಿಂದಲೇ ಸ್ವಾಮಿಯನ್ನು ಪ್ರತ್ಯಕ್ಷೀಕರಿಸಿಕೊಂಡನು. ಆ ರೂಪವನ್ನು ಇಂದಿಗೂ ನೋಡಬಹುದು. ಇದೇ ಮಾಗಡಿರಂಗನಾಥ ಕ್ಷೇತ್ರವು ಎಂದು ಪುರಾಣಗಳಲ್ಲಿ ವರ್ಣಿಸಿದ್ದಾರೆ.

ಶ್ರೀ ರಾಮಾದ್ರಿ

ವನವಾಸದ ನಂತರ ರಾವಣ ಕುಂಭಕರ್ಣರನ್ನು ಸಂಹರಿಸಿ, ಅಯೋಧ್ಯೆಗೆ ತೆರಳುವ ಮಾರ್ಗದಲ್ಲಿ ಶ್ರೀರಾಮ ಸೀತೆಯರು ಈ ಪರ್ವತಕ್ಕೆ ಬಂದು ಲಕ್ಷ್ಮೀನರಸಿಂಹನ ದರ್ಶನ, ಸ್ತೋತ್ರ, ಪೂಜೆ, ತೀರ್ಥಸ್ನಾನಾದಿಗಳನ್ನು ಮಾಡಿ ಇಲ್ಲಿಯೇ ಒಂದೆರಡು ದಿನಗಳು ಕಳೆದರೆಂದು ಪುರಾಣವು ವರ್ಣಿಸುತ್ತದೆ. ಆಗ ಶಾಪಗ್ರಸ್ಥರಾಗಿ ಆನೆ ಮತ್ತು ಗಿರಿಯ ರೂಪದಲಿದ್ದ ದೇವದತ್ತ-ಧನಂಜಯರೆಂಬ ದೇವ ಗಂಧರ್ವರ ಶಾಪ ವಿಮೋಚನೆಯನ್ನು ಮಾಡಿ, ಅನೇಕ ತೀರ್ಥಗಳನ್ನು ನಿರ್ಮಾಣ ಮಾಡಿದ್ದಾರೆಂದು ಹೇಳಿದೆ. ಈ ವ್ಯಾಜದಿಂದ ಶ್ರೀರಾಮಾದ್ರಿ ಎಂದು ಕರೆಯುವರು. ಮತ್ತು "ಆನಂದ ರೂಪೋ ನಿಷ್ಪರಿಮಾಣ ಏಷಃ" ಎಂಬ ಶೃತಿಯಂತೆ ಆನಂದರೂಪನಾದುದರಿಂದಲೂ, ಅಮಿತನಾದುದರಿಂದಲೂ ಶ್ರೀಹರಿಯು ರಾಮನೆಂದೆನಿಸುವನು. ಅವನೇ ಲಕ್ಷ್ಮೀನರಸಿಂಹನೂ ಅಲ್ಲವೆ? ಶ್ರೀರಾಮ-ಶ್ರೀನರಸಿಂಹನ ಪರಸ್ಪರ ಕ್ರೀಡಾದಿಗಳಿಂದಲೂ ಈ ಹೆಸರು ಬಂದಿದೆ. ಹೀಗೆಯೇ ಭವಿಷ್ಯೋತ್ತರ ಪುರಾಣಸ್ಥ ವೇಂಕಟಗಿರಿ ಮಹಾತ್ಮೆಯಲ್ಲಿ ವರಾಹ-ಶ್ರೀನಿವಾಸನ ಸಂಭಾಷಣೆಯು ಮತ್ತು ಆದ್ಯ ಪೂಜೆಗೊಳ್ಳುವ ವರಾಹ ದೇವನ ಪರಸ್ಪರ ಕ್ರೀಡಾದಿಗಳನ್ನು ಇಲ್ಲಿಯೂ ಸ್ಮರಿಸಬಹುದು.

ಶ್ರೀ ಪರಾಶರಾದ್ರಿ

ಬ್ರಹ್ಮದೇವರ ಅಜ್ಞೆಯಂತೆ ಪರಾಶರ ಋಷಿಗಳು ಈ ಪರ್ವತದಲ್ಲಿರುವ ಶ್ರೀಪಾದತೀರ್ಥ

ತಟದಲ್ಲಿ ಸಾವಿರ ವರ್ಷಗಳು ಲಕ್ಷ್ಮೀನರಸಿಂಹನನ್ನು ಕುರಿತು ತಪಸ್ಸನ್ನಾಚರಿಸಿದರು. ತಪಸ್ಸಿಗೆ ಒಲಿದ ಶ್ರೀನರಸಿಂಹನು ಪ್ರತ್ಯಕ್ಷನಾಗಿ ನಿನಗೆ ಬೇಕಾದ ವರವನ್ನು ಬೇಡು ಎನ್ನಲು, ಪರಾಶರರು "ಯದಿ ಇಚ್ಛೋಸಿ ದೇವೇಶ ಮತ್ಪುತ್ರೋಭವ" ಎಂದು ಕೇಳಿಕೊಂಡರು. ಅದರಂತೆ ಮುಂದೆ ಗೌತಮ ಋಷಿಗಳ ಶಾಪದಿಂದ ಋಷಿ ಮುನಿಗಳಿಗೆ ತತ್ವಜ್ಞಾನವು ಲುಪ್ತವಾದಾಗ, ಸತ್ಯವತೀ ದೇವಿಯರನ್ನು ನಿಮಿತ್ತ ಮಾಡಿಕೊಂಡು ಪರಾಶರರಲ್ಲಿ ಶ್ರೀಹರಿಯು ವೇದವ್ಯಾಸನಾಗಿ ಅವತರಿಸಿದನೆಂದು ಕರಿಗಿರಿ ಮಹಾತ್ಮೆಯಲ್ಲಿ ಪ್ರಮುಖವಾಗಿ ವರ್ಣಿಸಿದ್ದಾರೆ. ಆದ್ದರಿಂದ ಇದಕ್ಕೆ ಪರಾಶರಾದ್ರಿ, ವ್ಯಾಸಾದ್ರಿ, ಪುತ್ರಾದ್ರಿ ಎಂದೆಲ್ಲಾ ಹೆಸರುಗಳು ಬಂದಿವೆ. ವೇಂಕಟಗಿರಿಯಲ್ಲಿ ಅಂಜನಾದೇವಿಯು ಹನುಮಂತನನ್ನು ಪಡೆದ ಕಾರಣಕ್ಕೆ ಹೇಗೆ ಅಂಜನಾದ್ರಿ ಎನ್ನುವರೋ ಹಾಗೆಯೇ ಇಲ್ಲಿಯೂ ಸ್ಮರಿಸಬಹುದು. ಈಗಲೂ ಈ ಪರ್ವತ ಸೇವೆಯಿಂದ ಉತ್ತಮ ಪುತ್ರ ಪ್ರಾಪ್ತಿಯಾಗುವುದು.

ಶ್ರೀ ಬ್ರಹ್ಮಾದ್ರಿ-ವೇದಾದ್ರಿ

ವನಂ ವೃಂದಾವನಂ ನಾಮ ನೈಮಿಷಂ ವನಮೇವಚ ।
ವನಂ ಚೈತ್ರರಥಂ ನಾಮ ನಂದನಂ ವನಮೇವಚ ॥
ವನಂತು ಪದ್ಮಕಂ ನಾಮ ಸೋಮನಂದಿವನಂ ತಥಾ ।
ಬ್ರಹ್ಮಾರಣ್ಯಮಿತಿ ಖ್ಯಾತಂ ಯದ್ವನಂ ವರ್ತತೇ ಭುವಿ ॥
ಆನಂದಕಾನನಂ ಚೇತಿ ಯದ್ವನಂ ವರ್ತತೇ ಸದಾ ।
ವನಾನನ್ಯಾನಿ ಪುಣ್ಯಾನಿ ವರ್ತಂತೇ ಭುವಿ ಕಾನಿಚಿತ್ ॥

ಎಂಬ ಪ್ರಮಾಣ ದಂತೆ ಸಮಸ್ತ ಲೋಕಗಳಲ್ಲಿರುವ ಶ್ರೀಹರಿಯ ನಿತ್ಯ ಸನ್ನಿಧಾನಕ್ಕೆ ಪಾತ್ರವಾದ ಶ್ರೇಷ್ಠ ಸರ್ವವನಗಳೂ ಅರ್ಥಾತ್ ಸರ್ವವನಾಭಿಮಾನಿದೇವತೆಗಳು ಬ್ರಹ್ಮದೇವರಿಂದ ಕೂಡಿಕೊಂಡು ಈ ಕ್ಷೇತ್ರದಲ್ಲಿ ಸನ್ನಿಹಿತರಾಗಿದ್ದಾರೆ.ಆದಕಾರಣ ಈ ಪರ್ವತವು ಬ್ರಹ್ಮಾರಣ್ಯವೆಂಬ ನಾಮದಿಂದ ಕರೆಯಲ್ಪಟ್ಟಿದೆ.ಹಾಗೂ ಶ್ರೀಬ್ರಹ್ಮದೇವರು ಈಪರ್ವತದಲ್ಲಿ ಪ್ರಥಮತಃ ಯಜ್ಞವನ್ನು ಮಾಡಿದ ಕಾರಣದಿಂದಲೂ ಬ್ರಹ್ಮಾದ್ರಿ ಎನ್ನುವರು. ಈಗಲೂ ಇಲ್ಲಿಯ ಪ್ರಮುಖ ಸೇವೆಗಳೆಲ್ಲಾ ಬ್ರಹ್ಮದೇವರೆ ಮಾಡುವರೆಂದು ಪುರಾಣವು ಹೇಳುವುದಲ್ಲದೆ ಇಲ್ಲಿಯ ಬ್ರಹ್ಮರತೋತ್ಸವವು

ವಿಶೇಷವಾದದ್ದೆಂದೂ ವರ್ಣಿಸುತ್ತದೆ. "ಏವಂ ವೇದಮಯಃ ಸಾಕ್ಷಾತ್ ಗಿರೀಂದ್ರಃ ಕರಿಭೂಧರಃ" ಎಂಬ ವಿಷ್ಣುಪುರಾಣದ ವಾಕ್ಯದಂತೆ ಇಡೀ ಪರ್ವತವೇ ವೇದಾಭಿಮಾನಿಗಳ ಸಮೂಹವೆಂದೂ, ವೇದದ್ರಷ್ಟಾರ ಋಷಿಗಳ ಆವಾಸವೆಂದೂ, ಛಂದೋಭಿಮಾನಿ ದೇವತೆಗಳ ನಿವಾಸವೆಂದೂ, ಅವರವರ ಸಿದ್ಧಿಯ ತಪೋಭೂಮಿ ಎಂದೂ, ಇಲ್ಲೇ ನಿತ್ಯ ಸನ್ನಿಹಿತರಾಗಿ ಶ್ರೀ ಹರಿಯನ್ನು ಸೇವಿಸುತ್ತಿದ್ದಾರಾದ್ದರಿಂದ ಇದಕ್ಕೆ ವೇದಾದ್ರಿ ಎನ್ನುವರು.

ಶ್ರೀ ಶಾಲಿಗ್ರಾಮಾದ್ರಿ–ಮೃದಾದ್ರಿ

ಅನಂತವೇದ ಪ್ರತಿಪಾದ್ಯನಾದ ಶ್ರೀಲಕ್ಷ್ಮೀನರಸಿಂಹನ ನಿತ್ಯ ಸಾನಿಧ್ಯವುಳ್ಳ ಈಪರ್ವತವು ಬೃಹತ್ ಶಾಲಿಗ್ರಾಮ ರೂಪವಾಗಿದೆ ಬ್ರಹ್ಮಾದಿಗಳಿಂದ ನಿತ್ಯವೂ ಪಂಚಕಾಲಗಳಲ್ಲಿ ಪಂಚರಾತ್ರೋಕ್ತ ಪುಷ್ಕರಸಂಹಿತೆಯ ಪ್ರಕಾರ ಪೂಜಿಸಲ್ಪಡುತ್ತಿದೆ ಆದ್ದರಿಂದ ಈ ಪರ್ವತವನ್ನು ಶಾಲಿಗ್ರಾಮಾದ್ರಿ ಎಂದು ಕರೆದಿದ್ದಾರೆ. ಇಲ್ಲಿರುವ ಮರಳಿನ ಕಣವೂ ಸಹ ಚಕ್ರಾಂಕಿಕೆಗಳೆಂದು ವರ್ಣಿಸಲ್ಪಟ್ಟಿದೆ. ಆದಕಾರಣ ಚಕ್ರಾದ್ರಿ ಎಂದೂ ಈ ಪರ್ವತಕ್ಕೆ ಹೆಸರು.

ನಾಗಾಚಲೇ ಶುಭೇ ರಮ್ಯೇ ವಾಸುದೇವಹ್ರದೇ ತಥಾ ।
ತತ್ರೋದ್ಭವಾಂ ಮೃದಂ ಶುಭ್ರಮಾದಾಯ ದ್ವಿಜಸತ್ತಮಃ ॥
ಧಾರಯೇದೂರ್ಧ್ವಪುಂಡ್ರಾಣಿ ಸರ್ವಕಾಮ ಫಲಾಪ್ತಯೇ ।
ಊರ್ಧ್ವಪುಂಡ್ರಧರೋ ವಿಪ್ರಃ ಸರ್ವಲೋಕೇಽಪಿ ಪೂಜಿತಃ ॥
ಸವಿಮಾನಂ ಸಮಾರುಹ್ಯ ಯಾತಿ ವಿಷ್ಣೋಃಪದಂ ಪರಮ್ ॥

ಎಂಬ ಉಕ್ತ ಪ್ರಮಾಣದಂತೆ ಈ ಪರ್ವತಲ್ಲಿರುವ ಮೃತ್ತಿಕೆಯು ಪರಮ ಮಂಗಳವಾದ ಕೃಷ್ಣಾಂಗಸಂಗವಾದ ದ್ವಾರಾವತಿಯ ಗೋಪಿಚಂದನದಂತೆ ಪರಮ ಪವಿತ್ರವಾಗಿ ಧಾರಣೆಗೆ ಯೋಗ್ಯವಾಗಿದೆ. ಇಲ್ಲಿಯ ಮೃತ್ತಿಕೆಯ ಧಾರಣೆಯಿಂದ ಅನೇಕ ಶಾಪಗ್ರಸ್ತ ಋಷಿಗಳು, ತಮ್ಮ ಭಯಂಕರ ರೋಗಾದಿ ಉಪದ್ರವಗಳಿಂದ ವಿಮುಕ್ತಿಗೊಂಡಿದ್ದಾರೆಂದು ನೂರಾರು ಕಥೆಗಳು ಪುರಾಣಗಳಲ್ಲಿ ವರ್ಣಿಸಲ್ಪಟ್ಟಿವೆ. ಆದ್ದರಿಂದ ಇದಕ್ಕೆ ಮೃದಾದ್ರಿ ಎಂದು ಕರೆಯುವರು.

ಶುಕಾದ್ಯಾ ಮುನಯಃ ಕೇಚಿತ್ ಭೃಗ್ವಾದ್ಯಾಶ್ಚ ತಪೋಧನಾಃ ।

ಪ್ರಹ್ಲಾದ ಪ್ರಮುಖಾಃ ಪುಣ್ಯಾಃ ಅಂಬರೀಷಾದಯೋನ್ನೃಪಾಃ ॥
ವಿಷ್ಣೋರೇವಾಪರಂ ದೇಹಂ ಮನ್ವಾನಾಸ್ತಂ ನಗೋತ್ತಮಮ್ ।
ಪದ್ಭ್ಯಾಮಾಕ್ರಮಿತುಂ ಭೀತಾಃ ಪರ್ಯಂತೇಷ್ವೇವ ವರ್ತ್ಮನಾಃ ॥

ಶುಕಾದಿ ಮುನಿಗಳು, ಭೃಗು ಮೊದಲಾದ ಮಹರ್ಷಿಗಳು, ಪ್ರಹ್ಲಾದರೇ ಮೊದಲಾದ ಪ್ರಮುಖ ಪುಣ್ಯಾತ್ಮರುಗಳೂ, ಅಂಬರೀಷಾದಿ ಮಹಾಚಕ್ರವರ್ತಿಗಳೂ ಈ ಪರ್ವತವನ್ನು ವಿಷ್ಣುವಿನ ಸಾಕ್ಷಾತ್ ದೇಹವೆಂದೇ (ಶಾಲಿಗ್ರಾಮ) ತಿಳಿದು ಪರ್ವತದ ಮೇಲೆ ತಮ್ಮ ಹೆಜ್ಜೆಯನ್ನೇ ಇಡುವುದಕ್ಕೆ ಹೆದರಿ, ವಾಯುತತ್ವನ್ನು ಸ್ವೀಕರಿಸಿ ಸಂಚರಿಸಿದರೆಂದು, ಕೆಲವರು ಪರ್ವತದ ತಪ್ಪಲಿನಲ್ಲಿಯೇ ವಾಸ ಮಾಡಿದರೆಂದು ಪುರಾಣದಲ್ಲಿ ವರ್ಣಿಸಿದ್ದಾರೆ. ಈ ಕಾರಣಕ್ಕಾಗಿಯೇ ಶ್ರೀವ್ಯಾಸತೀರ್ಥರು, ಶ್ರೀಮದ್ವಾದಿರಾಜ ತೀರ್ಥರಂತಹ ಮಹಾ ವಿಭೂತಿ ಪುರುಷರಿಗೂ ವೇಂಕಟಗಿರಿ ಮತ್ತು ಕರಿಗಿರಿ ಪರ್ವತವು ಶಾಲಿಗ್ರಾಮವಾಗಿ ಕಂಡದ್ದರಿಂದಲೇ ಅವರು ಮೊಣಕಾಲಿನಿಂದ ಪರ್ವತವನ್ನು ಹತ್ತಿದ್ದರೆಂಬುದು ನಮಗೆ ಅರ್ಥವಾಗಬಹುದು!

ಶ್ರೀ ಅನಿಲಾದ್ರಿ-ಮಲಯಾದ್ರಿ

ಅನಿಲ ಮತ್ತು ಮಲಯ ಎಂಬ ಅಣ್ಣ ತಮ್ಮಂದಿರಾದ ಋಷಿಗಳು ಪರಸ್ಪರ ಶಾಪಕ್ಕೊಳಗಾಗಿ ತಮ್ಮ ನೈಜ ರೂಪವನ್ನು ಕಳೆದುಕೊಂಡು ಗಾಳಿ ಮತ್ತು ಶಬ್ದ ರೂಪಗಳಿಂದ ಸಂಚರಿಸುತ್ತಿದ್ದರು. ಬಹಳ ವರ್ಷಗಳ ನಂತರ ಜಾಬಾಲಿ ಋಷಿಗಳ ಭೇಟಿಯಾಯಿತು. ಅವರು ಅನುಗ್ರಹಿಸಿ ನೀವು ಕರಿಗಿರಿ ಪರ್ವತಕ್ಕೆ ಹೋಗಿ ತಪಸ್ಸು ಮಾಡಿ ಅಲ್ಲಿ ನಿಮಗೆ ಶಾಪವಿಮೋಚನೆಯಾಗುತ್ತದೆ ಎಂದು ತಿಳಿಸಿದರು. ಅದರಂತೆ ಅನೇಕ ವರ್ಷಗಳನ್ನು ತಪಸ್ಸಿನಿಂದ ಕಳೆದರು. ಸಂತುಷ್ಟನಾದ ನರಹರಿಯು ದರ್ಶನ ಕೊಟ್ಟು, ಪಾಪವಿಮೋಚನೆಯನ್ನು ಮಾಡಿ, ಗಾಳಿಯ ರೂಪದಿಂದ ನನ್ನ ಸೇವೆಯನ್ನು ಮಾಡು ಎಂದು ಅನಿಲನಿಗೂ, ವೇದಶಬ್ದದದ್ವಾರ ನೀನು ಸೇವೆ ಮಾಡು ಎಂದು ಮಲಯನಿಗೂ ಅನುಗ್ರಹಿಸಿದನು. ಅಂದಿನಿಂದ ಈ ಪರ್ವತದ ಗಾಳಿಯು ಬಹು ತಣ್ಣಗೆ, ಸುವಾಸನೆಯಿಂದ ಕೂಡಿ, ಸಕಲ ರೋಗೋಪದ್ರವ ನಿವಾರಕವಾಗಿಯೂ, ಮನಸ್ಸಿಗೆ ಹರ್ಷ ಕೊಡುವುದೆಂದು ವರ್ಣಿಸಿ ಅನಿಲಾದ್ರಿ ಎಂದಿದ್ದಾರೆ. ಇಲ್ಲಿರುವ ಪಶು, ಪಕ್ಷಿ ಸಮೂಹಗಳ ಮುಖನಾದಗಳು, ಗಿಡ ಮರ ಬಳ್ಳಿಗಳು ಅಲ್ಲಾಡುವಾಗ

ಉತ್ಪನ್ನವಾಗುವ ಎಲ್ಲಾ ಶಬ್ದಗಳೂ, ತೀರ್ಥಗಳಲ್ಲಿರುವ ಕಪ್ಪೆ, ಚಕ್ರವಾಕಾದಿಗಳ ಕಲರವಗಳು ಎಲ್ಲವೂ ವೇದಸ್ವರಗಳಾಗಿವೆ ಎಂದು ವರ್ಣಿಸಿ ಮಲಯಾದ್ರಿ ಎಂದಿದ್ದಾರೆ. ಈ ಕಾರಣದಿಂದಲೂ ಹಿಂದೆ ಹೇಳಿದ ವೇದಾದ್ರಿ ಎನ್ನುವುದು ಸಮಂಜಸವಲ್ಲವೆ?

ಶ್ರೀನಿವಾಸಾಚಲ

ಶ್ರೀನಿವಾಸನು ತನ್ನ ಮಡದಿ ಪದ್ಮಾವತಿಯಿಂದ ಕೂಡಿಕೊಂಡು ಗರುಡಾರೂಢನಾಗಿ ಈ ಪರ್ವತಕ್ಕೆ ಬಂದು, ಎಲ್ಲ ದೇವತೆಗಳ ಋಷಿಗಳ ಸಮ್ಮುಖದಲ್ಲಿ ಶ್ರೀಲಕ್ಷ್ಮೀನರಸಿಂಹನ ಮೂರ್ತಿಯಲ್ಲಿ ಒಂದು ರೂಪದಿಂದ ಐಕ್ಯವಾಗಿ, ಮತ್ತೊಂದು ರೂಪದಿಂದ ವೇಂಕಟಗಿರಿಗೆ ಹೋದನೆಂದು ವರ್ಣಿಸಿದ್ದಾರೆ. ಆಗ ಎಲ್ಲ ದೇವತೆಗಳು ವೇಂಕಟಗಿರಿಯೇ ಕರಿಗಿರಿಯು ಎಂದು ಹರ್ಷೋದ್ಗಾರ ಮಾಡಿ ಶ್ರೀನಿವಾಸಾಚಲವೆಂದು ಕರೆದರು.

ತತ್ರ ಭೂಮೌ ಮಹಾಲಕ್ಷ್ಮ್ಯಾ ಭೂಭೃತ್ಕರಿಭೂದರಃ ॥

ಎಂಬ ಪುರಾಣ ವಾಕ್ಯದಂತೆ ಮುಕ್ತ ಪರ್ವತವಾದರಿಂದ ಈ ಭೂಮಿಗೆ ಸ್ಪರ್ಶ ವಿಲ್ಲ, ಭೂಮಿಗೂ ಪರ್ವತಕ್ಕೂ ಮಧ್ಯೆ ರಮಾದೇವಿಯರು ಪದರ ರೂಪದಿಂದ ಈ ಪರ್ವತವನ್ನು ಧರಿಸಿದ್ದರೆಯಾದ್ದರಿಂದಲೂ ಈ ಹೆಸರು ಬಂದಿದೆ ಎಂದು ಪುರಾಣದ ಕಥೆ ಇದೆ. ವೈಕುಂಠಾದ್ರಿಯ ವಿವರಣೆಯನ್ನೂ ಸ್ಮರಿಸಬಹುದು.

ಶ್ರೀ ಸನಕಾದ್ರಿ

ಬ್ರಹ್ಮಮಾನಸ ಪುತ್ರರಾದ ಸನಕಸನಂದನರು, ಹಾಗು ಪ್ರಜೇಶ್ವರರುಗಳು ಬ್ರಹ್ಮದೇವರ ಅಜ್ಞೆಯಂತೆ ನಿತ್ಯವೂ ಲಕ್ಷ್ಮೀನರಸಿಂಹನಿಗೆ ಪಂಚರಾತ್ರಾಗಮೋಕ್ತ ಪುಷ್ಕರ ಸಂಹಿತೆಯ ಪ್ರಕರ ಪೂಜಾಕೈಂಕರ್ಯವನ್ನು ಕೈಗೊಂಡು, ದೂರ್ವಾಸ ಮುನಿಗಳಿಂದ ವರ್ಣಿಸಲ್ಪಟ್ಟ ಇವನ ಮಹತ್ಮೆಯನ್ನು ಚಿಂತಿಸುತ್ತಾ ತಪೋನಿಷ್ಠರಾಗಿ ಈಗಲೂ ವಾಸಿಸುತ್ತಿದ್ದಾರೆಂದು ವರ್ಣಿಸಿದ್ದಾರೆ. ಇಂದಿಗೂ ಬ್ರಹ್ಮದೇವರ ಪೂಜಾಸಮಯದಲ್ಲಿ ನಾರಸಿಂಹನ ದರ್ಶನ ಭಾಗ್ಯವನ್ನು ಹೊಂದುತ್ತಿದ್ದಾರೆಂದೂ ಹೇಳಿದ್ದಾರೆ. ಈ ವ್ಯಾಜದಿಂದ ಈ ಹೆಸರು ಪ್ರಸಿದ್ದವಾಗಿದೆ.

ಶ್ರೀ ಭಿಷಜಾದ್ರಿ

ಈ ಪರ್ವತದಲ್ಲಿ ಪೂರ್ಣ ಪ್ರಮಾಣದ ದೇವತಾ ಸಂಬಂಧಿಯಾದ ಔಷಧಿಯ ನಾರು,ಬೇರು, ಪತ್ರಗಳು, ಕಾಂಡಗಳು, ನಾನಾವಿಧಮೂಲಿಕೆಗಳು, ರಸವಿಷೇಶಗಳು ಹೇರಳ ಪ್ರಮಾಣದಲ್ಲಿ ಸಿಕ್ಕುತ್ತವೆ. ಅಯಾಯಾ ಮೂಲಿಕೆಗಳ ಅಭಿಮಾನಿ ದೇವತೆಗಳು ಮೂರ್ತಿವತ್ತಾಗಿ, ಧನ್ವಂತರೀ ಸ್ವರೂಪನಾದ ಶ್ರೀನರಸಿಂಹನನ್ನು ನಿತ್ಯವೂ ಪೂಜಿಸುತ್ತಿರುವುದರಿಂದಲೂ, ಈ ಪರ್ವತದಲ್ಲಿ ಔಷಧಿಗಳ ತಯಾರಿಕೆಯನ್ನು ಮಾಡಿಕೊಟ್ಟರೆ ಆಯಾ ರೋಗಗಳು ಬಹಳ ಬೇಗ ಉತ್ತಮ ರೀತಿಯಲ್ಲಿ ಗುಣಮುಖವಾಗುತ್ತದೆಂದು ಹೇಳಿದ್ದಾರೆ. ಚ್ಯವನ, ಕಣಾದ, ಕಣ್ವ ಋಷಿಗಳೇ ಮೊದಲಾದವರು ಔಷಧಿ ತಂಯಾರಿಕೆಂಯು ಕಾಲದಲ್ಲಿ ಈ ಪರ್ವತವನ್ನು ಆಶ್ರಯಿಸಿದ್ದರೆಂದೂ ಪುರಾಣಗಳಲ್ಲಿ ವರ್ಣಿಸಲ್ಪಟ್ಟಿದೆ. ಆದ್ದರಿಂದ ಈಪರ್ವತವನ್ನು ಭಿಷಜಾದ್ರಿ ಎಂದು ಕರೆದಿದ್ದಾರೆ. ಇಂತಹ ಔಷಧಿಯ ನಾರು, ಬೇರು, ಪತ್ರ, ಕಾಂಡ ಮೂಲಿಕೆಗಳ ಮೇಲೆ ಬೀಸಿ ಬರುವ ಗಾಳಿಯಲ್ಲಿ ಹಿಂದೆಹೇಳಿದಂತೆ ಅನಿಲ ನಾಮಕ ಋಷಿಯು ಸನ್ನಿಹಿತನಾಗಿ ವಿಷ್ಣು ಭಕ್ತರಿಗೆ ಅನೇಕ ರೋಗಾದಿ ಉಪದ್ರವವನ್ನು ನೀಗಿಸಿ, ಮನೋವಾಕ್ಕಾಯಗಳಿಗೆ ಶಕ್ತಿಯನ್ನು ಕೊಡುತ್ತಾ ಶ್ರೀಹರಿಯ ಸೇವೆಯನ್ನು ಮಾಡುತ್ತಿದ್ದಾನೆಂದೂ ವರ್ಣಿಸಲ್ಪಟ್ಟಿದೆ.

ಉದಾ : ಮೈಸೂರು ಅರಸರ ಕುಲದೈವ ಕರಿಗಿರಿನರಸಿಂಹನು. ಇದರ ಕುರುಹಾಗಿಯೇ ಅರಸರ ಪರಂಪರೆಂಯು ಪಟ್ಟದ ಕತ್ತಿಂಯಲ್ಲಿ ''ವಿಜಂಯುನಾರಸಿಂಹ'' ನೆಂಬ ನಾಮಾಂಕಿತವನ್ನು ಈಗಲೂ ಪ್ರತ್ಯಕ್ಷವಾಗಿ ನೋಡಬಹುದು ಮತ್ತು ವಂಶ ನಾಮಾವಳಿಯ ಕೊನೆಯಲ್ಲಿ ನರಸಿಂಹರಾಜ ಒಡೆಯರ್ ಎಂಬುದಾಗಿ ಪರಂಪರೆಯಾಗಿ ಬಂದಿರುವುದನ್ನು ಗಮನಿಸಬಹುದು. ಈ ರಾಜರುಗಳಿಗೆ ದೇಹಾರೋಗ್ಯ ಕೆಟ್ಟರೆ ಈ ಪರ್ವತದಲ್ಲಿ ಒಂದು ಪಕ್ಷ (೧೫ ದಿನಗಳು) ಕಳೆದರೆ ಸಾಕು ಎಲ್ಲ ರೋಗವೂ ಹೋಗಿ ದೃಡಕಾಯರಾಗುತ್ತಿದ್ದರೆಂದು ರಾಜ ಮನೆತನದವರು ಈಗಲೂ ಸ್ಮರಿಸುತ್ತಾರೆ.

ಶ್ರೀ ಇಷ್ಟಾರ್ಥಾಚಲ

ಬ್ರಹ್ಮದೇವರು ಹಿರಣ್ಯ ಕಶಿಪುವಿಗೆ ಕೊಟ್ಟ ಅಸದೃಶ ವರವನ್ನು ಪೂರ್ಣ ಮಾಡಿದ ಶ್ರೀಲಕ್ಷ್ಮೀನರಸಿಂಹನು, ರುದ್ರದೇವರು ವೃಕಾಸುರನಿಗೆ (ಭಸ್ಮಾಸುರ) ಕೊಟ್ಟ ವರವನ್ನೂ

ಸತ್ಯ ಮಾಡಿ ಸಲಹಿದನಷ್ಟೆ? ಕೇವಲ ದೇವತಾ ಶ್ರೇಷ್ಠರುಗಳ ಇಷ್ಟಾರ್ಥಗಳನ್ನು ಮಾತ್ರ ಪೂರೈಸುವ ನಲ್ಲದೆ, ಪ್ರಾಣಿಮಾತ್ರ ಸರ್ವ ಸುಜೀವಿಗಳ ಸಕಲ ಇಷ್ಟಾರ್ಥಗಳನ್ನು ಕೊಡಲೆಂದೇ ಕರಿಗಿರಿಯಲ್ಲಿ ನಿತ್ಯ ಸನ್ನಿಹಿತನಾಗಿ, ಭಕ್ತರ ಸರ್ವ ಇಷ್ಟಾರ್ಥ ಚಿಂತಾಮಣಿಯಾಗಿದ್ದಾನೆ. ಈ ಕಾರಣದಿಂದಲೂ ಚಿಂತಾಮಣಿಗಿರಿ ಎನ್ನುವರು. ಹಿಂದೆತಿಳಿಸಿದ ಪುರಂದರದಾಸರ ದೇವರನಾಮದಲ್ಲಿ ಈ ಅರ್ಥವನ್ನೇ ತಿಳಿಯಬಹುದು.

ಶ್ರೀ ಶುಕಾದ್ರಿ

ರುದ್ರಾಂಶ ಸಂಭೂತರೂ, ಜೀವನ್ಮುಕ್ತರೂ, ಆತ್ಮಾರಾಮರೆಂದೆನಿಸಿದ ಶ್ರೀಮತ್ ಶುಕಾಚಾರ್ಯರು ಈ ಪರ್ವತಕ್ಕೆ ಶ್ರೀನಿವಾಸನ ಜೊತೆಯಲ್ಲಿಯೇ ಬಂದಿದ್ದರು. ಶ್ರೀನಿವಾಸನು ಏಕರೂಪದಿಂದ ಇಲ್ಲಿ ವಾಸ ಮಾಡಿದಾಗ ತಾವೂ ಒಂದು ರೂಪದಿಂದ ನಿತ್ಯವೂ ಈ ಪರ್ವತದಲ್ಲಿ ತಪೋಮಗ್ನರಾಗಿದ್ದಾರೆ ಆದಕಾರಣ ಶುಕಾದ್ರಿ ಎನ್ನುವರು. ಈ ತಪಸ್ಸಿನ ಫಲರೂಪವಾಗಿ ಪರ್ವತ ತಪ್ಪಲ ಪ್ರದೇಶದಲ್ಲಿ ಶ್ರೀನರಸಿಂಹನನ್ನು ಪ್ರತಿಷ್ಠಾಪಿಸಿದ್ದಾರೆ. ಇದೇ ಶುಕಪುರಿ. ಈಗಿನ ಸುಗ್ಗನಹಳ್ಳಿ ನಾರಸಿಂಹಕ್ಷೇತ್ರವೆಂದು ಪ್ರಸಿದ್ಧವಾಗಿದೆ.

ಶ್ರೀ ಅಗಸ್ತ್ಯಾದ್ರಿ

ವೇಂಕಟಗಿರಿ ಪರ್ವತ, ಶ್ರೀವೇಂಕಟೇಶನ ಮೂಲಮೂರ್ತಿ, ಶ್ರೀಸ್ವಾಮಿ ಪುಷ್ಕರಿಣಿ ಈ ಮೂರನ್ನು ಶ್ರೀನಿವಾಸನಿಂದ ದಾನವಾಗಿ ಪಡೆದ ಅಗಸ್ತ್ಯರು ಈ ಕರಿಗಿರಿಯ ಪರ್ವತಕ್ಕೆ ಬಂದು ದೇವರ ಸೇವೆಗೈದರು. ಆಗ ನರಸಿಂಹನು ತನ್ನ ಗರ್ಭಗುಡಿಯ ಆದಿಪತ್ಯವನ್ನು ಅಗಸ್ತ್ಯರಿಗೆ ದಯಪಾಲಿಸಿ ಸೇವೆ ಮಾಡೆಂದು ಸ್ಥಾನ ಕೊಟ್ಟನು. ಅಗಸ್ತ್ಯರು ಇಂದಿಗೂ ಆಸೇವೆಗಯ್ಯುತ್ತಿದ್ದಾರೆ. ಈ ವ್ಯಾಜದಿಂದ ಅಗಸ್ತ್ಯಾದ್ರಿ ಎನ್ನುವರು. ಈ ಪರ್ವತದ ಒತ್ತು ಪರ್ವತವಾದ ಪುಂಗವಾದ್ರಿ (ಶಿವಗಂಗೆಯ ಬೆಟ್ಟ) ಇವರ ಮೂಲಸ್ಥಾನವೆಂದು ಪುರಾಣವು ವರ್ಣಿಸಿದೆ.

ಶ್ರೀ ವೃಷಭಾದ್ರಿ

ದುರ್ವಾಸರಿಂದ ಶಾಪಗ್ರಸ್ಥನಾದ ನಂದಿಕೇಶ್ವರನು ಪರ್ವತವಾಗಿ ಹುಟ್ಟಿ, ಈ ಪರ್ವತದಲ್ಲಿರುವ ಮತ್ಸ್ಯನಾಮ್ನಿ ಗುಹೆಯಲ್ಲಿ ಸಾವಿರ ವರ್ಷ ತಪಸ್ಸನ್ನಾಚರಿಸಿ,

ಇಲ್ಲಿರುವ ಶ್ರೀಪಾದ ತೀರ್ಥದಲ್ಲಿ ಮಿಂದು ನರಸಿಂಹನನ್ನು ಪೂಜಿಸಿ ಶಾಪ ವಿಮುಕ್ತಿಯನ್ನು ಹೊಂದಿದನು. ಆದ ಕಾರಣ ವೃಷಭಾದ್ರಿ ಎನ್ನುವರು. ಉಪಪರ್ವತವಾದ ನಂದಿಬೆಟ್ಟದಲ್ಲಿ ಗಂಗಾಧರೇಶ್ವರನನ್ನು ಸೇವೆ ಮಾಡುತ್ತಾ ಇಂದಿಗೂ ಇದ್ದಾನೆ.

ಶ್ರೀ ಶಕ್ರಾದ್ರಿ

ಇಂದ್ರದೇವರು ಈ ಪರ್ವತದಲ್ಲಿ ತಪಸ್ಸು ಮಾಡಿ, ತೀರ್ಥ ರೂಪವನ್ನು ಹೊಂದಿ, ಶ್ರೀಪಾದ ತೀರ್ಥದಲ್ಲಿ ಸ್ಥಾನವನ್ನು ಹೊಂದಿರುವುದರಿಂದ ಇದನ್ನು ಶಕ್ರಾದ್ರಿ ಎನ್ನುವರು. ವೃತ್ರಾಸುರನ ಸಂಹಾರದಿಂದ ಲಬ್ಧವಾದ ಬ್ರಹ್ಮಹತ್ಯಾಪಾಪವವು ಈ ಕರಿಗಿರಿ ಪರ್ವತದಲ್ಲಿ ನಿವೃತ್ತಿಯಾಯಿತೆಂದು ಹೇಳಿದ್ದಾರೆ. ಅನ್ಯ ಕ್ಷೇತ್ರಗಳಲ್ಲಿ (ಶುಚೀಂದ್ರಂ) ನಡೆದಿರುವ ಪಸಂಗಗಳನ್ನು ಯುಗಾಂತರ ಕಥೆಗಳೆಂದು ಸಮನ್ವಯಿಸಿಕೊಳ್ಳಬೇಕು.

ಶ್ರೀ ಚಕ್ರಾದ್ರಿ

ವಿಷ್ಣುವಿನ ಚಕ್ರಾಭಿಮಾನಿಯಾದ ಸುದರ್ಶನನೆಂಬ ದೇವತೆಯು ದೂರ್ವಾಸಮುನಿಯ ಶಾಪಾಕ್ಕೊಳಗಾಗಿ ತನ್ನ ತೇಜೋರೂಪವನ್ನು ಕಳೆದುಕೊಂಡು ನಿಶ್ಯಕ್ತನಾಗಿದ್ದನು. ಶಾಪ ವಿಮೋಚನೆಗಾಗಿ ದೂರ್ವಾಸರನ್ನೇ ಮೊರೆ ಹೊಕ್ಕಿದನು. ದೂರ್ವಾಸರು ಕರಿಗಿರಿ ಪರ್ವತದಲ್ಲಿ ತಪಸ್ಸನ್ನಾಚರಿಸೆಂದು ಹೇಳಿದರು. ಅದರಂತೆ ತಪಸ್ಸು ಮಾಡಿ ಶ್ರೀಹರಿಯ ಅನುಗ್ರಹಕ್ಕೆ ಪಾತ್ರನಾಗಿ, ಪುನಃ ತೇಜೋರೂಪಿಯಾದನು. ನರಸಿಂಹನ ಆಜ್ಞೆಯಂತೆ ತೀರ್ಥರೂಪನಾಗಿ ಪರ್ವತದ ಸುತ್ತಲೂ ಪ್ರದಕ್ಷಿಣೆ ಮಾಡುತ್ತಾ ಇಂದಿಗೂ ಸಂಚರಿಸುತ್ತಿರುವುದರಿಂದ ಈ ಹೆಸರು ಬಂದಿದೆ. ಈ ಕಾರಣದಿಂದ ಈ ಪರ್ವತದಲ್ಲಿ ಎಲ್ಲಾ ಆಭಿಚಾರಕವಾದ ದುಷ್ಟಶಕ್ತಿಗಳು ಅರ್ಥಾತ್ ಭೂತ, ಪ್ರೇತ, ಪಿಶಾಚಿಗಳ ಪೀಡೆಗಳು ಪರಿಹಾರವಾಗುವುದೆಂದೂ ವರ್ಣಿಸಿದ್ದಾರೆ.

ಶ್ರೀ ಕದಂಬಾದ್ರಿ

ಕದಂಬ ಋಷಿಗಳು ಈ ಪರ್ವತದಲ್ಲಿ ತಪಸ್ಸನ್ನಾಚರಿಸುತ್ತಿರುವಾಗ, ಸ್ವಪ್ನದಲ್ಲಿ ನರಸಿಂಹನು ನಾನೇ ನಿನ್ನ ಕ್ಷೇತ್ರಕ್ಕೆ ಬರುತ್ತೇನೆ ಎಂದು ಸೂಚಿಸಿದನು. ಅದರಂತೆ ಅವರ ಕ್ಷೇತ್ರದಲ್ಲಿ ಹಿರಣ್ಯಕಶಿಪುವನ್ನು ಸೀಳುವ ಭಯಂಕರರೂಪದಿಂದ ಆವಿರ್ಭವಿಸಿದನು. ಕದಂಬರು ಬಹು ವಿಧದಿಂದ ಪೂಜಿಸಿ ಸೇವೆಗೈದರು. ಮುಂದೆ

ಪಾಂಡವರು ಈ ಕ್ಷೇತ್ರಕ್ಕೆ ಬಂದಾಗ ಶ್ರೀ ಭೀಮಸೇನದೇವರು ಪೂಜೆಗೈದು, ಸೌಮ್ಯರೂಪವನ್ನು ತಾಳಬೇಕೆಂದು ಮತ್ತು ಶ್ರೀಕೃಷ್ಣರೂಪದಿಂದ ದರ್ಶನ ಕೊಡಬೇಕೆಂದೂ ಪ್ರಾರ್ಥಿಸಿಕೊಂಡಾಗ, ಶ್ರೀನರಹರಿ ಕೃಷ್ಣ ರೂಪದಿಂದ ಅದೇ ಪ್ರತಿಮೆಯ ಹಿಂಬದಿಯಲ್ಲಿ ದರ್ಶನ ಕೊಟ್ಟನು. ಈಗಲೂ ಈ ಪ್ರತಿಮೆಯು ಹಾಗೆಯೇ ಇದೆ. ಇದೇ ಕದಂಬ ಕ್ಷೇತ್ರವೆನಿಸಿದ ಪ್ರಸಿದ್ಧ "ಮದ್ದೂರುನಾರಸಿಂಹ" ಕ್ಷೇತ್ರವು. ಅಂದಿನಿಂದ ಕರಿಗಿರಿಗೆ ಕದಂಬಾದ್ರಿ ಎಂದು ಹೆಸರಾಯಿತು ಎಂದು ಪುರಾಣವು ವರ್ಣಿಸುತ್ತದೆ.

ಶ್ರೀ ದೂರ್ವಾಸಾಚಲ

ದೂರ್ವಾಸರು ಕಾರಣಾಂತರದಿಂದ ಶ್ರೀ ಹರಿಗೆ ದ್ರೋಹವೆಸಗಿದ ಪರಿಣಾಮವಾಗಿ ಬಹಳ ಪಶ್ಚಾತ್ತಾಪ ತಪ್ತರಾಗಿ ಸಂಕಟ ಪಡುತ್ತಾ, ವಾಯುದೇವರನ್ನು ಕುರಿತು ತಪಸ್ಸು ಮಾಡಿದರು. ವಾಯುದೇವರು ಪ್ರತ್ಯಕ್ಷರಾಗಿ ನೀನು ಕರಿಗಿರಿ ಕ್ಷೇತ್ರಕ್ಕೆ ಹೋಗಿ ಅಲ್ಲಿರುವ ಶ್ರೀಪಾದ ತೀರ್ಥದಲ್ಲಿ ತಪಸ್ಸನ್ನಾಚರಿಸು ಎಂದು ಆಜ್ಞಾಪಿಸಿದರು. ಅದರಂತೆ ದೂರ್ವಾಸರು ಈ ಪರ್ವತಕ್ಕೆ ಬಂದು ತೀರ್ಥ ತಟದಲ್ಲಿ ತಪಸ್ಸನ್ನಾಚರಿಸಲು ಶ್ರೀ ಹರಿ ಪ್ರತ್ಯಕ್ಷನಾಗಿ ಅನುಗ್ರಹಿಸಿದನು. ನೀನು ಯಾವ ನನ್ನ ಮೂರ್ತಿಯನ್ನು ಮನಸ್ಸಿನಲ್ಲಿ ಚಿಂತಿಸುತ್ತಿರುವೆಯೋ ಆ ಮನೋಮಯ, ತೇಜೋಮಯ ಮೂರ್ತಿಯನ್ನು ಶಿಲಾಮಯ ಮೂರ್ತಿಯನ್ನಾಗಿ ಪರಿವರ್ತಿಸಿ ನನ್ನ ಪರ್ವತದ ಶೃಂಗದಲ್ಲಿ ಪ್ರತಿಷ್ಠಾಪಿಸು ಎಂದು ಆಜ್ಞೆಮಾಡುವುದಲ್ಲದೆ ನನಗೆ ನಡೆಯುವ ಎಲ್ಲ ಭೋಗ ಸೇವೆಗಳೂ ಭಕ್ತರು ಆ ನಿನ್ನ ಉಪಾಸನೆಯ ಮೂರ್ತಿಗೇ ನಡೆಸಲಿ ಎಂದೂ ಹೇಳಿದನು. ನಿನ್ನ ಸಂಪೂರ್ಣದಯೆಗೆ ನಾನು ಪಾತ್ರನಾದೆನಲ್ಲ ಎಂದು ಭಕ್ತಿಪಾರವಶ್ಯದಲ್ಲಿ ಮುಳಿಗಿದ ದೂರ್ವಾಸರು, ಸರ್ವ ದೇವತೆಗಳ ಋಷಿಗಳ ಸಮ್ಮುಖದಲ್ಲಿ ತಮ್ಮ ಮನೋಮಯ ತೇಜೋಮಯ ಶಕ್ತಿಸ್ವರೂಪನಾದ ನರಸಿಂಹ ಮೂರ್ತಿಯನ್ನು ಶಿಲಾಮಯ ಮೂರ್ತಿಯನ್ನಾಗಿ ಪರಿವರ್ತಿಸಿ ಮತ್ತೊಂದು ಶೃಂಗದಲ್ಲಿ (ಕೆಳಗಿನ ಬೆಟ್ಟದಲ್ಲಿ) ಪ್ರತಿಷ್ಠೆ ಮಾಡಿದರು. ಇದೇ ಕೆಳಗಿನ ಬೆಟ್ಟದ ಶ್ರೀಭೋಗಾ ನರಸಿಂಹಸ್ವಾಮಿಯು. ಈ ಮೂರ್ತಿಯನ್ನು ದೂರ್ವಾಸರು ನಿತ್ಯದಲ್ಲಿಯೂ ಈಗಲೂ ಪೂಜಿಸುತ್ತಿದ್ದಾರೆ. ಅಂದಿನಿಂದ ಇದಕ್ಕೆ ದೇವತೆಗಳು ದೂರ್ವಾಸಾಚಲ ಎಂದು ಕರೆದರು.

ಶ್ರೀ ಕುಮಾರ ಪರ್ವತ

ರುದ್ರ ದೇವರ ಮಗನಾದ ಕುಮಾರ ಸ್ವಾಮಿಯು ದೇವೆತಗಳ ಮಧ್ಯೆ ತನಗೆ ಯಾವುದಾದರೊಂದು ಸ್ಥಾನಬೇಕೆಂದು ತಂದೆಯನ್ನು ಕೇಳಲು, ರುದ್ರದೇವರು ನೀನು ಕರಿಗಿರಿಗೆ ಹೋಗಿ ಅಲ್ಲಿ ತಪಸ್ಸುಮಾಡು ಶ್ರೀ ಹರಿ ಅನುಗ್ರಹಿಸುತ್ತಾನೆ ಎಂದು ಹೇಳಿದರು. ಅದರಂತೆ ಕುಮಾರ ಸ್ವಾಮಿಯು ಶ್ರೀಪಾದತೀರ್ಥ ತಟದಲ್ಲಿ ಭಯಂಕರವಾದ ತಪಸ್ಸನ್ನಾಚರಿಸುತ್ತಿರಲು ದೇವತೆಗಳು ಕಂಗಾಲಾರಾಗಿ ಬ್ರಹ್ಮದೇವರನ್ನು ಮೊರೆ ಹೊಕ್ಕರು. ಬ್ರಹ್ಮದೇವರು ಈ ಪರ್ವತಕ್ಕೆ ಬಂದು ಕುಮಾರ ಸ್ವಾಮಿಗೆ ಅಭಾಯವನ್ನು ಕೊಟ್ಟು ಶ್ರೀನರಸಿಂಹದೇವರ ದರ್ಶನ ಮಾಡಿಸಿದರು. ಶ್ರೀಹರಿಯು ಅವನ ಇಷ್ಟ ಪ್ರಕರವಾಗಿ ಹದಿನಾಲ್ಕು ಲೋಕಗಳ ಲೋಕಪಾಲಕರ ಮುಖ್ಯ ಸೇನಾಧಿಪತ್ಯವನ್ನು ಕರುಣಿಸಿದನು. ಈ ವ್ಯಾಜದಿಂದ ಕರಿಗಿರಿ ಕುಮಾರಪರ್ವತವೆಂದು ಕರೆಯಲ್ಪಟ್ಟಿತು. ನಂತರ ಕುಮಾರಸ್ವಾಮಿಯು ಶ್ರೀಹರಿಯನ್ನು ಪ್ರಾರ್ಥಿಸಿ ಸ್ವಾಮಿ ನನ್ನದಾದ ಒಂದು ಪರ್ವತವನ್ನು ಅನುಗ್ರಹಿಸಿ, ಅಲ್ಲಿ ನಿಮ್ಮನ್ನು ಕುರಿತು ತಪಸ್ಸು ಮಾಡುವ ಭಾಗ್ಯವನ್ನೂ ದಯಪಾಲಿಸಿ ಎಂದು ಕೇಳಿಕೊಂಡನು. ಕೇವಲ ಸ್ಥಾನಕ್ಕಾಗಿಯೇ ಅಲ್ಲದೆ ತಪಸ್ಸಿಗೆ ಕೇಳಿಕೊಂಡ ಅವನ ಬೇಡಿಕೆಯನ್ನು ಸ್ವೀಕರಿಸಿದ ಶ್ರೀನರಸಿಂಹನು, ನನ್ನ ಕ್ಷೇತ್ರವೇ ಆದ ಸಹ್ಯಾದ್ರಿ ಪರ್ವತದಲ್ಲಿ ನನ್ನನ್ನು ಕುರಿತು ತಪಸ್ಸು ಮಾಡು ಎಂದು ಆಜ್ಞಾಪಿಸಿದನು.

ರೌಪ್ಯಪೀಠಂ ಕುಮಾರಾದ್ರಿಃ ಕುಂಬಾಸೀ ಚ ಧ್ವಜೇಶ್ವರಃ ।
ಕ್ರೋಡ ಗೋಕರ್ಣ ಮೂಕಾಂಬಾಃ ಸಪ್ತೈತಾ ಮೋಕ್ಷದಾಯಕಾಃ ॥

ಎಂಬ ಪ್ರಮಾಣದಲ್ಲಿ ವರ್ಣಿಸಿದ ಪರ್ವತವೇ ಸಹ್ಯಾದ್ರಿಯ ಕುಮಾರ ಪರ್ವತವು. ಬ್ರಹ್ಮದೇವರು ಸೇನಾಧಿಪತ್ಯಾಭಿಷೇಕ ಮಾಡಿದ ಜಲಧಾರೆಯೇ ಕುಮಾರಧಾರ ನದಿಯಾಗಿ ಕುಮಾರ ಪರ್ವತದಲ್ಲಿ ಹರಿಯುತ್ತಿದೆ. ಇದೇ ಇಂದು ಪ್ರಸಿದ್ಧವಾದ ಸಂಪುಟನಾರಸಿಂಹ ಕ್ಷೇತ್ರವೆನಿಸಿದ ಕುಕ್ಕೆ ಸುಬ್ರಮಣ್ಯಕ್ಷೇತ್ರ. ಶ್ರೀ ಮಧ್ವಾಚಾರ್ಯರ ಪೂರ್ವಾಶ್ರಮದ ತಮ್ಮಂದಿರಾದ, ಮಹಾಯೋಗಸಿದ್ದರಾದ ಶ್ರೀಮದ್ ವಿಷ್ಣುತೀರ್ಥಯತಿಗಳು ಈ ಕುಮಾರ ಪರ್ವತದಲ್ಲಿ ಇಂದಿಗೂ ತಪಸ್ಸನ್ನಾಚರಿಸುತ್ತಿರುವ ವಿಷಯವನ್ನು ಸ್ಮರಿಸಬಹುದು.

ಶ್ರೀ ತೃತಾದ್ರಿ

ತೃತ ಋಷಿಗಳು ತಮ್ಮ ಕ್ಷೇತ್ರವಾದ ತೋತಾದ್ರಿಯಲ್ಲಿ ಬಹುಕಾಲ ತಪಸ್ಸನ್ನಾಚರಿಸಿ, ಕ್ಷೇತ್ರ ಮೂರ್ತಿಯನ್ನು ಪ್ರತ್ಯಕ್ಷೀಕರಿಸಿಕೊಂಡು ತಮ್ಮ ಇಷ್ಟಾರ್ಥವನ್ನು ಬೇಡಿದರು. ಆಗ ಶ್ರೀಹರಿಯು ನೀನು ಕರಿಗಿರಿಗೆ ಹೋಗಿ ಅಲ್ಲಿ ತಪಸ್ಸನ್ನಾಚರಿಸು ನಿನಗೆ ಮೋಕ್ಷವಾಗುತ್ತದೆಂದು ಹೇಳಿದನು. ಅದರಂತೆ ತೃತರು ಸ್ವಕ್ಷೇತ್ರವನ್ನು ಬಿಟ್ಟು ಈ ಪರ್ವತಕ್ಕೆ ಪ್ರಯಾಣ ಮಾಡಿ ಇಲ್ಲಿ ಬಹುಕಾಲ ತಪೋನಿಷ್ಠರಾದರು. ತುಷ್ಟಿಗೊಂಡ ಶ್ರೀ ನರಸಿಂಹನು ಪ್ರತ್ಯಕ್ಷನಾಗಿ ಅವರ ಇಷ್ಟಾರ್ಥವನ್ನು ಹೊಂದಿಸಿದ ಕಾರಣ ಇದಕ್ಕೆ ಈ ಹೆಸರು ಬಂದಿದೆ.

ಶ್ರೀ ನಾರದಾದ್ರಿ

ನಾರದರು ಈ ಕರಿಗಿರಿ ಪರ್ವತದ ಮಹಿಮೆಯನ್ನು ಇಡೀ ಬ್ರಹ್ಮಾಂಡಕ್ಕೆ ಪ್ರಚಾರ ಮಾಡಿ, ಒಂದು ರೂಪದಿಂದ ಇಲ್ಲಿ ನಿತ್ಯ ವಾಸ ಮಾಡುತ್ತಾ ಸ್ವಾಮಿಯ ಬಲಭಾಗದಲ್ಲಿ ವಾಸ ಮಾಡುವವರಾಗಿ, ಅನೇಕ ಸಂಕಷ್ಟಗಳಿಗೆ, ರೋಗಾದಿಗಳಿಗೆ, ಶಾಪಾದಿಗಳಿಗೆ ಸಿಕ್ಕಿರುವ ಭಕ್ತವರ್ಗವನ್ನು ಈ ಕ್ಷೇತ್ರಕ್ಕೆ ಕರೆದುಕೊಂಡು ಬಂದು ಅವುಗಳನ್ನು ಪರಿಹರಿಸುವ ರೂಪದಿಂದ ಸೇವೆಗೈಯ್ಯುವ ಕೃಪಾಸಿದ್ಧರಾಗಿದ್ದಾರೆ ಎಂದು ವರ್ಣಿಸಿದ್ದಾರೆ. ಆದ್ದರಿಂದ ಶ್ರೀ ಹರಿಯೇ ಸ್ವತಃ ನಾರದಾದ್ರಿ ಎಂದು ಕರೆದಿದ್ದಾನೆ.

ಶ್ರೀ ಪೈಂಗಲಾದ್ರಿ ಶಾಕಲಾದ್ರಿ

ಶ್ರೀ ವೇದವ್ಯಾಸರ ಶಿಷ್ಯರಾದ ಪೈಂಗಲ ಋಷಿಗಳು ಮತ್ತು ಶಾಕಲರು ಈ ಪರ್ವತಕ್ಕೆ ಬಂದು ಅನೇಕ ವೇದ ಶಾಖೆಗಳ ಉಪದೇಶವನ್ನು ಅವರ ಶಿಷ್ಯ ಕೋಟಿಗೆ ಮಾಡುವವರಾಗಿಯೂ, ತಪಸ್ಸನ್ನಾಚರಿಸಿ ಶ್ರೀಹರಿಯನ್ನು ಸಾಕ್ಷಾತ್ಕರಿಸಿ ಕೊಂಡವರಾಗಿಯೂ, ಕೃಪಾ ಪಾತ್ರರಾದ ಇವರ ಮೇಲಿನ ಪ್ರೇಮದಿಂದ ಶ್ರೀ ವೇದವ್ಯಾಸಾಭಿನ್ನನಾದ ಶ್ರೀ ನರಹರಿಯು ಈ ಹೆಸರಿನಿಂದ ತನ್ನ ಪರ್ವತವನ್ನು ಕರೆದಿದ್ದಾನೆ.

ಶ್ರೀ ಪದ್ಮನಾಭಾದ್ರಿ

ಪದ್ಮನಾಭ ಋಷಿಗಳು ಈ ಪರ್ವತದಲ್ಲಿ ತಪಸ್ಸು ಮಾಡಿ, ಶ್ರೀ ಸ್ವಾಮಿಯಿಂದ ಸುದರ್ಶನ ಚಕ್ರವನ್ನು ಪಡೆದಂತಹ ಮಹಾನುಭಾವರು. ಈ ಕ್ಷೇತ್ರದಲ್ಲಿ ಋಷಿಗಳ ತಪಸ್ಸಿಗೆ ಅಡ್ಡಿಮಾಡಿ ತೊಂದರೆ ಕೊಡುತಿದ್ದ, ರುದ್ರಾದಿ ದೇವತೆಗಳ ವರಬಲದಿಂದ ಅವಧ್ಯರಾಗಿ ಕೊಬ್ಬಿದ ಅಸುರರಾದ ವಜ್ರಾಸುರ, ಗದಾಸುರ, ಧೂಮ್ರಾಕ್ಷ, ಅಗ್ನಿವೇಷ, ವಾಸುದೇವ ಮೊದಲಾದ ಅಸುರರನ್ನು ಸುದರ್ಶನ ಚಕ್ರದಿಂದ ಸಂಹಾರ ಮಾಡಿ ಶ್ರೀ ಹರಿಗೆ ಈ ರೂಪವಾಗಿ ಸೇವೆಗೈದರು. ಚಕ್ರವು ತೀರ್ಥರೂಪವನ್ನು ತಾಳಿತು. ಪದ್ಮನಾಭ ಋಷಿಗಳಿಗೆ ಸ್ವಾಮಿಯು ಅನುಗ್ರಹಿಸಿ, ನೀನು ಈ ಪರ್ವತದ ಪುಚ್ಛ ಭಾಗವಾದ ಕಂಚೀ ಕ್ಷೇತ್ರಕ್ಕೆ (ಹಸ್ತಿಗಿರಿ) ಹೋಗಿ ಅಲ್ಲಿ ತಪಸ್ಸು ಮಾಡು. ಬ್ರಹ್ಮದೇವರ ಯಜ್ಞವಾಟದಿಂದ ವರದರಾಜನಾಗಿ ನಾನು ಬರುತ್ತೇನೆ. ಆಗ ನಿನ್ನನ್ನು ಅನುಗ್ರಹಿಸಿ ಮೋಕ್ಷವನ್ನು ಕರುಣಿಸುತ್ತೆನೆಂದನು. ಅದರಂತೆ ಪದ್ಮನಾಭ ಋಷಿಗಳು ಅಲ್ಲಿರುವ ಅನಂತ ಸರೋವರ ತಟದಲ್ಲಿ ತಪೋನಿಷ್ಠರಾಗಲು ತೆರಳಿದರು. ಈ ಘಟನೆಯ ಕುರುಹಾಗಿ ಪದ್ಮನಾಭಾದ್ರಿ ಎನ್ನುವರು.

ಶ್ರೀ ತ್ರಿಧಾಮಾದ್ರಿ

ಶ್ವೇತದ್ವೀಪ, ಅನಂತಾಸನ, ವೈಕುಂಠ ಈ ಮುಕ್ತಲೋಕಗಳ ಭಗವದ್ರೂಪಗಳಾದ ಅಮೃತ, ಕ್ಷೇಮ, ಅಭಯಗಳೆಂಬ ಪರಮಾತ್ಮನ ಮೂರು ರೂಪಗಳು ಇಲ್ಲಿಯ ನರಸಿಂಹ ಸ್ವಾಮಿಯಲ್ಲಿ ವಿಶೇಷವಾಗಿ ಕಲಿಯುಗದಲ್ಲಿರುವುದರಿಂದ (ಅಭಿವ್ಯಕ್ತವಾಗುವುದರಿಂದ) ಈ ಪರ್ವತ ದರ್ಶನದಿಂದ ಈ ಮೂರು ರೂಪಗಳ ದರ್ಶನ ಫಲವು ಮತ್ತು ಮುಂದೆ ಆ ಲೋಕಗಳ ಪ್ರಾಪ್ತಿಯೂ ಆಗುವುದೆಂದು ವರ್ಣಿಸಿದ್ದಾರೆ. ಇಲ್ಲಿರುವ ಕಲ್ಲುಗಳು ಶಾಲಿಗ್ರಾಮಗಳು, ಮರಳೇ ಸುದರ್ಶನ, ಮಣ್ಣೇ ಚಕ್ರಾಂಕಿತವೆಂದು ವರ್ಣಿಸಿ, ಈ ಪರ್ವತ ಸೇವೆಯಿಂದ ಮುಕ್ತ ಸ್ಥಾನಗಳನ್ನು ಸೇವಿಸಿದ ಫಲವು ಸುಲಭವಾಗಿ ಬರುತ್ತದೆಂದು ಹೇಳಿದ್ದಾರೆ. ಆದ್ದರಿಂದ ಇದನ್ನು ತ್ರಿಧಾಮಾದ್ರಿ ಎನ್ನುವರು.

ಪರಮೇಷ್ಠಿ ಬಂದು ಶ್ರೀಪಾದ ತೀರ್ಥದಲಿ ಮಿಂದು ।
ಹತ್ತು ಸಾವಿರ ವರುಷ ತಪಿಸಿ ವರ ಪಡೆದ ಧರೆಯೊಳಗೆ ।

ಶಿಲೆಯೇ ಶಾಲಿಗ್ರಾಮ ಹೊಳಲೇ ಸುದರುಶನ ।
ಥಳಥಳಿಸುವ ವರ್ಣಾ ಮಳಲೇ ಚಕ್ರಾಂಕಿತ ।
ಇಳೆಯೊಳಗಿದೆ ನಿಚ್ಚಳ ವೈಕುಂಠ ನಗರಸಲೆ ।
ಶ್ವೇತದ್ವೀಪ ಇದೆ ಪೊಳೆವಾನಂತಾಸನ ।
ಕಲಿಯುಗದಿ ವಿಜಯ ವಿಠಲನ ನಿರುತ ಸ್ಥಾನ ।

ಎಂದು ವಿಜಯದಾಸರೂ ತಮ್ಮ ಪದ್ಯದಲ್ಲಿ ಈ ಅರ್ಥಗಳನ್ನೇ ವರ್ಣಿಸಿದ್ದಾರೆ. ಆದ್ದರಿಂದ ಇದನ್ನು ಮುಕ್ತಪರ್ವತವೆಂದೂ ಕರೆಯುತ್ತಾರೆ. ವೇದಾದ್ರಿ, ಶಾಲಿಗ್ರಾಮಾದ್ರಿ, ಮೃದಾದ್ರಿಯ ವಿವರಣೆಗಳನ್ನೂ ಸ್ಮರಿಸಬಹುದು.

ಶ್ರೀ ಜಾಬಾಲಾದ್ರಿ

ಕೃಪಾಸಿದ್ಧರಾದ ಜಾಬಾಲಿ ಋಷಿಗಳ ಆಶ್ರಮವೇ ಅಭಯಾರಣ್ಯ. ಬಹಳ ವರ್ಷಗಳ ಕಾಲ ತಪಸ್ಸು ಮಾಡಿ, ಕಲಿಯುಗದ ಮಹಾಕ್ಷೇತ್ರವಾದ ವೇಂಕಟಗಿರಿಗೆ ತೆರಳಿ ಅಲ್ಲಿಯೂ ತಪೋನಿಷ್ಠರಾಗಿ ಸೇವಿಸಿ ಈ ಪರ್ವತಕ್ಕೆ ಬಂದು ಶ್ರೀಪಾದ ತೀರ್ಥ ತಟದಲ್ಲಿ ತಪೋನಿಷ್ಠರಾದರು. ಸಾವಿರ ವರ್ಷಗಳು ಕಳೆದವು. ಒಂದು ದಿನ ಪೂಜೆಗೆಂದು ತಪಸ್ಸಿನಿಂದ ವಿಮುಖರಾಗಿ, ಶ್ರೀಪಾದತೀರ್ಥದಲ್ಲಿ ಮಿಂದು ಶ್ರೀ ನಾರಸಿಂಹನ ದರ್ಶನಕ್ಕೆ ಬಂದರು. ಅಲ್ಲಿ ಕಂಡ ದೃಶ್ಯದಿಂದ ಭಕ್ತಿಪಾರವಶ್ಯರಾಗಿ ಮುಹೂರ್ತಕಾಲ ಕುಣಿದಾಡಿದರು. ಬ್ರಹ್ಮದೇವರು ಶ್ರೀ ಸ್ವಾಮಿಯನ್ನು ಅಲಂಕರಿಸಿ ಚಾಮರದಿಂದ ಬೀಸುತ್ತಾ, ವೇದಮಂತ್ರಗಳಿಂದ ಸ್ತೋತ್ರಮಾಡುತ್ತಿದ್ದ ದೃಶ್ಯವದಾಗಿತ್ತು. ಬಾಗಿಲಲ್ಲೇ ಕಾದು ಕುಳಿತಿದ್ದ ಕೃಪಾಸಿದ್ಧರಾದ ಜಾಬಾಲಿ ಋಷಿಗಳನ್ನು ನೋಡಿ ಕೃಪಾಸಿದ್ಧರಿಗೆ ಕೃಪೆಯನ್ನು ತೋರುವ ಬ್ರಹ್ಮದೇವರು ತಮ್ಮ ಅಮೃತ ಹಸ್ತವನ್ನು ಅವರ ಮಸ್ತಕದ ಮೇಲೆ ಇಟ್ಟು, ಶ್ರೀ ಸ್ವಾಮಿಯ ಪಾದಯುಗಳಗಳಲ್ಲಿ ಅವರ ಶಿರಸ್ಸನ್ನು ಇಡಿಸಿ ದರ್ಶನ ಮಾಡಿಸಿದರು. ಆಗ ಶ್ರೀಸ್ವಾಮಿಯು ವರವನ್ನು ಬೇಡು ಎನ್ನಲು ಭಕ್ತಿಪುಳಕಿತರಾದ ಜಾಬಾಲಿಗಳು ಸ್ತೋತ್ರಮಾಡಿ ಸ್ವಾಮಿ ನನಗಾಗಿ ಏನೂ ಬೇಡ. ಅನೇಕ ಪಾಪ ಕರ್ಮಗ್ರಸ್ತರಾದ ಜೀವಿಗಳನ್ನು ಉದ್ಧಾರಮಾಡಬೇಕೆಂದು, ಅವರ ಸಂಕಟಗಳ ನಿವಾರಣೆಯನ್ನು ಮಾಡಿ ಜ್ಞಾನವನ್ನುಂಟುಮಾಡು ಎಂದು ಬೇಡಿಕೊಂಡರು. ಪರದುಃಖ ದುಃಖಿತ್ವದ ಗುಣಸ್ವಭಾವರಾದ ಜಾಬಾಲಿಯ ಬೇಡಿಕೆಗೆ ಮೆಚ್ಚಿದ ಶ್ರೀಹರಿ

ಹಾಗೆಯೇ ಆಗಲಿ ಎಂದು ಹೇಳುವುದಲ್ಲದೆ ಸ್ವಾರ್ಥಕ್ಕಾಗಿ ಏನನ್ನೂ ಕೇಳದೆ ಪರರನ್ನು ಉದ್ಧಾರಮಾಡುವ ನಿನ್ನ ಸಹಜ ಸ್ವಭಾವವನ್ನು ಮೆಚ್ಚಿದ್ದೇನೆ. ನೀನು ಈ ಪರ್ವತದ ಉಪಪರ್ವತದಲ್ಲಿಯೇ ವಾಸಮಾಡು. ನಾನು ಒಂದುರೂಪದಿಂದ ನಿನ್ನ ಬಳಿಯಲ್ಲಿಯೇ ಇರುತ್ತೇನೆ ಎಂದೂ ಹೇಳಿದನು. ಆ ಕ್ಷೇತ್ರವೇ ಸಾವನದುರ್ಗ ಶ್ರೀನಾರಸಿಂಹ ಕ್ಷೇತ್ರವು. ನರಸಿಂಹನ ಒಂದು ರೂಪವನ್ನೇ ತಮ್ಮದಾಗಿಸಿಕೊಂಡ ಕಾರಣ ಬ್ರಹ್ಮದೇವರು ಈ ಪರ್ವತಕ್ಕೆ ಜಾಬಾಲಾದ್ರಿ ಎಂದು ಕರೆದರು.

ಶ್ರೀ ಶಾಲಿಹೋತ್ರ ಪರ್ವತ

[ಶೀಬಿನಾರಸಿಂಹ ಕ್ಷೇತ್ರ, ಶೈಬ್ಯಾದ್ರಿ]

ತಪೋಸಿದ್ಧರಾದ, ಮಂತ್ರಸಿದ್ಧರಾದ ಶಾಲಿಹೋತ್ರರೆಂಬ ಋಷಿಗಳು ತಮ್ಮ ಆಶ್ರಮದಲ್ಲಿ ತಪೋನಿರತರಾಗಿ ಬಹುಕಾಲ ಕಳೆಯಲು ವೃದ್ಧಾಪ್ಯವು ತುಂಬಾ ಭಾಧಿಸತೊಡಗಿತು. ಮುಖ್ಯ ಶಿಷ್ಯರಾದ ಶೈಬ್ಯ ಋಷಿಗಳು ಅವರ ಶುಶ್ರೂಷೆಯಲ್ಲಿ ನಿರತರಾಗಿದ್ದರು. ದಿನೇ ದಿನೇ ವೃದ್ಧಾಪ್ಯವು ಬಹಳ ಪೀಡಿಸುತ್ತಿರಲು ತಮಗೆ ಅಂತ್ಯಕಾಲ ಬಂದಿತೆಂದು ತಿಳಿದು ಶ್ರೀಹರಿ ದರ್ಶನಕ್ಕಾಗಿ ಪ್ರಾರ್ಥಿಸುತ್ತಿದ್ದರು. ಏಳಲೂ ಸಹ ಆಗದೆ ಕುಶದ (ದರ್ಭೆಯ) ಮೇಲೆ ಪವಡಿಸಿ, ದರ್ಭೆಯಿಂದ ಹೆಣೆದ ಹೊದಿಕೆಯನ್ನು ಹೊದ್ದಿಕೊಂಡು, ದೂರ್ವಾರಸ (ಗರಿಕೆಯ ರಸ) ವನ್ನು ಸ್ವಲ್ಪ ಪಾನ ಮಾಡಲು ಇಟ್ಟುಕೊಂಡು, ಶ್ರೀಹರಿಯನ್ನೇ ಭಕ್ತಿಯಿಂದ ಧ್ಯಾನ ಮಾಡುತ್ತಾ ಮಲಗಿದರು.ಶಿಷ್ಯರಾದ ಶೈಬ್ಯರು ಕಾಡಿಗೆ ಪ್ರಯಾಣ ಮಾಡಿರುವ ಸಮಯವೂ ಆಗಿತ್ತು. ಇಂತಹ ಸ್ಥಿತಿಯಲ್ಲಿ ಶ್ರೀಹರಿ ಪರೀಕ್ಷಿಸಬೇಕೆಂದು ಬಹುವೃದ್ಧ ಬ್ರಾಹ್ಮಣನ ರೂಪದಲ್ಲಿ ಏಳಲೂ ಆಗದಂತೆ ತೆವಳುತ್ತಾಅವರ ಸನ್ನಿಧಿಗೆ ಬಂದು ಅಪ್ಪ ಶಾಲಿಹೋತ್ರ ನನಗೆ ಬಹಳ ದೇಹಸ್ಥಿತಿ ಕೆಟ್ಟಿದೆ ಛಳಿಯಿಂದಲೂ ಹಸಿವೆಯಿಂದಲೂ ಪರಿತಪಿಸುತ್ತಿದ್ದೇನೆ ಹೊದ್ದಿಕೊಳ್ಳಲು ವಸ್ತ್ರವಿಲ್ಲ ಅದಕ್ಕಾಗಿ ನಿನ್ನಲ್ಲಿಗೆ ಬಂದಿದ್ದೇನೆ ಪೂರ್ಣ ಮಾಡುವೆಯಾ? ಎಂದು ದೈನ್ಯತೆಯಿಂದ ಕೇಳಿಕೊಂಡನು. ಶಾಲಿಹೋತ್ರರು ತಕ್ಷಣವೇ ಹಾಗೆಯೇ ಆಗಲಿ ಎಂದು ಮೆಲ್ಲಗೆ ತೆವಳಿಕೊಂಡು ತಾವು ಮಲಗಿದ್ದ ಕುಶದ ಹಾಸಿಗೆ ಮೇಲೆ ಆ ವೃದ್ಧ ಬ್ರಾಹ್ಮಣನನ್ನು ಮಲಗಿಸಿ, ತಾವು ಹೊದ್ದಿದ್ದ ದರ್ಭೆಯ ಹೊದಿಕೆಯನ್ನೇ ಹೊದಿಸಿ, ಕುಡಿಯಲು ಇಟ್ಟುಕೊಂಡಿದ್ದ ಸ್ವಲ್ಪ ಗರಿಕೆಯ ರಸವನ್ನೇ ಅವನಿಗೆ ಕೊಟ್ಟು, ಪಕ್ಕದಲ್ಲಿ ಕುಳಿತು ಆ ಬ್ರಾಹ್ಮಣನ ಪಾದಗಳನ್ನು ಒತ್ತುತ್ತಾ ಕುಶಲ ಪ್ರಶ್ನೆಯನ್ನು

ಮಾಡತೊಡಗಿದರು. ಬ್ರಾಹ್ಮಣನ ಪಾದಗಳನ್ನು ಸ್ಪರ್ಶಮಾಡಿದ ಕೂಡಲೇ ಶಾಲಿಹೋತ್ರರ ಎಲ್ಲ ಇಂದ್ರಿಯಗಳಲ್ಲಿಯೂ ದಿವ್ಯ ಶಕ್ತಿಯು ಹರಿಯತೊಡಗಿತು. ಭಕ್ತಿ ಭಾವದಿಂದ ಆ ವೃದ್ಧ ಬ್ರಾಹ್ಮಣನನ್ನು ನೋಡಹತ್ತಿದರು. ಅರಿವಿಲ್ಲದೆ ಅವನನ್ನು ಸ್ತೋತ್ರ ಮಾಡಲು ತವಕಿಸಿದರು ಮೈರೋಮಾಂಚನವಾಯಿತು. ತರಳ ಧೃವರಾಜನಂತೆ ಅವರ ಸ್ಥಿತಿಯನ್ನು ಸ್ಮರಿಸಬಹುದಾಯ್ತು. ಅವರ ಭಕ್ತಿಪಾಶಕ್ಕೆ ಸಿಲುಕಿದ ವೃದ್ಧ ಬ್ರಾಹ್ಮಣನು ಶಾಲಿಹೋತ್ರ ಋಷಿಗಳ ತಲೆಯ ಮೇಲೆ ತನ್ನ ಅಮೃತ ಹಸ್ತವನ್ನಿಟ್ಟು ತನ್ನ ದಿವ್ಯದರ್ಶನವನ್ನು ಪದ್ಮನಾಭನ ರೂಪದಂತೆ ಮಲಗಿಕೊಂಡೇ ಕೊಟ್ಟನು. ಋಷಿಗಳು ಬಹುವಿಧವಾಗಿ ಸ್ತೋತ್ರಗೈದು ತಮಗೆ ಮುಕ್ತಿಯನ್ನು ಕರುಣಿಸುವಂತೆ ಪ್ರಾರ್ಥಿಸಿದರು. ಶ್ರೀಹರಿಯು ನಿನ್ನ ಕ್ಷೇತ್ರದಲ್ಲಿ ನಿನಗೆ ಮುಕ್ತಿಯಿಲ್ಲ. ಮುಕ್ತ ಪರ್ವತವಾದ ಕರಿಗಿರಿಗೆ ಹೋಗು ಅಲ್ಲಿ ನಿನಗೆ ಮುಕ್ತಿಯನ್ನು ಕರುಣಿಸುತ್ತೇನೆ ಎಂದು ಹೇಳಿ ಹಾಗೆಯೇ ಸ್ವಯಂವ್ಯಕ್ತವಾಗಿ ಶಿಲಾಮಯವಾಗಿ ಮಲಗಿದರು. (ಇದೇ ತಿರುವಳ್ಳೂರ್ ವೀರರಾಘವ ಕ್ಷೇತ್ರ) ಅತಿ ವೃದ್ಧರಾದ ಶಾಲಿಹೋತ್ರ ಋಷಿಗಳು ಶ್ರೀಹರಿಯ ಆಜ್ಞೆಯಂತೆ ತಮ್ಮ ಸ್ವಕ್ಷೇತ್ರವನ್ನು ತ್ಯಜಿಸಿ, ಶಿಷ್ಯರಾದ ಶೈಬ್ಯರ ಜೊತೆಯಲ್ಲಿ ಏಳುತ್ತಾ ಬೀಳುತ್ತಾ ಭಕ್ತಿಭಾವದಿಂದ ನರಸಿಂಹನನ್ನು ಸ್ಮರಿಸುತ್ತಾ, ನಡೆದು ಕರಿಗಿರಿ ಪರ್ವತದ ತಪ್ಪಲಿಗೆ ಬಂದರು. ಅಲ್ಲಿಂದ ಮುಂದೆ ನಡೆಯಲು ಸಾಧ್ಯವಾಗಲಿಲ್ಲ. ಶ್ರೀ ನರಸಿಂಹನನ್ನು ಭಕ್ತಿಭಾವದಿಂದ ಸ್ಮರಿಸಿ, ಪ್ರತಿಧ್ವನಿಸುವಂತೆ ಅವನ ನಾಮವನ್ನು ಜೋರಾಗಿ ಕೂಗಿ ನೆಲಕ್ಕೆ ಉರಳಿಬಿದ್ದರು. ತಕ್ಷಣವೇ ಶೈಬ್ಯರು ಅಲ್ಲೇ ಇದ್ದ ತೀರ್ಥ ಜಲದಿಂದ ಶೈತ್ಯೋಪಚಾರವನ್ನು ಮಾಡಿ, ಒಂದು ಗುಂಡನೆಯ ಕಲ್ಲನ್ನು ತಂದು ತಲೆಯ ಆಸರೆಯಾಗಿ ಇಟ್ಟು ಗುರುಗಳ ಅಂತ್ಯಕಾಲವನ್ನು ವೀಕ್ಷಿಸುತ್ತಾ, ಶ್ರೀ ಹರಿಯ ಸ್ತೋತ್ರವನ್ನು ಮಾಡುತ್ತಾ ಭಕ್ತಿಭಾವದಿಂದ ಮೈಮರೆತರು. ಶಾಲಿಹೋತ್ರರ ಸಂಪೂರ್ಣ ಸೇವೆಯನ್ನು ಸ್ವೀಕರಿಸಿದ ಲಕ್ಷ್ಮೀನರಸಿಂಹನು ತಕ್ಷಣವೇ ಅವರ ತಲೆಯ ಆಸರೆಯಾಗಿದ್ದ ಶಿಲೆಯಲ್ಲಿಯೇ ಆವಿರ್ಭವಿಸಿದನು. ಶಾಲಿಹೋತ್ರರು ಆ ದಿವ್ಯ ಲಕ್ಷ್ಮೀನರಸಿಂಹನ ಸಚ್ಚಿದಾನಂದಾತ್ಮಕವಾದ ರೂಪವನ್ನು ದರ್ಶನ ಮಾಡುತ್ತಾ ಸ್ತೋತ್ರ ಮಾಡಲು ಪ್ರಾರಂಭಿಸಿದರು. ಶ್ರೀ ಹರಿಯು ಆ ವೃದ್ಧ ಶಾಲಿಹೋತ್ರರನ್ನು ತನ್ನ ಅಮೃತ ಹಸ್ತಗಳಿಂದ ಎತ್ತಿಕೊಂಡು ಅಲ್ಲೇ ಇದ್ದ ತೀರ್ಥದಲ್ಲಿ ಮುಳಿಗಿಸಿ, ಹೇ ಶಾಲಿಹೋತ್ರ ನಿನ್ನ ಭಕ್ತಿಗೆ ಮೆಚ್ಚಿ ಬಂದಿದ್ದೇನೆ. ನಿನ್ನ ನಿಮಿತ್ತವಾಗಿ ಈ ಪರ್ವತ ತಪ್ಪಲಿನಲ್ಲಿಯೇ ನಿಲ್ಲುತ್ತೇನೆ.

ನಿನ್ನ ನಾಮುವನ್ನು ನನ್ನ ಪರ್ವತಕ್ಕೆ ಇಟ್ಟುಕೊಳ್ಳುತ್ತೇನೆ. ನೀನು ಸ್ನಾನ ಮಾಡಿದ ತೀರ್ಥಕ್ಕೆ ಮುಕ್ತಿ ಸರೋವರವೆಂದು ದೇವತೆಗಳು ಕರೆಯಲಿ ಎಂದು ಹೇಳುತಾ, ತನ್ನ ಚಕ್ರದಿಂದ ಅವರ ದೇಹವನ್ನು ಸೀಳಿದನು. ದೇವತಾವಾದ್ಯಗಳಿಂದ ವಿಷ್ಣುದೂತರುಗಳು ಬಂದು ಶಾಲಿಹೋತ್ರನ್ನು ವಿಷ್ಣುಲೋಕಕ್ಕೆ ಕರೆದುಕೊಂಡು ಹೋದರು. ನಂತರ ಈ ದೃಶ್ಯವನ್ನು ಕಣ್ಣಾರೆ ಕಂಡ ಶೈಬ್ಯರು ಶ್ರೀಹರಿಯನ್ನು ಸ್ತೋತ್ರ ಮಾಡಿದರು. ಶ್ರೀಹರಿಯು ಶೈಬ್ಯ! ನಾನು ಇಲ್ಲೇ ಸ್ವಯಂವ್ಯಕ್ತನಾಗಿ ಇರುತ್ತೇನೆ ನೀನು ನನ್ನನ್ನು ನಿತ್ಯವೂ ಪೂಜಿಸಿ ತಪೋನಿರತನಾಗು ಮುಂದೆ ಮುಕ್ತನಾಗುತ್ತೀಯ ಎಂದು ಹೇಳಿ ಅದೃಶ್ಯನಾದನು. ಪರಮಾತ್ಮನ ಆಜ್ಞೆಯಂತೆ ಶೈಬ್ಯರು ನಿತ್ಯವೂ ಪರ್ವತದ ಶ್ರೀಪಾದ ತೀರ್ಥದಲ್ಲಿ ಮಿಂದು ಅಲ್ಲಿರುವ ಸ್ವಾಮಿಯನ್ನು ಪೂಜಿಸಿ, ಪರ್ವತ ತಪ್ಪಲದ ಮುಕ್ತಿ ಸರೋವರದಲ್ಲಿ ಸ್ನಾನ ಮಾಡಿ, ಅಲ್ಲೇ ಇರುವ ಸಾಲಿಗ್ರಾಮ ಶಿಲಾಂತರ್ಯಾಮಿಯಾದ ನರಸಿಂಹನನ್ನು ಇಂದಿಗೂ ಪೂಜಿಸುತ್ತಿರುವ ಪ್ರಸಿದ್ಧ ಕ್ಷೇತ್ರವೇ ಶೀಬಿ ನಾರಸಿಂಹ ಕ್ಷೇತ್ರವು. ಅಲ್ಲಿರುವ ಈಗಿನ ''ಗಜಾಗೊಂಡ್ಲ''ವೆಂಬ ತೀರ್ಥವೇ ಮುಕ್ತಿ ಸರೋವರ ''ಶಾಲಿಹೋತ್ರತೀರ್ಥ''ವೆಂಬುದಾಗಿಯೂ ಪುರಾಣೋಕ್ತ ನಾಮಾಂತರಗಳು. ಶೈಬ್ಯರ ತಪೋಭೂಮಿಯಾಗಿರುವುದರಿಂದಲೂ, ಶೈಬ್ಯರ ಸೇವೆಯಿಂದ ತುಷ್ಟನಾದ ಕರಿಗಿರೀಶನು ಅವರ ನಾಮದಿಂದಲೇ ಪ್ರಸಿದ್ಧಿ ಹೊಂದುವಂತೆ ಅನುಗ್ರಹಿಸಿದ್ದಾನೆ. ಅಂದಿನಿಂದ ಶೀಬಿನಾರಸಿಂಹನೆಂದು ಕರೆಯುತ್ತಾರೆ. ಶಾಲಿಹೋತ್ರರಿಗೆ ಮುಕ್ತಿಯನ್ನು ಕರುಣಿಸಿದ ಪರ್ವತವಾದ್ದರಿಂದ ಮುಕ್ತಪರ್ವತವೆಂದು ಶಾಲಿಹೋತ್ರ ಪರ್ವತವೆಂದೂ ಕರೆದಿದ್ದಾರೆ.

ಶ್ರೀ ಶಿಂಶುಮಾರಾದ್ರಿ, ಸಮೂಹ ಪರ್ವತ

ಈ ಪರ್ವತವು ಚೇಳಿನ ರೂಪದಲ್ಲಿ ಕಂಗೊಳಿಸುತ್ತದೆ. ಆದಿಭಾಗವೇ ಕರಿಗಿರಿಯು. ಮಧ್ಯಭಾಗವೇ ಅಹೋಬಲ (ಸಿಂಹಾಚಲ) ಶ್ರೀಶೈಲ ವೇಂಕಟಗಿರಿಯು. ಪುಚ್ಛಭಾಗವೇ (ಬಾಲದ ರೂಪವಾದ) ಕಂಚೀ ಕ್ಷೇತ್ರವು. ಕೇವಲ ಇಪ್ಪತ್ನಾಲ್ಕು ಮೆಟ್ಟಿಲ ರೂಪವಾಗುಳ್ಳ ಪರ್ವತವು. ಇದಕ್ಕೂ ಅಲ್ಲಿ ಹಸ್ತಿಗಿರಿಯಂದೇ ಈಗಲೂ ಕರೆಯುತ್ತಾರೆ (ಕಂಚೀ ಮಹಾತ್ಮೆ). ಆದಿ ಮಧ್ಯ ಅಂತ್ಯ ಮೂರು ಭಾಗಗಳಲ್ಲಿಯೂ ಬ್ರಹ್ಮದೇವರು ಯಜ್ಞ ಮಾಡಿದ್ದಾರೆ ಮತ್ತು ಶ್ರೀ ನರಸಿಂಹರೂಪವೇ ಪ್ರಧಾನವಾಗುಳ್ಳ ಕ್ಷೇತ್ರವು. ಶ್ರೀಪಾದ ತೀರ್ಥ ತಟದಲ್ಲಿ ಮತ್ತು ಭವನಾಶಿನಿ ತೀರ್ಥ ತಟದಲ್ಲಿ, ಅನಂತ ಸರೋವರದ

(ಸರಸ್ವತೀ ರೂಪ) ತಟದಲ್ಲಿ ಯಜ್ಞ ಮಾಡಿ ನರಸಿಂಹ ದೇವರನ್ನು ಪ್ರತ್ಯಕ್ಷೀಕರಿಸಿಕೊಂಡು ಆದ್ಯಾಪಿ ತಾವೇ ಪೂಜಿಸುತ್ತಿದ್ದಾರೆ. ಆದಿ ಪರ್ವತವಾದ ಕರಿಗಿರಿಯಲ್ಲಿ ಶ್ರೀರಾಮ, ಶ್ರೀನಿವಾಸ, ರಂಗನಾಥ, ಕೇಶವ, ಈ ನಾಲ್ಕು ರೂಪಗಳಿಂದ ಅಭಿವ್ಯಕ್ತನಾಗಿದ್ದರೆ, ಮಧ್ಯಪರ್ವತದವಾದ ಸಿಂಹಾದ್ರಿ (ಅಹೋಬಲ) ಯಲ್ಲಿಯೂ ಶ್ರೀರಾಮ, ಶ್ರೀನಿವಾಸ, ಪರಶುರಾಮ,ವರಾಹ ರೂಪಗಳಿಂದ ಕಂಗೊಳಿಸಿದ್ದಾನೆ. ಅಂತ್ಯಭಾಗವಾದ ಕಂಚೀ ಕ್ಷೇತ್ರದಲ್ಲಿಯೂ (ಹಸ್ತಿಗಿರಿ) ಶ್ರೀರಾಮ, ಶ್ರೀನಿವಾಸ, ವರದರಾಜ, ವೇಣುಗೋಪಾಲ ರೂಪಗಳಿಂದ ಕಂಗೊಳಿಸಿದ್ದಾನೆ. ಆದಿಪರ್ವತವಾದ ಕರಿಗಿರಿಯಲ್ಲಿರುವಂತಯೇ ಮೂರು ಭಾಗಗಳಲ್ಲಿಯೂ ಶುಕಾಚಾರ್ಯರು ವಾಸವಾಗಿದ್ದಾರೆ. ರುದ್ರದೇವರು ಆದಿಯಲ್ಲಿ ಗಂಗಾಧರೇಶ್ವರ, ಅಗಸ್ತ್ಯೇಶ್ವರ, ರಾಮೇಶ್ವರ, ಭೀಮೇಶ್ವರ ಎಂಬ ನಾಲ್ಕು ರೂಪಗಳಿಂದ ಸೇವಿಸಿದರೆ, ಮಧ್ಯಭಾಗವಾದ ಸಿಂಹಾದ್ರಿಯಲ್ಲಿಯೂ ಶ್ರೀಮಲ್ಲಿಕಾರ್ಜುನ, ಕಪಿಲೇಶ್ವರ, ಕಾಳಹಸ್ತೇಶ್ವರ, ಭೀಮೇಶ್ವರ ಎಂಬ ನಾಲ್ಕು ರೂಪಗಳಿಂದ ಸೇವಿಸಿದ್ದಾರೆ. ಅಂತ್ಯಭಾಗವಾದ ಕಂಚೀ ಕ್ಷೇತ್ರದಲ್ಲಿಯೂ ಏಕಾಮ್ರೇಶ್ವರ, ಅಗಸ್ತ್ಯೇಶ್ವರ, ಜಂಬುಕೇಶ್ವರ, ವಾಮೇಶ್ವರ ಎಂಬ ನಾಲ್ಕು ರೂಪಗಳಿಂದ ಸೇವಿಸಿದ್ದಾರೆ. ಆದಿಭಾಗ ಕರಿಗಿರಿಯಲ್ಲಿ ನರಸಿಂಹನು ತನ್ನ ರೂಪದಲ್ಲಿಯೇ ನಾಲ್ಕು ಕಡೆಗಳಲ್ಲಿ ವ್ಯಕ್ತನಾಗಿದ್ದಾನೆ. ಮಧ್ಯಭಾಗವಾದ ಅಹೋಬಲದಲ್ಲಿ ಒಂಬತ್ತು ರೂಪಗಳಿಂದ ವ್ಯಕ್ತನಾಗಿದ್ದಾನೆ. ಅಂತ್ಯಭಾಗವಾದ ಕಂಚೀ ಕ್ಷೇತ್ರಕ್ಕೆ ಸೇರಿದ ವ್ಯೂಹದಲ್ಲಿ ನಾಲ್ಕು ಕಡೆಗಳಲ್ಲಿ ವ್ಯಕ್ತನಾಗಿದ್ದಾನೆ. ಈ ಪರ್ವತಕ್ಕೆ ನೂರಾರು ಪರ್ವತ ಶ್ರೇಣಿಗಳು ಸೇರಿವೆಯಾದ್ದರಿಂದಲೂ ಸಮೂಹ ಪರ್ವತವೆಂದೂ ಕರೆದಿದ್ದಾರೆ.

ಶ್ರೀ ಗುಹ್ಯಾದ್ರಿ (ಭವಮೋಚನಾದ್ರಿ)

ಈ ಪರ್ವತದಲ್ಲಿ ಬ್ರಹ್ಮದೇವರಿಂದ ಮೊದಲ್ಗೊಂಡು ಎಲ್ಲ ದೇವತೆಗಳು ನಿತ್ಯ ವಾಸವಾಗಿದ್ದಾರೆ. ಅವರವರ ಉಪಾಸನೆ ಮಾಡುತ್ತಿದ್ದಾರೆ. ಇದು ರಹಸ್ಯವು. ಈ ಪರ್ವತದಲ್ಲಿರುವ ತೀರ್ಥಗಳು ಸಹ ಗುಪ್ತವಾಗಿರುತ್ತವೆ. ಮೇಲ್ನೋಟಕ್ಕೆ ಕೇವಲ ಭಾವಿ, ಕುಂಡಗಳಂತೆ ಕಾಣುತ್ತವೆ. ಕೆಲವು ಬತ್ತಿಹೋಗಿರುವಂತೆ ಕಾಣುತ್ತವೆ. ಕೆಲವು ಮಳೆಗಾಲದಲ್ಲಿ ಮಾತ್ರ ಕಾಣಿಸುತ್ತವೆ. ಮಹಿಮಾಯುಕ್ತವಾಗಿ ಕಾಣಬರುವುದಿಲ್ಲ. ಇನ್ನು ತೀರ್ಥಾಭಿಮಾನಿಗಳ ಸ್ಮರಣೆಯಂತೂ ಗುಹ್ಯವೇ ಸರಿ.

ವಕ್ಷ್ಯಾಮಿಗೋಪ್ಯಂ ಸುಖದಂ ಶ್ರವಣಾದ್ರೋಮಹರ್ಷಣಮ್ ।

ಗಿರೇಸ್ತಸ್ಯ ಚ ಮಹಾತ್ಮ್ಯಂ ನಾರಸಿಂಹಸ್ಯ ವೈಭವಮ್ ॥
ಅಹಂ ಪೂರ್ವಂ ಮಯಾಭೂಪ ಬ್ರಹ್ಮಣಾಂಚ ಶ್ರುತಂ ಮಹತ್ ।
ಗಿರೇಸ್ತಸ್ಯ ತೀರ್ಥಾನಿ ಮಂದಭಾಗ್ಯೈರ್ನದೃಶ್ಯತೇ ॥ (ಬ್ರಹ್ಮಾ. ಪು)

ಮಹಿಮಾಜ್ಞಾನಯುಕ್ತ ತೀರ್ಥಾದಿಜಲ ಸೇವನೆಯು ಮತ್ತು ಗಿರಿಯ ಅನೇಕ ಮಹಾತ್ಮೆಗಳು ಕೇವಲ ವಿಷ್ಣುಭಕ್ತರನ್ನು ಬಿಟ್ಟು, ಅವೈಷ್ಣವರಿಗೆ ಅಗೋಚರವಾದದ್ದು. ವಿಷ್ಣುಭಕ್ತರಿಗೆ ಗುಹ್ಯವಾಗಿ ಶ್ರೀಸ್ವಾಮಿಯ ಅನುಗ್ರಹದಿಂದ ತಿಳಿಯುತ್ತವೆ. ತಿಳಿದ ಗಿರಿಯ ಮಹಾತ್ಮೆಗಳನ್ನು ಗುಪ್ತವಾಗಿ ಭಕ್ತಿಯಿಂದ ಚಿಂತಿಸುವವರಿಗೆ ಲಿಂಗ ದೇಹ ಭಂಗವೇ ಫಲವು. ಅದಕ್ಕಾಗಿಯೇ ಈ ಪರ್ವತಕ್ಕೆ ಭವಮೋಚನಾದ್ರಿ ಎಂದೂ ವರ್ಣಿಸಿದ್ದಾರೆ. ಇಂತಹ ಅದ್ಭುತ ಶ್ರೀನಾರಸಿಂಹನ ಮಹಾತ್ಮೆಗಳನ್ನು

ಇತಿ ತೇ ಜ್ಞಾನಮಾಖ್ಯಾತಂ ಗುಹ್ಯಾದ್ಗುಹ್ಯತರಂ ಮಯಾ ।
ಇದಂ ತೇ ನಾತಪಸ್ಕಾಯ ನಾ ಭಕ್ತಾಯ ಕದಾಚನ ॥
ನ ಚ ಶುಶ್ರೂಷವೇ ವಾಚ್ಯಂ ನ ಚ ಮಾಂ ಯೋಽಭ್ಯಸೂಯತಿ ॥

ಎಂಬ ಗೀತೋಕ್ತಿಗಳಂತೆ ಅಯೋಗ್ಯರಿಗೆ, ಅನಧಿಕಾರಿಗಳಿಗೆ, ಅಜ್ಞಾನಿಗಳಿಗೆ, ಹರಿಗುರುಗಳನ್ನು ಸೇವಿಸದೇ ಇರುವವರಿಗೆ, ಶ್ರೀಹರಿಯನ್ನು ಹರಿಯ ಭಕ್ತರನ್ನೂ ದ್ವೇಷಮಾಡುವವರಿಗೆ ಎಂದಿಗೂ ಹೇಳಬಾರದು. ಹೇಳಿದರೆ ಹೇಳಿದವನು ನಾಶವಾಗುತ್ತಾನೆಂದೂ ವರ್ಣಿಸಿದ್ದಾರೆ. ಪ್ರಸಿದ್ಧ ಕ್ಷೇತ್ರಗಳ ಮಧ್ಯದಲ್ಲಿ ವ್ಯಕ್ತಾವ್ಯಕ್ತರೂಪದಿಂದ ಗುಹ್ಯವಾಗಿ ಧರೆಯೊಳಗಿಪ್ಪುದೇ ಭವಮೋಚನಾದ್ರಿ ಎಂದು ಕರೆಸಿಕೊಳ್ಳುವ ಕರಿಗಿರಿ ಪರ್ವತವು ಅರವತ್ತು ನಾಮಾಂತರಗಳಿಂದ ಆರು ಪುರಾಣಗಳಲ್ಲಿ ವರ್ಣಿಸಲ್ಪಟ್ಟಿದೆ.

ಪುರಾಣೋಕ್ತ ಕರಿಗಿರಿಯಲ್ಲಿರುವ ತೀರ್ಥಗಳು

"ತರತಿ ಅನೇನ ತೀರ್ಥಂ" ಯಾವುದನ್ನು ಆಶ್ರಯಿಸುವುದರಿಂದ ನಮ್ಮ ಪಾಪ, ಅಜ್ಞಾನ, ಸಂಸಾರವೇ ಮೊದಲಾದ ಅನಿಷ್ಟವನ್ನು ದಾಟಬಹುದೋ ಅದುವೇ ತೀರ್ಥವು. ಈ ಅಭಿಪ್ರಾಯದಿಂದಲೇ ತೀರ್ಥವೆಂಬ ಪದವನ್ನು ಬಹುವ್ಯಾಪಕವಾಗಿ ಬಳಸಲಾಗಿದೆ. ಅಥಏವ ತೀರ್ಥವೆಂದರೆ ಪವಿತ್ರಜಲ, ಪುಷ್ಕರಣಿಗಳು, ನದಿ, ಸಾಗರ ಕೊನೆಗೆ ಶಾಸ್ತ್ರವೆಂದೂ ಅರ್ಥೈಸಿದ್ದಾರೆ. ಹಾಗೆಂದಮಾತ್ರಕ್ಕೆ ಕೇವಲ "ತೇ ಅನ್ಯೇ ಜಡಾತ್" ಎಂಬಂತೆ ಜಡಭೂತ ಜಲಾದಿಗಳಲ್ಲ.

ಯೋಽಸೌ ಸರ್ವಗತೋ ವಿಷ್ಣುಃ ಚಿತ್ಸ್ವರೂಪೋ ನಿರಂಜನಃ ।
ಸ ಏವ ದ್ರವರೂಪೇಣ ಗಂಗಾಂಬೋ ನಾತ್ರ ಸಂಶಯಃ ॥

ಎಂಬಂತೆ ತದ್ಗತ ದೇವತಾ ತದಂತರ್ಯಾಮಿ ಶ್ರೀಹರಿರೂಪ ತೀರ್ಥಪಾದನ ನಿತ್ಯ ಸನ್ನಿಧಾನವಿರುವುದೇ ಮಹಾತೀರ್ಥಗಳೆನಿಸುವವು.

ಯೇ ಪಿಬಂತಿ ಜಲಂ ತಸ್ಯಾಃ ಮನುಜಾ ಮನುಜೇಶ್ವರಃ ।
ಪ್ರಾಯೋ ಭಕ್ತ್ಯಾ ಭವಿಷ್ಯಂತಿ ವಾಸುದೇವೇಽಮಲಾಶಯಾಃ ॥
ಪಾನೇನಾಽಪ್ಯವಗಾಹನೇನ ಮನಸಾಧ್ಯಾನೇನ ಗಾನೇನ ವಾ ।

ಎಂಬ ಪ್ರಮಾಣಗಳಂತೆ ಗಂಗಾದಿ ಸರ್ವನದಿಗಳ ಮತ್ತು ಮಹಾತೀರ್ಥಗಳ ಜಲವನ್ನು ಯಾರು ಕುಡಿಯುತ್ತಾರೋ, ತೀರ್ಥಗಳಲ್ಲಿ ಮೀಯ್ಯುತ್ತಾರೋ, ಮನಸ್ಸಿನಲ್ಲಿ ಧ್ಯಾನಿಸುತ್ತಾರೋ, ಕೊನೆಗೆ ಗಾನವನ್ನಾದರೂ ಮಾಡುತ್ತರೋ ಅಂತಹ ಭಕ್ತರಿಗೆ ವಿಷ್ಣುಭಕ್ತಿಯು ಹೆಚ್ಚುತ್ತದೆ. ಅಂತ್ಯದಲ್ಲಿ ವಿಷ್ಣುಲೋಕವೇ ಪ್ರಾಪ್ತಿಯಾಗುತ್ತದೆ.

ಕರಿಗಿರೌ ನ ಹಿ ತತ್ ಸ್ಥಾನಂ ಯತ್ರ ತೀರ್ಥಂ ನ ವಿದ್ಯತೇ

ಕರಿಗಿರಿಯಲ್ಲಿ ತೀರ್ಥವಿಲ್ಲದ ಸ್ಥಾನವೇ ಇಲ್ಲವೆಂದು, ತೀರ್ಥಪಾದನ ರೂಪವೇ ಶ್ರೀನರಸಿಂಹನ ರೂಪವೆಂದೂ ವರ್ಣಿಸಿದ್ದಾರೆ.

ನವಷಷ್ಠಿಕೋಟಿ ತೀರ್ಥಾನಿ ಪುಣ್ಯಾನ್ಯತ್ರ ನಗೋತ್ತಮೇ ।
ಮುಕ್ತಿದಾಽನ್ಯತ್ರ ನವೈವ ॥

ತತ್ತೀರ್ಥ ದರ್ಶನಾದೇವ ಮುಕ್ತಿಃ ಪುಂಸಾಂ ಕರೇ ಸ್ಥಿತಾ ॥ (ಬ್ರ.ವಿ. ಪು.)

ಈ ಕರಿಗಿರಿ ಪರ್ವತದಲ್ಲಿ ತೊಂಬತ್ತಾರು ಕೋಟಿ ಮಹಾತೀರ್ಥಗಳು ವ್ಯಕ್ತಾऽವ್ಯಕ್ತ ರೂಪದಲ್ಲಿವೆ. ಅವುಗಳಲ್ಲಿ ವ್ಯಕ್ತವಾಗಿ ಮೂವತ್ತು ತೀರ್ಥಗಳು ಇವೆ. ಅದರಲ್ಲಿ ಒಂಬತ್ತು ತೀರ್ಥಗಳು "ಸದ್ಯಃ ಕೈವಲ್ಯದಾಯಕಾಃ" ಎಂಬಂತೆ ಮೋಕ್ಷಪ್ರದವಾಗಿವೆ. ಇದನ್ನೇ ಪುರಂದರದಾಸರೂ ಕೂಡ ತಮ್ಮ ಪದ್ಯದಲ್ಲಿ

ಹರಿದ್ರವ ರೂಪದಲಿ ಸಿರಿಪಾದ ತೀರ್ಥದಲಿ ।
ನಿರುತದಲಿ ಇಪ್ಪ ತನ್ನಾಮಕನು ತಾನಾಗಿ ।
ಹತ್ತು ಒಂಬತ್ತು ಗುಣಿಸಿ ಮೇಲಾರು ಕೋಟಿ ತೀರ್ಥ ।
ನಿರುತ ವಾಸವುಂಟು ಈ ಕರಿ ಭೂದರಾದಲ್ಲಿ ।
ನರರು ಮಿಂದು ಗೋತ್ರರುಗಳ ಉದ್ಧರಿಸೆಂದು ।
ಕಡು ಸ್ವರದಲಿ ಪುರಂಧರ ವಿಠಲನೆಂದು ಕರೆಯೇ ।
ಕರಿವರದ ಕರಪಿಡಿದು ಕರೆದೊಯ್ವ ಮುಕುತಿಗೆ ॥

ಈ ರೀತಿಯಾಗಿ ಪುರಾಣಾರ್ಥಗಳನ್ನೇ ವರ್ಣಿಸಿದ್ದಾರೆ. ವ್ಯಕ್ತವಾದ ಮೂವತ್ತು ತೀರ್ಥಗಳು ಕ್ರಮವಾಗಿ:

(೧) ಶ್ರೀಪಾದ ತೀರ್ಥ (ಸ್ವಾಮಿ ಪುಷ್ಕರಣಿ, ಗುಹ್ಯತೀರ್ಥ, ಪಾದಾರವಿಂದ ತೀರ್ಥ) (೨) ಶ್ರೀ ನರಸಿಂಹ ತೀರ್ಥ (೩) ಪರಾಶರ ತೀರ್ಥ (೪) ಇಂದ್ರ ತೀರ್ಥ (೫) ಕಾಶೀ ತೀರ್ಥ (೬) ದೂರ್ವಾಸ ತೀರ್ಥ (೭) ಅನಂತ ತೀರ್ಥ (೮) ಬ್ರಹ್ಮ ಕುಂಡ (೯) ವೃಷಭ ತೀರ್ಥ (೧೦) ಚಕ್ರತೀರ್ಥ (ಸುದರ್ಶನ ತೀರ್ಥ) (೧೧) ಗಜೇಂದ್ರ ತೀರ್ಥ (೧೨) ಶ್ರೀರಾಮ ತೀರ್ಥ (೧೩) ಧನಸ್ಸು ತೀರ್ಥ (೧೪) ನಾಮದ ಚಿಲುಮೆ (೧೫) ಜಯ–ಮಂಗಳಾ (೧೬) ಶುಕತೀರ್ಥ (೧೭) ಪಾಂಡು ತೀರ್ಥ (೧೮) ಮುಕ್ತಿ ಸರೋವರ (ಗಜಾಗೊಂಡ್ಲ) (೧೯) ಚಿತ್ರಾವತಿ (೨೦) ಪಿನಾಕಿನೀ (೨೧) ಪಾಪಘ್ನಿ (೨೨) ವೇದಾವತಿ (೨೩) ಕೋಹಲತೀರ್ಥ (೨೪) ಮೌದ್ಗಲ್ಯ ತೀರ್ಥ (೨೫) ಪಾತಾಳಗಂಗಾ (೨೬) ಋಣಮೋಚನ ತೀರ್ಥ (೨೭) ಅಗ್ನಿತೀರ್ಥ (೨೮) ಮೈತ್ರೇಯ ತೀರ್ಥ (೨೯) ಶೇಷತೀರ್ಥ (೩೦) ಜಾಬಾಲಿ ತೀರ್ಥ.

ಗಂಗಾದಿ ಸರ್ವ ತೀರ್ಥಾನಾಂ ಜನ್ಮಭೂಮಿರಿತಿ ಶ್ರುತಾ ॥ (ಸ್ಕಾಂ. ಪು)
ಶ್ರೀಪಾದತೀರ್ಥ ತುಲ್ಯಂ ಬ್ರಹ್ಮಾಂಡೇ ನವಿದ್ಯತೇ ॥ (ವಿಷ್ಣು.ಮಾ. ಪು.)
ಗಿರೇಸ್ತಸ್ಯ ತೀರ್ಥಾನಿ ಮಂದಭಾಗ್ಯೈರ್ನದೃಶ್ಯತೇ ॥ (ಬ್ರಹ್ಮಾ. ಪು)
ಶ್ರೀಪಾದತೀರ್ಥೇ ಸ್ನಾತ್ವಾಚ ಪೀತ್ವಾ ಚ ನರೋಹತ್ಯಾದ್ವ್ಯಪೋಹತಿ ॥
ನೃಸಿಂಹತೀರ್ಥೇ ಶ್ರೀಪಾದೇ ಸ್ನಾತಾನಾಂ ಪುಣ್ಯಕರ್ಮಣಾಮ್ ।
ಗಂಗಾಯಾಂ ಕೋಟಿವಾರಂತು ಪ್ರೋಕ್ತಂ ಯನ್ಮಜ್ಜನೇನ ತು ॥
ತತ್ಫಲಂ ಸಮವಾಪ್ನೋತಿ ನಾತ್ರಕಾರ್ಯಾ ವಿಚಾರಣಾ ॥ (ಬ್ರಹ್ಮಾ. ಪು.)
ಪಾದ ತೀರ್ಥೇ ಸದಾ ಬ್ರಹ್ಮಾ ಸ್ನಾತ್ವಾದೇವಂ ಜನಾರ್ಧನಮ್ ।
ಪೂಜಯಾಮಾಸ ಹಂಸೋಕ್ತೈಃ ಪಾಂಚರಾತ್ರಗಮ್ಯೈರ್ಹರಿಮ್ ॥
ಬ್ರಹ್ಮಘ್ನಶ್ಚ ಕೃತಘ್ನಶ್ಚ ಭ್ರೂಣಹಾ ಗುರುತಲ್ಪಗಃ ।
ಸದ್ಯಃ ಪಾಪವಿನಿರ್ಮುಕ್ತೋ ಯಾತಿ ವಿಷ್ಣೋಃಪರಂ ಪದಮ್ ॥ (ಬ್ರ.ಪು.)

೧) ಸಾಕ್ಷಾತ್ ಶ್ರೀಮನ್ನಾರಾಯಣನಿಂದ ಸೃಷ್ಟಿಯಾದ ಮಹಾತೀರ್ಥಗಳ ಮಧ್ಯೆ ಪ್ರಥಮ ತೀರ್ಥವೇ ಶ್ರೀಪಾದ ತೀರ್ಥವು. ಇದು ತೀರ್ಥ ಪಾದನಾದ ಶ್ರೀ ಹರಿಯ ರೂಪವೇ ಆಗಿದೆ. (ನೀರಿನ ರೂಪ ಮತ್ತು ಅಭಿಮಾನಿಯೂ ಶ್ರೀ ಹರಿಯೆ) ಚತುರ್ಯುಗವನ್ನು ಕ್ರಮಿಸಿ, ಬ್ರಹ್ಮ ದೇವರೇ ಮೊದಲಾದ ಸಮಸ್ತ ದೇವತೆಗಳಿಂದಲೂ, ಗಂಧರ್ವ ಯಕ್ಷ ಕಿನ್ನರ ಕಿಂಪುರುಶ, ಪರಮಹಂಸರೇ ಮೊದಲಾದವರಿಂದಲೂ ದೇವತಾ ಸ್ತ್ರೀಯರುಗಳು, ಅಪ್ಸರ ಸ್ತ್ರೀಯರುಗಳಿಂದಲೂ ಸೇವಿಸಲ್ಪಟ್ಟಿದೆ. ಗುಪ್ತವಾಗಿ ಲಕ್ಷ್ಮೀನರಸಿಂಹನ ದೇವಾಗಾರದ ತಳದಲ್ಲಿ ಪರಿಶುದ್ಧ ಶೀತಲ ಸ್ಪಟಿಕ ಜಲಮಯವಾಗಿ ಬಿಂದು ಬಿಂದುವಾಗಿ ಧುಮುಕುತ್ತ, ಭಕ್ತರ ನರಹತ್ಯೆ ಮೊದಲಾದ ಭಯಾನಕಪಾಪ ಸಮೂಹಗಳನ್ನು ಸುಡುವುದಲ್ಲದೇ ಕುಷ್ಠಶ್ವೇತೋರುಗುಲ್ಮ ಕ್ಷಯಕಠಿನತರ ವ್ಯಾಧಿಗಳನ್ನು ಪರಿಹರಿಸುತ್ತಾ, ಜ್ಞಾನೋದಯವನ್ನು ಮಾಡಿಸಿ ಕೈವಲ್ಯಪ್ರದವಾಗಿ ಇಂದಿಗೂ ಮಾನವ ಮಾತ್ರದವರಿಗೂ ವ್ಯಕ್ತವಗಿರುವ ತೀರ್ಥವೇ ಶ್ರೀಪಾದ ತೀರ್ಥವು. ಇದರಲ್ಲಿ ತೊಂಬತ್ತಾರು ಕೋಟಿ ತೀರ್ಥಗಳ ನಿತ್ಯ ಸನ್ನಿಧಾನವೇ ಉಂಟು. ಮಂದ ಭಾಗ್ಯರಿಗೆ ಈ ತೀರ್ಥ ದರ್ಶನವೇ ಇಲ್ಲವೆಂದು ವರ್ಣಿಸಿದ್ದಾರೆ. ಒಮ್ಮೆ ಮಾಡಿದ ಭಕ್ತಿಯುಕ್ತ ಅನುಸಂಧಾನದ ಸ್ನಾನವು ಗಂಗೆಯ ಕೋಟಿ ಸ್ನಾನಕ್ಕೆ ಸಮವೆಂದು ಶ್ರೀ ವ್ಯಾಸರೇ

ವರ್ಣಿಸಿದ್ದಾರೆ. "ನಂಬಿ ಕೆಟ್ಟವರಿಲ್ಲವೋ ರಂಗಯ್ಯನ ನಂಬದೆ ಕೆಟ್ಟರೆ ಕೆಡಲಿ" ಎಂಬ ದಾಸರ ಪದವನ್ನು ಸ್ಮರಿಸಬಹುದು. ನಂಬಿಕೆಯು ಜನ್ಮಾಂತರ ಸಾಧನೆಯ ಫಲವಷ್ಟೆ? ಈ ತೀರ್ಥ ತಟದಲ್ಲಿ ಮಾಡುವ ಮಹಾ ದಾನಾದಿಗಳ ಫಲವಂತು ವರ್ಣಿಸಲು ಬ್ರಹ್ಮದೇವರಿಗೂ ಸಾಧ್ಯವಿಲ್ಲವೆಂದು ಉಚ್ಛ ದೃಷ್ಟಾಂತವನ್ನೇ ಕೊಟ್ಟಿದ್ದಾರೆ. ಇಂದಿಗೂ ಬ್ರಹ್ಮದೇವರು ಈ ತೀರ್ಥದಲ್ಲಿ ಸ್ನಾನ ಮಾಡಿ, ನಿತ್ಯವೂ ಜೀವರ ಜನನ- ಮರಣವನ್ನು ನಾಶ ಮಾಡುವ ಅಥಯೇವ ಜನಾರ್ಧನನೆಂದು ಕರೆಸಿಕೊಳ್ಳುವ ಲಕ್ಷ್ಮೀನರಸಿಂಹನನ್ನು ಪಂಚರಾತ್ರಾಗಮದ ಪುಷ್ಕರ ಸಂಹಿತೆಯಿಂದ ಪೂಜಿಸುತ್ತಿದ್ದಾರೆಂದು ಪುರಾಣದಲ್ಲಿ ವರ್ಣಿಸಿದ್ದಾರೆ.

೨) ಈ ಪಾದತೀರ್ಥ ಜಲವನ್ನು ಬ್ರಹ್ಮದೇವರು ತಮ್ಮ ಕಮಂಡಲುವಿನಲ್ಲಿ ತುಂಬಿಕೊಂಡು ಲಕ್ಷ್ಮೀನರಸಿಂಹನಿಗೆ ಅಭಿಷೇಕ ಮಾಡಿದಾಗ, ಸಮಸ್ತ ಅಭಿಷೇಕ ಜಲಧಾರೆಯು ಪಾದತೀರ್ಥಕ್ಕೆ ಇಳಿಯಿತು. ನಂತರ ಸ್ವಾಮಿಯು ತನ್ನ ಜ್ಞಾನಾನಂದಮಯವಾದ ಪಾದವನ್ನು ಈ ತೀರ್ಥದಲ್ಲಿ ಇಳಿಬಿಟ್ಟನು. ಇದರಿಂದ ಪಾದತೀರ್ಥವು ದೇವಗಾರದಿಂದ ಗುಪ್ತವಾಗಿ ಹೊರಚಿಮ್ಮಿದಾಗ ದೇವತೆಗಳಿಂದ ಶ್ರೀನರಸಿಂಹ ತೀರ್ಥವೆಂದು ಹರ್ಷೋದ್ಗಾರ ಮಾಡಲ್ಪಟ್ಟಿತು. ಅಂದಿನಿಂದ ಇದಕ್ಕೆ ಈ ಹೆಸರು ಬಂತು.

ಬ್ರಹ್ಮದೇವರಿಂದ ಆಜ್ಞಾಪಿಸಲ್ಪಟ್ಟ ಶ್ರೀ ಪರಾಶರ ಋಷಿಗಳು ಗೌತಮ, ಭರದ್ವಾಜ, ಕಶ್ಯಪ, ವಸಿಷ್ಠ, ಅತ್ರಿ, ವಿಶ್ವಾಮಿತ್ರರೇ ಮೊದಲಾದ ಸಮಸ್ತ ಋಷಿಮಂಡಲದಿಂದ ಕೂಡಿ, ಸ್ನಾನಾದಿಗಳನ್ನು ಮಾಡಿ, ಸಾವಿರ ವರ್ಷ ತಪಸ್ಸನ್ನಾಚರಿಸಿದರು. ತುಷ್ಠಿಗೊಂಡ ಶ್ರೀ ನರಹರಿ ವರವನ್ನು ಬೇಡು ಎನ್ನಲು, ಪರಾಶರರು ಸ್ತೋತ್ರ ಮಾಡಿ, ನೀನು ನನಗೆ ಪುತ್ರಭಾವವನ್ನು ಪ್ರಸಾದಿಸು ಎಂದರು. ನರಹರಿಯು ಹಾಗೆಯೇ ಆಗಲಿ ಆದರೆ ಮುಂದೆ ಗೌತಮರ ಶಾಪದಿಂದ ಋಷಿ ಮುನಿಗಳ ಜ್ಞಾನ ಲುಪ್ತವಾಗುತ್ತದೆ. ಆಗ ಸತ್ಯವತೀ ದೇವಿಯರನ್ನು ನಿಮಿತ್ತ ಮಾಡಿ ನಿನ್ನಲ್ಲಿ ಅವತರಿಸುತ್ತೇನೆ ಎಂದು ಹೇಳಿದನು. ಶ್ರೀ ವೇದವ್ಯಾಸರ ಅವತಾರಕ್ಕೆ ಕಾರಣವಾದ ತೀರ್ಥಕ್ಕೆ ಶ್ರೀಹರಿ ಪರಾಶರ ತೀರ್ಥವೆಂದು ಸ್ವತಃ ತಾನೇ ಕರೆದನು. ಈ ತೀರ್ಥದಲ್ಲಿ ಇಂದ್ರದೇವರು ತಮ್ಮ ಇಷ್ಟಾರ್ಥಕ್ಕಾಗಿಯೂ ಮತ್ತು ತ್ರಿಲೋಕದ ಹಿತಕ್ಕಾಗಿಯೂ ಮಿಂದು ತಪಸ್ಸಾನ್ನಾಚರಿಸಿ, ಶ್ರೀ ನರಹರಿಯನ್ನು ಪ್ರತ್ಯಕ್ಷಗೊಳಿಸಿಕೊಂಡ ಕಾರಣ ಇಂದ್ರತೀರ್ಥವೆನ್ನುವರು.

ದೂರ್ವಾಸರು ಸಾವಿರ ವರುಷ ತಪಸ್ಸನ್ನು ಮಾಡಿ, ಭೋಗಾ ನರಸಿಂಹ ಸ್ವಾಮಿಯನ್ನು ನೆಲೆಗೊಳಿಸಿದ್ದರಿಂದ ದೂರ್ವಾಸತೀರ್ಥವೆಂದೂ, ಅವರ ಶಾಪಕ್ಕೊಳಗಾದ ನಂದಿಕೇಶ್ವರನು ಈ ತೀರ್ಥದಲ್ಲಿ ಮಿಂದು ಶಾಪ ವಿಮೋಚನೆಗೊಳಗಾದ ಪ್ರಯುಕ್ತ ವೃಷಭ ತೀರ್ಥವೆಂದೂ ಹೆಸರಾಯಿತು.

೩) ಬ್ರಹ್ಮದೇವರ ಸೇವಕರಾದ, ದೇವಗಂಧರ್ವರಾದ, ಸತ್ಯಲೋಕದ ಗಾಯಕರಾದ ದೇವದತ್ತ-ಧನಂಜಯುರೆಂಬುವರು, ಬ್ರಹ್ಮ ಸಭೆಯಲ್ಲಿ ತಮ್ಮ ಗಾನ ಕಲಾ ನೈಪುಣ್ಯತೆಯನ್ನು ಪ್ರದರ್ಶಿಸುತ್ತಿರುವ ಕಾಲದಲ್ಲಿ, ಬ್ರಹ್ಮದೇವರ ಎದುರಿನಲ್ಲಿ ಬ್ರಹ್ಮಪುತ್ರರಾದ ಮಹಾ ಬ್ರಹ್ಮಜ್ಞಾನಿಗಳದ ಭೃಗು ಋಷಿಗಳನ್ನು ಮಧೋನ್ಮತ್ತರಾಗಿ ತೇಜೋವಧೆಯನ್ನು ಮಾಡಿದರು. ಇದ್ಸರಿಂದ ಕೋಪಗೊಂಡ ಋಷಿಗಳು ಪರ್ವತ ಮತ್ತು ಆನೆಯಾಗಿ ಹುಟ್ಟಿರೆಂದು ಶಾಪವನ್ನು ಹಾಗೆಯೇ ಶಾಪ ವಿಮೋಚನೆಯ ಉಪಾಯವನ್ನೂ ತಿಳಿಸಿದರು. ಆದರಂತೆ ಪರ್ವತದಲ್ಲಿ ಗಜದೇಹವನು ಧರಿಸಿ ಸಂಚರಿಸುತ್ತಿದ್ದರು. ತನಗರಿವಿಲ್ಲದೇ ಒಂದುದಿನ ಶ್ರೀನರಸಿಂಹತೀರ್ಥಕ್ಕೆ ಜಾರಿ ಮೇಲಿಂದ ಬಿದ್ದ ಗಜ ದೇಹಧಾರಿ ದೇವದತ್ತನಿಗೆ ಪೂರ್ವ ಗಂಧರ್ವ ರೂಪ ಬಂದಿತು. ಈ ಕಾರಣದಿಂದ ಇದಕ್ಕೆ ಗಜೇಂದ್ರ ತೀರ್ಥವೆಂದು ಹೆಸರಾಯಿತು. ದೇವದತ್ತ ತೀರ್ಥವೆಂದೂ ಕರೆಯುವರು. ಶ್ರೀಸೀತಾಸಮೇತ ರಾಮಚಂದ್ರ ದೇವರು ಈ ಪರ್ವತಕ್ಕೆ ಬಂದು ಪಾದ ತೀರ್ಥದಲ್ಲಿ ಮಿಂದು, ನರಹರಿಯನ್ನು ಪೂಜಿಸಿ, ವರವನ್ನು ಪಡೆದಿದ್ದಾರೆ. ಆ ಸಮಯದಲ್ಲಿ ಸೀತಾದೇವಿಯರಿಂದ ಪ್ರಾರ್ಥಿಸಲ್ಪಟ್ಟ ರಾಮನು ತನ್ನ ಧನಿಸ್ಸಿನ ತುದಿಯಿಂದ ಭೂಮಿಯನ್ನು ಧನಸ್ಸಾಕಾರವಾಗಿ ಸೀಳಿ ಗಂಗೆಯನ್ನು ಉತ್ಪತ್ತಿ ಮಾಡಿದನು. ಇದೇ ಶ್ರೀ ರಾಮತೀರ್ಥ (ಧನಸ್ಸು ತೀರ್ಥ).

ಈ ತೀರ್ಥದಲ್ಲಿ ಸೀತಾಸಮೇತ ಶ್ರೀರಾಮನು ಸ್ನಾನ ಮಾಡಿದನು. ಈ ತೀರ್ಥವು ಎರಡನೇ ಶೃಂಗದಲ್ಲಿದೆ. ಈ ತೀರ್ಥದಲ್ಲಿ ಧನಂಜಯನು ಮಿಂದು ತನ್ನ ಗಜದೇಹದಿಂದ ಶಾಪ ವಿಮೋಚನೆಯನ್ನು ಹೊಂದಿ ಶ್ರೀನರಹರಿ, ರಾಮಚಂದ್ರನನ್ನು ಸ್ತೋತ್ರ ಮಾಡಿ ತನ್ನ ಲೋಕಕ್ಕೆ ತೆರಳಿದನು. ಅಂದಿನಿಂದ ಧನಂಜಯ ತೀರ್ಥವೆಂದೂ ಕರೆಯುವರು. ಸೀತಾರಾಮರ ವಿಹಾರ ಸಮಯದಲ್ಲಿ ಸೀತಾದೇವಿಗೆ ತಿಲಕವಿಟ್ಟುಕೊಳ್ಳಲು ಜಲದ ಸಹಾಯಕ್ಕಾಗಿ ಶ್ರೀರಾಮನನ್ನು ಪ್ರಾರ್ಥಿಸಿದಾಗ, ತನ್ನ ಧನಸ್ಸಿನ ತುದಿಯಿಂದ ಶಿಖರದ ಮೂರನೇ ಶೃಂಗವನ್ನು ಕುಕ್ಕಿದಾಗ ಭೂಗತ ಪಾತಾಳಗಂಗೆಯು ಮೇಲಕ್ಕೆ ಚಿಮ್ಮಿದಳು.

ಇದಕ್ಕೆ "ನಾಮದ ಚಿಲುಮೆ" ಎನ್ನುವರು. ಇದನ್ನು ಈಗಲೂ ಪ್ರತ್ಯಕ್ಷವಾಗಿ ನೋಡಬಹುದು.

ಏಕಾದಶಿ ವ್ರತಸ್ಥನಾದ ಪರಮ ವಿಷ್ಣು ಭಕ್ತನಾದ ಅಂಬರೀಷ ಮಹಾರಾಜರಲ್ಲಿ ವಿಶೇಷ ವಿಷ್ಣುವಿನ ಸನ್ನಿಧ್ಯವಿರುವುದನ್ನು ಲೆಕ್ಕಿಸದೇ ದೂರ್ವಾಸರು, ಅಲ್ಪ ದ್ವಾದಶೀ ಪಾರಣೆಯ ನಿಮಿತ್ತ ಅಂಬರೀಷರಿಗೆ ಶಾಪವನ್ನು ಕೊಟ್ಟರು. ನಂತರ ಆ ಶಾಪವು ವ್ರತಸ್ಥನಾದ ಅಂಬರೀಷನಿಗಲ್ಲ ಅವನಲಿದ್ದ ವಿಶೇಷ ಹರಿಯಲ್ಲಿ ಮಾಡಿದ ದ್ರೋಹ ರೂಪವಾದ ಪಾಪವೆಂಬ ಸ್ಮೃತಿಯು ಉಂಟಾಗಿ ಮಹಾ ಪರಿತಾಪ ಉಂಟಾಗಲು, ತತ್ಪಾಪ ನಿವೃತ್ತಿಗೆ ಹಸ್ತಿಗಿರಿಯಲ್ಲಿರುವ ಶ್ರೀಪಾದತೀರ್ಥದಲ್ಲಿ ಸಾವಿರ ವರ್ಷ ಮಿಂದು ತಪಸ್ಸನ್ನಾಚರಿಸಿದರು. ಆಗ ಅವರ ಮನದಲ್ಲಿ ಹಿಮಾಲಯದ ಅಲಕನಂದಾ, ಸೀತಾ, ಇತ್ಯಾದಿ ರೂಪವಾದ ಗಂಗೆಯ ಸ್ನಾನ ಮಾಡಾಬೇಕೆಂದು ಆಸೆಯುಂಟಾಗಲು, ಹೇ! ದೂರ್ವಾಸ ಮುನಿಶ್ರೇಷ್ಠ ನೀನು ಗಂಗಾ ಸ್ನಾನಕ್ಕೆ ಹೋಗಬೇಡ. ನಾರಸಿಂಹನ ಸೇವೆಗೆ ಮೂಲಗಂಗಾ ದೇವಿಯೇ ಬರುತ್ತಿದ್ದಾಳೆ. ನಾಳೆ ನಿನಗೆ ಪ್ರತ್ಯಕ್ಷಳಾಗುವಳು, ಸಂಶಯಬೇಡವೆಂದು ಅಶರೀರವಾಣಿಯಾಯಿತು. ಅದರಂತೆ ಪ್ರತ್ಯಕ್ಷವಾದ ಗಂಗೆಯೇ ಕಾಶೀತೀರ್ಥವು.

ಇದೇ ಅಂಬರೀಷರಿಂದ ಪ್ರಯೋಗಿಸಲ್ಪಟ್ಟ ಚಕ್ರವು ದೂರ್ವಾಸರಿಂದ ಶಪಿಸಲ್ಪಟ್ಟು, ತೇಜೋರಹಿತರಾಗಿ ಹಸ್ತಿಗಿರಿಯನ್ನು ಸೇರಿ, ಶ್ರೀನರಹರಿ ತೀರ್ಥದಲ್ಲಿ ಮಿಂದು, ಸಾವಿರ ವರ್ಷ ತಪಸ್ಸನ್ನಾಚರಿಸಿ, ಶ್ರೀ ಹರಿಯಿಂದ ಅನುಗ್ರಹಿಸಲ್ಪಟ್ಟು ಶಾಪ ವಿಮೋಚನೆಯನ್ನು ಹೊಂದಿ, ಶ್ರೀ ಹರಿಯ ಹಸ್ತದಲ್ಲಿ ಐಕ್ಯವಾದನು. ಈ ಕಾರಣದಿಂದ ಸುದರ್ಶನ ತೀರ್ಥವೆಂದು ಹೆಸರಾಯಿತು. ಮೌದ್ಗಲ್ಯ ಋಷಿಗಳು ಈ ಕ್ಷೇತ್ರದಲ್ಲಿ ವಿಶೇಷ ತಪವನ್ನಾಚರಿಸಿ, ತೀರ್ಥರೂಪವನ್ನು ಹೊಂದಿದ್ದಾರೆ. ಶುಕಾಚಾರ್ಯರು ತಪಸ್ಸು ಮಾಡಿ, ಅನೇಕ ಋಷಿಗಳಿಗೆ ಈ ಪರ್ವತದಲ್ಲಿ ಶ್ರೀಮದ್ಭಾಗವತ ಮಹಾತ್ಮೆಯನ್ನು ಪಾನ ಮಾಡಿಸಿದ್ದಾರೆ. ಇದರಿಂದ ತುಷ್ಟಿಗೊಂಡ ನರಹರಿಯು ಇವರು ಸ್ನಾನ ಮಾಡಿದ ತೀರ್ಥಕ್ಕೆ ಶುಕತೀರ್ಥವೆಂದು ತಾನೇ ಕರೆದನು. ಈ ತೀರ್ಥ ಸೇವನೆಯಿಂದ ಭಾಗವತವೇ ಮೊದಲಾದ ಪುರಾಣಗಳ ಯಥಾರ್ಥ ಜ್ಞಾನವಾಗುವುದೆಂದೂ ವರ್ಣಿಸಿದ್ದಾರೆ.

ದಕ್ಷ ಪ್ರಜಾಪತಿಯ ಮಗಳಾದ ಜಯಾ ನಾಮಕ ದಕ್ಷ ಕನ್ಯೆಯು ತನ್ನ ಅಕ್ಕನಾದ

ಅಂಬಿಕೆಯನ್ನು ನೋಡಲು ಬಯಸಿ, ತಂದೆಯಿಂದ ಆಜ್ಞಾಪ್ತಳಾಗಿ, ಕರಿಗಿರಿ ಪರ್ವತಕ್ಕೆ ಒತ್ತು ಪರ್ವತವಾದ ಬೃಹತ್ ಲಿಂಗಾಕಾರವಾದ ಗಂಗಾಧರೇಶ್ವರನ್ನು ಸೇವಿಸುತ್ತಿರುವ ಅಂಬಿಕೆಯ ಸ್ಥಾನವಾದ ಪುಂಗವಾದ್ರಿಯನ್ನು (ಶಿವಗಂಗಾ ಕ್ಷೇತ್ರ) ಸೇರಿ ನದೀ ರೂಪವನ್ನು ತಾಳಿದಳು. ಅಲ್ಲಿ ಗಂಗಾಧರೇಶ್ವರನನ್ನು, ಅಂಬಿಕೆಯನ್ನು ಸೇವಿಸಿ, ರುದ್ರದೇವರ ಅನುಗ್ರಹದಿಂದ ಗುಪ್ತವಾಗಿ ಹರಿದು ಕರಿಗಿರಿ ಪರ್ವತವನ್ನು ಪ್ರದಕ್ಷಿಣೆ ಮಾಡಿ ಗುಪ್ತವಾಗಿ ನರಸಿಂಹನ ಗರ್ಭಗುಡಿಯನ್ನು ಪ್ರವೇಶಿಸಿ ಶ್ರೀ ಹರಿಯ ಎಡಪಾದವನ್ನು ಆಶ್ರಯಿಸಿದಳು. ಮಂಗಳಾ ಎಂಬ ಹೆಸರಿನ ಸಾಕ್ಷಾತ್ ಗಂಗೆಯ ರೂಪವು ವೈಕುಂಠದಲ್ಲಿ ಶ್ರೀ ಹರಿಯಿಂದ ಆಜ್ಞಾಪಿಸಲ್ಪಟ್ಟು ಈ ಪರ್ವತಕ್ಕೆ ಬಂದು ಸುತ್ತಲೂ ಪ್ರದಕ್ಷಿಣೆಯಾಕಾರವಾಗಿ ಗುಪ್ತವಾಗಿ ಹರಿದು ಲಕ್ಷ್ಮೀನರಸಿಂಹನ ದೇವಾಗಾರವನ್ನು ಸೇರಿ ಶ್ರೀಸ್ವಾಮಿಯ ಬಲಪಾದವನ್ನು ಆಶ್ರಯಿಸಿದಳು. ಇಬ್ಬರೂ ಪಾದತೀರ್ಥದಲ್ಲಿ ಬಿಂದು ಬಿಂದುಗಳಾಗಿ ಧುಮುಕಿ ಗುಪ್ತವಾಗಿ ಹರಿದು ಪರ್ವತದ ಹೊರಗೆ ಸಂಗಮವಾಗಿ, ಮುಂದೆ ನಂದಿಬೆಟ್ಟದಲ್ಲಿ ಹುಟ್ಟುವ ಶಿವನ ಜಟೆಯ ಗಂಗೆಯಾದ ಪಿನಾಕಿನೀ ನದಿಯನ್ನು ಸೇರಿರುವರು. ಜಯಾ, ಮಾಂಗಳಾ, ಪಿನಾಕಿನೀ ಈ ಮೂರು ನದಿಗಳ ಸಂಗಮದಲ್ಲಿ (ಹಿಂದೂಪುರದ ಬಳಿಯ ಪರಗಿ) ಮಾಡುವ ಪಿತೃಯಜ್ಞವು ಕೋಟಿ ಸಂಖ್ಯ ಗಯಾಶ್ರಾದ್ಧ ಸಮವೆಂದು ಪುರಾಣದಲ್ಲಿ ವರ್ಣಿಸಿದ್ದಾರೆ. ಇಲ್ಲಿ ಮಾಡುವ ಸಕೃತ್ ಸ್ನಾನವು ಕೋಟಿ ಗಂಗಾ ಸ್ನಾನಕ್ಕೆ ಸರಿತೂಗಲಾರದೆಂದೂ ಶ್ರೀ ವ್ಯಾಸರು ಹೇಳಿದ್ದಾರೆ. ಇಲ್ಲಿ ಕುಷ್ಠಾದಿ ಸಮಸ್ತ ರೋಗಗಳ ಪರಿಹಾರವಾದ ನೂರಾರು ಕಥೆಗಳನ್ನು ವರ್ಣಿಸಿದ್ದಾರೆ. ಇಂತಹ ವ್ಯಕ್ತಾಽವ್ಯಕ್ತ ತೀರ್ಥಗಳ ಸನ್ನಿಧಿಯಲ್ಲಿ

ದರ್ಶನಾದೇವ ತತ್ತೀರ್ಥಂ ಸರ್ವಾಽಘೌಘ ವಿನಾಶನಮ್ ।
ಸ್ನಾನೇ ಪಾನೇ ಕೃತೇ ತಸ್ಮಿನ್ ಜರಾಮರಣ ನಾಶನಮ್ ॥
ಸಕೃತ್ ಸ್ನಾತಸ್ಯತು ಫಲಂ ಜನಸ್ಯ ಶೃಣು ಸೂರ್ಯಜ ।
ವಾಜಪೇಯಾಶ್ವಮೇಧಾನಾಂ ಪುಷ್ಕಲಂ ಫಲಮಶ್ನುತೇ ॥

ಸ್ನಾನ, ಪಾನ, ದಾನ, ಪಾರಾಯಣವೇ ಮೊದಲಾದ ಕಾರ್ಯಗಳಿಗೆ ಅನಂತಫಲವು ಎಂಬುದಾಗಿಯೂ, ವಾಜಪೇಯಾಶ್ವಮೇಧಗಳ ಫಲವನ್ನೂ ಬ್ರಹ್ಮದೇವರು ಇಕ್ಷ್ವಾಕು ಮಹಾರಾಜರಿಗೆ ಹೇಳಿದ್ದಾರೆ. ಇಲ್ಲಿಯ ಶ್ರೀಲಕ್ಷ್ಮೀನರಸಿಂಹ ಸ್ವಾಮಿಯನ್ನು, ತೀರ್ಥಗಳನ್ನೂ, ಸೀತಾಸಮೇತ ಶ್ರೀರಾಮಚಂದ್ರದೇವರನ್ನು ಪೂಜಿಸಿ ಸೇವಿಸಿ ಲೋಕಕ್ಕೆ

ಇದರ ಮಹತ್ವವನ್ನು ತಿಳಿಸಿದ್ದಾರೆ. ಹಾಗೆಯೇ ಒಂದು ರೂಪದಿಂದ ಉಪಪರ್ವತವಾದ ಶ್ರೀ ರಾಮಾಚಲದಲ್ಲಿ (ಮಧುಗಿರಿ ಬೆಟ್ಟ) ಆದ್ಯಾಪಿ ನೆಲೆಸಿದ್ದಾರೆ. ಶ್ರೀಕೃಷ್ಣನು ಪಾಂಡವರ ಸಹಿತ ಬಂದು ಪೂಜಿಸಿ, ಕೇಶವ ರೂಪದಿಂದ ಕೇಶವಾಚಲದಲ್ಲಿ ನೆಲೆಸಿದ್ದಾನೆ. ಪಾಂಡವರು ಭೀಮಾಚಲದಲ್ಲಿ ಒಂದಂಶದಿಂದ ನೆಲೆಸಿದ್ದಾರೆ. ಶ್ರೀಭೂ ಸಮೇತನಾದ ಶ್ರೀನಿವಾಸನು ವೇಂಕಟಗಿರಿಯಿಂದ ಬಂದು ಪೂಜಿಸಿ, ತೀರ್ಥಗಳಲ್ಲಿ ಮಿಂದು ಒಂದು ರೂಪದಿಂದ ನಾರಸಿಂಹನಲ್ಲಿ ಪ್ರವೇಶಿಸಿ ಮತ್ತೊಂದು ರೂಪದಿಂದ ಚಿತ್ರಾವತೀ ನದೀ ತೀರದ ಕೂರ್ಮಾಚಲದಲ್ಲಿ (ಬಾಗೇಪಲ್ಲಿ) ನೆಲೆಸಿದ್ದಾನೆ. ಬ್ರಹ್ಮದೇವರು ಈ ಪರ್ವತದ ಆದಿ ಮಧ್ಯ ಅಂತ್ಯಗಳಲ್ಲಿ ಯಜ್ಞವನ್ನು ಮಾಡಿ ಶ್ರೀನರಸಿಂಹನನ್ನು ನೆಲೆಗೊಳಿಸಿದ್ದಾರೆ. ಆದಿಯಲ್ಲಿ ನರಸಿಂಹ, ಶ್ರೀರಾಮ, ಕೇಶವ, ಶ್ರೀನಿವಾಸ, ರಂಗನಾಥ ಎಂಬ ಐದುರೂಪಗಳಿಂದ ಅಭಿವ್ಯಕ್ತನಾಗಿದ್ದಾನೆ. ಮಧ್ಯಭಾಗದಲ್ಲಿಯೂ ಶ್ರೀ ನರಸಿಂಹ, ವರದರಾಜ, ಶ್ರೀನಿವಾಸ, ವೇಣುಗೋಪಾಲ, ತ್ರಿವಿಕ್ರಮ ರೂಪಗಳಿಂದ ಅಭಿವ್ಯಕ್ತನಾಗಿದ್ದಾನೆ. ಈ ಪರ್ವತದ ಮೂರು ಭಾಗಗಳಲ್ಲಿಯೂ (ಕರಿಗಿರಿ, ಅಹೋಬಲ, ಕಂಚಿ) ಬ್ರಹ್ಮದೇವರು ಶ್ರೀಸ್ವಾಮಿಗೆ ನಿತ್ಯದಲ್ಲಿಯೂ ಪೂಜೆಯನ್ನು ತಾವೇ ಮಾಡುತ್ತಾರೆ. ಇಕ್ಷ್ವಾಕು, ಸಗರ, ದಿಲೀಪ, ಅಂಬರೀಷ, ಪ್ರಹ್ಲಾದ, ಧೃವ, ನಿಮಿ, ನಳ, ನಹುಷ, ಯಯಾತಿ, ಪಾಂಡವರೇ ಮೊದಲಾದ ಸೂರ್ಯ ಚಂದ್ರ ವಂಶದ ಎಲ್ಲ ಚಕ್ರವರ್ತಿ ಶ್ರೇಷ್ಠರೂ, ಸಪ್ತಋಷಿಗಳೇ ಮೊದಲಾದ ಎಲ್ಲ ಋಷಿವರ್ಗದವರೂ ಈ ಪರ್ವತವನ್ನು ಭಕ್ತಿಯಿಂದ ಪೂಜಿಸಿದ್ದಾರೆ. ನಾಲ್ಕು ವರ್ಣದವರಿಗೂ ಇಂದಿಗೂ ಶ್ರೀನರಸಿಂಹನು ಕುಲಸ್ವಾಮಿಯಾಗಿದ್ದಾನೆ.

ಶ್ರೀ ಬ್ರಹ್ಮದೇವರು, ಶ್ರೀರಾಮಚಂದ್ರ, ಶ್ರೀನಿವಾಸ ಕೃತ ಸ್ತೋತ್ರಗಳು, ಪರಾಶರರೇ ಮೊದಲಾದ ಋಷಿಗಳು, ದೂರ್ವಾಸ, ದೇವದತ್ತ, ಧನಂಜಯ, ಸುದರ್ಶನ ದೇವತ ಮುಂತಾದವರುಗಳಿಂದ ಕೃತವಾದ ಭಕ್ತಿಯಿಂದ ವರ್ಣಿಸಲ್ಪಟ್ಟ ಶ್ರೀ ಲಕ್ಷ್ಮೀನರಸಿಂಹನ ಸ್ತೋತ್ರಗಳು ಬಹು ಶಾಸ್ತ್ರಾರ್ಥಗರ್ಭಿತವಾಗಿ, ಅಮೋಘ ಸಿದ್ಧಿ ಪ್ರದಾಯಕಗಳಾಗಿವೆ. ಆದರಲ್ಲೂ ವಿಶೇಷವಾಗಿ ಸುದರ್ಶನ ಕೃತ ನಾರಸಿಂಹನ ಸ್ತೋತ್ರವು ಸಕಲ ಯಕ್ಷ, ರಾಕ್ಷಸ, ಪಿಶಾಚ, ಭೂತ, ಪ್ರೇತ, ಭೇತಾಳಾದಿ ಸರ್ವ ದುಷ್ಟಶಕ್ತಿಗಳ ಅಭಿಚಾರಕ ನಿರ್ಮೂಲನಕ್ಕೆ ಪೂರ್ವದಿಂದಲೂ ಪ್ರಸಿದ್ಧಿಯಾಗಿದೆ.

ಶ್ರೀಸ್ವಾಮಿಯ ಆಜ್ಞೆಯಂತೆ ಬ್ರಹ್ಮದೇವರು ಸದಾಕಾಲದಲ್ಲಿಯೂ ಒಂದು ರೂಪದಿಂದ

ಇಲ್ಲಿಯೇ ನೆಲೆಸಿದ್ದಾರೆ. ಆದ್ದರಿಂದಲೇ ಇದು ಗುಹ್ಯ ಪರ್ವತವಾಗಿದೆ. ಬ್ರಹ್ಮದೇವರ ಆಜ್ಞೆಯಂತೆ ಕಶ್ಯಪರು, ಗೌತಮ, ಭಾರದ್ವಾಜ, ಅಗಸ್ತ್ಯ, ಋಷಶ್ರೃಂಗ ಎಂಬ ನಾಲ್ಕು ಪ್ರಧಾನ ಋತ್ವಿಕ್ಕುಗಳ ಸಮಕ್ಷಮದಲ್ಲಿ, ಸಮಸ್ತ ದೇವತೆಗಳ ಸಮ್ಮುಖದಲ್ಲಿ ಫಾಲ್ಗುಣ ಮಾಸದ ಶುಭಮುಹೂರ್ತದಲ್ಲಿ ಪುಣ್ಯಾಹ, ಕಂಕಣಬಂಧನ, ಅಂಕುರಾರ್ಪಣೆ, ನಡೆಸಿ, ಮೃಗಶೀರ್ಷಾ ನಕ್ಷತ್ರದಲ್ಲಿ ಧ್ವಜಾರೋಹಣೆ ಕಲ್ಯಾಣೋತ್ಸವವನ್ನು ಮಾಡುತ್ತಾರೆ. ಪೂರ್ವಫಲ್ಗುಣಿ ನಕ್ಷತ್ರದ ಸಿಂಹಲಗ್ನದಲ್ಲಿ, ಬ್ರಹ್ಮದೇವರರಿಂದ ಅಹ್ವಾನಿಸಲ್ಪಟ್ಟ ಶ್ರೀಲಕ್ಷ್ಮೀನರಸಿಂಹ ದೇವರು ವಜ್ರ ವೈಢೂರ್ಯಾದಿ ನವರತ್ನ ಖಚಿತ ಮಹಾರಥಾರೂಢರಾಗಿ ಜಗತ್ತನ್ನು ಮಂಗಳಮಯುವನ್ನಾಗಿ ಮಾಡಿದ್ದಾರೆ. ಹಸ್ತಾನಕ್ಷತ್ರದಲ್ಲಿ ಅವಭೃತ ಸ್ನಾನ ಇತ್ಯಾದಿ ಲೋಕ ಮಂಗಳಕರವಾದ ಉತ್ಸವವನ್ನು ಕಶ್ಯಪರು ಬ್ರಹ್ಮದೇವರ ನೇತೃತ್ವದಲ್ಲಿ ನಡೆಸಿ, ಸಮಸ್ತ ದೇವ, ಋಷಿ ಗಂಧರ್ವರನ್ನು ಸಾಂಶರಾದ ಪ್ರಯುಕ್ತ ಒಂದೊಂದು ರೂಪದಿಂದ ಈ ಪರ್ವತದಲ್ಲಿಯೇ ಅದ್ಯಾಪಿ ನೆಲೆಸಿರುವಂತೆ ಮಾಡಿದ್ದಾರೆ. ಬ್ರಹ್ಮದೇವರಿಂದ ಪ್ರಾರಂಭಿಸಲ್ಪಟ್ಟ ಈ ರಥೋತ್ಸವವು ಈಗಿನವರೆಗೂ ನಡೆಯುತ್ತಾ ಬಂದು ಮುಕ್ತಿ ಪ್ರದಾಯಕವಾಗಿದೆ.

ಹೀಗೆ ಸ್ಥೂಲರೂಪದಲ್ಲಿ ಅನೇಕ ಪುರಾಣಗಳಲ್ಲಿ ವರ್ಣಿಸಲ್ಪಟ್ಟ ಶ್ರೀವ್ಯಾಸರ ದಿವ್ಯವಾಣಿಯನ್ನು ಸಂಗ್ರಹಿಸಿ, ನಮ್ಮ ಪೂರ್ವಿಕರು ಕುಲಸ್ವಾಮಿಯಾದ ಶ್ರೀಕರಿಗಿರೀಶನನ್ನು ಸೇವಿಸಿ ಚಿಂತಿಸಿ ಉದ್ಧಾರವಾಗಿದ್ದಾರೆ. ಆ ಸಂಗ್ರಹವನ್ನು ಯಥಾಮತಿಯಾಗಿ ನಾನೂ ಚಿಂತಿಸಿ ನಿರೂಪಿಸಿದ್ದೇನೆ. ಜ್ಞಾನಿಗಳು ಪ್ರೀತರಾಗಲಿ. ದೋಷಗಳನ್ನು ಕ್ಷಮಿಸಲಿ ಎಂದು ಪ್ರಾರ್ಥಿಸುತ್ತಾ, ಅಸ್ಮದ್ಗುರು ಶ್ರೀ ಶ್ರೀ ೧೦೮ ಶ್ರೀ ಪರಮಹಂಸೇತ್ಯಾದಿ ಬಿರುದಾಂಕಿತರಾದ, ಶ್ರೀ ಮತ್ ದೇವೇಂದ್ರ ತೀರ್ಥ ಗುರುವಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀ ಕರಿಗಿರಿ ಲಕ್ಷ್ಮೀನರಸಿಂಹನ ಪಾದಾರವಿಂದದಲ್ಲಿ ಸಮರ್ಪಿಸುತ್ತಿದ್ದೇನೆ. ಸರ್ವರಿಗೂ ಶ್ರೀ ನರಸಿಂಹನು ಸನ್ಮಂಗಳವನ್ನುಂಟುಮಾಡಲಿ ಎಂದೂ ಪ್ರಾರ್ಥಿಸುತ್ತೇನೆ.

ಸಜ್ಜನರ ಪಾದರೇಣು
ವಿದ್ವಾನ್.ಶ್ರೀ.ಕೆ.ಎಲ್. ಪುಷ್ಕರಾಚಾರ್ಯ ಎಂ.ಎ.,
ಕ್ಯಾತಸಂದ್ರ- ತುಮುಕೂರು.

॥ ಶ್ರೀ ಕೃಷ್ಣಾರ್ಪಣಮಸ್ತು ॥

॥ ಶ್ರೀ ಗುರುಭ್ಯೋನಮಃ ಪರಮ ಗುರುಭ್ಯೋನಮಃ ಶ್ರೀಮದಾನಂದತೀರ್ಥ
ಭಗವತ್ಪಾದಾಚಾರ್ಯ ಗುರುಭ್ಯೋನಮಃ ಹರಿಃ ಓಂ ॥
॥ ಶ್ರೀಮದ್-ಹನುಮ-ಭೀಮ-ಮಧ್ವ-ವಾದಿರಾಜಾಂತರ್ಗತ ಶ್ರೀರಾಮ-ಕೃಷ್ಣ-
ವೇದವ್ಯಾಸ-ಹಯಗ್ರೀವಾತ್ಮಕ ಲಕ್ಷ್ಮೀ ನರಸಿಂಹಾಯ ನಮಃ ॥

॥ ಶ್ರೀ ಬ್ರಹ್ಮಾಂಡ ಪುರಾಣೋಕ್ತ ಕರಿಗಿರಿ ಮಹಾತ್ಮೆ ॥

ಪ್ರಥಮೋಧ್ಯಾಯಃ

ಶ್ರೀ ಋಷಯಃ ಊಚುಃ :
ಸೂತಸೂತ ಮಹಾಪ್ರಾಜ್ಞ ಸರ್ವಶಾಸ್ತ್ರ ವಿಶಾರದ ।
ವ್ಯಾಸ ಪ್ರಸಾದಾತ್ ಸರ್ವಂ ತ್ವಂ ವೇತ್ಸಿಧರ್ಮಮಶೇಷತಃ ॥ ೧ ॥
ಕ್ಷೇತ್ರಾಣಿ ಚ ವಿಚಿತ್ರಾಣಿ ದೇವತಾಯತನಾನಿಚ ।
ಪಾದೋದ್ಭವಾಯಾ ಗಂಗಯಾಃ ವಿಷ್ಣೋರಮಿತತೇಜಸಃ ॥ ೨ ॥
ತೀರ್ಥಾನಿ ಚ ಸುರಮ್ಯಾಣಿ ಋಷೀಣಾಂ ಚ ಮಹಾತ್ಮನಾಮ್ ।
ಪಿನಾಕಿನ್ಯಾಶ್ಚ ಮಹಿಮಾ ಶ್ರುತಂ ಪೂರ್ವಂ ಸವಿಸ್ತರಾತ್ ॥ ೩ ॥

ಋಷಿಗಳು ಕೇಳುತ್ತಾರೆ :

ಮಹಾಪ್ರಾಜ್ಞರಾದ ಸೂತಪುರಾಣಿಕರನ್ನು ಕುರಿತು ನೀವು ವ್ಯಾಸಮಹರ್ಷಿಗಳ ಅನುಗ್ರಹದಿಂದ ಸರ್ವಧರ್ಮಗಳನ್ನೂ ಅರಿತವರಾಗಿದ್ದೀರಿ. ಇದುವರೆಗೆ ನಿಮ್ಮಿಂದ ಅನೇಕ ಪುಣ್ಯ ಕ್ಷೇತ್ರಗಳೂ, ಚಿತ್ರವಿಚಿತ್ರವಾದ ಗಿರಿಗಳೂ, ದೇವಾಲಯಗಳೂ, ಅಪಾರ ತೇಜಶ್ಶಾಲಿನಿಯಾದ ಶ್ರೀಮಹಾವಿಷ್ಣುವಿನ ಪಾದೋದ್ಭವಳಾದ ಗಂಗೆಯು ಮನೋಹರವಾದ ತೀರ್ಥಗಳೂ, ಮಹಾತ್ಮರಾದ ಋಷಿಗಳು ಮತ್ತು ಪಿನಾಕಿನಿ ಮೊದಲಾದುವುಗಳ ಮಹಿಮೆಯನ್ನು ನಾವು ಕೇಳಿದೆವು. ಸರ್ವಪಾಪಹರವಾದ ಗಂಗಾಧರನ ಮಹಾತ್ಮೆಯನ್ನೂ, ಬ್ರಹ್ಮಗಿರಿ, ವೃಷಭಾಚಲ, ಕೇಶವಾದ್ರಿ, ವಿನಾಯಕಾದ್ರಿ, ಇವೇ ಮೊದಲಾದವುಗಳನ್ನೂ ಇದುವರೆಗೆ ನಿಮ್ಮಿಂದ ಕೇಳಿದೆವು. ಯಶಶ್ಶಾಲಿಗಳಾದ ಸೂತ ಪುರಾಣಿಕರೇ, ಇವುಗಳನ್ನು ನಿಮ್ಮಿಂದ ಕೇಳುವ ಕಾಲದಲ್ಲಿ ದೇವರ್ಷಿ

ಗಂಗಾಧರಸ್ಯ ಮಾಹಾತ್ಮ್ಯಂ ಸರ್ವಪಾಪ ಪ್ರಣಾಶನಮ್ ।
ದಿವ್ಯಾದ್ರೇಃ ಮಹಿಮಾ ಚೈವ ತಥಾ ಬ್ರಹ್ಮಗಿರೇರಪಿ ॥ ೪ ॥
ವೃಷಭಾಚಲಸ್ಯ ಮಾಹಾತ್ಮ್ಯಂ ಕೇಶವಾದ್ರೇ ಸ್ತಥೈವಚ ।
ವಿಘ್ನೇಶ್ವರ ಗಿರೇಶ್ಚೈವ ಶೃತಂ ಪೂರ್ವಂ ಸವಿಸ್ತರಾತ್ ॥ ೫ ॥
ಏತೇಷಾಂ ಶ್ರವಣೇ ಕಾಲೆ ತ್ವಯಾ ಸೂತ ಸುಕೀರ್ತಿತಃ ।
ಕುಸುಮಾದ್ರಿರಿತಿ ಖ್ಯಾತೋ ಹರಿಣಾ ದ್ಯುಷಿತೋ ಮಹಾನ್ ॥ ೬ ॥
ಆಸ್ತೇ ತತ್ರ ಇತಿ ಪ್ರೋಕ್ತೋ ದೇವರ್ಷಿ ಗಣಸೇವಿತಃ ।
ವೃಷಭಾಖ್ಯ ಗಿರೇಸ್ತಸ್ಯ ಪ್ರತೀಚ್ಯಾಂ ದಿಶಿ ದೂರತಃ ॥ ೭ ॥
ಯೋಜನ ದ್ವಯ ದೂರೇತು ಸರ್ವ ತೀರ್ಥೈರಲಂಕೃತಃ ।
ಗಿರೇಸ್ತಸ್ಯ ಚ ಮಾಹಾತ್ಮ್ಯಂ ನಾರಸಿಂಹಸ್ಯ ವೈಭವಮ್ ॥ ೮ ॥
ಋಷೀಣಾಂ ಚರಿತಂ ತತ್ರ ಶ್ರೋತುಂ ಇಚ್ಛಾಮಹೇ ವಯಮ್ ।
ಶುಶ್ರೂಷಾಣಾಂ ಚ ಸರ್ವೇಷಾಂ ವದವಿದ್ವನ್ ಮಹಾಪ್ರಭೋ ॥ ೯ ॥
ಶ್ರೀ ಸೂತಃ ಉವಾಚ :
ಸಾಧುಪೃಷ್ಟಂ ಮಹಾಭಾಗಾ ಸರ್ವೇಷಾಂ ಹಿತ ಕಾಮ್ಯಯಾ ।

ಸಮೂಹದಿಂದ ಸೇವಿಸಲ್ಪಡುತ್ತಿರುವ, ಶ್ರೀಹರಿಯಿಂದ ವಾಸಿಸಲ್ಪಡುತ್ತಿರುವ ಪ್ರಸಿದ್ಧವಾದ ಪುಷ್ಪಾಚಲವು ವೃಷಭಗಿರಿಯ ಪಶ್ಚಿಮ ದಿಕ್ಕಿಗೆ ಎರಡು ಯೋಜನ ದೂರದಲ್ಲಿ ಸರ್ವತೀರ್ಥಗಳಿಂದ ಶೋಭಾಯಮಾನವಾಗಿದೆ ಎಂದು ಕೇಳಿದೆವು. ಅಂತಹ ಕುಸುಮಾಚಲದ ಮಹಾತ್ಮೆಯನ್ನೂ, ಅಲ್ಲಿ ನೆಲೆಸಿರುವ ಶ್ರೀಲಕ್ಷ್ಮೀನರಸಿಂಹಸ್ವಾಮಿಯ ವೈಭೋಗವನ್ನೂ, ಅಲ್ಲಿರುವ ಮಹರ್ಷಿಗಳ ಚರಿತ್ರೆಯನ್ನು ಕೇಳಲಿಚ್ಛಿಸುತ್ತೇವೆ. ಮಹಾಪ್ರಭುವೇ, ನಮ್ಮಗಳಿಗೆಲ್ಲಾ ಅದನ್ನು ದಯವಿಟ್ಟು ವಿಸ್ತಾರವಾಗಿ ಹೇಳಬೇಕೆಂದು ಪ್ರಾರ್ಥಿಸಲು ಶ್ರೀ ಸೂತ ಪುರಾಣಿಕರು ಹೇಳುತ್ತಾರೆ.

ಎಲೈ ಮಹಾಭಾಗರೇ, ಸರ್ವರ ಹಿತಕ್ಕಾಗಿ ನಿಮ್ಮಿಂದ ಈ ವಿಷಯವು ಚೆನ್ನಾಗಿ ಕೇಳಲ್ಪಟ್ಟಿತು. ಕೇಳಿದ ಮಾತ್ರದಿಂದಲೇ ರೋಮಾಂಚನವನ್ನುಂಟು ಮಾಡುವ, ಸುಖಪ್ರದವಾದ ಆ ಮಹಾತ್ಮೆಯನ್ನು ಹೇಳುತ್ತೇನೆ.

ವಕ್ಷ್ಯಾಮಿ ಗೋಪ್ಯಂ ಸುಖದಂ ಶ್ರವಣಾದ್ರೋಮ ಹರ್ಷಣಮ್ ॥ ೧೦ ॥
ಪುರಾ ಗೋದಾವರೀತೀರೆ ರಾಜಾಭೂದ್ಧನದೋಪಮಃ ।
ನಿಮಿರ್ನಾಮ ಮಹಾಪ್ರಾಜ್ಞೋ ವಿಷ್ಣುಭಕ್ತಃ ಶ್ಯುಚಿವ್ರತಃ ॥ ೧೧ ॥
ಏಕದಾತು ಮಹಾಪ್ರಾಜ್ಞೋ ವಸಿಷ್ಠೋ ಬ್ರಹ್ಮ ನಂದನಃ ।
ಯಜ್ಞಾರ್ಥಂ ತಂ ನೃಪಂ ಪ್ರಾಪಾ ಧನಮಾಹರ್ತು ಮುದ್ಯತಃ ॥ ೧೨ ॥
ಆಗತಂ ತಂ ಋಷಿಂ ದೃಷ್ಟ್ವಾ ನೃಪಃ ಪರಮ ಧಾರ್ಮಿಕಃ ।
ಪ್ರತ್ಯುತ್ಥಾಯಾಸನಾದ್ರಾಜಾ ಪೂಜಯಾಮಾಸ ತಂ ಮುನಿಮ್ ॥ ೧೩ ॥
ಶಾಂತಂ ದಾಂತಂ ಮುನಿಂ ತ್ವಾಂ ಚ ಪಪ್ರಚ್ಛ ಕುಶಲಂ ತದಾ ।
ಸ್ವಾಗತಂ ತೇ ಮಹಾಪ್ರಾಜ್ಞಾ ಆಶ್ರಮೇ ಚ ಶುಭಾವಹೆ ॥ ೧೪ ॥
ಸಂಸ್ಥಿತಾನಾಂ ಚ ಸರ್ವೇಷಾಂ ಪ್ರಾಣೇನಾಂ ಚ ಮುನೀಶ್ವರಾಃ ।
ಅಗ್ನಯಸ್ಸುಹುತಾಸಂತಿ ಗಾವಾಃ ಶಿಷ್ಯಾಃ ಗಣಾಶ್ಚಯೇ ॥ ೧೫ ॥
ಸ್ವಾಧ್ಯಾಯಾಶ್ಚ ವಿಶೇಷೇಣ ಅಂತರಾಯ ವಿವರ್ಜಿತಾಃ ।
ಪ್ರವರ್ತಂತೇ ಮಹಾಭಾಗ ಪಂಚಯಜ್ಞಾಶ್ಚ ನಿತ್ಯಶಃ ॥ ೧೬ ॥
ಇತಿ ರಾಜ್ಞಾ ಸುಸಂಪೃಷ್ಠೋ ವಸಿಷ್ಠೋ ಬ್ರಹ್ಮನಂದನಃ ।

ಪೂರ್ವದಲ್ಲಿ ಗೋದಾವರಿ ತೀರದಲ್ಲಿ ಶುಚಿವ್ರತನೂ, ವಿಷ್ಣು ಭಕ್ತನೂ, ಕುಬೇರನಿಗೆ ಸಮನೂ ಆದ ನಿಮಿ ಎಂಬ ರಾಜಶ್ರೇಷ್ಠನಿದ್ದನು. ಒಂದಾನೊಂದು ಕಾಲದಲ್ಲಿ ಬ್ರಹ್ಮ ಮಾನಸಪುತ್ರನೂ, ಮಹಾಪ್ರಾಜ್ಞನೂ ಆದ ವಸಿಷ್ಠ ಮಹರ್ಷಿಯು ಯಜ್ಞಾರ್ಥವಾಗಿ ಧನವನ್ನು ಯಾಚಿಸಲು ಆ ರಾಜನನ್ನು ಕುರಿತು ಬಂದನು. ಪರಮಧಾರ್ಮಿಕನಾದ ಆ ರಾಜನು ಬಂದಂಥಾ ಆ ಋಷಿಯನ್ನು ಕಂಡು ತನ್ನ ಪೀಠದಿಂದೆದ್ದು ಪ್ರತ್ಯುತ್ಥಾನ ಮಾಡಿ ಅರ್ಘ್ಯಪಾದ್ಯಾಚಮನಗಳಿಂದ ಪೂಜಿಸಿದನು. ಶಾಂತ ಮತ್ತು ಕ್ಷಮಾಗುಣಗಳಿಂದ ಕೂಡಿದ ಆ ಋಷಿಯನ್ನು ನಮಸ್ಕರಿಸಿ ಕುಶಲ ಪ್ರಶ್ನೆಗಳನ್ನು ಕೇಳಿದನು. ಮಹಾಪ್ರಾಜ್ಞರೇ, ತಮ್ಮ ಆಶ್ರಮದಲ್ಲಿ ಮಂಗಳವಾಗಿದೆಯೇ? ಆಶ್ರಮವಾಸಿಗಳೆಲ್ಲರೂ ಸೌಖ್ಯವೇ? ಯಜ್ಞೇಶ್ವರನು ಸುಹುತನೇ? ಗೋವುಗಳು, ಶಿಷ್ಯಗಣಗಳೂ ಸೌಖ್ಯವೇ? ಯಾವ ತೊಂದರೆಯೂ ಇಲ್ಲದೇ ಅಧ್ಯಯನವೂ, ಪಂಚಯಜ್ಞಗಳೂ ನಿತ್ಯವೂ ನಡೆಯುತ್ತವೆಯೇ? ಎಂಬುದಾಗಿ ರಾಜನಿಂದ ಕೇಳಲ್ಪಟ್ಟ ಋಷಿಯು ನನ್ನ ಆಶ್ರಮದಲ್ಲಿ

ಸರ್ವತ್ರ ಕುಶಲಂ ವಕ್ತುಂ ಸಮಾರೇಭೇ ಶುಚಿವ್ರತಃ ॥ ೧೭ ॥
ಗಾವೋಜ್ಞಯಶಿಷ್ಯಗಣಾಃ ಸ್ವಾಧ್ಯಾಯಾಶ್ಚ ಪರಂತಪಃ ।
ನಿತ್ಯ ನೈಮಿತ್ತಿಕಂ ಕರ್ಮ ಸದಾ ಪ್ರತ್ಯೂಹವರ್ಗಿತಾಃ ॥ ೧೮ ॥
ಚರಿಷ್ಯಂತಿ ಮಹಾಪ್ರಾಜ್ಞಾ ಧರ್ಮಾಶ್ಚ ಬಹವಸ್ಸದಾ ।
ಮಮಾಶ್ರಮೇ ಮುನಿಗಣಾ ಅಂಡಜಾಶ್ಚ ವಿಶೇಶತಃ ॥ ೧೯ ॥
ಸರ್ವೇ ಚ ಸುಖಿನಸ್ಸಂತಿ ರಕ್ಷಿತಾ ಹರಿಣಾ ಸಹಾ ।
ಋಷೇರ್ವಾಕ್ಯಂತು ಸಂಶೃತ್ವಾ ರಾಜಾ ಧರ್ಮಪರಾಯಣಃ ॥ ೨೦ ॥
ಸಂಪ್ರಹೃಷ್ಟಮನಾ ವಿಪ್ರಾ ಉವಾಚ ಮುನಿಪುಂಗವಮ್ ।
ಶ್ರೀ ರಾಜೋವಾಚ :
ವಸಿಷ್ಟ ಮುನಿಶಾರ್ದೂಲ ಅವಶ್ಯಾಂ ಚ ಸುವಿಶೃತವಮ್ ॥ ೨೧ ॥
ಪುಣ್ಯಕ್ಷೇತ್ರಂ ಪುಣ್ಯತೀರ್ಥಂ ಬ್ರಹ್ಮಾದ್ಯೈಸೇವಿತಂ ಶುಭಮ್ ।
ತತ್ ಕ್ಷೇತ್ರಂ ಮೇ ಸಮಾಚಕ್ಷ್ವ ವಿಸ್ತರಾನ್ಮುನಿಪುಂಗವ ॥ ೨೨ ॥
ಶ್ರೀ ವಸಿಷ್ಠೋವಾಚ :
ಶೃಣುಭೂಪ ಪ್ರವಕ್ಷಾಮಿ ಪೂರ್ವವೃತಾಂತ ಮಂಜಸಾ ।

ಶ್ರೀಹರಿಯಿಂದ ಸರ್ವದಾ ರಕ್ಷಿಸಲ್ಪಟ್ಟು ಗೋವುಗಳೂ, ಯಜ್ಞೇಶ್ವರ, ಶಿಷ್ಯ ಸಮೂಹ ಅಧ್ಯಯನ ಪಾರಾಯಣ, ನಿತ್ಯನೈಮಿತ್ತಿಕ ಕರ್ಮಗಳೂ, ನಮ್ಮ ಆಶ್ರಮದ ಪಕ್ಷಿಗಳೂ ಮುಂತಾದ ಎಲ್ಲವೂ ಸೌಖ್ಯದಿಂದಿವೆ.

ಆಗ ರಾಜನು ಮುನಿಶ್ರೇಷ್ಠರಾದ ವಸಿಷ್ಠ ಮುನಿಗಳೇ, ತಮ್ಮಿಂದ ಎಲ್ಲಾ ಧರ್ಮಗಳ ವಿಚಾರಗಳನ್ನೂ ಕೇಳಿದೆನು. ಈಗಲಾದರೋ ಬ್ರಹ್ಮಾದಿದೇವತೆಗಳಿಂದ ಸೇವಿಸಲ್ಪಡುತ್ತಿರುವ ಪುಣ್ಯ ಕ್ಷೇತ್ರಗಳೂ, ಪುಣ್ಯ ತೀರ್ಥಗಳೂ ಇವುಗಳ ವಿಚಾರವಾಗಿ ಸವಿಸ್ತಾರವಾಗಿ ಅಪ್ಪಣೆ ಕೊಡಿಸಬೇಕು.

ಶ್ರೀ ವಸಿಷ್ಠರು ಹೇಳುತ್ತಾರೆ. ಎಲೈ ರಾಜಶ್ರೇಷ್ಠನೇ ನಾನು ಪೂರ್ವದಲ್ಲಿ ಬ್ರಹ್ಮನಿಂದ ಕೇಳಲ್ಪಟ್ಟ ಮಹಾವಿಚಾರವನ್ನು ಹೇಳುತ್ತೇನೆ ಕೇಳು.ಮೊದಲು ನಾರಾಯಣನು ಬ್ರಹ್ಮನನ್ನು ಸಮಸ್ತವಾದ ಸ್ವರ್ಗ ಪಾತಾಳಾದಿ ಲೋಕಗಳನ್ನೂ, ಗಂಧರ್ವರನ್ನೂ,

ಅಹಂ ಪೂರ್ವಂ ಮಯಾಭೂಪ ಬ್ರಹ್ಮಣಾ ಚ ಶೃತಂ ಮಹತ್ ॥ ೨೩
ಆದೌ ನಾರಾಯಣೋದೇವಃ ಬ್ರಹ್ಮಾಣಂ ಸೃಷ್ಟವಾನ್ಪ್ರಭುಃ ।
ಸಸರ್ಜ ಲೋಕಾನ್ ಸ್ವರ್ಗಾದೀನ್ ಪಾತಾಲಾದೀಂಶ್ಚಸರ್ವಶಃ ॥ ೨೪ ॥
ಲೋಕಾಧಿಪಾನ್ ಸ್ತಥಾದೇವಾನ್ ಗಂಧರ್ವಾನ್ಮನುಜಾನಪಿ ।
ಶೈಲಾನ್ಪುಣ್ಯನದೀಂ ಸ್ತತ್ರ ತತ್ರ ತತ್ರಾಶ್ರಮಾಣಿಚ ॥ ೨೫ ॥
ಸೃಷ್ಟಿ ಸ್ಥಿತಿಂ ಚ ಮಕರೋದ್ ವಿಷ್ಣುಸ್ಸರ್ವಾಮರೇಶ್ವರಃ ।
ವಿಶೇಷಂ ತತ್ರ ವಕ್ಷ್ಯಾಮಿ ಶೃಣು ರಾಜ ಕುಲೋದ್ಭವ ॥ ೨೬ ॥
ಯಸ್ಯ ಶ್ರವಣ ಮಾತ್ರೇಣ ರಾಜಸೂಯಾ ಫಲಂ ಲಭೇತ್ ।
ಆಸ್ತೇ ಕರಿಗಿರಿಃ ಕಶ್ಚಿತ್ ತ್ರಿಭಿಶೃಂಗೈ ಸಮಾಶ್ರಿತಾಃ ॥ ೨೭ ॥
ಶೇಷ ಸಿಂಹ ಗಜಾಕಾರಃ ಖಗೇಂದ್ರ ಇವ ದೃಶ್ಯತೆ ।
ಪ್ರಾಕಾರವಲಯೋ ಪೇತಃ ಪರಿತೋ ಗಿರಿಭಿರ್ವೃತಃ ॥ ೨೮ ॥
ಜಯಮಂಗಲಯೋಸ್ತತ್ರ ಅಂಬುಭಿಃ ಶೀತಲೋ ಮರುತ್ ।
ವಾತಸ್ಮತಸರ್ವತಶ್ಯಸ್ತಾಗಂಧವಾಹಸ್ಸುಖಪ್ರದಃ ॥ ೨೯ ॥
ಜಯಾಮಂಗಲೋ ರಾಜನ್ ಕುಸುಮಾದ್ರೇ ಸ್ಸಮಂತತಃ ।

ಪರ್ವತಗಳನ್ನೂ, ನದಿಗಳನ್ನೂ, ಅಲ್ಲಲ್ಲಿರುವ ಪುಣ್ಯಾಶ್ರಮಗಳನ್ನೂ ಸೃಷ್ಟಿ ಮಾಡಿ ಕಾಪಡುತ್ತಾ ಬಂದನು. ಯಾವುದರ ಶ್ರವಣ ಮಾತ್ರದಿಂದಲೇ ರಾಜಸೂಯಯಾಗ ಮಾಡಿದ ಫಲ ಉಂಟಾಗುವುದೋ ಅಂತಹ ವಿಷಯವನ್ನು ಹೇಳುತ್ತೇನೆ ಕೇಳು.

ಮೂರು ಶಿಖರಗಳಿಂದ ಉತ್ತುಂಗವಾಗಿ ಶೋಭಾಯಮಾನವಾಗಿರುವ ಕರಿಗಿರಿಯು ಕ್ರಮವಾಗಿ ಒಂದೊಂದು ದಿಕ್ಕಿನಿಂದ ನೋಡಿದರೆ ಶೇಷ, ಸಿಂಹ,ಆನೆ, ಗರುಡ ಇವುಗಳ ಆಕಾರದಲ್ಲಿ ಕಾಣಿಸುತ್ತಾ ಶೋಭಿಸುವುದು. ಅನೇಕ ಗಿರಿಗಳಿಂದ ಸುತ್ತಲ್ಪಟ್ಟು ಪ್ರಾಕಾರಗಳಿಂದ ಕೂಡಿದ್ದಾಗಿರುವುದು ಮತ್ತು ಜಯಾ–ಮಂಗಳ ನದಿಗಳ ಜಲಬಿಂದುಗಳಿಂದ ಕೂಡಿದ ಮಾರುತವು ಎಲ್ಲಾ ಭಾಗಗಳಲ್ಲಿಯೂ ತಣ್ಣಗೆ ಬೀಸಿತ್ತಿರುವುದು. ಈ ಜಯಮಂಗಲಿಯ ಸುತ್ತಲೂ ಕುಸುಮಾಚಲ ಪ್ರದೇಶದಲ್ಲಿ ಮಹಾವೃಕ್ಷಗಳ ಸಮೂಹದಿಂದ ಕೂಡಿದ ಮನೋಹರವಾದ ವನವಿರುವುದು. ಹೀಗೆ ವೃಕ್ಷಗಳಿಂದಲಂಕೃತವಾದ ವನವು (ಬ್ರಹ್ಮಾರಣ್ಯ), ದೇವತೆಗಳೂ, ಋಷಿಗಳೂ,

ವನಂಚಾಸೀನ್ಮಹಾವೃಕ್ಷೈ ಸಂಕೀರ್ಣಂ ಸುಮನೋಹರಮ್ ॥ ೩೦ ॥
ದೇವತಾನಾಂ ಋಷೀಣಾಂ ಚ ಗಂಧರ್ವಾಪ್ಸರತಾಂ ತಥಾ ।
ಕ್ರೀಡಾಸ್ಪದಂ ಮೃಗಾಣಾಂ ಚ ಪಕ್ಷಿಣಾಂ ಚ ವಿಶೇಷತಃ ॥ ೩೧ ॥
ವನಂ ರರಾಜ ನೃಪತೇ ವೃಕ್ಷ ಸಂಘೈರಲಂಕೃತಮ್ ।
ತತ್ರ ತತ್ರ ವನೇ ರಮ್ಯೇ ಮತ್ತ ಕೋಕಿಲ ಕೂಜಿತೇ ॥ ೩೨ ॥
ವಿಹರಂತಿ ಮುದಾಯುಕ್ತಾಃ ದೇವಾಸ್ತ್ರೀಭಿಃ ಸಮಾಕುಲಾಃ ।
ತಸ್ಮಿನ್ವನೇ ದ್ರುಮಾಸ್ಸಂತಿ ನನಾಪುಷ್ಪಫಲೈರ್ಯುತಾಃ ॥ ೩೩ ॥
ತಾಲಾಶ್ರಿತಾಲ ಖರ್ಜೂರೈರ್ಮಂದಾರೈಃ ಪಾರಿಜಾತಕೈಃ ।
ಪಾಟಲೈರ್ನಿಂಬದಾಡಿಂಬ ಸರ್ಜಕೈಸ್ಸರಲೈರಪಿ ॥ ೩೪ ॥
ರಂಭಾ ಬದರಿ ವೃಕ್ಷೈಶ್ಚ ಚೂತೈಃ ಖದಿರ ಪಂಚಕೈಃ ।
ತಿಂತ್ರಿಣಿ ಬಿಲ್ವ ನೀಪೈಶ್ಚ ನಾರಂಗೈಃ ಪ್ರಮುಕೈರಪಿ ॥ ೩೫ ॥
ಅಶ್ವತ್ಥ ಜಂಬೂವೃಕ್ಷೈಶ್ಚ ಕಪಿತ್ಥೈರ್ನಾಗ ಕೇಸರೈಃ ।
ವೀರವೃಕ್ಷೈರ್ವಟೈಶ್ಚೈವ ಶಿಂಶುಕೈಶ್ಚಂದನೈರಪಿ ॥ ೩೬ ॥

ಗಂಧರ್ವರೂ, ಅಪ್ಸರಸೆಯರೂ ಮತ್ತು ಮೃಗ ಪಕ್ಷಿಗಳು ಇವುಗಳಿಗೆ ವಿಶೇಷವಾಗಿ ಕ್ರೀಡಾಯೋಗ್ಯವಾಗಿ ರಾರಾಜಿಸುತ್ತಿರುವುದು ಮತ್ತು ಕೋಕಿಲಾನಾದದಿಂದ ಶೋಭಿಸುತ್ತಿರುವ ಆ ವನದಲ್ಲಿ ದೇವಸ್ತ್ರೀಯರಿಂದ ಕೂಡಿದ ದೇವತೆಗಳು ಸಂತೋಷದಿಂದ ವಿಹರಿಸುತ್ತಿರುವರು. ನಾನಾ ಜಾತಿ ಫಲ ಪುಷ್ಪಗಳಿಂದ ಕೂಡಿದ ವೃಕ್ಷಗಳೂ, ತಾಲ, ಶ್ರೀತಾಲ, ಖರ್ಜೂರ, ಮಂದಾರ, ಪಾರಿಜಾತ, ಪಾಟಲ, ಅಶೋಕ, ಖದಿರ, ಚಂಪಕ, ಪನಸ ಮುಂತಾದವುಗಳಿಂದಲೂ ಮತ್ತು ಹುಣಸೆ, ಬಿಲ್ವ, ಬೇಲ, ನಾರಂಗ, ಅಡಕೆ, ಅಶ್ವತ್ಥ, ಜಂಬೂ, ನಾಗಕೇಸರ, ವೀರವೃಕ್ಷ, ಆಲ, ಕಿಂಶುಕ, ಚಂದನ, ಜಾತೀಗಂಧ, ತಕ್ಕೋಲ, ಕರ್ಪೂರ ಮುಂತಾದ ಸುಗಂಧ ವೃಕ್ಷಗಳಿಂದಲೂ, ನಾರಂಗ, ನಾರಿಕೇಳ, ಸರಳ, ದೇವದಾರು, ಅತ್ತಿ, ಹೊಂಗೆ, ಶ್ರೀಗಂಧ, ಹಿಪ್ಪೆ, ದ್ರಾಕ್ಷಿ, ಕಬ್ಬು, ಭುಜಪತ್ರೆ, ಪಲಾಶ ಇವೇ ಮೊದಲಾದ ಮನೋಹರವಾದ ವೃಕ್ಷ ವಿಶೇಷಗಳಿಂದಲೂ, ವಾಯು ಸಂಘರ್ಷಣದಿಂದ ಶಬ್ದ ಮಾಡುತ್ತಿರುವ ಬಿದಿರು

ಜಾತಗಂಧಕ ತರ್ಕ್ಕೋಲ್ಲೈಃ ಕರ್ಪೂರಾ ಮೋದವಾಸಿಭಿಃ ।
ನಾರಂಗೈರ್ನಾರಿಕೇಲ್ಲೈಶ್ಚ ಸರಲ್ಲೈರ್ದೇವದಾರುಭಿಃ ॥ ೩೭ ॥
ಔದುಂಬರ್ರೈಶ್ಚ ಮಾಲ್ಲೈಶ್ಚ ತಥಾಶ್ಲೇಷ್ಮಾತಕ್ಕೈರಪಿ ।
ರಸಾಲ್ಲೈರ್ಮುನಿವೃಕ್ಷೈಲಶ್ಚ ಶ್ರೀಗಂಧೈರ್ಮಧುವೃಕ್ಷಕೈಃ ॥ ೩೮ ॥
ನ್ಯಗ್ರೋಧೈಲ ಶಾಲ್ಮಲೀ ವೃಕ್ಷೈಲ ಸಪ್ತಪರ್ಣೈಲಶ್ಚ ತಾಪಸೈಃ ।
ದ್ರಾಕ್ಷೇಕ್ಷುಯುಗಪತ್ರೈಲಶ್ಚ ಪಾಲಾಶೈ ಸುಮನೋಹರೈಃ ॥ ೩೯ ॥
ಕೂಜದ್ಭಿಃ ಕೀಟಕೈಶ್ಚೈಲವ ನಾನಾಷೌಂಡೈರ್ಮನೋರಮ್ಯೈಃ ।
ಲೋದ್ರವೃಕ್ಷೈಲಃ ಕರಂಜೈಶ್ಚ ಧಾತ್ರೀ ವೃಕ್ಷೈಲ ಸ್ಸುಸಂಯುತಮ್ ॥ ೪೦ ॥
ಅನೇಕ ವೃಕ್ಷ ಸಂಘೈಶ್ಚ ಸಂಯುತಂ ವನಮುತ್ತಮಮ್ ।
ನಿರ್ಝರಾಣಾಂತು ಷಾರ್ರೈಶ್ಚ ಕೇಕಾಭಿಸ್ಸಮಲಂಕಮ್ ॥ ೪೧ ॥
ಸೇವಂತೀ ಕುಂದ ಪುಷ್ಪೈಲಶ್ಚ ಪಾರಿಜಾತೈರ್ಮನೋಹರೈಃ ।
ಕಮಲೋತ್ಪಲ ಕಲ್ಹಾರ ಕಾಸಾರ ಸಲಿಲೈರ್ಯುತಮ್ ॥ ೪೨ ॥
ಮಚ್ಛ ಕಚ್ಛಪ ನಕ್ರಾದ್ಯೈರನ್ಯೈರ್ಜಲಚರೈರಪಿ ।
ಹಂಸ ಕಾರುಂಡ ಸಲಿಲ ಬಕಟಿಟ್ಟಿಭ ಕುಕ್ಕುಟ್ಟೈಃ ॥ ೪೩ ॥

ಮೆಳೆ ಮುಂತಾದವುಗಳಿಂದಲೂ, ಲೋಧ್ರವೃಕ್ಷ, ತಿಂತ್ರಿಣಿ, ಆಮ್ರಾದಿ ಇವೇ ಮುಂತಾದ ಅನೇಕ ವೃಕ್ಷಸಮೂಹದಿಂದ ಕೂಡಿರುವುದಲ್ಲದೇ, ಬೆಟ್ಟದ ಝರಿಗಳ ಶೀತಲವಾದ ಜಲಬಿಂದುಗಳಿಂದ ಶೋಭಾಯಮಾನವಾದ ಶಾವಂತಿಗೆ, ಕುಂದಪುಷ್ಪ, ಮನೋಹರವಾದ ಕಮಲ, ಕನ್ನೈದಿಲೆ, ಕಲ್ಹಾರ ಮುಂತದ ಪುಷ್ಪಗಳಿಂದಲೂ, ಮತ್ಸ್ಯ, ಕೂರ್ಮ, ನಕ್ರಾದಿ ಜಲಜಂತುಗಳಿಂದಲೂ, ಕೂಡಿ ಭ್ರಮರಗಳಿಂದ ಸೇರಿಸಲ್ಪಡುತ್ತಿರುವ ಸರೋವರದಿಂದ ಕೂಡಿದ ವನವು, ಗಿಳಿ, ಕೋಗಿಲೆ ಇವುಗಳ ನಾದದಿಂದಲೂ, ಪಾರಿವಾಳಗಳ ಸಮೂಹದಿಂದಲೂ, ನಾಟ್ಯವಾಡುತ್ತಿರುವ ನವಿಲುಗಳು, ಎಳೆಗರಿಕೆಗಳನ್ನು ಮೇಯುತ್ತಿರುವ ಹರಿಣಗಳ ಸಮೂಹಗಳಿಂದಲೂ, ವರಾಹ, ಕೃಷ್ಣ, ಸಾರಂಗ, ಮದ್ದಾನೆಗಳು, ಕಾಡೆಮ್ಮೆ, ಸಿಂಹ, ಶಾರ್ದೂಲ, ಭಲ್ಲೂಕ, ತರಕ್ಷು, ಕಪಿಗಳು, ಇವುಗಳ ಸಮೂಹದಿಂದಲೂ, ಸಿದ್ಧರು, ಚಾರಣರು, ಗಂಧರ್ವರು, ವಿಧ್ಯಾಧರರು, ಮಹೋರಗರು, ಕಿಂಪುರುಷರು, ಕಿನ್ನರರು, ಇವರೇ ಮೊದಲಾದ ಅಸಂಖ್ಯಾಕರಾದ

ಸೇವಿತಂ ಭ್ರಮರೈರ್ನಿತ್ಯಂ ಸರೋವರಯುತಂ ವನಮ್ ।
ಶುಕ ಕೋಕಿಲ ಸನ್ನಾದೈಃ ಪಾರಾವತಗಣೈರಪಿ ॥ ೪೪ ॥
ನೃತ್ಯದ್ಭಿರ್ಬರ್ಹಿಭಿಃ ಪೂರ್ಣಂ ಅಮರಾಣಾಂ ಗಣೈರ್ಯುತಮ್ ।
ಸಂಚರದ್ಭಿಸ್ತೃಣಾನಾಂಹಿ ಸಶಾಖೈರ್ಹರಿಣೀಗಣೈಃ ॥ ೪೫ ॥
ವರಾಹ ಕೃಷ್ಣ ಸಾರಂಗೈರ್ಮದೋತ್ಕಟ ಗಜೈರಪಿ ।
ಲಾಲಾಯ್ಯೈ ಸಿಂಹ ಶಾರ್ದೂಲೈರ್ಭಲೂಕೈಶ್ಚ ತರಕ್ಷುಭಿಃ ॥ ೪೬ ॥
ಗೋಲಾಂಗೂಲ ಗಣೈಶ್ಚೈವ ವಾನರೈ ಸ್ಸಮಲಂಕೃತಮ್ ।
ಸಿದ್ಧಚಾರಣ ಗಂಧರ್ವೈರ್ವಿದ್ಯಾಧರ ಮಹೋಗಣೈಃ ॥ ೪೭ ॥
ಕಿಂಪುರುಶೈಃ ಕಿನ್ನರೈಶ್ಚೈವ ದೇವಾನಾಂಚ ಗಣೈಸಃ ।
ಏತಾದೃಶೈರಸಂಖ್ಯಾತೈರ್ದೇವಲೋಕ ಗಣೈರಪಿ ॥ ೪೮ ॥
ರರಾಜ ವನರಾಜಿಶ್ಚ ಗಿರಿಭಿಸ್ಸಹಿತೋ ವನಮ್ ।
ವನಮಧ್ಯೇ ಸುವಿಖ್ಯಾತೋ ಪರ್ವತೋ ನಾಗ ನಾಮಕಃ ॥ ೪೯ ॥
ಋಷಿದೇವಗಣೈ ಸಾರ್ಧಂ ವಿರರಾಜ ಮಹಾಗಿರಿಃ ।

ದೇವಗಣಗಳಿಂದಲೂ, ಶಿಖರಗಳಿಂದಲೂ, ವನಸಮೂಹಗಳಿಂದಲೂ, ರಾರಾಜಿಸುತ್ತಿರುವುದು. ಇಂತಹವನ ಮಧ್ಯದಲ್ಲಿ, ದೇವಋಷಿಸಮೂಹದಿಂದ ಕೂಡಿ ಭೂಲೋಕದಲ್ಲಿ ಪ್ರಖ್ಯಾತವಾದ ನಾಗಾಚಲ ಎಂದು ಹೆಸರು ಪಡೆದ ಕರಿಗಿರಿಯು ರಾರಾಜಿಸುತ್ತಿರುವುದು.

ಅಲ್ಲಿ ಬ್ರಹ್ಮಾದಿಗಳಿಂದ ಸೇವಿಸಲ್ಪಡುತ್ತಿರುವ ಮಹಾವಿಷ್ಣುವು ನೆಲೆಸಿರುವನು. ಕುಸುಮಾಚಲದಲ್ಲಿ ಮುನಿಶ್ರೇಷ್ಠರು ನೆಲೆಸಿರುವರು.

ಕೃತಯುಗದಲ್ಲಿ ಬ್ರಹ್ಮಾದಿ ದೇವತೆಗಳ ಸೇವೆಯಿಂದ ಸಂತುಷ್ಟನಾದ ಶ್ರೀಹರಿಯು ಅವರಿಗೆ ವರವನ್ನು ದಯಪಾಲಿಸಿದನು. ನಾಲ್ಕು ಯುಗಗಳಲ್ಲಿಯೂ, ದೇವತೆಗಳಿಂದಲೂ, ಪರಾಶರಶುಕಾದಿ ಮಹರ್ಷಿಗಳಿಂದಲೂ, ದೇವಾಂಗ ಸಮೂಹಗಳಿಂದಲೂ, ಜನಾರ್ಧನನು ಪೂಜಿಸಲ್ಪಟ್ಟನು.

ತತ್ರ ಶೈಲೇ ಮಹಾವಿಷ್ಣುಃ ಬ್ರಹ್ಮಾದ್ಯೈ ಸೇವಿತೋ ಮುದಾ ॥ ೫೦ ॥
ಆಸ್ತೇ ತತ್ರ ಮುನಿಶ್ರೇಷ್ಠಾಃ ಕುಸುಮಾಚಲ ನಾಮಕೆ ।
ಕೃತೇಯುಗೇಚ ಬ್ರಹ್ಮಾದ್ಯೈ ಸೇವಿತೋ ಜಗಧೀಶ್ವರಃ ॥ ೫೧ ॥
ಬ್ರಹ್ಮಾದೀನಾಂ ಸುಸಂತುಷ್ಟೋ ವರಂ ತೇಷಾಂ ದದೌಹರಿಃ ।
ಚತುರ್ಯುಗೇಷು ದೇವೈಶ್ಚ ಪರಾಶರ ಶುಕಾದಿಭಿಃ ॥ ೫೨ ॥
ದೂರ್ವಾಸ ಋಷಿಣಾ ರಾಜನ್ ಪೂಜಿತೋ ವೈ ಜನಾರ್ಧನಃ ।
ಲಕ್ಷ್ಮ್ಯಾಲಿಂಗಿತ ವಾಮಾಂಗೋ ಶಂಖಚಕ್ರ ಧರೋಹರಿಃ ॥ ೫೩ ॥
ಸ್ವಭಕ್ತಾನಾಂ ಚ ಸರ್ವೇಷಾಂ ವರದೋ ಜಗದೀಶ್ವರಃ ।
ಆಸ್ತೇಖಿಲ ಮಹಾರಾಜ ಪರ್ವತೇ ಹಸ್ತಿನಾಮಕೇ ॥ ೫೪ ॥
ಪಾದತೀರ್ಥ ಸಮೀಪೇತು ಶ್ರೀಪಾದಯುಗ ಸಂಯುತಃ ।
ಪಾದತೀರ್ಥೆ ನಿಮಜ್ಜ್ಯಾಥ ಬ್ರಹ್ಮಣಾ ಸೇವಿತೋವಸತ್ ॥ ೫೫ ॥
ಪಾದತೀರ್ಥೇ ಸದಾಬ್ರಹ್ಮಾ ಸ್ನಾತ್ವಾದೇವಂ ಜನಾರ್ಧನಮ್ ।
ಪೂಜಯಾಮಾಸ ಹಂಸೋಕ್ತೈಃ ಪಂಚರಾತ್ರಾಗಮ್ಯೈರ್ಹರಿಮ್ ॥ ೫೬ ॥
ಸ್ಮರಾಂತಕ ಮುಖಾದೇವಾಃ ಶ್ರೀಪಾದ ಸಲಿಲೇಮಲೇ ।
ತೀರ್ಥೇಸ್ನಾತ್ವಾ ಸಮಭ್ಯರ್ಚ್ಯ ಸಂಸಿದ್ಧಿಂ ಪರಮಾಂ ಗತಾಃ ॥ ೫೭ ॥

ಶ್ರೀಮಹಾಲಕ್ಷ್ಮಿಯಿಂದಾಲಿಂಗಿತನಾದ, ಶಂಖಚಕ್ರಧರನಾದ ಭಕ್ತಾಭೀಷ್ಟವರಪ್ರದನಾದ ಜಗದೀಶ್ವರನು ಹಸ್ತಿನಾಮಕ ಈ ಗಿರಿಯಲ್ಲಿ ನೆಲೆಸಿರುವನಲ್ಲದೇ ಶ್ರೀಪಾದಯುಗದಿಂದ ಉದ್ಭವವಾದ ಶ್ರೇಷ್ಠವಾದ ಶ್ರೀಪಾದತೀರ್ಥವು ಅಸದೃಶ ಪವಿತ್ರವಾದುದು. ಅಂತಹ ಪಾದತೀರ್ಥದಲ್ಲಿ ಸ್ನಾನಮಾಡಿದ ಬ್ರಹ್ಮನಿಂದ ಸೇವಿಸಲ್ಪಡುತ್ತಿರುವನು ಯಾವಾಗಲೂ ಬ್ರಹ್ಮನು ಶ್ರೀಪಾದತೀರ್ಥದಲ್ಲಿ ಸ್ನಾನಮಾಡಿ ಸಾಕ್ಷಾಜ್ಜನಾರ್ಧನ ಸ್ವಾಮಿಯನ್ನು ಹಂಸೋಕ್ತ ರೀತಿಯಿದಲೂ, ಪಾಂಚರಾತ್ರಾಗಮ ರೀತಿಯಿಂದಲೂ ಪೂಜಿಸಿದನು.

ರುದ್ರಾದಿ ಮೊದಲಾದ ದೇವತೆಗಳು ಶ್ರೇಷ್ಠವಾದ ಈ ಪಾದತೀರ್ಥದಲ್ಲಿ ಸ್ನಾನಮಾಡಿ ಶ್ರೀಹರಿಯನ್ನು ಪೂಜಿಸಿ ಇಷ್ಟಸಿದ್ಧರಾದ ಈ ಶ್ರೀಪಾದತೀರ್ಥದಲ್ಲಿ ಯಾವ ಮನುಷ್ಯನು

ತತ್ರ ಸ್ನಾತ್ವಾ ಚ ಪೀತ್ವಾ ಚ ನರೋಹತ್ಯಾದ್ವ್ಯಪೋಹತಿ ।
ವಿಮುಕ್ತಿ ಸ್ಸರ್ವಪಾಪೈಶ್ಚ ಕೈವಲ್ಯಂ ಪ್ರತಿಪದ್ಯತೇ ॥ ೫೮ ॥

॥ ಇತಿ ಶ್ರೀ ಬ್ರಹ್ಮಾಂಡಪುರಾಣೇ ಶ್ರೀಕರಿಗಿರಿಮಹಾತ್ಮ್ಯೇ
ಪ್ರಥಮೋಧ್ಯಾಯಃ ಸಮಾಪ್ತಃ ॥

ಸ್ನಾನಮಾಡಿ ಇದನ್ನು ಪಾನಮಾಡುವನೋ ಅವನು ನರಹತ್ಯಾದಿ ಪಾಪಗಳಿಂದ ಮುಕ್ತನಾಗಿ ಮೋಕ್ಷವನ್ನೇ ಹೊಂದುವನು.

ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿರುವ ಕರಿಗಿರಿ ಮಹಾತ್ಮೆಯಲ್ಲಿ ಒಂದನೆಯ ಅಧ್ಯಾಯವು ಮುಕ್ತಾಯವಾಯಿತು.

॥ ಶ್ರೀಅಶ್ವಿನೀಹಯವದನಾಯನಮಃ ॥

ದ್ವಿತಿಯೋಧ್ಯಾಯಃ

ಶ್ರೀ ರಾಜೋವಾಚ :
ಸಾಧೂದಿತಂ ಮುನಿಶ್ರೇಷ್ಠ ಪರ್ವತೋ ಪವನಸ್ಯ ಚ ।
ಇದಾನೀಂ ಶ್ರೋತುಮಿಚ್ಛಾಮಿ ಪಾದತೀರ್ಥಸ್ಯ ವೈಭವಮ್ ॥ ೧ ॥
ಶ್ರದ್ಧದಾನಾಯ ಶಿಷ್ಯಾಯ ವಿಸ್ತಾರಾದ್ವಕ್ತುಮರ್ಹಸಿ ।
ನಾರಸಿಂಹಸ್ಯ ಮಾಹಾತ್ಮ್ಯಂ ದೂರ್ವಾಸಸ್ಯ ಋಷೇಸ್ತದಾ ॥ ೨ ॥
ತಚ್ಚಾಹಂ ಶ್ರೋತುಮಿಚ್ಛಾಮಿ ವದವಿಸ್ತರತೋಽನಘ ।
ಶ್ರೀ ವಸಿಷ್ಠೋವಾಚ :
ಶೃಣು ರಾಜನ್ ಪ್ರವಕ್ಷ್ಯಾಮಿ ಮಾಹಾತ್ಮ್ಯಂ ಪಾಪ ನಾಶನಮ್ ।
ಶೃಣ್ವತಾಂ ಸರ್ವ ಪಾಪಘ್ನಂ ಸದ್ಯೋಮುಕ್ತಿ ವಿದಾಯಕಮ್ ॥ ೩ ॥
ಪುರಾ ಕೃತಯುಗೇ ವಿಷ್ಣುಃ ಕ್ಷೀರಾಬ್ಧೌ ಸಮಚಿಂತಯತ್ ।
ಅಹಂ ಭುವಂ ಸಮಾಸಾದ್ಯ ಕ್ರೀಡಾರ್ಥಂ ದೇವತೈಸ್ಸಃ ॥ ೪ ॥
ಬ್ರಹ್ಮಾದ್ಯೈಃ ಪೂಜಿತೋ ನಿತ್ಯಂ ತಿಷ್ಠಾಮಿ ವಸುಧಾತಲೇ ।

ಶ್ರೀ ರಾಜಾನು ಕೇಳುತ್ತಾನೆ. ಮುನಿಶ್ರೇಷ್ಠರೇ, ಇದುವರೆಗೆ ನಿಮ್ಮಿಂದ ಪರ್ವತ ಮತ್ತು ಉಪವನ ಇವುಗಳ ವಿಷಯವು ಚೆನ್ನಾಗಿ ಹೇಳಲ್ಪಟ್ಟಿತು. ಈಗ ಶ್ರೀಪಾದತೀರ್ಥದ ವೈಭವವನ್ನೂ, ನರಸಿಂಹ ಮತ್ತು ದೂರ್ವಾಸ ಋಷಿಗಳ ಮಾಹಾತ್ಮ್ಯೆಯನ್ನೂ ಕೇಳಲಿಚ್ಛಿಸುತ್ತೇನೆ. ಅವುಗಳನ್ನು ಶ್ರದ್ಧೆಯುಳ್ಳ ಶಿಷ್ಯನಾದ ನನಗೆ ವಿಸ್ತಾರವಾಗಿ ದಯವಿಟ್ಟು ಹೇಳಬೇಕು.

ಶ್ರೀ ವಸಿಷ್ಠರು ಹೇಳುತ್ತಾರೆ. ಎಲ್ಲೈ ದೊರೆಯೇ, ಕೇಳುವವರಿಗೆ ಸಮಸ್ತವಾದ ಪಾಪವನ್ನು ಹೋಗಲಾಡಿಸಿ ತತ್ ಕ್ಷಣವೇ ಮುಕ್ತಿಯನ್ನು ಕೊಡತಕ್ಕ ಈ ಮಾಹಾತ್ಮ್ಯೆಯನ್ನು ಹೇಳುತ್ತೇನೆ ಕೇಳು. ಕೃತಯುಗದಲ್ಲಿ ಕ್ಷೀರಸಾಗರದಲ್ಲಿ ವಿಷ್ಣುವು ದೇವತೆಗಳೊಡನೆ ಭೂಲೋಕಕ್ಕೆ ಹೋಗಿ ಅಲ್ಲಿ ದೇವತೆಗಳು, ಋಷಿಗಳು, ಗಂಧರ್ವರು, ಅಪ್ಸರೆಯರು, ಯಜ್ಞಶೀಲರಾದ ಮುನಿಗಳು ಮತ್ತು ಮನುಷ್ಯರು ಇವರ ಮತ್ತು

ದೇವಾನಾಂ ಚ ಋಷೀಣಾಂ ಚ ಗಂಧರ್ವಾಪ್ಸರಾಣಾಂ ತಥಾ ॥ ೫ ॥
ಶ್ರೀ ರಾಜೋವಾವಾಚ :
ಮುನೀನಾಂ ಯಜ್ಞಶೀಲಾನಾಂ ಮನುಜಾನಾಂ ತಥೈವಚ ।
ಧರ್ಮ ಸಂರಕ್ಷಣಾರ್ತಾಯ ರಾಕ್ಷಸಾನಾಂ ವಧಾಯಚ ॥ ೬ ॥
ಏವಂ ಸಂಚಿಂತ್ಯ ಭಗವಾನ್ ಉವಾಚ ಚತುರಾನನಮ್ ।
ಬ್ರಹ್ಮನ್ ಶೃಣುತ್ವಂ ಮದ್ವಾಕ್ಯಂ ಸೌಖ್ಯದಂ ಸರ್ವದೇಹಿನಾಮ್ ॥ ೭ ॥
ತ್ವಂ ಚ ಗಚ್ಚ ಮಹಾಪ್ರಾಜ್ಞ ಭೂಲೋಕಂ ಪ್ರತಿಪದಚ ।
ತತ್ರ ಭೂಮೌ ಮಹಾಲಕ್ಷ್ಮ್ಯ ಭೃತ್ಕರಿಭೂದರ ನಾಮಕಃ ॥ ೮ ॥
ಆಸ್ತೇ ಬ್ರಹ್ಮ ತ್ವಯಾ ತತ್ರ ತಪಃ ಕಾರ್ಯ ಮಹಾಮತೇ ।
ತಪಸಾ ತವ ಸಂತುಷ್ಟಃ ದಾಸ್ಯಾಮಿಷ್ಟಂ ಸುಖಾವಹಮ್ ॥ ೯ ॥
ಇತಿ ಶೃತ್ವಾ ಹರೇರ್ವಾಕ್ಯಂ ಪ್ರಸನ್ನ ವದನೋ ನೃಪಃ ।
ತಥೇತ್ಯುಕ್ತ್ವಾऽಥ ಬ್ರಹ್ಮಾತು ಭುವಂ ಪ್ರತಿ ಯಯೌ ಮುದಾ ॥ ೧೦ ॥
ತತ್ರ ಭೂಮೌ ಮಹಾಶ್ಶೈಲಃ ಪುಷ್ಪಾಚಲ ಇತಿ ಸ್ಮೃತಃ ।
ತಂ ಶೈಲಂ ಪ್ರಾಪ್ಯ ವೈ ಬ್ರಹ್ಮಾ ಪಾದತೀರ್ಥೇ ನಿಮಜ್ಜ್ಯಚ ॥ ೧೧ ॥
ತತ್ರೋಪವಿಷ್ಟ ಸ್ಸುಮನಃ ಪರಮೇಷ್ಠೀ ಜಜಾಪಃ ।

ಧರ್ಮದ ಸಂರಕ್ಷಣೆಗಾಗಿಯೂ ಮತ್ತು ರಾಕ್ಷಸರ ನಾಶಕ್ಕಾಗಿಯೂ, ಬ್ರಹ್ಮನೇ ಮೊದಲಾದವರಿಂದ ನಿತ್ಯವೂ ಪೂಜಿಸಲ್ಪಡುತ್ತಾ ಭೂಲೋಕದಲ್ಲಿ ರುತ್ತೇನೆಂದು ಯೋಚಿಸಿ ಪರಮಾತ್ಮನು ಬ್ರಹ್ಮನನ್ನು ಕುರಿತು ಎಲೈ ಬ್ರಹ್ಮನೇ, ಸಮಸ್ತ ಪ್ರಾಣಿಗಳಿಗೂ ಸುಖದಾಯಕವಾದ ನನ್ನ ಮಾತನ್ನು ಕೇಳು. ಮಹಾಪ್ರಾಜ್ಞಶಾಲಿಯಾದ ನೀನು ಭೂಲೋಕಕ್ಕೆ ಹೋಗು. ಅಲ್ಲಿ ಕರಿಗಿರಿ ಎಂಬ ಪರ್ವತವಿದೆ; ನೀನು ಅಲ್ಲಿ ತಪಸ್ಸನ್ನು ಆಚರಿಸುವವನಾಗು. ನಿನ್ನ ತಪಸ್ಸಿಗೆ ನಾನು ಮೆಚ್ಚಿ ನಿನಗೆ ಸೌಖ್ಯದಾಯಕವಾದ ನಿನ್ನ ಇಷ್ಟಾರ್ಥವನ್ನು ಕೊಡುತ್ತೇನೆ ಎಂದು ಹೇಳಿದನು. ಹರಿಯ ಈ ಮಾತನ್ನು ಕೇಳಿ ಬ್ರಹ್ಮನು ಪ್ರಸನ್ನವದನನಾಗಿ ಹಾಗೆಯೇ ಆಗಲಿ ಎಂದು ಹೇಳಿ ಭೂಲೋಕಕ್ಕೆ ಹೊರಟನು. ಅಲ್ಲಿ ಪುಷ್ಪಾಚಲವೆಂಬ ಪರ್ವತವು ಇತ್ತು. ಬ್ರಹ್ಮನು ಆ ಪರ್ವತವನ್ನು ಸೇರಿ ಶ್ರೀಪಾದತೀರ್ಥದಲ್ಲಿ ಸ್ನಾನಮಾಡಿ ಅಲ್ಲಿ ಆಸೀನರಾಗಿ ಶುದ್ಧ ಮನಸ್ಸಿನಿಂದ

ನರಸಿಂಹಂ ಮನಸಾ ಧ್ಯಾಯನ್ ವರ್ಷಾಣಾಂ ಅಯುತಂ ತದಾ ॥೧೨॥
ತಪ್ಯಮಾನಸ್ತದಾ ಬ್ರಹ್ಮಾ ಹರಿಃ ಪರಮ ಪೂರುಷಃ ।
ಆವಿರಾಸೀನ್ಮಹಾವಿಷ್ಣುಃ ನರಸಿಂಹೋ ಬ್ರಹ್ಮಣಃ ಪುರಾ ॥ ೧೩ ॥
ತದಾ ಪ್ರೋವಾಚ ಭಗವಾನ್ ಬ್ರಹ್ಮಾಣಂ ನೃಹರಿ ಸ್ವಯಮ್ ।
ಅಲಂ ಬ್ರಹ್ಮನ್ ಮಹಾಪ್ರಾಜ್ಞಾ ತಪಸಾ ತೋಷಿತೋಮಮ್ ॥ ೧೪ ॥
ವರಂ ವೃಣೀಷ್ವ ಭದ್ರಂತೇ ವರದೋಹಮಿಹಾಗತಃ ।
ಏವಂ ಪ್ರತ್ಯುದಿತಂ ಶೃತ್ವಾ ಉಪಸ್ತೇಪೇ ಪಿತಾಮಃ ॥ ೧೫ ॥
ನನಾಮ ದಂಡವದ್ಭಕ್ತ್ಯಾ ಪಾದಯೋಃ ಪರಮಾತ್ಮನಃ ।
ತುಷ್ಟಾವ ಪರಯಾಭಕ್ತ್ಯಾ ನಾರಸಿಂಹಂ ಸನಾತನಮ್ ॥ ೧೬ ॥
ಶ್ರೀ ಬ್ರಹ್ಮೋವಾಚ :
ನತೋಸ್ಮ್ಯನಂತಾಯ ದುರಂತ ಶಕ್ತಯೇ
ವಿಚಿತ್ರ ವೀರ್ಯಾಯ ಪವಿತ್ರ ಕರ್ಮಣೇ ।
ವಿಶ್ವಸ್ಯ ಸರ್ಗಸ್ಥಿತಿ ಸಮ್ಯಮಾನ್ ಗುಣೈಃ
ಸ್ವಲೀಲಯಾ ಸಂವಿದಧೇವ್ಯಯಾತ್ಮನೇ ॥ ೧೭ ॥

ಧ್ಯಾನಮಾಡುತ್ತಾ ಹತ್ತು ಸಾವಿರ ವರುಷ ಕಳೆದರು. ಬ್ರಹ್ಮನು ಆ ರೀತಿಯಾಗಿ ತಪಸ್ಸುಮಾಡಲು ಪರಮಪುರುಷನಾದ ವಿಷ್ಣುವು ಬ್ರಹ್ಮನ ಎದುರಿಗೆ ನೃಸಿಂಹನಾಗಿ ಪ್ರಾದುರ್ಭವಿಸಿ ಎಲೈ ಮಹಾಪ್ರಾಜ್ಞಶಾಲಿಯಾದ ಬ್ರಹ್ಮನೇ, ಸಾಕು! ಸಾಕು! ನಿನ್ನ ತಪಸ್ಸಿನಿಂದ ನಾನು ತೃಪ್ತನಾದೆ; ನಿನಗೆ ಬೇಕಾದ ವರವನ್ನು ಬೇಡು; ವರವನ್ನು ಕೊಡಲು ನಾನು ಬಂದಿದ್ದೇನೆ ಎಂದು ಹೇಳಿದನು. ಹೀಗೆ ಹೇಳಿದ ಮಾತನ್ನು ಕೇಳಿ ಬ್ರಹ್ಮನು ಆ ಮಹಾವಿಷ್ಣುವಿಗೆ ದಂಡಪ್ರಣಾಮವನ್ನು ಮಾಡಿ ಸನಾತನನಾದ ನರಸಿಂಹನನ್ನು ಪರಮ ಭಕ್ತಿಯಿಂದ ತೃಪ್ತಿ ಪಡಿಸಿದನು.

ಶ್ರೀ ಬ್ರಹ್ಮದೇವರು ಹೇಳುತ್ತಾರೆ. ನಾಶರಹಿತನಾದ, ಪಾರವಿಲ್ಲದ ಶಕ್ತಿಯುಳ್ಳ ವಿಚಿತ್ರ ಪರಾಕ್ರಮವುಳ್ಳ, ಪರಿಶುದ್ಧನಾದ ಕರ್ಮವುಳ್ಳ, ನಿಜಲೀಲೆಯಿಂದ ಸತ್ವರಜಸ್ತಮೋಗುಣಗಳಿಂದ ಪ್ರಪಂಚದ ಸೃಷ್ಟಿಸ್ಥಿತಿಲಯಗಳನ್ನು ಮಾಡುವ ಮತ್ತು

ನಮೋ ನೃಸಿಂಹಾಯ ವರಪ್ರದಾಯಿನೇ
ಭಕ್ತಾನುರಾಗಾಯ ವಿಮುಕ್ತಿ ದಾಯಿನೇ ।
ಸುರಾಸುರಾಣಾಂ ವಿಭವಾಯ ತುಭ್ಯಂ
ಲಕ್ಷ್ಮೀಧರಾಯಾಽಖಿಲ ಪೂಜಿತಾಯ ॥ ೧೮ ॥
ಇತಿ ಸ್ತುತ್ವಾ ಹರಿಂ ಬ್ರಹ್ಮ ಸಲಕ್ಷ್ಮೀಕಂಜನಾರ್ಧನಮ್ ।
ಪೂಜಯಾಮಾಸ ತನ್ಮಂತ್ರೈಃ ಪಂಚರಾತ್ರಾಗಮೈಃ ಪೃಥಕ್ ॥ ೧೯ ॥
ಪಾದತೀರ್ಥ ತಟೇ ದೇವಂ ಕಮಂಡಲ ಜಲೇನತು ।
ಅಭಿಷಿಂಚ್ಯಚ ವಿಧಾನೇನ ಹರಿಂ ಪರಮ ಪಾವನಮ್ ॥ ೨೦ ॥
ಅಭಿಷೇಕೇ ಕೃತೇರಾಜನ್ ಬ್ರಹ್ಮಣಾ ಲೋಕ ಕರ್ತೃಣಾ ।
ತದಾ ಕಮಂಡಲಜಲಂ ಹರಿಪಾದಾತ್ಪಪಾತಯತ್ ॥ ೨೧ ॥
ಮಿಲಿತ್ವಾ ತತ್ಪಾದತೀರ್ಥೇ ಕರಹಸ್ತೋದಕಂ ಕಿಲ ।
ತದಾ ಪ್ರಭೃತಿ ಲೋಕೇಸ್ಮಿನ್ ಋಷಿಭಿಃ ಕಥ್ಯತೇ ನೃಪ ॥ ೨೨ ॥
ಪಾದತೀರ್ಥೇತಿ ಸರ್ವೈಶ್ಚ ಕಥ್ಯತೇ ನೃಪಪುಂಗವ ।
ಬ್ರಹ್ಮಾದ್ಯಾ ದೇವತಾ ಸರ್ವಾಃ ಪಾದತೀರ್ಥೇ ಸುನಿರ್ಮಲೇ ॥ ೨೩ ॥

ಭಕ್ತರ ಇಷ್ಟಾರ್ಥಗಳನ್ನು ನೆರವೇರಿಸುವ, ಭಕ್ತರಲ್ಲಿ ವಿಶ್ವಾಸವುಳ್ಳ, ಮುಕ್ತಿದಾಯಕನಾದ ಮಹಾವೈಭವವುಳ್ಳ ಲಕ್ಷ್ಮೀಯನ್ನು ಧರಿಸುವ, ಸಕಲರಿಂದಲೂ ಪೂಜಿಸಲ್ಪಡುವ ನಿನಗೆ ನಮಸ್ಕಾರ ಎಂದು ಸ್ತೋತ್ರ ಮಾಡಿದನು. ಬ್ರಹ್ಮನು ಲಕ್ಷ್ಮೀಸಮೇತನಾದ ವಿಷ್ಣುವನ್ನು ಈ ರೀತಿಯಾಗಿ ಸ್ತೋತ್ರಮಾಡಿ, ಆಯಾ ಮಂತ್ರಗಳಿಂದ ಪಾಂಚರಾತ್ರಾಗಮೋಕ್ತ ಪ್ರಕಾರವಾಗಿ ಪ್ರತ್ಯೇಕವಾಗಿ ಪೂಜೆಮಾಡಿದನು. ಶ್ರೀಪಾದತೀರ್ಥದ ದಡದಲ್ಲಿ ಪರಮಪಾವನನಾದ ಆ ನೃಸಿಂಹನಿಗೆ ಸೃಷ್ಟಿಕರ್ತನಾದ ಬ್ರಹ್ಮನು ಕಮಂಡಲದ ಜಲದಿಂದ ಅಭಿಷೇಕ ಮಾಡಲು ಕಮಂಡಲದ ಜಲವು ನರಸಿಂಹನ ಪಾದದಿಂದ ಕೆಳಗೆ ಬಿತ್ತು. ಈ ಹರಿಪಾದ ಸಂಬಂಧ ಜಲವು ಅಲ್ಲಿದ್ದ ತೀರ್ಥದೊಡನೆ ಸೇರಿ ಅಂದಿನಿಂದ ಲೋಕದಲ್ಲಿ ಶ್ರೀಪಾದತೀರ್ಥವೆಂದು ಕರೆಯಲ್ಪಟ್ಟಿತು. ಬ್ರಹ್ಮನೇ ಮೊದಲಾದ ಸಮಸ್ತ ದೇವತೆಗಳೂ ನಿರ್ಮಲವಾದ ಈ ಶ್ರೀಪಾದತೀರ್ಥದಲ್ಲಿ ಪ್ರತಿನಿತ್ಯವೂ ಸ್ನಾನಮಾಡಿ

ಸ್ನಾತ್ವಾ ನಿತ್ಯಂ ಸಮಭ್ಯರ್ಚ್ಯ ಸಂಸಿದ್ಧಿ ಪರಮಾಂಗತಾಃ ।
ತಸ್ಮಾದ್ ರಾಜಾ ಪಾದತೀರ್ಥೇ ಸ್ನಾನಂ ಚ ಸುಸಮಾಚರ ॥ ೨೪ ॥
ಇತಃ ಪರಂ ಪ್ರವಕ್ಷ್ಯಾಮಿ ತೀರ್ಥಂ ನೃಹರಿ ನಾಮಕಮ್ ।
ಪರಾಶರ ಋಷಿಸ್ತತ್ರ ತೀರ್ಥೇ ನೃಹರಿ ನಾಮಕೇ ॥ ೨೫ ॥
ಅವಗಾಹ್ಯ ಸದಾತಸ್ಮಿನ್ ಬ್ರಹ್ಮಣಾ ಚೋದಿತೋ ಋಷಿಃ ।
ನಾರಸಿಂಹಂ ಸಲಕ್ಷ್ಮೀಕಂ ಧ್ಯಾಯನ್ನಾಸ್ತೇ ಗಿರೌ ಮುದಾ ॥ ೨೬ ॥
ಅಸ್ಮಿನ್ ಕರಿಗಿರೌ ರಾಜನ್ ನವತೀರ್ಥಾನಿ ಸಂತಿವೈ ।
ತೀರ್ಥಾನಾಂ ಸಮವೇತಾನಾಂ ನಾಮಾನಿ ಶೃಣು ಭೂಮಿಪ ॥ ೨೭ ॥
ಪಾದತೀರ್ಥಮಿತಿಖ್ಯಾತಂ ತಥಾ ನೃಹರಿ ನಾಮಕಮ್ ।
ಪರಾಶರಮಿತಿ ಪ್ರೋಕ್ತಂ ತೀರ್ಥಂ ವೃಷಭ ನಾಮಕಮ್ ॥ ೨೮ ॥
ಗಜೇಂದ್ರತೀರ್ಥ ನಾಮಾನಂ ಕಾಶಿತೀರ್ಥಮಿತಿ ಸ್ಫುಟಮ್ ।
ರಾಮತೀರ್ಥಂ ಚಕ್ರತೀರ್ಥಂ ಧನುಸ್ತೀರ್ಥಂ ತಥೈವಚ ॥ ೨೯ ॥
ಜಯಮಂಗಲ ನಾಮಾನೌ ನದ್ಯೌ ಸಂತಿ ನಘೋತ್ತಮೇ ।
ಗಿರೇಶ್ಚ ಪರಿತೋ ನಿತ್ಯಂ ಮಾಲಾರೂಪೇ ಶುಭಾವಹೇ ॥ ೩೦ ॥

ನೃಸಿಂಹನನ್ನು ಪೂಜಿಸಿ ಮೋಕ್ಷವನ್ನು ಹೊಂದಿದರು.

ಎಲೈ ರಾಜನೇ, ಆದುದರಿಂದ ನೀನು ಶ್ರೀಪಾದತೀರ್ಥದಲ್ಲಿ ಸ್ನಾನಮಾಡು; ಇನ್ನು ಮುಂದೆ ನೃಸಿಂಹತೀರ್ಥದ ವಿಷಯವನ್ನು ಹೇಳುತ್ತೇನೆ. ಪರಾಶರಮಹರ್ಷಿಗಳು ಆ ನೃಸಿಂಹತೀರ್ಥದಲ್ಲಿ ಸ್ನಾನಮಾಡಿ, ಬ್ರಹ್ಮದೇವರಿಂದ ಪ್ರೇರೆಪಿಸಲ್ಪಟ್ಟು, ಲಕ್ಷ್ಮೀಯುಕ್ತನಾದ ನರಸಿಂಹನನ್ನು ಧ್ಯಾನಮಾಡುತ್ತಾ ಸಂತೋಷದಿಂದ ಆ ಪರ್ವತದಲ್ಲಿರುತ್ತಾರೆ. ಎಲೈ ದೊರೆಯೇ, ಈ ಕರಿಗಿರಿ ಕ್ಷೇತ್ರದಲ್ಲಿ ನವತೀರ್ಥಗಳಿವೆ. ಆ ತೀರ್ಥಗಳ ಹೆಸರನ್ನು ಕೇಳು. ಶ್ರೀಪಾದತೀರ್ಥ, ನೃಸಿಂಹತೀರ್ಥ, ಪರಾಶರತೀರ್ಥ, ವೃಷಭತೀರ್ಥ, ಗಜೇಂದ್ರತೀರ್ಥ, ಕಾಶೀತೀರ್ಥ, ರಾಮತೀರ್ಥ, ಚಕ್ರತೀರ್ಥ, ಧನುಸ್ತೀರ್ಥಗಳೆಂಬ ನವತೀರ್ಥಗಳೂ, ಬೆಟ್ಟದ ಸುತ್ತಲೂ ಮಾಲೆಯಂತೆ ಸುತ್ತಿಕೊಂಡಿರುವ ಜಯಾ–ಮಂಗಳವೆಂಬ ನದಿಗಳೂ ಇವೆ. ಈ ನದಿಗಳ ತೀರದಲ್ಲಿ

ನಿತ್ಯಂ ಸನ್ನಿಹಿತಾ ದೇವಾಸ್ತಟೇ ನದ್ಯೋಽಶ್ಚರಂತಿ ಹಿ ।
ಶ್ರೀ ರಾಜೋವಾಚ :
ವಸಿಷ್ಠ ಮುನಿಶಾರ್ದೂಲ ಪುರಾ ಪ್ರೋಕ್ತಂ ತ್ವಯಾನಘ ।
ನೃಸಿಂಹತೀರ್ಥ ಮಾಹಾತ್ಮ್ಯಂ ಕೃಪಯಾ ವದ ವಿಸ್ತರಾತ್ ॥ ೩೧ ॥
ನೃಸಿಂಹತೀರ್ಥ ಸಂಭೂತಂ ವೈಭವಂ ಪಾಪ ನಾಶನಮ್ ।
ಸರ್ವೇಷಾಂ ಮನುಜಾನಾಂ ಹಿ ಸರ್ವಾಽಘೌಘ ವಿನಾಶನಮ್ ॥ ೩೨ ॥
ಶ್ರೀ ವಸಿಷ್ಠೋವಾಚ :
ಶೃಣುರಾಜನ್ ಪ್ರವಕ್ಷಾಮಿ ಮಹಾತ್ಮ್ಯಂ ಪುಣ್ಯ ವರ್ಧನಮ್ ।
ನೃಸಿಂಹತೀರ್ಥೇ ಸಂಭೂತಂ ಮೋಕ್ಷದಂ ಪುಣ್ಯಕರ್ಮಣಾಮ್ ॥ ೩೩ ॥
ಪರಾಶರಾದಯೋ ಭೂಪ ತೀರ್ಥೇ ನೃಹರಿ ನಾಮಕೇ ।
ಅವಗಾಹ್ಯ ತದಾತಸ್ಮಿನ್ ತಪಸ್ತೇಪೇ ಸುನಿರ್ಮಲೇ ॥ ೩೪ ॥
ತತ್ರಾಗತಾನಾಂ ಸರ್ವೇಷಾಂ ಋಷೀಣಾಂ ಚ ಮಹಾತ್ಮನಾಮ್ ।
ನಾಮಾನಿ ಸಂಪ್ರವಕ್ಷ್ಯಾಮಿ ಶೃಣು ರಾಜಕುಲೋದ್ಭವ ॥ ೩೫ ॥
ಸನಕಶ್ಚ ಸನಂದಶ್ಚ ಸನಾತನ ಋಷೀ ಸ್ತಥಾ ।

ದೇವತೆಗಳು ಪ್ರತಿನಿತ್ಯವೂ ಸಂಚಾರಮಾಡುತ್ತಾರೆ.

ಶ್ರೀ ರಾಜನು ಕೇಳುತ್ತಾನೆ. ಮುನಿಶ್ರೇಷ್ಠರಾದ ವಸಿಷ್ಠರೇ, ನೃಸಿಂಹತೀರ್ಥವೆಂದು ತಾವು ಮೊದಲು ಹೇಳಿದಿರಿ; ಅದರ ಮಹಾತ್ಮೆಯನ್ನು ದಯವಿಟ್ಟು ವಿಸ್ತಾರವಾಗಿ ಹೇಳಬೇಕು. ನೃಸಿಂಹತೀರ್ಥದಿಂದುಂಟಾದ ವೈಭವನ್ನೂ, ಪಾಪವನ್ನು ಹೋಗಲಾಡಿಸತಕ್ಕ ತೀರ್ಥಗಳ ಮಾಹಾತ್ಮ್ಯೆಯನ್ನೂ ಹೇಳಬೇಕು.

ಅದಕ್ಕೆ ಶ್ರೀ ವಸಿಷ್ಠರು ಹೇಳುತ್ತಾರೆ. ಎಲೈ ರಾಜನೇ, ಪುಣ್ಯವನ್ನು ಹೆಚ್ಚಿಸತಕ್ಕ ಪುಣ್ಯಕಾಮಿಗಳಿಗೆ ಮೋಕ್ಷವನ್ನು ಕೊಡತಕ್ಕ ನೃಸಿಂಹತೀರ್ಥದಲ್ಲಿ ಪರಾಶರರೇ ಮೊದಲಾದವರು ಸ್ನಾನಮಾಡಿ, ಅಲ್ಲಿ ನಿರ್ಮಲ ಚಿತ್ತರಾಗಿ ತಪಸ್ಸನ್ನು ಮಾಡಿದರು. ಮಹಾನುಭಾವರಾದ ಅಲ್ಲಿಗೆ ಬಂದ ಎಲ್ಲಾ ಋಷಿಗಳ ಹೆಸರನ್ನೂ ಹೇಳುತ್ತೇನೆ. ಅವರು ಯಾರೆಂದರೆ: ಸನಕಸನಂದರು, ಕಪಿಲ, ವ್ಯಾಸ, ಚ್ಯವನ, ಕಣ್ವ, ಕಾತ್ಯಾಯನ,

ಕಪಿಲೋ ವ್ಯಾಸ ಚ್ಯವನೌ ಕಣ್ವಃ ಕಾತ್ಯಾಯನ ಸ್ತಥಾ ॥ ೩೬ ॥
ಪರಾಶರ ವಸಿಷ್ಠೌ ಚ ಕಶ್ಯಪೋತ್ರಿಶ್ಚ ಗಾಲವಃ ।
ವಿಶ್ವಾಮಿತ್ರ ಭರದ್ವಾಜೌ ಗೌತಮೋ ನಾರದ ಸ್ತಥಾ ॥ ೩೭ ॥
ಮೈತ್ರೇಯೋ ಮೌದ್ಗಲೋಗಸ್ತ್ಯಃ ವಾಲಖಿಲ್ಯಾದಯೋ ನೃಪ ।
ಬ್ರಹ್ಮಣಾ ಸಹಸಂಗತ್ಯ ತೀರ್ಥೇ ನೃಹರಿ ನಾಮಕೇ ॥ ೩೮ ॥
ನೃಸಿಂಹಂ ಪೂಜಯಾಮಾಸುಃ ತೀರೇ ತೀರ್ಥಸ್ಯ ಸುವ್ರತಾಃ ।
ಕಮಂಡಲ್ವೈಸ್ಸಮಾನೀಯ ತೀರ್ಥ ತೋಯಾನಿ ನಿತ್ಯಶಃ ॥ ೩೯ ॥
ಶ್ರೀ ವಸಿಷ್ಠೋವಾಚ :
ಸಂಸ್ಥಾಪ್ಯ ಭದ್ರಪೀಠೇತು ನಾರಸಿಂಹಂ ಸನಾತನಮ್ ।
ಪಾದಪದ್ಮಯುಗೇ ತತ್ರ ತೀರ್ಥೇ ಶ್ರೀಪಾದ ಸಂಜ್ಞಿಕೇ ॥ ೪೦ ॥
ಚಕ್ರುಃ ಪ್ರಕ್ಷಾಲನಂ ತತ್ರ ಋಷಯೋ ಲೋಕ ವಿಶ್ರುತಾಃ ।
ತಸ್ಮಾತ್ ಕೃತಯುಗೇ ರಾಜನ್ ಬ್ರಹ್ಮಾದ್ಯೈಸ್ಸೇವಿತೋ ಹರಿಃ ॥ ೪೧ ॥
ಪಾದತೀರ್ಥತಟೇ ವಾಸಂ ಚಕಾರ ಪುರುಷೋತ್ತಮಃ ।
ನೃಸಿಂಹತೀರ್ಥೇ ಯೇ ಸ್ನಾನಂ ಕುರ್ವಂತಿ ಭುವಿ ಮಾನವಾಃ ॥ ೪೨ ॥

ಪರಾಶರ, ವಸಿಷ್ಠ, ಕಶ್ಯಪ, ಅತ್ರಿ, ಗಾಲವ, ವಿಶ್ವಾಮಿತ್ರ, ಭರದ್ವಾಜ, ಗೌತಮ, ನಾರದ, ಮೈತ್ರೇಯ, ಮೌದ್ಗಲ್ಯ, ಅಗಸ್ತ್ಯ, ವಾಲಖಿಲ್ಯ ಇವರೇ ಮೊದಲಾದ ಋಷಿಗಳು ಬ್ರಹ್ಮನೊಡನೆ ನೃಸಿಂಹತೀರ್ಥಕ್ಕೆ ಬಂದು, ನೃಸಿಂಹತೀರ್ಥದ ದಡದಲ್ಲಿ ವ್ರತಾನುಷ್ಠಾನಪರಾಯಣರಾಗಿ ನೃಸಿಂಹನನ್ನು ಪೂಜಿಸಿದರು. ಲೋಕದಲ್ಲಿ ಪ್ರಖ್ಯಾತರಾದ ಋಷಿಗಳು ಪ್ರತಿದಿನವೂ ಕಮಂಡಲದಲ್ಲಿ ಈ ತೀರ್ಥಗಳನ್ನು ತೆಗೆದುಕೊಂಡು ಬಂದು ನೃಸಿಂಹಸ್ವಾಮಿಯನ್ನು ಭದ್ರಪೀಠದಲ್ಲಿ ಕುಳ್ಳಿರಿಸಿ ಶ್ರೀಪಾದವೆಂಬ ಆ ತೀರ್ಥದಲ್ಲಿ ನರಸಿಂಹನ ಪಾದಯುಗ್ಮವನ್ನು ತೊಳೆಯುತ್ತಿದ್ದರು. ಅಂದಿನಿಂದ ಆ ತೀರ್ಥಕ್ಕೆ ಋಷಿಗಳು ನರಸಿಂಹತೀರ್ಥವೆಂದು ಕರೆದರು. ಆದುದರಿಂದ ಎಲ್ಲೈ ದೊರೆಯೇ, ಕೃತಯುಗದಲ್ಲಿ ಬ್ರಹ್ಮನೇ ಮೊದಲಾದವರಿಂದ ಸೇವಿಸಲ್ಪಡುತ್ತಿದ್ದ ಆ ನೃಸಿಂಹನು ಪಾದತೀರ್ಥದಲ್ಲಿ ವಾಸಿಸುತ್ತಿದ್ದನು. ಯಾವ ಮನುಷ್ಯರು ಭೂಲೋಕದಲ್ಲಿ ನೃಸಿಂಹತೀರ್ಥದಲ್ಲಿ

ತೇ ಸರ್ವೇ ಪಾಪ ನಿರ್ಮುಕ್ತಾ ಯಾಂತಿ ಬ್ರಹ್ಮ ಸನಾತನಮ್ ।
ನೃಸಿಂಹತೀರ್ಥೇ ಶ್ರೀಪಾದೇ ಸ್ನಾತಾನಾಂ ಪುಣ್ಯಕರ್ಮಣಾಮ್ ॥ ೪೩ ॥
ಗಂಗಾಯಾಂ ಕೋಟಿವಾರಂತು ಪ್ರೋಕ್ತಂ ಯನ್ಮಜ್ಜನೇನತು ।
ತತ್ಫಲಂ ಸಮವಾಪ್ನೋತಿ ನಾತ್ರಕಾರ್ಯಾ ವಿಚಾರಣಾ ॥ ೪೪ ॥
ತಸ್ಮಾತ್ ಸರ್ವ ಪ್ರಯತ್ನೇನ ತೀರ್ಥೇ ಯಃ ಸ್ನಾನಮಾಚರೇತ್ ।
ಬ್ರಹ್ಮಘ್ನಶ್ಚ ಕೃತಘ್ನಶ್ಚ ಬ್ರೂಣಹಾ ಗುರುತಲ್ಪಗಃ ॥ ೪೫ ॥
ಸದ್ಯಃ ಪಾಪಃ ವಿನಿರ್ಮುಕ್ತೋ ಯಾತಿ ವಿಷ್ಣೋಃ ಪರಂ ಪದಮ್ ।
ಪರಾಶರಋಷಿ ಸ್ತತ್ರ ತೀರ್ಥೇ ನೃಹರಿ ನಾಮಕೇ ॥ ೪೬ ॥
ನೃಸಿಂಹಸ್ಯ ಪ್ರಸಾದಾರ್ಥಂ ತಪಸ್ತೇಪೇ ಸುದಾರುಣಮ್ ।
ಪರಾಶರ ಋಷಿರ್ಭೂಪ ಧ್ಯಾಯಾ ನ್ನಾರಾಯಣಂ ಪ್ರಭುಮ್ ॥ ೪೭ ॥
ವರ್ಷಾಣಾಂ ಚ ಸಹಸ್ರಂ ಹಿ ಚಚಾರ ತಪ ಉತ್ತಮಮ್ ।
ಪರಾಶರೇ ವರ್ತಮಾನೇ ದಾರುಣೇ ತಪಸಿ ಪ್ರಭುಃ ॥ ೪೮ ॥
ಆವಿರಾಸೀನ್ ಮಹಾವಿಷ್ಣುಃ ಪುರತೋಽಸ್ಯ ಮುನೇಸ್ತದಾ ।
ಸ್ತಿತ್ವಾ ಜಗಾದ ಭಗವಾನ್ ಮುನಿಂ ತಂ ಸಂಶ್ರಿತಂ ವ್ರತಮ್ ॥ ೪೯ ॥

ಸ್ನಾನಮಾಡುವರೋ ಅವರೆಲ್ಲರೂ ಪಾಪವಿಮುಕ್ತರಾಗಿ ಬ್ರಹ್ಮಪದವಿಯನ್ನು ಹೊಂದುತ್ತಾರೆ. ಈ ನೃಸಿಂಹ-ಶ್ರೀಪಾದತೀರ್ಥದಲ್ಲಿ ಸ್ನಾನಮಾಡಿದ ಪುಣ್ಯಾತ್ಮರಿಗೆ ಗಂಗೆಯಲ್ಲಿ ಕೋಟಿ ಸಲ ಸ್ನಾನಮಾಡಿದ ಪುಣ್ಯವು ಲಭಿಸುವುದು.

ಈವಿಷಯದಲ್ಲಿ ಸಂದೇಹವಿಲ್ಲ. ಆದ್ದರಿಂದ ಎಲೈ ರಾಜನೇ ನೀನು ಸರ್ವಪ್ರಯತ್ನದಿಂದಲೂ, ಆ ತೀರ್ಥದಲ್ಲಿ ಸ್ನಾನವನ್ನು ಮಾಡು. ಯಾರು ಈ ನೃಸಿಂಹತೀರ್ಥದಲ್ಲಿ ಸ್ನಾನ ಮಾಡುವರೋ ಅವರು ಬ್ರಹ್ಮಹತ್ಯೆಯೇ ಮಾಡಿರಲಿ, ಕೃತಘ್ನರೇ ಆಗಿರಲಿ, ಭ್ರೂಣಹತ್ಯವೇ ಮಾಡಿರಲಿ, ಗುರುದಾರರತನೇ ಆಗಿರಲಿ, ಆತನು ಕೂಡಲೇ ಪಾಪದಿಂದ ಮುಕ್ತನಾಗಿ ವಿಷ್ಣುವಿನ ಪರಮ ಪದವಿಯನ್ನು ಹೊಂದುತ್ತಾನೆ. ನಾರಾಯಣನನ್ನು ಧ್ಯಾನಿಸುತ್ತಾ ಈ ನೃಸಿಂಹತೀರ್ಥದಲ್ಲಿ ಪರಾಶರರು ನೃಸಿಂಹ ಪ್ರಸಾದಾರ್ಥವಾಗಿ ಉಗ್ರವಾದ ತಪಸ್ಸನ್ನು ಮಾಡಿದರು. ಪರಾಶರರು ಈ

ಶ್ರೀಭಗವಾನುವಾಚ :
ಪರಾಷರ ಋಷಿಶ್ರೇಷ್ಠ ಪ್ರೀತೋಸ್ಮಿ ತಪಸಾಽನಘ ।
ವರಂ ವರಯ ಭದ್ರಂತೇ ಯತ್ತೇ ಮನಸಿ ವರ್ತತೇ ॥ ೫೦ ॥
ಇತಿ ನಾರಾಯಣೇನೋಕ್ತಂ ಶ್ರುತ್ವಾ ಸ ಋಷಿಸತ್ತಮಃ ।
ಹರಿಂ ದೃಷ್ಟ್ವಾ ನ್ರುಪಶ್ರೇಷ್ಠಾ ಆಸನಾದುತ್ಥಿತೋ ಋಷಿಃ ॥ ೫೧ ॥
ನನಾಮ ದಂಡವದ್ಭಕ್ತ್ಯಾ ಶಿರಸಾ ಹರಿಮವ್ಯಯಮ್ ।
ಮಸ್ತಕೇ ನ್ಯಸ್ತ ಹಸ್ತಾಬ್ಜ ಯುಗಳಾನತಕಂದರಃ ॥ ೫೨ ॥
ತುಷ್ಟಾವ್ವವ ಪರಯಾಭಕ್ತ್ಯಾ ನತ್ವಾ ಚೈವಂ ಹರಿಂ ಪ್ರಭುಮ್ ।
ಶ್ರೀಪರಾಶರೋವಾಚ :
ನಮಃ ಪರಸ್ಮೈ ದೇವಾಯ ಪೂರ್ಣಷಾಡ್ಗುಣ್ಯ ಮೂರ್ತಯೇ ।
ನವೋಽನಂತಾಯ ವೇದ್ಯಾಯ ನವೋ ಜ್ಞಾನಧನಾಯಚ ॥ ೫೩ ॥
ನವೋ ಮಹಾತ್ಮದೇವಾಯ ಸಚ್ಚಿದಾನಂದ ರೂಪಿಣೇ ।
ಜ್ಞಾನಪ್ರದಾಯ ಭಕ್ತಾನಾಂ ವರದಾಯ ನವೋ ನಮಃ ॥ ೫೪ ॥
ನೃಸಿಂಹಾಯ ನಮಸ್ತುಭ್ಯಂ ವಜ್ರದಂಷ್ಟ್ರಾಯ ತೇ ನಮಃ ।

ರೀತಿಯಾಗಿ ಉಗ್ರವಾದ ತಪಸ್ಸನ್ನು ಮಾಡುತ್ತಿರಲು ಮಹಾವಿಷ್ಣುವು ಆ ಮಹರ್ಷಿಯ ಎದುರಿಗೆ ಆವಿರ್ಭವಿಸಿದನು. ಎದುರಿಗೆ ನಿಂತಿರುವ ಪರಾಶರ ಋಷಿಯನ್ನು ಕುರಿತು ಭಗವಂತನು ಹೇಳಿದನು.

ಶ್ರೀ ಭಗವಂತನು ಪರಾಶರ ಮಹರ್ಷಿಯೇ! ನಿನ್ನ ತಪಸ್ಸಿನಿಂದ ನಾನು ಪ್ರೀತನಾದೆನು. ನಿನ್ನ ಮನಸ್ಸಿನಲ್ಲಿ ಏನು ಒಳ್ಳೆಯದನ್ನು ಕೇಳಬೇಕೆಂದಿದೆಯೋ ಅದನ್ನು ಕೇಳು. ಎಂದು ಹೇಳಲು ಆ ಋಷಿಶ್ರೇಷ್ಠರು ಈ ಮಾತನ್ನು ಕೇಳಿ ನರಸಿಂಹನನ್ನು ನೋಡಿ ಪೀಠದಿಂದ ಎದ್ದು ಆಶ್ಚರ್ಯದಿಂದ ನರಸಿಂಹನಿಗೆ ಸಾಷ್ಟಾಂಗಪ್ರಣಾಮವನ್ನು ಮಾಡಿ, ಕರಕಮಲಗಳೆರಡನ್ನೂ ತಲೆಯ ಮೇಲಿಟ್ಟುಕೊಂಡು ತಲೆಯನ್ನು ಬಾಗಿಸಿ ಪರಮ ಭಕ್ತಿಯಿಂದ ಆ ನರಸಿಂಹನನ್ನು ಸ್ತೋತ್ರಮಾಡಿ ತೃಪ್ತಿಪಡಿಸಿದರು.

ವಾಸುದೇವಾಯ ಶಾಂತಾಯ ಗೋವಿಂದಾಯ ನಮೋ ನಮಃ ॥ ೫೫ ॥
ಸಮಸ್ತತ್ವೇನ ಲಭ್ಯಾಯ ಯೋಗೀಂದ್ರಾಯ ನಮೋ ನಮಃ ।
ಕಮಲಾ ವಿರಿಂಚಿ ಶರ್ವಾದಿ ದೇವಾನಾಂ ಜ್ಞಾನ ದಾಯಿನೇ ॥ ೫೬ ॥
ಲಕ್ಷ್ಮೀಶಾಯ ನಮಸ್ತುಭ್ಯಂ ಸಹಸ್ರಶಿರ ಚಕ್ಷುಷೇ ।
ಕೃಷ್ಣಾಯ ಕೃತಕೃತ್ಯಾಯ ನಮೋ ವಿಶ್ವಂಭರಾಯಚ ॥ ೫೭ ॥
ವೈಕುಂಠಾಯ ನಮಸ್ತುಭ್ಯಂ ಅನಿರುದ್ಧಾಯ ವೇಧಸೇ ।
ಶರ್ಮದಾಯ ನಮಸ್ತೇಸ್ತು ಯೋಗಿನೇ ವಿಶ್ವಮೂರ್ತಯೇ ॥ ೫೮ ॥
ಹಿರಣ್ಯಕಶಿಪೋರ್ಹಂತ್ರೇ ಭಕ್ತರಕ್ಷಾಯ ತೇ ನಮಃ ।
ವಜ್ರಾಯ ನಖವಜ್ರಾಯ ವಿದ್ಯುಚ್ಚಂಚಲ ಚಕ್ಷುಷೇ ॥ ೫೯ ॥
ವಿಶೇಷ ಜ್ಞಾನವಂದ್ಯಾಯ ಋಷೀಣಾಂ ಪತಯೇ ನಮಃ ।
ವರೇಣ್ಯಾಯ ವರಿಷ್ಠಾಯ ಶ್ರೀವರಾಹಾಯ ತೇ ನಮಃ ॥ ೬೦ ॥
ಪರಂಪರಾಯ ಪಾರಾಯ ಪವಿತ್ರಾಯ ಚ ತೇ ನಮಃ ।
ಹಿರಣ್ಯರೇತಸೇ ತುಭ್ಯಂ ಅಚ್ಯುತಾಯ ನಮೋ ನಮಃ ॥ ೬೧ ॥
ಇತಿ ಸ್ತುತ್ವಾ ಹರಿಂ ತೂರ್ಣಂ ಪರಾಶರ ಮುನಿಸ್ತದಾ ।

ಈ ರೀತಿಯಾಗಿ ನಾನಾವಿಧದಲ್ಲಿ ಪರಾಶರು ನೃಸಿಂಹನನ್ನು ಸ್ತೋತ್ರಮಾಡಿ ಪರಮಾತ್ಮನಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ನಿಂತರು. ಈ ರೀತಿಯಾಗಿ ಪರಾಶರ ಋಷಿಗಳ ಸ್ತೋತ್ರದಿಂದ ಸಂತುಷ್ಟನಾದ ಜಗದೀಶ್ವರನು ಮಂದಹಾಸಯುಕ್ತ ಗಂಭೀರವಾದ ಮಾತಿನಿಂದ ಈ ರೀತಿ ಹೇಳಿದನು.

ಮುನಿಶ್ರೇಷ್ಠನಾದ ಪರಾಶರಋಷಿಯೇ ಶ್ರೇಷ್ಠವಾದ ನಿನ್ನ ತಪಸ್ಸಿನಿಂದ ಪ್ರೀತನಾಗಿದ್ದೇನೆ. ವರವನ್ನು ಕೊಡತಕ್ಕ ನಾನು ಬಂದಿದ್ದೇನೆ. ನಿನಗೆ ಪ್ರಿಯವಾದ ವರಗಳನ್ನು ಕೇಳು.

ಶ್ರೀಪರಾಶರರು ಈ ರೀತಿ ಭಗವಂತನನ್ನು ಕೇಳುತ್ತಾರೆ. ಕಮಲಲೋಚನನೇ, ನೀನು ಪ್ರೀತನಾಗಿ ವರವನ್ನು ಕೊಡಲು ಇಚ್ಛಿಸಿದರೆ ನೀನು ನನಗೆ ಪುತ್ರನಾಗು. ಆಗ ಶ್ರೀ ಭಗವಂತನು "ಋಷಿಗಳಿಗೆ ಜ್ಞಾನವನ್ನು ಕೊಡುವುದಕ್ಕೆ ನಾನು ನಿನಗೆ ಪುತ್ರಭಾವವನ್ನು

ನನಾಮ ಶಿರಸಾ ಭಕ್ತ್ಯಾ ಪಾದಯೋಃ ಪರಮಾತ್ಮನಃ ॥ ೬೨ ॥
ತೂಷ್ಣೀಂ ಸ್ಥಿತೇ ಮುನಿಶ್ರೇಷ್ಠೇ ಹರಿಃ ಪರಮ ಪೂರುಷಃ ।
ಪರಾಶರೇಣ ಮುನಿನಾ ಸಂಸ್ತುತೋ ಜಗಧೀಶ್ವರಃ ॥ ೬೩ ॥
ಮೇಘ ಗಂಭೀರಯಾ ವಾಚಾ ಜಗಾದ ಪ್ರಹಸನ್ನಿವ ।
ಶ್ರೀಭಗವಾನುವಾಚ :
ಪರಾಶರ ಮುನಿ ಶ್ರೇಷ್ಠ ಪ್ರೀತೋಽಸ್ಮಿ ತಪಸಾ ತವ ।
ವರಂ ವರಯ ಭದ್ರಂತೇ ವರದೋಹ ಮಿಹಾಗತಃ ॥ ೬೪ ॥
ಶ್ರೀಪರಾಶರೋವಾಚ :
ದೇವದೇವ ಅರವಿಂದಾಕ್ಷ ವರಾನ್ ದಾತುಂ ತ್ವಮಿಚ್ಛಸಿ ।
ಯದಿ ತುಷ್ಟೋಽಸಿ ಭಗವಾನ್ ಮತ್ಪುತ್ರ ಭವ ಸುವ್ರತ ॥ ೬೫ ॥
ಶ್ರೀಭಗವಾನುವಾಚ :
ವಹಾಮಿ ಪುತ್ರ ಭಾವಂ ಚ ಋಷೀಣಾಂ ಜ್ಞಾನಸಿದ್ಧಯೇ ।
ತ್ವಯಾ ತಪ್ತಂತು ಯೇತೀರ್ಥಂ ಭುವಿ ಖ್ಯಾತಿಂ ಗಮಿಷ್ಯತಿ ॥ ೬೬ ॥
ಪರಾಶರೇತಿ ವೈ ನಾಮ ತೀರ್ಥಂ ಸರ್ವಾಽಘೌಘನಾಶನಮ್ ।

ವಹಿಸುತ್ತೇನೆ. ಯಾವತೀರ್ಥದಲ್ಲಿ ನೀನು ತಪಸ್ಸು ಮಾಡುವೆಯೋ ಆ ತೀರ್ಥವು ಭೂಲೋಕದಲ್ಲಿ ಸಮಸ್ತ ಪಾಪವನ್ನೂ ಹೋಗಲಾಡಿಸತಕ್ಕ ಪರಾಶರ ತೀರ್ಥವೆಂದು ಖ್ಯಾತಿಯನ್ನು ಹೊಂದುತ್ತದೆ. ಯಾವ ಜನರು ಪರಾಶರ ತೀರ್ಥದಲ್ಲಿ ಸ್ನಾನ ಮಾಡುವರೋ ಅವರೆಲ್ಲರೂ ಪಾಪಮುಕ್ತರಾಗಿ ವಿಷ್ಣುವಿನ ಪರಮಪದವನ್ನು ಹೊಂದುವರು.

ಆ ತೀರ್ಥದಲ್ಲಿ ಸ್ನಾನಮಾಡಬೇಕೆಂಬ ಆಶೆಯುಳ್ಳ ಮಹಾತ್ಮರಿಗೆ ಜ್ಞಾನವೂ, ಮೋಕ್ಷವೂ, ಸುಖವೂ ಉಂಟಾಗುವುದರಲ್ಲಿ ಸಂಶಯವಿಲ್ಲ. ಯಾವಾಗ ಗೌತಮರು ಋಷಿಗಳ ಜ್ಞಾನ ನಾಶಕ್ಕೋಸ್ಕರ ಶಾಪಕೊಡುವರೋ ಆಗ ನಾನು ನಿನಗೆ ಪುತ್ರನಾಗುತ್ತೇನೆ. ಗೌತಮರ ಶಾಪದಿಂದ ಋಷಿಗಳ ಜ್ಞಾನವು ನಾಶವಾಗಿ ಅವರಿಗೆ ಅಜ್ಞಾನವು ಪ್ರಾಪ್ತವಾಗಲು, ಆಗ ಎಲ್ಲಾ ಋಷಿಗಳಿಗೂ ನಾನು ಜ್ಞಾನವನ್ನು ಕೊಡುವವನಾಗುತ್ತೇನೆ.

ಪರಾಶರಾಖ್ಯೇ ತೀರ್ಥೇತು ಸ್ನಾನಂ ಕುರ್ವಂತಿ ಯೇ ನರಾಃ ॥ ೬೭ ॥
ತೇ ಸರ್ವೇ ಪಾಪ ನಿರ್ಮುಕ್ತಾಃ ಯಾಂತಿ ವಿಷ್ಣು ಪರಂ ಪದಮ್ ।
ತೀರ್ಥೇಸ್ಮಿನ್ ಸ್ನಾನ ಶೀಲಾನಾಂ ಮನುಜಾನಾಂ ಮಹಾತ್ಮನಾಮ್ ॥ ೬೮
ಜ್ಞಾನಂ ಮೋಕ್ಷಂ ಸುಖಂ ಚೈವ ಭವಿಷ್ಯತಿ ನ ಸಂಶಯಃ ।
ಯದಾಹಂ ಗೌತಮೋ ನಾಮ ಋಷೀಣಾಂ ಜ್ಞಾನಲುಪ್ತಯೇ ॥ ೬೯॥
ಶಪಿಷ್ಯತಿ ತದಾಹಂ ತೇ ಪುತ್ರ ಭಾವಂ ವಹಾಮಿ ವೈ ।
ಗೌತಮಸ್ಯ ಋಷೇಶ್ಶಾಪಾತ್ ಅಜ್ಞಾನೇತ್ವಜ್ಞಾನತಾಂಗತೇ ॥ ೭೦ ॥
ತದಾ ಮುನೀನಾಂ ಸರ್ವೇಷಾಂ ಜ್ಞಾನದಶ್ಚ ಭವಾಮ್ಯಹಮ್ ।
ಪರಾಶರ ಮುನಿ ಶ್ರೇಷ್ಠ ಸ್ವಸ್ತಿತೇಸ್ತು ಭವಿಷ್ಯತಿ ॥ ೭೧ ॥
ಶ್ರೀ ವಸಿಷ್ಠೋವಾಚ :
ಇತಿ ತಸ್ಮೈ ವರಂ ದತ್ವಾ ತತ್ರೈವಾಂತರ್ದಧೇ ಹರಿಃ ।
ಪರಾಶರಸ್ತು ಧರ್ಮಾತ್ಮಾ ತತ್ರೈವಾಸ್ತೇ ಮಹಾ ಗಿರೌ ॥ ೭೨ ॥
ತಸ್ಮಿನ್ ತಿರ್ಥೇ ನೃಪಶ್ರೇಷ್ಠ ಮಾಹಾತ್ಮ್ಯಂ ಯಃ ಶೃಣೋತಿ ಚ ।
ತಸ್ಯ ಪಾಪಾ ವಿನಶ್ಯಂತಿ ವಹ್ನೌ ಕ್ಷಿಪ್ತ ಪ್ರತೂಲವತ್ ॥ ೭೩ ॥
ದ್ವಾದಶ್ಯಾಂ ಚ ಪರಾಗೇಚ ಅಮಾವಾಸ್ಯಾಂ ಚ ಸಂಕ್ರಮೇ ।

ಎಲೈ ಪರಾಶರನೇ, ನಿನಗೆ ಮಂಗಳವಾಗಲಿ ಎಂದು ಹೇಳಿದನು. ನೃಸಿಂಹನು ವಶಿಷ್ಠರು ಪರಾಶರರಿಗೆ ಈ ರೀತಿ ವರವನು ಕೊಟ್ಟು ಅಂತರ್ಧಾನನಾದನು. ಧರ್ಮಾತ್ಮರಾದ ಆ ಪರಾಶರರು ಆ ಪರ್ವತದಲ್ಲಿಯೇ ಇರುತ್ತಾರೆ. ಎಲೈ ರಾಜನೇ ಯಾರು ಆ ತೀರ್ಥದಲ್ಲಿ ಮಿಂದು ಈ ಮಹಾತ್ಮೆಯನ್ನು ಕೇಳುತ್ತಾರೆಯೋ ಅವರ ಪಾಪವೆಲ್ಲವೂ ಬೆಂಕಿಯಲ್ಲಿ ಬಿದ್ದ ಹತ್ತಿಯಂತೆ ನಾಶವಾಗುತ್ತವೆ. ದ್ವಾದಶಿ, ಅಮಾವಾಸ್ಯೆ, ಸಂಕ್ರಮಣ, ವ್ಯತೀಪಾತದಲ್ಲಿಯೂ, ಹುಣ್ಣಿಮೆಯಲ್ಲಿಯೂ ಯಾರು ಅಲ್ಲಿ ಸ್ನಾನ ಮಾಡುತ್ತಾರೋ ಅವರಿಗೆ ಉಂಟಾಗತಕ್ಕ ಪುಣ್ಯವನ್ನು ಹೇಳುತ್ತೇನೆ. ಗಂಗಾನದಿಯಲ್ಲಿ ಕೋಟಿ ಸಲ ಸ್ನಾನಮಾಡಿದರೆ ಯಾವ ಫಲ ಉಂಟಾಗುತ್ತದೋ ಆಂಥಹ ಫಲವು ಇಲ್ಲಿ ಸಕೃತ್ ಸ್ನಾನಮಾತ್ರದಿಂದ ಲಭಿಸುತ್ತದೆ.

ವ್ಯತೀಪಾತೇ ವೈಧೃತೌ ಚ ಪೌರ್ಣಿಮಾಸ್ಯಾಂ ತಥೈವಚ ॥ ೭೪ ॥
ಯೇ ಸ್ನಾನಂ ತತ್ರ ಕುರ್ವಂತಿ ತೇಶಾಂ ಪುಣ್ಯಂ ವದಾಮ್ಯಹಮ್ ।
ಗಂಗಾಯಾಂ ಕೋಟಿವಾರಂ ತು ಸ್ನಾನಾದ್ಯತ್ಫಲಮಶ್ನುತೇ ॥ ೭೫ ॥
ತತ್ಫಲಂ ಸಮವಾಪ್ನೋತಿ ಏಕ ಸ್ನಾನೇನ ಭೂಮಿಪ ॥ ೭೬ ॥
ತಸ್ಮಾತ್ ಸರ್ವ ಪ್ರಯತ್ನೇನ ಸ್ನಾನ ದಾನಾದಿಕಂ ನರೈಃ ।
ಕರ್ತವ್ಯಂ ಭೂತಿಕಾಮೈಶ್ಚ ತೀರ್ಥೇ ಸ್ನಾನಂ ಸಮಾಚರೇತ್ ॥ ೭೭ ॥
ಪರಾಶರೇಸ್ಮಿನ್ ತೀರ್ಥೇ ಸ್ನಾನಮಾವಶ್ಯಕಂ ನೃಣಾಮ್ ।
ಇತಿ ಸರ್ವಂ ಮಯಾ ಖ್ಯಾತಂ ಕಿಮನ್ಯಚ್ಛ್ರೋತುಮಿಚ್ಛಸಿ ॥ ೭೮ ॥

॥ ಇತಿ ಶ್ರೀಬ್ರಹ್ಮಾಂಡಪುರಾಣೇ ಕರಿಗಿರಿಮಹಾತ್ಮ್ಯೇ ದ್ವಿತಿಯೋಧ್ಯಾಯಃ ಸಮಾಪ್ತಃ ॥

ಎಲೈ ರಾಜನೇ, ಆದಕಾರಣಗಳಿಂದ ನೀನು ಸರ್ವಪ್ರಯತ್ನಗಳಿಂದ ಆ ತೀರ್ಥದಲ್ಲಿ ಸ್ನಾನಮಾಡಿ ದಾನವೇ ಮೊದಲಾದವುಗಳನ್ನು ಮಾಡಬೇಕು. ಈ ರೀತಿ ಎಲ್ಲವನ್ನು ಹೇಳಿದ್ದೇನೆ. ಇನ್ನು ಏನನ್ನು ಕೇಳಲು ಇಚ್ಛಿಸುತ್ತಿ?

ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿರುವ ಕರಿಗಿರಿ ಮಹಾತ್ಮೆಯಲ್ಲಿ ಎರಡನೆಯ ಅಧ್ಯಾಯವು ಮುಕ್ತಾಯವಾಯಿತು.

॥ ಶ್ರೀಪಂಚಾಸ್ಯೋವಿಜಯತೇ ॥

ತೃತೀಯೋಧ್ಯಾಯಃ

ಶ್ರೀ ರಾಜೋವಾಚ :

ಋಷಿವರ್ಯ ನಮಸ್ತೇಸ್ತು ಲೋಕಾನುಗ್ರಹಕಾರಕ ।
ವಸಿಷ್ಟ ಮುನಿಶಾರ್ದೂಲ ರಕ್ಷಮಾಂಚೋಪದೇಶತಃ ॥ ೧ ॥
ಇದಾನೀಂ ಶ್ರೋತುಮಿಚ್ಛಾಮಿ ಇಂದ್ರತೀರ್ಥಸ್ಯ ವೈಭವಮ್ ।
ವಕ್ತುಮರ್ಹಸಿ ಸರ್ವಜ್ಞ ಮಹಾತ್ಮ್ಯಂ ಪಾಪ ನಾಶನಮ್ ॥ ೨ ॥

ಶ್ರೀ ವಸಿಷ್ಠಃ ಉವಾಚ :

ಪ್ರವಕ್ಷ್ಯಾಮಿ ಮಹಾರಾಜ ಮಹಾತ್ಮ್ಯಂ ಪುಣ್ಯದಂ ಶುಭಮ್ ।
ನಂದಿನಶ್ಚರಿತಂ ತಾತ ತಥಾ ತೀರ್ಥಸ್ಯ ಸಾಂಪ್ರತಮ್ ॥ ೩ ॥
ಶೃಣುಷ್ವ ಸಾವಧಾನೇನ ವಿಸ್ತರಾನ್ನೃಪಸತ್ತಮ ।
ಪುರಾ ನಂದೀತು ಧರ್ಮಾತ್ಮಾ ಕೈಲಾಸೇ ಚ ಮಹಾಗಿರೌ ॥ ೪ ॥
ಉಮಯಾ ಸಹಿತಂ ದೇವಂ ವಿರೂಪಾಕ್ಷಂ ಮಹಾಪ್ರಭಮ್ ।
ಪೂಜಯಾಮಾಸ ಶೈವೋಕ್ತೈಃ ಮಂತ್ರೈಸ್ತ್ರಿಪುರ ಘಾತಿನಮ್ ॥೫॥

ಶ್ರೀ ರಾಜನು ಕೇಳುತ್ತಾನೆ. ಋಷಿಶ್ರೇಷ್ಠನಾದ ವಸಿಷ್ಠನೇ, ನಿನಗೆ ನಮಸ್ಕಾರ; ನಿನ್ನ ಉಪದೇಶದಿಂದ ನನ್ನನ್ನು ಕಾಪಾಡು. ಇಂದ್ರತೀರ್ಥದ ಮಹಾತ್ಮೆಯನ್ನು ಕೇಳಬೇಕೆಂದು ನಾನು ಈಗ ಬಯಸುತ್ತೇನೆ. ಸರ್ವಜ್ಞನಾದ ಮಹರ್ಷಿಯೇ ಪಾಪನಾಶಕವಾದ ಆ ಮಹಾತ್ಮೆಯನ್ನು ಹೇಳಿರಿ.

ಶ್ರೀ ವಸಿಷ್ಠರು ರಾಜನ ಮಾತನ್ನು ಕೇಳಿ ಎಲೈ ಮಹಾರಾಜನೇ, ಪುಣ್ಯವನ್ನುಂಟುಮಾಡತಕ್ಕ, ಮಂಗಳಕರವಾದ ನಂದಿ ಚರಿತ್ರೆಯನ್ನೂ ಮತ್ತು ನಂದಿತೀರ್ಥದ ವೈಭವವನ್ನೂ ಈಗ ಹೇಳುತ್ತೇನೆ. ಸಾವಧಾನದಿಂದ ವಿಸ್ತಾರವಾಗಿ ಕೇಳು. ಪೂರ್ವದಲ್ಲಿ ಧರ್ಮಾತ್ಮನಾದ ನಂದಿಕೇಶ್ವರನು ಕೈಲಾಸ ಪರ್ವತದಲ್ಲಿ ಉಮೆಯೊಡನೆ ಕೂಡಿದ ಮಹಾಪ್ರಭುವಾದ, ಗಣೇಶ, ಷಣ್ಮುಖ, ಪ್ರಮಥಗಣ ಮೊದಲಾದವರುಗಳಿಂದ ಸೇವಿಸಲ್ಪಟ್ಟ ರುದ್ರದೇವರನ್ನು ಶೈವೋಕ್ತ ಮಂತ್ರಗಳಿಂದ

ಗಣೇಶ ಷಣ್ಮುಖಾದ್ಯೈಶ್ಚ ಪ್ರಮುಖಾದ್ಯೈ ಸುಸೇವಿತಮ್ ।
ಭರ್ಗಸ್ಯ ಪುರತೋ ನಿತ್ಯಂ ತಿಷ್ಟನ್ನಾಸ್ತೇ ಚ ನಂದಿರಾಟ್ ॥ ೬ ॥
ರುದ್ರೇಣ ಚೋದಿತೋ ದ್ವಾರೆ ಅವರೋಧಸ್ಯ ತಿಷ್ಠತಃ ।
ವೃಷಭಸ್ಯ ಮಹಾರಾಜ ಮಹಾನ್ಕಾಲೋ ಗತಃ ಕಿಲ ॥ ೭ ॥
ಏಕದಾತು ಮಹಾರಾಜ ದೂರ್ವಾಸಾ ನಾಮ ವೈಋಷಿಃ ।
ಶಿಷ್ಯೈಃ ಪರಿವೃತ ಶ್ರೀಮಾನ್ ತಪಸಾ ದ್ಯೋತಿತಃ ಪ್ರಭುಃ ॥ ೮ ॥
ಆಜಗಾಮ ಮಹೀಪಾಲ ಕೈಲಾಸಂ ಚ ಶಿವಾಲಯಮ್ ।
ತಸ್ಮಿನ್ನವಸರೇ ನಂದೀ ದೂರ್ವಾಸ ಮುನಿ ಸತ್ತಮಮ್ ॥ ೯ ॥
ನಿಜಗಾದನ ಗಚ್ಛೇತಿ ದೇವೋ ದೇವ್ಯಾ ಸಹಾಸತೇ ।
ಯದಿ ಗಚ್ಛೇನ್ಮುನಿಶ್ರೇಷ್ಠ ರುದ್ರೋ ಮಾಂ ಶಿಕ್ಷತಿ ಧ್ರುವಮ್ ॥ ೧೦ ॥
ಏವಮುಕ್ತಸ್ತು ಸಋಷಿಃ ವೃಷಭೇಣ ಮಹಾತ್ಮನಾ ।
ಚಕೋಪ ಸಹಸಾತಸ್ಮಿನ್ ದೂರ್ವಾಸಾ ಮುನಿ ಸತ್ತಮಃ ॥ ೧೧ ॥
ನಂದಿನಶ್ಚ ಕಕುದ್ಮಂ ತಂ ಲೋಚನಾಭ್ಯಾಂ ದಹನ್ನಿವ ।
ಉವಾಚ ಚ ಮಹಾತೇಜಾ ದೂರ್ವಾಸಾ ಭೃಶ ಕೋಪತಃ ॥ ೧೨ ॥
ದುರಾತ್ಮನ್ ವೃಷಭ ತ್ವಂ ಮಾಮವರೋಧಸಿ ಮೂಢಧೀಃ ।

ಪೂಜಿಸಿದನು. ಆ ನಂದಿಯು ರುದ್ರನ ಎದುರಿಗೇ ಇರುತ್ತಿದ್ದನು. ರುದ್ರನಿಂದ ಪ್ರೇರೇಪಿಸಲ್ಪಟ್ಟ ಆ ನಂದಿಯು ಆಲಯದ ಬಾಗಿಲಿನಲ್ಲಿ ನಿಂತಿದ್ದನು. ಹೀಗೆ ಅನೇಕ ಕಾಲವು ಜರುಗಿತು. ಒಂದಾನೊಂದು ಕಾಲದಲ್ಲಿ ತಪಸ್ಸಿನಿಂದ ಪ್ರಕಾಶಿಸುತ್ತಿದ್ದ ದೂರ್ವಾಸ ಋಷಿಗಳು ಶಿಷ್ಯರೊಡನೆ ಕೈಲಾಸಕ್ಕೆ ರುದ್ರನ ಮನೆಗೆ ಬಂದರು. ಆಗ ನಂದಿಯು ಋಷಿಶ್ರೇಷ್ಠನಾದ ದೂರ್ವಾಸರಿಗೆ ಹೇಳಿದನು. "ರುದ್ರನು ಪಾರ್ವತಿಯೊಡನೆ ಇದ್ದಾನೆ. ಹೋಗಬೇಡ ಎಲೈ ಋಷಿಶ್ರೇಷ್ಠನೇ. ನೀನು ಹೋದದ್ದೇ ಆದರೆ ಈಶ್ವರನು ನನ್ನನ್ನು ಶಿಕ್ಷಿಸುತ್ತಾನೆ" ಎಂದು ಹೇಳಿದನು. ಆದಕ್ಕೆ ದೂರ್ವಾಸರು ನಂದಿಯಮೇಲೆ ಬಹಳವಾಗಿ ಕೋಪಗೊಂಡು ಉರಿಯುವ ಕಣ್ಣುಗಳಿಂದ "ಮಂದಮತಿಯಾದ ನಂದಿಯೇ, ನನ್ನನ್ನು ನೀನು ತಡೆದದ್ದರಿಂದ ನೀನು ಪರ್ವತವಾಗು" ಎಂದು ಶಾಪ ಕೊಟ್ಟನು. ಆಗ ನಂದಿಯು ದೂರ್ವಾಸರನ್ನು ಪ್ರಸನ್ನವದನನ್ನು ಮಾಡಿ ನಮ್ರತೆಯಿಂದ ತಲೆಯನ್ನು ಬಗ್ಗಿಸಿಕೊಂಡು

ಯಸ್ಮಾತ್ ತ್ವಮವರುದ್ಧೋಽಸಿ ತಸ್ಮಾತ್ತ್ವಮ್ ಅಚಲೋಭವ ॥ ೧೩ ॥
ಇತಿ ಶಪ್ತೋ ಮುನೀಂದ್ರೇಣ ವೃಷಭಸ್ತಂ ಪ್ರಸಾದ್ಯ ಚ ।
ಉವಾಚ ತಂ ಮುನಿಂ ನಂದೀ ವಿನಯಾವಂತತೋ ನೃಪಃ ॥ ೧೪ ॥
ದೂರ್ವಾಸಃ ತಾಪಸ ಶ್ರೇಷ್ಠ ವಿಶಾಪಂ ದಾತುಮರ್ಹಸಿ ।
ಶೈಲ ಭೂತಸ್ಯ ಮೇ ಬ್ರಹ್ಮನ್ ಕದಾ ಮೋಕ್ಷೋ ಭವಿಷ್ಯತಿ ॥ ೧೫ ॥
ಇತ್ಯುಕ್ತೋ ನಂದಿನಾ ವಿಪ್ರೋ ವಿಶಾಪಂ ಚ ದದತ್ತದಾ ।
ಯದಾ ತ್ವಂ ಹಸ್ತಿ ಶಿಖರೇ ಸ್ನಾತ್ವಾ ತೀರ್ಥೇ ಹರಿಂ ಪ್ರಭುಮ್ ॥ ೧೬ ॥
ಆರಾದಯಸಿ ತದಾ ಮೋಕ್ಷೋ ಭವಿಶ್ಯತಿ ನ ಸಂಶಯಃ ।
ಇತಿ ದತ್ತೇ ಮುನೀಂದ್ರೇಣ ವಿಶಾಪೇ ನರಪುಂಗವ ॥ ೧೭ ॥
ತದಾ ಪ್ರಭೃತಿ ಭೂಮ್ಯಾಂ ವೈ ಅಚಲೋಭೂತ್ ಸ ನಂದಿರಾಟ್ ।
ದ್ವಾದಶೈರ್ಯೋಜನೈಶ್ಚೈವ ಉಚ್ಛ್ರಿತಃ ಪರ್ವತೋತ್ತಮಃ ॥ ೧೮ ॥
ಯೋಜನಾಯಾಮಸಂಯುಕ್ತೋ ಶೃಂಗೈಃ ಪಂಚಭಿರುಚ್ಛ್ರಿತಃ ।
ಪಂಚ ಶೃಂಗೇಷು ಸರ್ವೇಷು ಪುಣ್ಯತೀರ್ಥೇ ಸಮನ್ವಿತಃ ॥ ೧೯ ॥
ನದೀಭಿಃ ಪಂಚಭಿರ್ಯುಕ್ತೋ ದೇವತಾ ಗಣಸಂವೃತಃ ।
ರರಾಜ ಪರ್ವತ ಶ್ರೇಷ್ಠಃ ಅವನ್ಯಾಂ ನೃಪ ಪುಂಗವ ॥ ೨೦ ॥

"ಎಲೈ ಋಷಿಶ್ರೇಷ್ಠನಾದ ದೂರ್ವಾಸನೇ ನನಗೆ ಶಾಪವಿಮೋಚನೆಯನ್ನು ಮಾಡಬೇಕು. ಪರ್ವತವಾಗುವ ನನಗೆ ಯಾವಾಗ ಶಾಪಮೋಚನೆಯಾಗುವುದು" ಎಂದು ಕೇಳಲು ಆ ಮುನಿಯು "ನೀನು ಕರಿಗಿರಿಯಲ್ಲಿರುವ ತೀರ್ಥದಲ್ಲಿ ಯಾವಾಗ ಸ್ನಾನ ಮಾಡಿ ಹರಿಯನ್ನು ಆರಾಧಿಸುತ್ತೀಯೋ ಆಗ ನಿನಗೆ ಶಾಪವಿಮೋಚನೆಯಾಗುತ್ತದೆ. ಸಂಶಯವಿಲ್ಲ" ಎಂದು ಹೇಳಿದನು. ಅಂದಿನಿಂದ ಭೂಲೋಕದಲ್ಲಿ ಆ ನಂದಿಯು ಶ್ರೇಷ್ಠವಾದ ಪರ್ವತವಾಗಿ ಪ್ರಾಕಾಶಿಸುತ್ತಿದ್ದನು.

ಈ ರೀತಿ ಬಹುಕಾಲ ಕಳೆಯಲು ನಂದಿಯು ಬಹಳ ದುಃಖಿತನಾಗಿ ದೂರ್ವಾಸರ ಶಾಪಮೋಚನೆಯು ತನಗೆ ಹೇಗೆ ಅದೀತೆಂದು ಚಿಂತಿಸಿ ತನ್ನಲ್ಲೇ ಯೋಚಿಸುತ್ತಾ ಪೂರ್ವಕರ್ಮ ವಿಪಾಕದಿಂದ ತನ್ನ ಶಾಪಮೋಕ್ಷವನ್ನು ತಿಳಿದು ಹಸ್ತಿನಾಮಕ ಪರ್ವತಕ್ಕೆ ಹೋಗಿ ಅಲ್ಲಿ ನಂದಿಯು ಶಿಲಾಭಾರಣವೆಂಬ ತೀರ್ಥದಲ್ಲಿ ಸ್ನಾನಮಾಡಿ ನೃಸಿಂಹನನ್ನು

ಅಥ ಕಾಲೇ ಗತೇರಾಜನ್ ವೃಷಭಸ್ತು ಸುದುಃಖಿತಃ ।
ಚಿಂತಯಾಮಾಸ ಧರ್ಮತ್ಮಾ ಆತ್ಮನಶ್ಚ ವಿಮೋಕ್ಷಣಮ್ ॥ ೨೧ ॥
ಮುನೇಸ್ತಸ್ಯ ಕಥಂ ಶಾಪೋ ಮಮ ಸಂಪ್ರತಿ ನಾಶನಮ್ ।
ಭವೇದಿತಿಸ್ಮ ಚಿಂತಾನಾಂ ಆತ್ಮನ್ಯೈವ ಸುದುಃಖಿತಃ ॥ ೨೨ ॥
ಪೂರ್ವಕರ್ಮ ವಿಪಾಕೇನ ಜ್ಞಾತ್ವಾ ಮೋಕ್ಷಂ ಚ ಚಾತ್ಮನಃ ।
ಜಗಾಮ ಪ್ರರ್ವತ ಶ್ರೇಷ್ಠಂ ನಾಗಾಹ್ವಂ ಹರಿಣಾ ಯುತಮ್ ॥ ೨೩ ॥
ತತ್ರ ಗತ್ವಾ ಸವೃಷಭಃ ಶಿಲಾಭರಣ ನಾಮಕೇ ।
ಸ್ನಾನಂ ಕೃತ್ವಾಥ ಸಂಪೂಜ್ಯ ನಾರಸಿಂಹಂ ಸನಾತನಮ್ ॥ ೨೪ ॥
ತಪಶ್ಚಚಾರ ಧರ್ಮಾತ್ಮಾ ತೀರ್ಥೇಸ್ಮಿನ್ ನಂದಿವರ್ಧನೇ ।
ತಪಸಾ ತಪ್ಯಮಾನೇಸ್ಮಿನ್ ತಾಪಸೇ ವೃಷಭೋತ್ತಮೇ ॥ ೨೫ ॥
ಆಸೀದ್ವನಂ ಸುಸಂಮೃಷ್ಟಂ ಫಲ ಪುಷ್ಪೈ ಸಮನ್ವಿತಮ್ ।
ವೈರಾಣಿಚ ನಸಂತ್ಯತ್ರ ಗೋ ವ್ಯಾಘ್ರ ವೃಷ ಶಲ್ಯಯೋಃ ॥ ೨೬ ॥
ಹರಿಣೀ ವೃಕ್ಷಯೋಸ್ತತ್ರ ವರಾಹ ಗವಯೋರಪಿ ।
ಅನ್ಯೇ ಚ ಘೋರಾಘ ಭಯಾದಯೋಪಿ
ಚರಂತ ಭೀತ್ಯಾ ಯದನುಗ್ರಹೇಣ ।

ಪೂಜಿಸಿ ತಪಸ್ಸು ಮಾಡಲು ವನವು ಫಲಪುಷ್ಪಗಳಿಂದ ಕೂಡಿದ್ದಾಯಿತು.

ಅಲ್ಲಿ ಕಾಡುಮೃಗಗಳು ಪರಸ್ಪರ ವೈರವನ್ನು ಬಿಟ್ಟು ಅನ್ಯೋನ್ಯವಾಗಿದ್ದವು. ದೇವತೆಗಳು ಈ ಘೋರವಾದ ತಪಸ್ಸಿಗೆ ಹೆದರಿ ಇಂದ್ರನೇ ಮೊದಲಾದ ಲೋಕಪಾಲಕರು ತಮಗೆ ಸ್ಥಾನಚ್ಯುತಿಯಾದೀತೆಂದು ತಿಳಿದು ಸರಸ್ವತಿಯೊಡನೆ ಕೂಡಿ ಮಂದಹಾಸಯುಕ್ತನಾದ ಮರೀಚಿಯೇ ಮೊದಲಾದ ಋಷಿಗಳಿಂದ ಸೇವಿಸಲ್ಪಟ್ಟ, ಪಾದಾಬ್ಜವುಳ್ಳವನಾದ, ಪುಸ್ತಕವನ್ನು ಕೈಲಿಪಿಡಿದ, ಸೃಷ್ಟಿಕರ್ತೃಗಳನ್ನು ಸೃಷ್ಟಿಸುವ ಲೋಕನಾಯಕನಾದ, ಬ್ರಹ್ಮನಿಗೆ ಇಂದ್ರನು ದೇವತೆಗಳೊಡನೆ ನಮಸ್ಕಾರ ಮಾಡಿ ಕೇವಲ ಭಕ್ತಿಯಿಂದ ಚತುರ್ಮುಖನಾದ ಬ್ರಹ್ಮನನ್ನು ಕುರಿತು ಇಂದ್ರನು ಹೀಗೆ ಪ್ರಾರ್ಥಿಸಿದನು.

ದೇವಾಶ್ಚ ಸರ್ವೇ ಭಯ ಸಂಪ್ರವಿಷ್ಟಾಃ
ಸ್ವಧಿಷ್ಣ್ಯಗಾಃ ಪುರೋಗಮಾಸ್ತಥಾ ॥ ೨೭ ॥
ದಿನೆದಿನೇ ವರ್ಧಮಾನೇ ತಪಸ್ಯತ್ಯಂತ ದಾರುಣೇ ॥ ೨೮ ॥
ಇಂದ್ರಾದ್ಯಾ ಲೋಕಪಾಲಾಶ್ಚ ಮೇನಿರಯಸ್ವ ಪದಕ್ಷಯಮ್ ।
ತಪಸಾ ಭೀತಿಮಾಪನ್ನಾಃ ವೃಷಭಸ್ಯ ಮಹಾತ್ಮನಃ ॥ ೨೯ ॥
ಬ್ರಹ್ಮಾಣಂ ಶರಣಂ ಜಗ್ಮುಃ ಜಗತಃ ಪ್ರಪಿತಾಮಹಮ್ ।
ವಿರಾಜಮಾನಂ ವಾಗ್ದೇವ್ಯಾ ಸಮೇತಂ ಸುಸ್ಮಿತಾನನಮ್ ॥ ೩೦ ॥
ಸಂಸೇವ್ಯಮಾನಂ ಋಷಿಭಿಃ ತಥಾ ಮುನಿಭಿರೇವಚ ।
ಮರೀಚಿಮುಖ್ಯೈರ್ಮುನಿಭಿಃ ಸಂಸೇವಿತ ಪದದ್ವಯಮ್ ॥ ೩೧ ॥
ಶಾಂತಂ ಪದ್ಮಾಸನಂ ದೇವಂ ಸಾಕ್ಷಾತ್ ಪುಸ್ತಕ ಧಾರಿಣಮ್ ।
ಸ್ರಷ್ಟಾರಂ ಸೃಷ್ಟಿಕರ್ತೄಣಾಂ ಲೋಕನಾಥಂ ಜಗದ್ಗುರುಮ್ ॥ ೩೨ ॥
ನನಾಮ ದೇವತೈಸ್ಸಾರ್ಧಂ ಮರುತಾನ್ಪಾಕಶಾಸನಃ ।
ತುಷ್ಟಾವ ಪರಯಾ ಭಕ್ತ್ಯಾ ಚತುರಂ ಚತುರಾನನಮ್ ॥ ೩೩ ॥
ಶ್ರೀ ಇಂದ್ರೋವಾಚ :
ನಮಸ್ತೇ ಸರ್ವಲೋಕೇಶ ಅಸ್ಮಾನ್ ಪಾಹಿ ಪ್ರಪೀಡಿತಾನ್ ।

ಸರ್ವಲೋಕೇಶ್ವರನೇ, ಈ ಸಂಕಟದಿಂದ ನಮ್ಮನ್ನು ಕಾಪಾಡು. ನೀನು ಕಾಪಾಡಿದರೆ ನಾವು ಉಳಿಯುತ್ತೇವೆ. ಈಗ ನಂದಿಯ ತಪಸ್ಸಿನಿಂದ ನಾವೆಲ್ಲರೂ ತಪ್ತರಾಗಿ ನಿನ್ನನ್ನು ಶರಣು ಹೊಕ್ಕಿದ್ದೇವೆ. ಆದ್ದರಿಂದ ನೀನು ನಂದಿಗೆ ಬೇಕಾದ ವರವನ್ನು ಕೊಟ್ಟು ಈ ಕಷ್ಟದಿಂದ ನಮ್ಮನ್ನು ಉದ್ಧಾರಮಾಡು ಎಂದು ದೇವತೆಗಳೊಡನೆ ಇಂದ್ರನು ನಮಸ್ಕಾರ ಮಾಡಿ ಕೇಳಿದನು.

ಶ್ರೀ ವಸಿಷ್ಠರು ಹೇಳುತ್ತಾರೆ. ದೇವತೆಗಳಿಂದ ಪ್ರಾರ್ಥಿಸಲ್ಪಟ್ಟ ಬ್ರಹ್ಮನು ದೇವಸಮೂಹಗಳೊಡನೆ ವೃಷಭನು ಇದ್ದ ಸ್ಥಳಕ್ಕೆ ಬಂದು, ತಪ್ತನಾದ ವೃಷಭನಿಗೆ ಪರಮ ಪ್ರೀತಿಯಿಂದ ಹೀಗೆಂದು ಹೇಳಿದನು.

ಎಲೈ ವೃಷಭನೇ ನನ್ನನ್ನು ಕುರಿತು ತಪಸ್ಸು ಮಾಡಿ ಬಹಳ ಬಳಲಿದ್ದೀಯ. ನಿನಗೆ

ತ್ವಯಾ ಸಂರಕ್ಷಿತಾ ಸ್ಸರ್ವೇ ವಸಾಮಃ ಪದ್ಮಸಂಭವ ॥ ೩೪ ॥
ಇದಾನೀಂ ತಪಸಾ ತಸ್ಯ ವೃಷಭಸ್ಯ ಮಹಾಪ್ರಭೋ ।
ಸಂತಪ್ತಾಸ್ಮಾ ವಯಂ ಸರ್ವೇ ತ್ವಾಮದ್ಯ ಶರಣಾಂ ಗತಾಮ್ ॥ ೩೫ ॥
ತಸ್ಮಾತ್ ತ್ವಂ ಸರ್ವಲೋಕೇಶ ವೃಶಭೇಣೇಪ್ಸಿತಂ ಚ ಯತ್ ।
ವೃಷಭಾಯ ವರಂ ದತ್ವಾ ಅಸ್ಮಾನುದ್ಧರ ಪಂಡಿತ ॥ ೩೬ ॥
ಶ್ರೀ ವಸಿಷ್ಠೋವಾಚ :
ದೇವೈಸ್ಸಂಪ್ರಾರ್ಥಿತೋ ಬ್ರಹ್ಮಾ ಸಾರ್ಧಂ ದೇವಗಣೈಸ್ಸಃ ।
ಆಜಗಾಮ ನೃಪಶ್ರೇಷ್ಠ ಯತ್ರಾಸ್ತೇ ವೃಷಭಃ ಕಿಲ ॥ ೩೭ ॥
ತಂ ದೃಷ್ಟ್ವಾ ವೃಷಭಂ ತಪ್ತಂ ಕೃಪಯಾ ಚತುರಾನನಃ ।
ಉವಾಚ ಪರಮ ಪ್ರೀತೋ ವೃಷಂ ಪರಮಯಾಗಿರಾ ॥ ೩೮ ॥
ಶ್ರೀ ಬ್ರಹ್ಮೋವಾಚ :
ಮಾಂ ವಿದ್ಧಿ ವೃಷಭಂ ತಾತ ವರದಂ ತವ ಸುವ್ರತ ।
ಪರಿತಪ್ತೋಸಿ ಭದ್ರಂತೇ ತಪಸಾ ಮತ್ಕೃತೇನ ವೈ ॥ ೩೯ ॥
ಇತ್ಯಾಕರ್ಣ್ಯ ಪ್ರಭೋರ್ವಾಕ್ಯಂ ವೃಷಭ ಸ್ತೂರ್ಣಮುತ್ಥಿತಃ ।
ನನಾಮ ಶಿರಸಾ ತಸ್ಮೈ ಬ್ರಹ್ಮಣೇಽಮಿತಶಕ್ತಯೇ ॥ ೪೦ ॥

ಮಂಗಳವಾಗಲಿ! ನಿನಗೆ ವರವನ್ನು ಕೊಡಲು ಬಂದಿರುವವನಾಗಿ ನನ್ನನ್ನು ತಿಳಿ. ಈ ಮಾತನ್ನು ಕೇಳಿ ವೃಷಭನು ಬೇಗನೆ ಮೇಲಕ್ಕೆ ಎದ್ದು ಅಪಾರವಾದ ಶಕ್ತಿಯುಳ್ಳ ಬ್ರಹ್ಮನಿಗೆ ನಮಸ್ಕಾರಮಾಡಿ ಚತುರನಾದ ಪ್ರಭುವಾದ ಬ್ರಹ್ಮನನ್ನು ಪರಮ ಭಕ್ತಿಯಿಂದ ಸ್ತೋತ್ರ ಮಾಡಿದನು. ಸೃಷ್ಟಿಸ್ಥಿತಿಗಳಿಗೆ ಕಾರಣಕರ್ತನಾದ, ಪದ್ಮಭವನಾದ, ಹಿರಣ್ಯಗರ್ಭನಾದ. ಮೋಕ್ಷವನ್ನು ಕೊಡತಕ್ಕ ಚತುರ್ಮುಖದವನಾದ, ಶಾಂತನಾದ, ಸಕಲ ಪ್ರಜೆಗಳಿಗೆ ದೊರೆಯಾದ, ಸೃಷ್ಟಿಕರ್ತರುಗಳಿಗೂ ಒಡೆಯನಾದ, ಯಜ್ಞ ಭೋಕ್ತೃವಾದ ನಿನಗೆ ನಮಸ್ಕಾರ. ಸರ್ವಲೋಕೇಶ್ವರನೇ, ಭಯದಿಂದ ಪೀಡಿತನಾದ, ದೂರ್ವಾಸ ಋಷಿಗಳ ಶಾಪದಿಂದ ಶೋಕಿಸುತ್ತಿರುವ ನನ್ನನ್ನು ಕಾಪಾಡು, ಎಂದು ಬೇಡಿಕೊಳ್ಳಲು ಬ್ರಹ್ಮನು ಸಂತುಷ್ಟನಾಗಿ ಈ ರೀತಿಯಾಗಿ ಹೇಳಿದನು.

ತುಷ್ಟಾವ ಪರಯಾ ಭಕ್ತ್ಯಾ ಬ್ರಹ್ಮಾಣಂ ಚತುರಂ ಪ್ರಭುಮ್ ।
ಶ್ರೀ ವೃಷಭೋವಾಚ :
ನಮೋ ನಮಃ ಪದ್ಮನಾಭಾಯ ಭೂಯಸೇ
ಸೃಷ್ಟಿಸ್ಥಿತೀನಾಂ ಪ್ರಭವಾಯ ತೇ ನಮಃ ।
ಹಿರಣ್ಯಗರ್ಭಾಯ ಹಿರಣ್ಯರೇತಸೇ
ನಮೋಽಸ್ತು ದೇವಾಯ ವಿಮುಕ್ತಿದಾಯಿನೇ ॥ ೪೧ ॥
ಚತುರ್ಮುಖಾಯ ಶಾಂತಾಯ ಪ್ರಜಾನಾಂ ಪತಯೇ ನಮಃ ॥ ೪೨ ॥
ಸ್ರಷ್ಟೃಣಾಂ ಪತಯೇ ತುಭ್ಯಂ ಯಜ್ಞಭೋಕ್ತ್ರೇ ನಮೋಽಸ್ತು ತೇ ।
ಮಾಂ ಪಾಹಿ ಸರ್ವಲೋಕೇಶ ಶಾಪಗ್ರಸ್ತಂ ಭಯಾತುರಮ್ ॥ ೪೩ ॥
ದೂರ್ವಾಸಸ್ಯ ಋಷೇಃ ಶಾಪಾತ್ ಪರಿತಪ್ತಂ ಸುದುಃಖಿತಮ್ ।
ಇತಿ ತೇನ ಸುಸಂತುಷ್ಟಃ ಪದ್ಮಜಸ್ತಂ ಜಗಾದಃ ॥ ೪೪ ॥
ಶ್ರೀ ಬ್ರಹ್ಮೋವಾಚ :
ಪರಿಶ್ರಾಂತೋಽಸಿ ವೃಷಭಾ ತಾಪಸಾ ಮತ್ಕೃತೇನ ವೈ ।
ವರಂ ದಾಸ್ಯಾಮಿ ತೇ ವತ್ಸ ವೃಣೀಷ್ವ ವರಮುತ್ತಮಮ್ ॥ ೪೫ ॥
ಶ್ರೀ ವೃಷಭೋವಾಚ :

ಎಲೈ ವೃಷಭನೇ, ನನ್ನನ್ನು ಕುರಿತು ಮಾಡಿದ ತಪಸ್ಸಿನಿಂದ ನೀನು ಬಹಳವಾಗಿ ಬಳಲಿದ್ದೀ. ನಿನಗೆ ವರವನ್ನು ಕೊಡುತ್ತೇನೆ. ಉತ್ತಮವಾದ ವರವನ್ನು ಕೇಳು ಎಂದು

ವೃಷಭನು : ಎಲೈ ಬ್ರಹ್ಮನೇ, ನೀನು ಸಂತುಷ್ಟನಾದದ್ದೀ ಆದರೆ ವರವನ್ನು ಕೊಡಲು ಈಗ ಪ್ರವೃತ್ತನಾಗಿದ್ದೀ. ಹಾಗಾದರೆ ದೂರ್ವಾಸರ ಶಾಪವನ್ನು ಪರಿಹಾರ ಮಾಡು. ಈ ತೀರ್ಥವನ್ನು ಭೂಲೋಕದಲ್ಲಿ ನನ್ನ ಹೆಸರಿನಿಂದ ಪ್ರಖ್ಯಾತಿವುಳ್ಳದ್ದನ್ನಾಗಿ ಮಾಡು ಎಂದು ವರವನ್ನು ಬೇಡಿದನು. ಬ್ರಹ್ಮನು ಅದನ್ನು ಅನುಮೋದಿಸಿ ವೃಷಭನನ್ನು ಕುರಿತು ಹಾಗೆಯೇ ಆಗಲಿ ಎಂದು ಹೇಳಿದನು. ನಂದಿಯು ದೇವರಿಗೆ ಆಗ್ನೇಯ ದಿಕ್ಕಿನಲ್ಲಿ ಇರುವ ವೃಷಭತೀರ್ಥದಲ್ಲಿ ಸ್ನಾನ ಮಾಡಿ ಆ ಬ್ರಾಹ್ಮಣನಿಂದ ಕೊಡಲ್ಪಟ್ಟ ಶಾಪದಿಂದ ಮುಕ್ತನಾಗಿ ದೇವತೆಗಳಿಂದಲೂ, ಅಪ್ಸರ ಸ್ತ್ರೀಯರ ಸಮೂಹಗಲಿಂದಲೂ,

ಸಂತುಷ್ಟೋ ಯದಿ ಮೇ ಬ್ರಹ್ಮನ್ ವರಂ ದಾತುಮಿಹಾರ್ಹಸಿ ।
ದೂರ್ವಾಸ ಋಷೇಶ್ಶಾಪಂ ನಿವರ್ತಸ್ವ ಮಹಾಪ್ರಭೋ ॥ ೪೬ ॥
ಏತತ್ತೀರ್ಥಂ ಚ ಮನ್ನಾಮ್ನಾ ಭುವಿಖ್ಯಾತಂ ಕುರುಷ್ವ ಹ ।
ಇತಿ ತೇನ ಸುಸಂತುಷ್ಟೋ ಬ್ರಹ್ಮಾ ಪ್ರೋವಾಚ ತಂ ವೃಷಮ್ ॥ ೪೭ ॥
ತಥಾಸ್ತ್ವಿತಿ ಮಹಾಭಾಗ ವಚೋ ಮೇ ಶುಭದಂ ತವ ।
ತೀರ್ಥೇ ದೇವಸ್ಯ ಚಾಗ್ನೇಯಾಂ ವೃಷಭಾಖ್ಯೇ ನೃಪೋತ್ತಮಾ ॥ ೪೮ ॥
ಸ್ನಾತ್ವಾ ವೃಷಶ್ಚ ಮುಕ್ತೋಭೂಚ್ಛಾಪಾದ್ವಿಪ್ರ ಪ್ರಕೀರ್ತಿತಾತ್ ।
ವೃಷಭಸ್ಸರ್ವದೇವೈಶ್ಚ ಗೀಯಮಾನೋಪ್ಸರೋಗಣೈಃ ॥ ೪೯ ॥
ಬ್ರಹ್ಮಾಣಾಂ ಚ ನಮಸ್ಕೃತ್ಯ ಪರಿಕ್ರಮ್ಯ ಯಥಾ ಕ್ರಮಮ್ ।
ಜಗಾಮ ನೃಪಶಾರ್ದೂಲ ಕೈಲಾಸಂ ಚ ಶಿವಾಲಯಮ್ ॥ ೫೦ ॥
ತಸ್ಮಿನ್ ತೀರ್ಥೇ ನಿಮಜ್ಯಂತಿ ಯೋಜನಾಃ ಕೃತ ಬುದ್ಧಯಃ ।
ತೇ ಸರ್ವೇ ಪುಣ್ಯ ಶೀಲಾಶ್ಚ ಯಾಂತಿ ವಿಷ್ಣುಂ ಸನಾತನಮ್ ॥ ೫೧ ॥
ದರ್ಶನಾ ತೀರ್ಥರಾಜಸ್ಯ ಸರ್ವಪಾಪ ಕ್ಷಯೋ ಭವೇತ್ ।
ತೇಷಾಂ ಮುಕ್ತಿಃ ಕರಸ್ಥಾಹಿ ನಾತ್ರಕಾರ್ಯಾ ವಿಚಾರಣಾ ॥ ೫೨ ॥

ಹೊಗಳಲ್ಪಟ್ಟು ಬ್ರಹ್ಮದೇವರಿಗೆ ಪ್ರದಕ್ಷಿಣ ನಮಸ್ಕಾರವನ್ನು ಮಾಡಿ ಕೈಲಾಸಕ್ಕೆ ಹೊರಟು ಹೋದನು.

ಯಾವ ಜನರು ಮನಃಪೂರ್ವಕವಾಗಿ ಆ ತೀರ್ಥದಲ್ಲಿ ಸ್ನಾನಮಾಡುವರೋ ಅವರೆಲ್ಲರೂ ಪುಣ್ಯಶೀಲರಾಗಿ ವಿಷ್ಣುಪದವನ್ನು ಹೊಂದುವರು. ಆ ಶ್ರೇಷ್ಠವಾದ ತೀರ್ಥದ ದರ್ಶನ ಮಾತ್ರದಿಂದಲೇ ಸಮಸ್ತಪಾಪವೂ ನಾಶವಾಗುವುದು. ಅವರಿಗೆ ಮುಕ್ತಿಯು ಹಸ್ತಗತವಾಗುವುದು. ಈ ವಿಷಯದಲ್ಲಿ ಸಂದೇಹವಿಲ್ಲ. ಋಷಿಗಳು, ಪಿತೃದೇವತೆಗಳೂ, ಸಿದ್ಧರೂ, ಗಂಧರ್ವರೂ, ಅಪ್ಸರಾಸ್ತ್ರೀಯರೂ, ಚಾರಣರೂ ಆ ತೀರ್ಥದಲ್ಲಿ ಸ್ನಾನಮಾಡಿ, ಸಮಸ್ತ ಪಾಪಗಳನ್ನೂ ಕಳೆದುಕೊಂಡರು. ಆದ್ದರಿಂದ ಎಲೈ ರಾಜನೇ, ನೀನು ಆ ತೀರ್ಥದಲ್ಲಿ ಸ್ನಾನವನ್ನು ಮಾಡಬೇಕು. ಈ

ಋಷಯಃ ಪಿತರಸ್ಸಿದ್ಧಾಃ ಗಂಧರ್ವಾಪ್ಸರ ಚಾರಣಾಃ ।
ತೀರ್ಥೇ ಸ್ನಾತ್ವಾ ಸ್ವಧಾಮಾನಿ ಜಗ್ಮುರ್ನಿಹತ ಕಲ್ಮಷಾಃ ॥ ೫೩ ॥
ತಸ್ಮಾತ್ ರಾಜನ್ ತ್ವಯಾ ತೀರ್ಥೇ ಕರ್ತವ್ಯಂ ಸ್ನಾನ ಮುತ್ತಮಮ್ ।
ಇತಿ ಸರ್ವಂ ಮಯಾ ವತ್ಸ ಕೀರ್ತಿತಂ ಚರಿತಂ ಮಹತ್ ॥ ೫೪ ॥
ಯೇ ಶೃಣ್ವಂತಿ ಸದಾ ತೇರ್ಥೇ ಸ್ನಾತ್ವಾ ವಿಷ್ಣುಪರಾಯಣಾಃ ।
ಕಥಾಂ ಮನೋರಮಾಂ ತಾತಾ ತೇ ಜನಾ ಮುಕ್ತಿ ಭಾಗಿನಃ ॥ ೫೫ ॥
ಕಿಮತ್ರ ಬಹುನೋಕ್ತೇನ ತೇಷಾಂ ಪುಣ್ಯಮನಂತಕಮ್ ।

॥ ಇತಿ ಶ್ರೀ ಬ್ರಹ್ಮಾಂಡಪುರಾಣೇ ಶ್ರೀ ಕರಿಗಿರಿಮಹಾತ್ಮ್ಯೇ
ತೃತೀಯೋಧ್ಯಾಯಃ ಸಮಾಪ್ತಃ ॥

ಸಚ್ಚರಿತ್ರೆಯೆಲ್ಲವನ್ನೂ ನಾನು ನಿನಗೆ ಸಂಪೂರ್ಣವಾಗಿ ಹೇಳಿದ್ದೇನೆ. ಯಾರು ಈ ತೀರ್ಥದಲ್ಲಿ ಸ್ನಾನಮಾಡಿ ವಿಷ್ಣುಪರಾಯಣರಾಗಿ ಮನೋಹರವಾದ ಈ ಕಥೆಯನ್ನು ಕೇಳುವರೋ ಅವರೆಲ್ಲರೂ ಮುಕ್ತರಾಗುವರು. ಹೆಚ್ಚಿಗೆ ಹೇಳಬೇಕಾದ್ದೇನಿದೆ. ಅವರ ಪುಣ್ಯಕ್ಕೆ ಪಾರವೇ ಇಲ್ಲ.

ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿರುವ ಕರಿಗಿರಿ ಮಹಾತ್ಮೆಯಲ್ಲಿ ಮೂರನೆಯ ಅಧ್ಯಾಯವು ಮುಕ್ತಾಯವಾಯಿತು.

॥ ಶ್ರೀರಮಾತ್ರಿವಿಕ್ರಮಾಯನಮಃ ॥

ಚತುರ್ಥೋಽಧ್ಯಾಯಃ

ಶ್ರೀ ನಿಮಿರುವಾಚ :

ಬ್ರಹ್ಮಾತ್ಮಜ ನಮಸ್ತೇಽಸ್ತು ಋಷೀಣಾಂ ಪುಣ್ಯ ಕೀರ್ತನ ।

ತ್ವಯಾ ನವಿದಿತಂ ಕಿಂಚಿತ್ ತ್ರಿಲೋಕೇಷು ನ ವಿದ್ಯತೇ ॥ ೧ ॥

ತಸ್ಮಾತ್ ಬೋಧಾಯ ಮಾಂ ವಿಪ್ರ ಪ್ರಣತಂ ವಿನಯಾನ್ವಿತಮ್ ।

ಶ್ರೀ ವಸಿಷ್ಠೋವಾಚ :

ಗಜೇಂದ್ರತೀರ್ಥ ಮಾಹಾತ್ಮ್ಯಂ ಪ್ರವದಿಷ್ಯಾಮಿ ಭೂಮಿಪಾ ।

ಪುಷ್ಪಾಚಲಸ್ಯ ಚೋತ್ಪತ್ತಿಂ ಶ್ರವಣಾತ್ ರೋಮಹರ್ಷಣಮ್ ॥ ೨ ॥

ಗಂಧರ್ವಯೋಃ ಚ ಚರಿತಂ ತಥಾ ಶಾಪಸ್ಯ ಕಾರಣಮ್ ।

ಮೋಕ್ಷಂ ಚ ಶಾಪಾದ್ವಿಪ್ರಸ್ಯ ಭೃಗೋಸ್ಸಂಕೀರ್ತನಾನ್ನೃಪಃ ॥ ೩ ॥

ಶೃಣು ರಾಜೇಂದ್ರ ವಕ್ಷ್ಯಾಮಿ ಸಾವದಾನಮನಾಭವ ।

ಆಸ್ತಾಂ ಪೂರ್ವಂ ಮಹಾಪ್ರಾಜ್ಞೌ ಗಂಧರ್ವೌ ದೇವಗಾಯಕೌ ॥ ೪ ॥

ನಾಮ್ನಾ ಸುಪ್ರತಿತೌಲೋಕೇ ದೇವದತ್ತಧನಂಜಯೌ ।

ಶ್ರೀ ನಿಮಿಯು ಕೇಳುತ್ತಾನೆ. ಋಷಿಗಳಲ್ಲಿ ಖ್ಯಾತಿಯನ್ನು ಪಡೆದ ಬ್ರಹ್ಮಪುತ್ರನೇ, ನಿನಗೆ ನಮಸ್ಕಾರ; ನಿನಗೆ ತಿಳಿಯದಿರತಕ್ಕದ್ದು ಮೂರುಲೋಕಗಳಲ್ಲಿ ಯಾವುದೂ ಇಲ್ಲ. ಆದ್ದರಿಂದ ಎಲೈ ಋಷಿಯೇ, ವಿನಯದಿಂದ ಕೂಡಿ ನಮಸ್ಕಾರ ಮಾಡುವ ನನಗೆ ಹೇಳು.

ಶ್ರೀ ವಸಿಷ್ಠರು : ಎಲೈ ರಾಜನೇ, ಗಜೇಂದ್ರತೀರ್ಥದ ಮಹಾತ್ಮ್ಯೆಯನ್ನೂ, ಕೇಳಿದ ಮಾತ್ರದಿಂದಲೇ ರೋಮಾಂಚನವನ್ನುಂಟು ಮಾಡುವ ಪುಷ್ಪಾಚಲದ ಉತ್ಪತ್ತಿಯನ್ನೂ, ಗಂಧರ್ವಚರಿತ್ರೆಯನ್ನೂ, ಹಾಗೆ ಶಾಪಕ್ಕೆ ಕಾರಣವನ್ನೂ, ಭೃಗುಋಷಿಯಿಂದ ಪ್ರಾಪ್ತವಾದ ಶಾಪಮೋಕ್ಷವನ್ನೂ ಹೇಳುತ್ತೇನೆ ಸಾವಧಾನ ಮನಸ್ಕನಾಗಿ ಕೇಳು. ಪೂರ್ವದಲ್ಲಿ ಮಹಾಬುದ್ಧಿಶಾಲಿಗಳಾದ, ಸುರೂಪಿಗಳಾದ, ಸುಗುಣಾಢ್ಯರಾದ, ರಸಿಕರಾದ, ಗಾನವಿಶಾರರಾದ, ವಿಶ್ವಾವಸುವಿನ ಮಕ್ಕಳಾದ ದೇವದತ್ತ, ಧನಂಜಯ ಎಂಬ ಇಬ್ಬರು

ಸುರೂಪೌ ಸುಗುಣಾಢ್ಯೌ ಚ ರಸಿಕೌ ಸುಕಲಾಧರೌ ॥ ೫ ॥
ಬ್ರಹ್ಮಣಶ್ಚ ಸಭಾಂ ಪ್ರಾಪ್ತೌ ವಿಶ್ವಾವಸು ಸುತಾವುಭೌ ।
ಪಿತಾಮಹಸ್ಯ ಸದಸಿ ಸಮ್ಯಗ್ಗಾನಂ ಪ್ರಚಕ್ರತುಃ ॥ ೬ ॥
ಗಂಧರ್ವಾಭ್ಯಾಂ ಗೀಯಮಾನೇ ಶ್ರುತ್ವಾ ದೇವಾ ಸುವಿಸ್ಮಿತಾಃ ।
ಶಶಂಸುಶ್ಚ ಮಹಾದೇವಾಃ ಗಂಧರ್ವೌ ಸುಕಲಾಧರೌ ॥ ೭ ॥
ಭೃಗುಸ್ಸದಸಿ ತಚ್ಛ್ರುತ್ವಾ ನೃಪ ವಿಸ್ಮಯಮಾಗತಃ ।
ಜಹಾಸ ಪರಮಪ್ರೀತೋ ಸಂಭ್ರಮಾತ್ ಪೃಥಿವೀಪತೇ ॥ ೮ ॥
ಉವಾಚ ಚ ಮಹಾತೇಜಾಃ ಗಂಧರ್ವೌ ಮುನಿಸತ್ತಮಃ ।
ಶ್ರೀ ಭೃಗುರುವಾಚ :
ಗಂಧರ್ವೌ ಕುಲಜೌ ಶ್ರೇಷ್ಠೌ ಗಾಯಕೌ ಪುರುಷೋತ್ತಮೌ ॥
ಸುಕಲಾಜ್ಞೌ ಕುಮಾರೌ ಚ ಯುವಾಭ್ಯಾಂ ಗಾಯತಾಂ ಸ್ವರಃ ॥ ೯ ॥
ಇತ್ಯುಕ್ತೌ ಭೃಗುಣಾ ತತ್ರ ಪ್ರಮತೌ ದೇವಗಾಯಕೌ ।
ಋಷಿಂ ಪ್ರತ್ಯೂಚತುಸ್ತೌತು ಪರಿಹಾಸ ಸಮನ್ವಿತಾ ॥ ೧೦ ॥
ಫಲಾಶನಸ್ತ್ವ ಋಷೇ ಕಲಾವಿದ್ಯಾ ಕುತೋಬತ ।

ಗಂಧರ್ವರಿದ್ದರು. ಅವರು ಬ್ರಹ್ಮಸಭೆಗೆ ಬಂದು ಆ ಸಭೆಯಲ್ಲಿ ಚೆನ್ನಾಗಿ ಗಾನಮಾಡಿದರು. ಗಂಧರ್ವರ ಗಾನವನ್ನು ದೇವತೆಗಳು ಕೇಳಿ ಆಶ್ಚರ್ಯಪಟ್ಟು ಗಾನವಿದ್ಯಾ ವಿಶಾರದರಾದ ಆ ಗಂಧರ್ವರನ್ನು ಹೊಗಳಿದರು. ಎಲೈ ರಾಜನೇ, ಆ ಸಭೆಯಲ್ಲಿ ಭೃಗುಋಷಿಯು ಅದನ್ನು ಕೇಳಿ ಆಶ್ಚರ್ಯಪಟ್ಟು ಬಹಳ ಸಂತೋಷದಿಂದ ನಕ್ಕು ಗಂಧರ್ವರನ್ನು ಕುರಿತು ಇಂತೆಂದನು.

ಎಲೈ ಗಂಧರ್ವರೇ, ನೀವು ಸದ್ವಂಶದಲ್ಲಿ ಹುಟ್ಟಿರುವವರು; ಗಾನವಿದ್ಯೆಯನ್ನು ಚೆನ್ನಾಗಿ ಅರಿತವರು; ಇನ್ನೂ ಕುಮಾರರು; ನೀವು ಸ್ವರವನ್ನು ಹಾಡಿ.

ಭೃಗುಋಷಿಯಿಂದ ಈ ರೀತಿ ಹೇಳಲ್ಪಡಲು ಮಧೋನ್ಮತ್ತರಾದ ಗಾಯಕರು ಪರಿಹಾಸದಿಂದ ಭೃಗುಋಷಿಗೆ ಈ ರೀತಿ ಹೇಳಿದರು. ಎಲೈ ಋಷಿಯೇ, ಫಲಗಳನ್ನು

ಕಾ ಶ್ಯಾಮ ತರಣೀ ಪ್ರೌಢೌ ವೃದ್ಧೋಽ ವಿದಶನಃ ಕ್ವಚ ॥ ೧೧ ॥
ನಪುಂಸಕಸ್ಯ ಯುವತೀ ಕ್ವಾವಾ ಶಾಖಾ ಮೃಗಸ್ಯತು ।
ರತ್ನಮುಕ್ತಾಮಯೀಮಾಲಾ ಕ್ವವಾ ವಿದ್ಯಾ ಕಲಾಶುಭಾ ॥ ೧೨ ॥
ವಿನಿಂದ್ಯೇತ್ಥಂ ಮಹಾತ್ಮಾನಂ ಭೃಗುಂ ಪರಮಧಾರ್ಮಿಕಮ್ ।
ತೂಷ್ಣೀಂ ಸ್ಥಿತೌ ತದಾ ತತ್ರ ಗಂಧರ್ವೌ ಸದಸಿ ಸ್ಥಿತೌ ॥ ೧೩ ॥
ಇತಿ ತಾಭ್ಯಾಂ ಪರಿಹತಃ ಭೃಗುಃ ಪರಮ ಕೋಪನಃ ।
ಶಪತೌ ತತಾ ಕೋಪಾದ್ ಭವತಂ ಭೂಧರಾವುಭೌ ॥ ೧೪ ॥
ಕರಿನಾಮ್ನಾ ಶೃತೌ ಮತೌ ಮಾಮವಜ್ಞಾ ಕರೌಭುವಿ ।
ದೇವದತ್ತೋಽಪಿ ಗಂಧರ್ವಃ ಗಜಯೋನೌ ಜನಿಷ್ಯತು ॥ ೧೫ ॥
ಇತಿ ಶಪ್ತೌ ಮುನೀಂದ್ರೇಣ ದೇವದತ್ತ ಧನಂಜಯೌ ।
ಭೀತೌ ತೌ ಮುನಿದಂಡೇನ ಪ್ರಣಮ್ಯಚ ಪುನಃ ಪುನಃ ॥ ೧೬ ॥
ಪ್ರಸಾದಯಾಮಾಸ ತು ತಂ ಕುಪಿತಂ ಭೃಗುಸತ್ತಮಮ್ ।
ಊಚತುಸ್ತೌ ಗಾಯಕೌ ತೌ ಪ್ರನಷ್ಟ ಮದಸಂಯುತೌ ॥ ೧೭ ॥
ಶ್ರೀ ಗಂಧರ್ವೌ ಊಚತುಃ :

ತಿಂದು ಜೀವಿಸುವ ನಿನಗೆ ಈ ವಿದ್ಯೆಯು ಎಲ್ಲಿ ಎಂದು? ಪ್ರೌಢೆಯಾದ, ಒಳ್ಳೇ ಯೌವನವನ್ನು, ತಾಳಿರುವ ತರುಣಿ ಎಲ್ಲಿ! ದಂತಹೀನನಾದ ಮುದುಕನೆಲ್ಲಿ? ನಪುಂಸಕನಿಗೆ ಯುವತಿಯೆಲ್ಲಿ? ಕಪಿಗೆ ರತ್ನಮುತ್ತುಗಳಿಂದ ರಚಿತವಾದ ಹಾರವೆಲ್ಲಿ? ಎಂದು ಪರಮ ಧರ್ಮಿಷ್ಠರಾದ ಮಹಾನುಭಾವರಾದ ಭೃಗುಋಷಿಯನ್ನು ಈ ರೀತಿ ನಿಂದಿಸಿ ಗಂಧರ್ವರು ಆ ಸಭೆಯಲ್ಲಿ ಸುಮ್ಮನೆ ನಿಂತರು.

ಅವರಿಂದ ಈ ರೀತಿ ಜರಿಯಲ್ಪಟ್ಟ ಭೃಗುಋಷಿಯು ಅತ್ಯಂತ ಕುಪಿತನಾಗಿ ಕೋಪಾವೇಶದಿಂದ ನನ್ನನ್ನು ಜರಿದ ನೀವು ಹಸ್ತಿ ಎಂಬ ಹೆಸರಿನಿಂದ ಪರ್ವತವಾಗಿ ಭೂಲೋಕದಲ್ಲಿ ಜನಿಸಿ. ದೇವದತ್ತನೆಂಬ ಗಂಧರ್ವನು ಗಜಯೋನಿಯಲ್ಲಿ ಹುಟ್ಟಲಿ. ಈ ರೀತಿಯಾಗಿ ಋಷಿಶ್ರೇಷ್ಠರಿಂದ ಶಪಿಸಲ್ಪಟ್ಟ ದೇವದತ್ತ ಧನಂಜಯರು

ಹೇ ಭೃಗು ತಾಪಸ ಶ್ರೇಷ್ಠ ಕ್ಷಮ್ಯತಾಂ ಭವತಾನಘ ।
ಬಾಲಕಾನಾಂ ಪ್ರಮತ್ತಾನಾಂ ಮೂಡಾನಾಂ ಭೂರಿಮಾನಿನಾಮ್ ॥ ೧೮ ।
ಅಪರಾದಂ ಮಹಾಭಾಗ ತ್ವತ್ಪಾದ ಶರಣ್ಯೈಷಿಣಾಮ್ ।
ಪಾಹಿಪಾಹಿ ಮುನಿಶ್ರೇಷ್ಠ ದಯಾಲೋ ದೀನವತ್ಸಲ ॥ ೧೯ ॥
ವಿಶಾಪಂ ದೇಹಿ ಧರ್ಮಜ್ಞ ಆವಯೋರ್ಯದಿ ತುಷ್ಯಸಿ ।
ಏವಂ ಸಂಪ್ರಾರ್ಥಿತೋ ವಿಪ್ರ ಉವಾಚ ಪರಯಾ ಮುದಾ ॥ ೨೦ ॥
ಯದಾತ್ವಂ ಭುವಿಸಂಭೂತೋ ನಗೋಭವಸಿ ಗಾಯಕ ।
ತ್ರೇತಾಯುಗೇ ಚ ಋಷಿಭಿಃ ಸೇವಿತೇ ಇಭನಾಯಕೇ ॥ ೨೧ ॥
ಪರ್ವತೇ ತೀರ್ಥ ಸಂಕೀರ್ಣೇ ಗಜೋಭೂತ್ವಾ ಚರಿಷ್ಯಸಿ ।
ಏಕರೂಪೇ ಗಜೋಭೂತ್ವಾ ಅಪರಂ ಶೈಲರೂಪಧೃಕ್ ॥ ೨೨ ॥
ಏವಂ ತವ ವಿನಿರ್ದಿಷ್ಟೋ ಮಯಾ ಗಂಧರ್ವ ಸತ್ತಮ ।
ವಸಿಷ್ಯಸಿ ಭುವಿಖ್ಯಾತಃ ಕರಿಭೂಧರ ನಾಮಕಃ ॥ ೨೩ ॥
ವಸಿಷ್ಯಸಿ ಮಹಾನದ್ರೌ ಮಮ ಶಾಪೇ ನದಂದಿತಃ ।
ಏವಂ ತವ ವಿನಿರ್ದಿಷ್ಟೋ ಮಯಾ ಗಂಧರ್ವ ಸತ್ತಮ ॥ ೨೪ ॥

ಶಾಪಗ್ರಸ್ತರಾಗಿ, ಪದೇಪದೇ ನಮಸ್ಕಾರಮಾಡಿ ಕೋಪಗೊಂಡ ಆ ಭೃಗುಋಷಿಯನ್ನು ಸಮಾಧಾನಗೊಳಿಸಿ ನಾಶವಾದ ಅಹಂಕಾರವುಳ್ಳ ಆ ಗಾಯಕರು ಇಂತೆಂದು ಹೇಳಿದರು.

ತಪಸ್ವಿಗಳಲ್ಲಿ ಶ್ರೇಷ್ಠನಾದ ಎಲೈ ಭೃಗುಋಷಿಯೇ, ಪ್ರಮತ್ತರಾದ ಮೂಢರಾದ, ಮಹಾಗರ್ವಿಷ್ಠರಾದ ನಮಗೆ ತಮ್ಮ ಪಾದವೇ ಗತಿಯೆಂದು ಬಯಸಿರುವ ಬಾಲಕರ ಅಪರಾಧವನ್ನು ಕ್ಷಮಿಸಿ. ದಯಾಳುವಾದ ದೀನರ ರಕ್ಷಕರಾದ ಋಷಿಗಳೇ ನಮ್ಮನ್ನು ಕಾಪಾಡಿ. ನೀವು ಸಂತುಷ್ಟನಾದರೇ ಶಾಪೋದ್ಧಾರವನ್ನು ಮಾಡಿ. ಈ ರೀತಿ ಪ್ರಾರ್ಥಿಸಲ್ಪಟ್ಟು ಆ ಭೃಗುಋಷಿಯು ಪರಮ ಸಂತೋಷದಿಂದ ಎಲೈ ದೇವದತ್ತ ಗಾಯಕನೆ, ನೀನು ಭೂಲೋಕದಲ್ಲಿ ಪರ್ವತವಾದಾಗ, ತ್ರೇತಾಯುಗದಲ್ಲಿ ಋಷಿಗಳಿಂದ ಸೇವಿಸಲ್ಪಟ್ಟ, ಕೀರ್ತಿಗಳಿಂದ ನಿಬಿಡವಾದ ಹಸ್ತಿನಾಮಕ ಪರ್ವತದಲ್ಲಿ ಒಂದು ರೂಪದಿಂದ ಆನೆಯಾಗಿ ಸಂಚರಿಸಿ. ಇನ್ನೊಂದು ರೂಪದಲ್ಲಿ ಪರ್ವತರೂಪವನ್ನು

ಕಲೌಯುಗೇ ಭುವಿಖ್ಯಾತಃ ಕರಿಭೂಧರ ನಾಮಕಃ ।
ಭುವಮಾಸಾದಯಸ್ತ್ವಂ ಮಾಮವಮಾಸ್ಥಾಯಿನಸ್ತವ ॥ ೨೫ ॥
ಕಾಲೇನ ಮಹತಾ ತಾತ ವಾಸಮೇಷ್ಯಸಿ ಭೂತಲೇ ।
ಭೂಧರಸ್ಯ ಶಿರೋ ಭಾಗೇ ಸರ್ವ ಪಾಪ ಪ್ರಣಾಶನಮ್ ॥ ೨೬ ॥
ಇಂದ್ರತೀರ್ಥಮಿತಿ ಖ್ಯಾತಂ ಸನಕಾದ್ಯೈಸ್ಸುಸೇವಿತಮ್ ।
ಅಸ್ತಿ ತಸ್ಮಿನ್ ಮಹಾಶ್ಶೈಲೇ ಸೌಖ್ಯದಂ ಪುಣ್ಯ ಕರ್ಮಣಾಮ್ ॥ ೨೭ ॥
ಮಾಧವೇ ಮಾಸಿ ಘರ್ಮೇಣ ತಪ್ತಃ ಕರಿಭಿರಾವೃತಃ ।
ಪೀತ್ವಾ ತ್ವಂ ತೀರ್ಥಸಲಿಲಂ ಮದೇನ ವಿಚರಿಷ್ಯಸಿ ॥ ೨೮ ॥
ಪತಿಷ್ಯಸಿ ತದಾ ತಸ್ಮಾತ್ ಪರ್ವತಾದ್ಗಲಿತಃ ಕಿಲ ।
ಮರಿಷ್ಯಸಿ ತದಾ ತ್ವಂ ಹಿ ಪೂರ್ವರೂಪಂ ಪ್ರಪದ್ಯಸೇ ॥ ೨೯ ॥
ಗಂಧರ್ವ ಭಾವಮಾಸಾದ್ಯ ತೀರ್ಥಸ್ಯ ಸಲಿಲೇ ಮುದಾ ।
ನಿಮಜ್ಜ್ಯ ಚ ತದಾ ಮಾಸಮೇಕಂ ಸ್ಥಿತ್ವಾ ಚ ಸನ್ನಿಧೌ ॥ ೩೦॥
ದೇವಸ್ಯ ನಾರಸಿಂಹಸ್ಯ ಪ್ರಸಾದಾಚ್ಚ ಗಮಿಷಸಿ ।
ಇತಿ ಪ್ರದತ್ತೇ ಮುನಿನಾ ವಿಶಾಪೇ ನೃಪ ಪುಂಗವಾ ॥ ೩೧ ॥

ಧರಿಸಿರಬೇಕಂದು ನಿನಗೆ ಗೊತ್ತುಮಾಡಿದೆ. ಭೂಲೋಕದಲ್ಲಿ ನನ್ನ ಶಾಪದಿಂದ ಹಸ್ತಿನಾಮಕ ಪರ್ವತವಾಗಿ ವಾಸಮಾಡು. ಎಲೈ ಗಂಧರ್ವನೆ ಈ ರೀತಿಯಾಗಿ ನಿನಗೆ ಗೊತ್ತು ಮಾಡಿದೆ. ನನ್ನನ್ನು ಜರಿದ ನೀನು ಕಲಿಯುಗದಲ್ಲಿ ಹಸ್ತಿನಾಮಕ ಪರ್ವತವಾಗಿ ಇದ್ದು ಬಹುಕಾಲದ ನಂತರ ಆ ಪರ್ವತದ ಶಿಖರದಲ್ಲಿ ಸರ್ವಪಾಪವನ್ನೂ ಹೋಗಲಾಡಿಸತಕ್ಕ ಸನಕಾದಿಗಳಿಂದ ಸೇವಿಸಲ್ಪಟ್ಟ ಇಂದ್ರತೀರ್ಥವೆಂಬ ತೀರ್ಥವು ಇದೆ. ಅದು ಪುಣ್ಯಕರ್ಮಿಗಳಿಗೆ ಸೌಖ್ಯವನ್ನುಂಟು ಮಾಡುವ ಇಂದ್ರತೀರ್ಥವು. ವೈಶಾಖಮಾಸದಲ್ಲಿ ಬಿಸಿಲಿನಿಂದ ತಪ್ತನಾಗಿ ಆನೆಗಳೊಡನೆ ಸುತ್ತಲ್ಪಟ್ಟಿರುವ ನೀನು ಆ ತೀರ್ಥದ ನೀರನ್ನು ಕುಡಿದು ಮದದಿಂದ ಸಂಚಾರಮಾಡುತ್ತಿದ್ದು ಆ ಬೆಟ್ಟದಿಂದ ಜಾರಿಬಿದ್ದು ಮೃತನಾಗುತ್ತಿ. ಆಗ ನಿನಗೆ ಪೂರ್ವರೂಪವು ಬರುತ್ತದೆ. ಗಂಧರ್ವ ಭಾವವನ್ನು ಹೊಂದಿದ ನೀನು ಆ ತೀರ್ಥದಲ್ಲಿ ಸಂತೋಷದಿಂದ ಸ್ನಾನಮಾಡಿ

ದೇವದತ್ತೋಽಪಿ ಗಂಧರ್ವಃ ಶೈಲೋಭೂತ್ ತಕ್ಷಣಾದ್ ಭುವಿ ।
ಏವಂ ವಿದಂ ತದಾ ದೃಷ್ಟ್ವಾ ದೇವದತ್ತಸ್ಯ ಚಾಗತಮ್ ॥ ೩೨ ॥
ಧನಂಜಯೋಽಪಿ ಸಂಭ್ರಾಂತಃ ಗಜಜನ್ಮ ಸುದುಸ್ತರಮ್ ।
ಶಿಲಾಭೂತಂ ದೇವದತ್ತಂ ನಿರೀಕ್ಷ್ಯ ನೃಪಸತ್ತಮ ॥ ೩೩ ॥
ಭೀತ ಭೀತ ಪ್ರಣಮ್ಯಾಥ ಯಯಾಚೇ ಮುನಿಪುಂಗವಮ್ ।
ಶ್ರೀ ಧನಂಜಯೋವಾಚ :-
ಮುನೀಶ ತಾಪಸ ಶ್ರೇಷ್ಠ ಪ್ರಮತ್ತಂ ಪಾತುಮರ್ಹಸಿ ।
ಧನಂಜಯೇನ ಸಂತುಷ್ಟೋ ಮುನಿಃ ಪ್ರೋವಾಚ ಧರ್ಮತಃ ॥ ೩೪ ॥
ಮಯಾ ಯದುದಿತಂ ಪೂರ್ವಂ ನ ಮೃಷಾ ಭವತಿ ಸ್ಮತತ್ ।
ಇಭಾಚಲ ಸಮೀಪೇತು ಶೈಲೋ ಭೂತ್ವಾ ವಸಿಷ್ಯಸಿ ॥ ೩೫ ॥
ಯದಾ ತು ಸೀತಯಾ ರಾಮಃ ಲಕ್ಷ್ಮಣೇನ ಸುಧೀಮತಾ ।
ಸಂಚರಿಷ್ಯನ್ ಮಹಾರಣ್ಯೇ ದಂಡಕಾಖ್ಯೇ ಧನುರ್ಧರಃ ॥ ೩೬ ॥
ಆಯಾಸ್ಯತಿ ಮಹಾವಿಷ್ಣುಃ ದ್ರಷ್ಟುಕಾಮೋ ಹರಿಂ ಪ್ರಭುಮ್ ।
ತದಾ ತವ ಶಿರೋಭಾಗೇ ಗುಹಾಯಾಂ ವಾ ಸಮೇಷ್ಯತಿ ॥ ೩೭ ॥

ಒಂದು ತಿಂಗಳು ಅಲ್ಲಿದ್ದು ನರಸಿಂಹನ ಅನುಗ್ರಹದಿಂದ ಹೊರಟು ಹೋಗುತ್ತೀ. ಈ ರೀತಿಯಾಗಿ ಮುನಿಯಿಂದ ಶಾಪವಿಮೋಚನವನ್ನು ಹೊಂದಿದ ದೇವದತ್ತನೆಂಬ ಗಂಧರ್ವನು ಕೂಡಲೇ ಭೂಲೋಕದಲ್ಲಿ ಪರ್ವತವಾಗಿ ಹುಟ್ಟಿದನು. ಎಲೈ ರಾಜಶ್ರೇಷ್ಠನೇ, ದೇವದತ್ತನಿಗೆ ಬಂದ ದುಸ್ತರವಾದ ಗಜಜನ್ಮವನ್ನೂ, ಅವನು ಪರ್ವತವಾದುದನ್ನೂ, ಧನಂಜಯನು ನೋಡಿ ಸಂಭ್ರಾಂತನಾಗಿ ಅತ್ಯಂತ ಭಯಪಟ್ಟು ಋಷಿವರ್ಯನಿಗೆ ನಮಸ್ಕಾರಮಾಡಿ ತಾಪಸಶ್ರೇಷ್ಠನಾದ ಋಷಿಶ್ವರನೇ, ಮಧೋನ್ಮತ್ತನಾದ ನನ್ನುನ್ನು ಕಾಪಾಡಲು ನೀನು ಯೋಗ್ಯನು ಎಂದು ಅವನನ್ನು ಬೇಡಿಕೊಂಡನು. ಧನಂಜಯನಿಂದ ಸಂತುಷ್ಟನಾದ ಆ ಮುನಿಯು ಎಲೈ ಧನಂಜಯನೇ, ನಾನು ಮೊದಲು ಏನನ್ನು ಹೇಳಿದೆನೋ ಅದು ಎಂದಿಗೂ ಸುಳ್ಳಾಗುವುದಿಲ್ಲ. ಹಸ್ತಿನಾಮಕ ಪರ್ವತದ ಹತ್ತಿರ ಪರ್ವತವಾಗಿ ವಾಸಮಾಡುತ್ತೀ. ಶ್ರೀರಾಮನು

ಜಾನಕೀಶ ತದಾ ರಾಮಂ ವಾಕ್ಯಮೇತದುವಾಚ ಹ ।
ಸ್ವಾಮಿನ್ ಪ್ರಭೋ ಮಹಾತೇಜಾಃ ಪರ್ವತೇಽಸ್ಮಿನ್ ಮಹೋದಯೇ ॥
ಕುರು ತೀರ್ಥಂ ಮಹಾಬಾಹೋ ಧನುಷ್ಕೋಟ್ಯಾ ವಿಶೀರ್ಯಚ ।
ಏವಮಾಕರ್ಣ್ಯ ಸೀತಾಯಾ ವಾಕ್ಯಂ ಲೋಕೋಪಕಾರಕಮ್ ॥ ೩೯ ॥
ಶೃತ್ವಾ ರಾಮಸ್ತು ಸೀತಾಯಾ ವಾಕ್ಯಂ ರಘುಕುಲೋತ್ತಮಃ ।
ಕರಿಷ್ಯತಿ ರಘುಶ್ರೇಷ್ಠಸ್ತವ ಶೀರ್ಷ್ಣಿ ಧನಂಜಯ ॥ ೪೦ ॥
ತದಾ ತವ ಮಹಾಭಾಗ ಮಯಾ ಸಂಕೀರ್ತಿತಂ ಚ ಯಮ್ ।
ಶಾಪಂ ಸುದುಸ್ಸಹಾಂ ತಾತ ಸರ್ವೇಷಾಂ ಪ್ರಾಣಿನಾಮಿಹ ॥ ೪೧ ॥
ವಿಷ್ಣುಪಾದಾಬ್ಜ ಸಂಸ್ಪರ್ಶಾತ್ ಶಾಪಾನ್ಮೋಕ್ಷೋ ಭವಿಷ್ಯತಿ ।
ಇತ್ಯುಕ್ತ್ವಾ ಭೃಗುಣಾ ಕಾಲೇ ಶೈಲೋಭೂತ್ವಾ ಸಮೀಪತಃ ॥ ೪೨ ॥
ಇಭಾಚಲಸ್ಯ ಸಂಜಜ್ಞೇ ಗಂಧರ್ವೋಽಥ ಧನಂಜಯಃ ।
ಇದಾನೀಂ ದೃಶ್ಯತೇ ಸರ್ವೈ ಅದ್ರಿರೂಪೀ ಧನಂಜಯಃ ॥ ೪೩ ॥
ಏತಸ್ಮಿನ್ನೇವ ಕಾಲೇತು ರಾಮಚಂದ್ರೋ ಮಹಾಪ್ರಭುಃ ।
ಕಿಷ್ಕಿಂದಾದಾಜಗಾಮಾಥ ಲಕ್ಷ್ಮಣೇನ ಚ ಸೀತಯಾ ॥ ೪೪ ॥

ಸೀತೆಯೊಡನೆಯೂ, ಬುದ್ಧಿಶಾಲಿಯಾದ ಲಕ್ಷ್ಮಣನೊಡನೆಯೂ ದಂಡಕಾರಣ್ಯವೆಂಬ ಮಹಾರಣ್ಯದಲ್ಲಿ ಧನುರ್ಧಾರಿಯಾಗಿ ಸಂಚರಿಸುತ್ತಾ ನರಸಿಂಹಸ್ವಾಮಿಯನ್ನು ನೋಡಲೋಸುಗ ಬಂದಾಗ ಮಹಾವಿಷ್ಣುಸ್ವರೂಪಿಯಾದ ಶ್ರೀರಾಮನು ನಿನ್ನ ಶಿರೋಭಾಗದಲ್ಲಿ ಗುಹೆಯಲ್ಲಿ ವಾಸಮಾಡುತ್ತಾನೆ. ಆಗ ಸೀತೆಯು ಮಹಾಪರಾಕ್ರಮಶಾಲಿಯಾದ ಎಲೈಸ್ವಾಮಿಯೇ, ಮಹಾರಣ್ಯದಲ್ಲಿರುವ ಈ ಪರ್ವತದಲ್ಲಿರುವ ಪ್ರಾಣಿಗಳಿಗೆ ಹಾಗು ಲೋಕೋಪಕಾರವಾಗುವ ರೀತಿ ಬಿಲ್ಲಿನ ತುದಿಯಿಂದ ಸೀಳಿ ತೀರ್ಥವನ್ನು ಮಾಡು ಎಂದು ಶ್ರೀರಾಮನಿಗೆ ಹೇಳುವಳು. ಆಗ ಶ್ರೀರಾಮನು ಲೋಕೋಪಕಾರಕವಾದ ಸೀತೆಯ ಮಾತನ್ನು ಕೇಳಿ ನಿನ್ನ ಶಿಖರದಲ್ಲಿ ತೀರ್ಥ ಮಾಡುವನು. ಆಗ ಎಲ್ಲಾ ಪ್ರಾಣಿಗಳಿಗೂ ಸಹಿಸಲಶಕ್ಯವಾದ ನಾನು ನಿನಗೆ ಕೊಟ್ಟ ಶಾಪವು ವಿಷ್ಣುಪಾದಕಮಲ ಸ್ಪರ್ಶದಿಂದ ಬಿಡುಗಡೆಯಾಗುವುದು, ಎಂಬುದಾಗಿ

ಕಿಷ್ಕಿಂದಾದಾಜಗಾಮಾಥ ಲಕ್ಷ್ಮಣೇನ ಚ ಸೀತಯಾ ॥ ೪೪ ॥
ಸಹಿತೋ ದಕ್ಷಿಣಾಶಾಯಾಂ ಸಂಸ್ಥಿತಂ ಗಿರಿಮುತ್ತಮಮ್ ।
ದ್ರಷ್ಟು ಕಾಮೋ ನೃಸಿಂಹಸ್ಯ ಗಿರಿಂಚ ಋಷಿ ಸೇವಿತಮ್ ॥ ೪೫ ॥
ರಾಮಚಂದ್ರೋಪಿ ಧರ್ಮಜ್ಞೋ ಪ್ರಾಪ್ಯ ಶೈಲಂ ಸುಖಾವಹಮ್ ।
ನಿಮಜ್ಯ ತೀರ್ಥೇ ಶ್ರೀಪಾದೇ ದೇವದೇವಂ ಜನಾರ್ಧನಮ್ ॥ ೪೬ ॥
ಹರಿಂ ಪ್ರಣಮ್ಯ ಶಿರಸಾ ವವಂದೇ ರಘುಪುಂಗವಃ ।
ಶ್ರೀರಾಮೋವಾಚ :
ನಮೋ ನಮಃ ಸ್ತಂಭ ಭವಾಯ ತುಭ್ಯಂ
ನೃಸಿಂಹ ರೂಪಾಯ ಮಹಾಂತ್ರ ಮಾಲಿನೇ ।
ಅತೀವ ದುಃಖಾರ್ತ ಶಿಶುಂ ನಿರಿಕ್ಷ್ಯ
ದಯಾಯುತೋ ರಕ್ಷವದಾಯ ಜಾತಃ ॥ ೪೭ ॥
ತಸ್ಮೈ ನಮೋ ವಜ್ರನಖಾಯದಂಷ್ಟ್ರೇ
ಮಹಾಘನೌಘ ಸ್ವನ ನಿಸ್ವನಾಯ ।
ನೃಸಿಂಹಾಯ ನಮಸ್ತುಭ್ಯಂ ದೈತ್ಯ ವಕ್ಷೋ ವಿದಾರಿಣೇ ॥ ೪೮ ॥

ಭೃಗುಋುಷಿಯಿಂದ ಹೇಳಲ್ಪಟ್ಟಿತು ಆಗ ಧನಂಜಯನು ಕಾಲಕ್ರಮದಲ್ಲಿ ಹಸ್ತಿನಾಮಕ ಪರ್ವತದ ಸಮೀಪದಲ್ಲಿ ಪರ್ವತವಾಗಿ ಇದ್ದನು.

ಆ ಧನಂಜಯನೆಂಬ ಗಂಧರ್ವನು ಈಗಲೂ ಎಲ್ಲರಿಗೂ ಪರ್ವತರೂಪವಾಗಿ ಕಾಣಿಸುತ್ತಾನೆ. ಇಷ್ಟರಲ್ಲಿಯೇ ಶ್ರೀರಾಮಚಂದ್ರನು ಲಕ್ಷ್ಮಣನೊಡನೆಯೂ, ಸೀತೆಯೊಡನೆಯೂ ಕಿಷ್ಕಿಂದಾಪಟ್ಟಣಕ್ಕೆ ಬಂದು ದಕ್ಷಿಣದಿಕ್ಕಿನಲ್ಲಿದ್ದ ಋಷಿಗಳಿಂದ ಸೇವಿಸಲ್ಪಟ್ಟ ಆ ಕರಿಗಿರಿ ಪರ್ವತವನ್ನು ನೋಡಲಿಚ್ಛಿಸಿ ಸುಖಾಸ್ಪದವಾದ ಆ ಪರ್ವತವನ್ನು ಸೇರಿ ಶ್ರೀಪಾದತೀರ್ಥದಲ್ಲಿ ಸ್ನಾನಮಾಡಿ, ಶ್ರೀನರಸಿಂಹನ ದರ್ಶನ ಮಾಡಿ ಆ ಶ್ರೀನರಸಿಂಹನಿಗೆ ತಲೆಬಾಗಿ ಸ್ತಂಭದಲ್ಲಿ ಹುಟ್ಟಿದ, ಶ್ರೀನೃಸಿಂಹರೂಪನಾದ, ಕರುಳನ್ನು ಮಾಲೆಯಾಗಿ ಧರಿಸಿರುವ ಮತ್ತು ಅತಿದುಃಖದಿಂದ ಬಳಲಿದ ಮಗುವನ್ನು

ಮಾಯಾತೀತಾಯ ದೇವಾಯ ಅರವಿಂದಾಕ್ಷಾಯ ತೆ ನಮಃ ।
ನಾಗಾದ್ರಿ ವಾಸಿನೇ ತುಭ್ಯಂ ವರದಾಯ ಮಹಾತ್ಮನೇ ॥ ೪೯ ॥
ಋಷೀಣಾಂ ಯಜ್ಞಶೀಲಾನಾಂ ರಕ್ಷಕಾಯ ನಮೋ ನಮಃ ।
ಇತಿ ಸ್ತುತ್ವಾ ಹರಿಂ ತೂರ್ಣಂ ರಾಮದೇವಃ ಪ್ರತಾಪವಾನ್ ॥ ೫೦ ॥
ಸಮೀಪಸ್ತಂ ಗಿರಿಂ ರಾಜನ್ ಸಮಾಸಾದ್ಯ ಶಿರಸ್ತದಾ ।
ಗುಹಾಯಾಂಚ ನಿವಿಷ್ಟಸ್ಸನ್ ಆಸನೇ ಉಪವೇಶ್ಯ ಚ ॥ ೫೧ ॥
ವೈದೇಹ್ಯಾ ಸಹ ಸಲ್ಲಾಪಂ ಚಕಾರ ಪುರುಷೋತ್ತಮಃ ।
ಸೀತಾತು ರಾಮಂ ಪ್ರೋವಾಚ ಪರ್ವತೇಽಸ್ಮಿನ್ ಮಹಾಪ್ರಭೋ ॥ ೫೨ ॥
ಕುರು ತೀರ್ಥಂ ಧನುಷ್ಕೋಟ್ಯಾ ವಿಶೀರ್ಯಚ ಗಿರೇಶ್ಶಿರಃ ।
ಇತಿ ಸಂಪ್ರಾರ್ತ್ಯಮಾನಸ್ತು ಸೀತಾಯಾ ಲಕ್ಷ್ಮಣೇನ ಚ ॥ ೫೩ ॥
ಪೇಶಲಂ ಧನುರಾದಾಯ ತಸ್ಥೌ ರಾಮಃ ಪ್ರತಾಪವಾನ್ ।
ಧನುಷ್ಕೋಟ್ಯಾ ವಿದಾರ್ಯಾದ್ರಿಂ ಚಕಾರ ಧನು ನಾಮಕಮ್ ॥ ೫೪ ॥
ತೀರ್ಥಂ ಪರಾಶರಾದ್ಯೈಶ್ಚ ಸನಕಾದ್ಯೈ ಸುಸೇವಿತಮ್ ।
ತತ್ರ ಸ್ನಾತ್ವಾ ಸ್ವಯಂ ರಾಮೋ ವೈದೇಹ್ಯಾ ಸಹಿತಃ ಪ್ರಭುಃ ॥ ೫೫ ॥

ನೋಡಿ ದಯಾಯುಕ್ತನಾಗಿ ರಾಕ್ಷಸ ಸಂಹಾರಕ್ಕಾಗಿ ಹುಟ್ಟಿದ, ವಜ್ರನಖ ಕೋರೆದಾಡೆಗಳೂ ಉಳ್ಳ, ಮಹಾಮೋಘ ಸಮೂಹಧ್ವನಿಂಯೋಪಾದಿಯಲ್ಲಿ ಧ್ವನಿಯುಳ್ಳ, ರಾಕ್ಷಸನ ವಕ್ಷಸ್ಥಳವನ್ನು ಸೀಳಿದ ಮಾಯಾತೀತನಾದ ಅರವಿಂದಾಕ್ಷನಾದ, ಕರಿಗಿರಿಪರ್ವತದಲ್ಲಿ ವಾಸಮಾಡುವ, ವರವನ್ನು ಕೊಡುವ ಮಹಾನುಭಾವನಾದ ಯಜ್ಞಶೀಲರಾದ ಋಷಿಗಳನ್ನು ಕಾಪಾಡುವ ನಿನಗೆ ನಮಸ್ಕಾರವು ಎಂದು ನಮಸ್ಕಾರ ಮಾಡಿದನು. ಮಹಾಪ್ರಜ್ಞಾಶಾಲಿಯಾದ ಲಕ್ಷ್ಮಣನಾದರೋ ನಿರ್ಮಲಾಂತಃಕರಣನಾಗಿ ಆ ತೀರ್ಥದಲ್ಲಿ ಸ್ನಾನಮಾಡಿ ಪರಮ ಪ್ರೀತನಾಗಿ ಸನಾತನನಾದ ಶ್ರೀರಾಮಚಂದ್ರನನ್ನು ಕುರಿತು ಸರ್ವ ಶತ್ರುನಾಶಕನಾದ, ಪರಾಕ್ರಮಿಯಾದ ರಾಮಚಂದ್ರನೇ, ಶ್ರೇಷ್ಠವಾದ ಈ ಪರ್ವತದಲ್ಲಿ ಋಷಿಗಳ ಹಿತಕ್ಕೂ ಮತ್ತು ಪ್ರೀತಿಗೂ ಸಮಸ್ತ ಪಾಪನಿವಾರಕವಾದ ರಾಮತೀರ್ಥವನ್ನು ಈಗ ಮಾಡು ಎಂಬುದಾಗಿ ಬುದ್ಧಿಶಾಲಿಯಾದ ಲಕ್ಷ್ಮಣನು ವಿಜ್ಞಾಪಿಸಿದನು. ಈ ರೀತಿ ವಿಜ್ಞಾಪಿಸಲ್ಪಟ್ಟ ರಾಜೀವಲೋಚನನಾದ ಶ್ರೀರಾಮನು

ನನಂದ ತೀರ್ಥಂ ದೃಷ್ಟ್ವಾಥ ರಾಮೋ ರಘುಕುಲೋತ್ತಮಃ ।
ಲಕ್ಷ್ಮಣಸ್ತು ಮಹಾಪ್ರಾಜ್ಞೋ ತೀರ್ಥೇ ಸ್ನಾತ್ವಾ ಸುನಿರ್ಮಲಃ ॥ ೫೬ ॥
ಉವಾಚ ಪರಮಪ್ರೀತಃ ರಾಮದೇವಂ ಸನಾತನಮ್ ।
ರಾಮ ರಾಮ ಮಹಾಬಾಹೋ ಸರ್ವಶತ್ರು ನಿಬರ್ಹಣ ॥ ೫೭ ॥
ಇದಾನೀಂ ಪರ್ವತ ಶ್ರೇಷ್ಠೇ ತ್ವನಾಮಕ ಯುತಂ ಶುಭಮ್ ।
ರಘುಶ್ರೇಷ್ಠ ಹಿತಾರ್ಥಾಯ ಋಷೀಣಾಂ ಪ್ರೀತಯೇ ಕುರು ॥ ೫೮ ॥
ತೀರ್ಥಂ ಶ್ರೀರಾಮ ನಾಮಾನಂ ಸರ್ವಾಘೌಘ ನಿವಾರಣಮ್ ।
ಇತಿ ವಿಜ್ಞಾಪಿತೋ ರಾಮಃ ಲಕ್ಷ್ಮಣೇನ ಚ ಧೀಮತಾ ॥ ೫೯ ॥
ವಿಜ್ಞಾಪನಂ ತದಾ ಶ್ರುತ್ವಾ ರಾಮೊ ರಾಜೀವ ಲೋಚನಃ ।
ಉವಾಚ ಪರಮಪ್ರೀತೋ ಲಕ್ಷ್ಮಣಂ ಶುಭಲಕ್ಷ್ಮಣಮ್ ॥ ೬೦ ॥
ಕರಿಷ್ಯಾಮಿ ತವ ಪ್ರೀತ್ಯೈ ತೀರ್ಥಂ ಶ್ರೀರಾಮ ನಾಮಕಮ್ ।
ಇತ್ಯುಕ್ತ್ವಾ ತು ರಘುಶ್ರೇಷ್ಠ ತೀರ್ಥಂಚ ಚಕಾರ ಹ ॥ ೬೧ ॥
ತತ್ರ ತೀರ್ಥೇ ನಿಮಜ್ಜಂತಿ ಬ್ರಹ್ಮಾದ್ಯಾಸ್ಸಕಲಾಃ ಸುರಾಃ ।
ವಿಶ್ವಾಮಿತ್ರ ವಸಿಷ್ಠೌಚ ವಾಮದೇವ ಮುಖಾಃ ಪರೇ ॥ ೬೨ ॥

ಆ ವಿಜ್ಞಾಪನೆಯನ್ನು ಕೇಳಿ ಪರಮಪ್ರೀತನಾಗಿ ಶುಭಲಕ್ಷಣಯುಕ್ತನಾದ ಲಕ್ಷ್ಮಣನನ್ನು ಕುರಿತು ನಿನ್ನ ಪ್ರೀತಿಗೋಸ್ಕರ ಶ್ರೀರಾಮನಾಮಕ ತೀರ್ಥವನ್ನು ಮಾಡುತ್ತೇನೆ. ಎಂದು ಹೇಳಿ ಆ ರಾಮತೀರ್ಥವನ್ನು ಮಾಡಿದನು. ಆ ತೀರ್ಥದಲ್ಲಿ ಬ್ರಹ್ಮನೇ ಮೊದಲಾದ ಸಮಸ್ತ ದೇವತೆಗಳೂ, ವಿಶ್ವಾಮಿತ್ರ, ವಸಿಷ್ಠರೂ, ವಾಮದೇವ ಮೊದಲಾದ ಋಷಿಗಳು ಸ್ನಾನ ಮಾಡುತ್ತಾರೆ. ಸಮಸ್ತರೂ ಶ್ರೀರಾಮನೊಡನೆ ನಿರ್ಮಲವಾದ ಆ ತೀರ್ಥದಲ್ಲಿ ಸ್ನಾನ ಮಾಡಿ ಸೀತಾಲಕ್ಷ್ಮಣರೊಡನೆ ಕೂಡಿದ ಶ್ರೀರಾಮಚಂದ್ರನನ್ನು ಪೂಜಿಸಿ ತಮ್ಮ ತಮ್ಮ ಆಶ್ರಮಗಳಿಗೆ ಹೊರಟು ಹೋದರು.

ಎಲ್ಲೈ ರಾಜನೇ ಧನಂಜಯನು ಬ್ರಾಹ್ಮಣರ ಶಾಪದಿಂದ ಮುಕ್ತನಾಗಿ ದಿವ್ಯ ರೂಪವನ್ನು ಹೊಂದಿ ಶ್ರೀರಾಮನ ಎದುರಿಗೆ ನಿಂತು ಸೀತಾ ಸಮೇತನಾದ ರಾಮನಿಗೂ, ಲಕ್ಷ್ಮಣನಿಗೂ ಪ್ರದಕ್ಷಿಣೆ ನಮಸ್ಕಾರ ಮಾಡಿ ಬಾರಿ ಬಾರಿಗೂ ಅನುಜ್ಞೆಯನ್ನು ಪಡೆದು

ರಾಮೇಣ ಸಹಿತಾ ಸರ್ವೇ ತೀರ್ಥೇ ಸ್ನಾತ್ವಾ ಸುನಿರ್ಮಲೇ ।
ಶ್ರೀರಾಮಂ ಲಕ್ಷ್ಮಣೋಪೇತಂ ವೈದೇಹ್ಯಾಂ ಸಹಿತಂ ಪ್ರಭುಮ್ ॥ ೬೩
ಪೂಜಯಿತ್ವಾ ಋಷಿಗಣಾಃ ಸ್ವಮಾಶ್ರಮ ಪದಂ ಯಯುಃ ।
ಧನಂಜಯೋಽಪಿ ಮುಕ್ತಸ್ಸನ್ ವಿಪ್ರಶಾಪಾನ್ಮಹೀಪತೇ ॥ ೬೪ ॥
ದಿವ್ಯರೂಪ ಸಮಾಸ್ಥಾಯ ರಾಮಸ್ಯ ಪುರತಸ್ಥಿತಃ ।
ವೈದೇಹ್ಯಾ ಸಹಿತಂ ರಾಮಂ ಲಕ್ಷ್ಮಣಂ ಚ ಧನಂಜಯಃ ॥ ೬೫ ॥
ಪರಿಕ್ರಮ್ಯ ಪ್ರಣಮ್ಯಾಥ ಅನುಜ್ಞಾತಃ ಪುನಃ ಪುನಃ ।
ಜಗಾಮ ಸಹಸಾ ರಾಜನ್ ಬ್ರಹ್ಮಲೋಕಂ ಧನಂಜಯಃ ॥೬೬ ॥
ದೃಷ್ಟ್ವಾ ವಿದ್ಯಾಧರಾಸರ್ವೇ ಚಾರಣಾಶ್ಚ ಸುವಿಸ್ಮಿತಾಃ ।
ವವೃಷುಃ ಕುಸುಮೈರ್ಭೂಪ ಸೀತಾರಾಮಂ ಸಲಕ್ಷ್ಮಣಮ್ ॥ ೬೭ ॥
ತದಾ ಪ್ರಖ್ಯಾಪಯಾಮಾಸುಃ ಋಷಯೋ ಲೋಕ ವಿಶ್ರುತಾಃ ।
ರಾಮತೀರ್ಥಸ್ಯ ಮಾಹಾತ್ಮ್ಯಂ ಸರ್ವಲೋಕೇಷು ಭೂಮಿಪ ॥ ೬೮ ॥
ತತ್ರ ತೀರ್ಥೇ ನಿಮಜ್ಜಂತಿ ಸರ್ವಪಾಪೇಷು ಮುಕ್ತಯೇ ।
ಸರ್ವಪಾಪ ವಿನಿರ್ಮುಕ್ತಾ ಯಾಂತಿ ಬ್ರಹ್ಮಸನಾತನಃ ॥ ೬೯ ॥

ಜಾಗ್ರತೆಯಾಗಿ ಬ್ರಹ್ಮಲೋಕಕ್ಕೇ ಹೋದನು. ವಿದ್ಯಾಧರರು, ಚಾರಣರು ಎಲ್ಲರೂ ಇದನ್ನು ನೋಡಿ ಬಹಳ ಆಶ್ಚರ್ಯಪಟ್ಟು ಲಕ್ಷ್ಮಣನೊಡಗೂಡಿದ ಸೀತಾರಾಮರ ಮೇಲೆ ಪುಷ್ಪವೃಷ್ಟಿಗರೆದರು. ಆಗ ಸರ್ವಲೋಕಪ್ರಸಿದ್ಧರಾದ ಋಷಿಗಳು ಸಮಸ್ತ ಲೋಕಗಳಲ್ಲಿಯೂ ಶ್ರೀರಾಮತೀರ್ಥದ ಮಹಿಮೆಯನ್ನು ಪ್ರಸಿದ್ಧಪಡಿಸಿದರು. ಯಾರು ಆ ತೀರ್ಥದಲ್ಲಿ ಸಮಸ್ತ ಪಾಪನಿವಾರಣೆಗೋಸ್ಕರ ಸ್ನಾನಮಾಡುತ್ತಾರೋ ಅವರೆಲ್ಲರೂ ಸಮಸ್ತ ಪಾಪಮುಕ್ತರಾಗಿ ಬ್ರಹ್ಮಲೋಕವನ್ನು ಹೊಂದುವರು. ಆದ್ದರಿಂದ ಎಲೈ ರಾಜನೇ, ಬುದ್ಧಿಶಾಲಿಯಾದವನು ತನ್ನ ಸುಖಕ್ಕೋಸ್ಕರವೂ, ಋಷಿಗಳ, ಪಿತೃಗಳ ಪ್ರೀತ್ಯರ್ಥವಾಗಿಯೂ, ಗೋ, ಭೂ, ತಿಲ, ಹಿರಣ್ಯಾದಿ ದಾನಗಳನ್ನು ಮಾಡಬೇಕು. ಆದ್ದರಿಂದ ಸರ್ವಪ್ರಯತ್ನದಿಂದಲೂ ಮಂಗಳಕರವಾದ ಶ್ರೀಕರಿಗಿರಿ ಪರ್ವತಕ್ಕೆ ಹೋಗಿ ಅಲ್ಲಿ ತೀರ್ಥಗಳಲ್ಲಿ ಸ್ನಾನಮಾಡಿ ಜಗತ್ ಪ್ರಭುವಾದ ಶ್ರೀನರಸಿಂಹನನ್ನು ಭಕ್ತಿಯಿಂದ

ತಸ್ಮಾತ್ತೀರ್ಥೇತು ಕರ್ತವ್ಯಂ ಗೋಭೂತಿಲ ಹಿರಣ್ಯಕಮ್ ।
ದಾನಂ ಪಿತೃಋಷೀಣಾಂ ಚ ಪ್ರೀತಯೇ ನೃಪಪುಂಗವ ॥ ೨೦ ॥
ದೇಯಂ ಸ್ವಸ್ಯ ಸುಖಾವಾಪ್ತ್ಯೈ ಮನುಜೇನ ಸುಬುದ್ದಿನ ।
ತಸ್ಮಾತ್ ಸರ್ವಪ್ರಯತ್ನೇನ ಗತ್ವಾ ಕರಿಗಿರಿಂ ಶುಭಮ್ ॥ ೨೧ ॥
ತತ್ರ ತೀರ್ಥೇಷು ಸಂಸ್ನಾತ್ವಾ ನಾರಸಿಂಹಂ ಜಗತ್ ಪ್ರಭುಮ್ ।
ಆಲೋಕತೇ ಸದಾಭಕ್ತ್ಯಾ ಸಯಾತಿ ಹರಿ ಮಂದಿರಮ್ ॥ ೨೨ ॥
ಇತಿ ಸರ್ವಂ ಮಯಾ ಖ್ಯಾತಂ ವೃತಾಂತಂ ಅಖಿಲಂ ಚ ಯತ್ ।
ಗಂಧರ್ವಯೋಶ್ಚಚರಿತಂ ತಥಾ ಶಾಪಸ್ಯ ಸಾಂಪ್ರತಮ್ ॥ ೨೩ ॥
ಯಃ ಶೃಣೋತಿ ಸದಾತೀರ್ಥೇ ಸ್ನಾತ್ವಾ ವಿಷ್ಣು ಕಥಾಂ ಶುಭಾಮ್ ।
ನಾರಸಿಂಹ ಪ್ರಸಾದೇನ ಕೈವಲ್ಯಂ ಪ್ರತಿಪದ್ಯತೇ ॥ ೨೪ ॥

॥ ಇತಿ ಶ್ರೀ ಬ್ರಹ್ಮಾಂಡಪುರಾಣೇ ಶ್ರೀ ಕರಿಗಿರಿ ಮಹಾತ್ಮ್ಯೇ
ಚತುರ್ಥೋಽಧ್ಯಾಯಃ ಸಮಾಪ್ತಃ ॥

ಯಾರು ದರ್ಶನ ಮಾಡುತ್ತಾನೋ ಅವನು ವಿಷ್ಣುಲೋಕವನ್ನು ಸೇರುತ್ತಾನೆ. ಇಂತೆಂದು ಸಮಸ್ತವಾದ ವೃತ್ತಾಂತವನ್ನೂ, ಗಂಧರ್ವರ ಚರಿತ್ರೆಯನ್ನೂ ಶಾಪ ಮತ್ತು ಶಾಪವಿಮೋಚನೆಯ ವೃತ್ತಾಂತವನ್ನೂ ನಾನು ಸಮಗ್ರವಾಗಿ ಹೇಳಿದೆನು. ಯಾರು ಈ ತೀರ್ಥದಲ್ಲಿ ಸ್ನಾನ ಮಾಡಿ ಪುಣ್ಯತಮವಾದ ಈ ವಿಷ್ಣುಕಥೆಯನ್ನು ಕೇಳುತ್ತಾರೋ ಅವರು ಶ್ರೀನರಸಿಂಹನ ಅನುಗ್ರಹದಿಂದ ಮೋಕ್ಷವನ್ನು ಪಡೆಯುತ್ತಾರೆ.

ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿರುವ ಕರಿಗಿರಿ ಮಹಾತ್ಮೆಯಲ್ಲಿ ನಾಲ್ಕನೆಯ ಅಧ್ಯಾಯವು ಮುಕ್ತಾಯವಾಯಿತು.

॥ ಶ್ರೀ ಲಕ್ಷ್ಮೀವೇಂಕಟೇಶಾಯ ನಮಃ ॥

ಪಂಚಮೋಧ್ಯಾಯಃ

ಶ್ರೀ ರಾಜೋವಾಚ :
ವಸಿಷ್ಠ ಬ್ರಹ್ಮ ನಿಷ್ಠೋಽಸಿ ಮಾಂ ಬೋಧಯ ಋಷೀಶ್ವರ ।
ಶೃಣ್ವತೋಽಪಿ ನ ತೃಪ್ತಿರ್ಮೇ ಅಭೂದ್ಭೂಸುರ ಸತ್ತಮ ॥ ೧ ॥
ದೇವದತ್ತೋಽಪಿ ಗಂಧರ್ವೋ ಗಜೋ ಭೂತ್ವಾ ವಸದ್ಗಿರೌ ।
ಮದಮತ್ತಃ ಕಿಮಕರೋತ್ತಸ್ಯಾ ಮುಕ್ತಿರಭೂತ್ಕಥಮ್ ॥ ೨ ॥
ಏತದ್ವಿಸ್ತಾರ್ಯ ಮೇ ಬ್ರೂಹಿ ತೀರ್ಥಮಾಹಾತ್ಮ್ಯಮುತ್ತಮಮ್ ।
ಶ್ರೀ ವಸಿಷ್ಠ ಉವಾಚ :
ಇತಃ ಪರಂ ಪ್ರವಕ್ಷ್ಯಾಮಿ ಕರಿತೀರ್ಥಸ್ಯ ವೈಭವಮ್ ॥ ೩ ॥
ಶೃಣುಶ್ವಸಾವಧಾನೇನ ಮಾಹಾತ್ಮ್ಯಂ ಗಜರೂಪಿಣಃ ।
ದೇವದತ್ತೋಽಪಿ ಗಂಧರ್ವೋ ಗಜೋಭೂತ್ವಾ ಮದಾನ್ವಿತಃ ॥ ೪ ॥
ಅದ್ರೇಃ ಕುಕ್ಷೌ ವಸನ್ ಭೂಪ ಕರಿಭಿಶ್ಚ ಕರೇಣುಭಿಃ ।

ಶ್ರೀ ರಾಜನು ಕೇಳುತ್ತಾನೆ. ಋಷೀಶ್ವರನಾದ ವಸಿಷ್ಠನೇ, ನೀನು ಬ್ರಹ್ಮನಿಷ್ಠನು. ನೀನು ಹೇಳಿದ್ದನ್ನು ನಾನು ಎಷ್ಟು ಕೇಳಿದರೂ ನನಗೆ ತೃಪ್ತಿ ಯಾಗಲಿಲ್ಲ. ದೆವದತ್ತನೆಂಬ ಗಂಧರ್ವನು ಆನೆಯಾಗಿ ಪರ್ವತದಲ್ಲಿ ವಾಸಮಾಡುತ್ತಾ ಮದಮತ್ತನಾಗಿ ಏನು ಮಾಡಿದನು? ಅವನಿಗೆ ಹೇಗೆ ಮುಕ್ತಿಯಾಯಿತು? ಇದನ್ನೂ, ತೀರ್ಥಮಾಹಾತ್ಮೆಯನ್ನೂ ವಿಸ್ತಾರವಾಗಿ ನನಗೆ ಹೇಳಿ ಎಂದು ಕೇಳಿದನು.

ಶ್ರೀ ವಸಿಷ್ಠರು ಅದಕ್ಕೆ ಈರೀತಿ ಹೇಳುತ್ತಾರೆ. ಇನ್ನು ಮುಂದೆ ಗಜತೀರ್ಥದ ವೈಭವವನ್ನೂ, ಗಜರೂಪಿಯಾದ ಗಂಧರ್ವನ ಮಾಹಾತ್ಮ್ಯೆಯನ್ನೂ ಹೇಳುತ್ತೇನೆ, ಸಾವಧಾನದಿಂದ ಕೇಳು. ಗಂಧರ್ವನಾದ ದೇವದತ್ತನಾದರೋ ಆನೆಯಾಗಿ ಹುಟ್ಟಿ ಮದೋನ್ಮತ್ತನಾಗಿ ಪರ್ವತದಲ್ಲಿ ವಾಸಮಾಡುತ್ತಾ ಗಂಡಾನೆಗಳಿಂದಲೂ,

ವೃತೋ ಮದೇನ ಮತ್ತೋಥ ಚಚಾರ ಗಿರಿಗಹ್ವರೇ ॥ ೫ ॥
ವೈಶಾಖೇ ಮಾಸಿ ಘರ್ಮೇಣ ತಪ್ತಃ ಕರಿಭಿರಾವೃತಃ ।
ಇಂದ್ರ ತೀರ್ಥ ಸಕಾಶಂ ವೈ ಪ್ರಾಪ್ತಃ ಪೀತುಂ ಕುಶಂ ತದಾ ॥ ೬ ॥
ಗಜೇಂದ್ರ ತೀರ್ಥ ಸಲಿಲೇ ವಿಗಾಹ್ಯ ತೃಷಯಾಭೃಶಮ್ ।
ಹಸ್ತೇನ ಪೂರಿತ ಪಯಃ ಅಂಗೇಶ್ವಷ್ಟಿ ಪ್ರಪೂರಯನ್ ॥ ೭ ॥
ಇಂದ್ರತೀರ್ಥ ತಟೋದ್ಯಾನೇ ವಿಚಚಾರ ಸ ನಾಗರಾಟ್ ।
ವಿಸ್ಮೃತಶ್ಚಾತ್ಮ ಭಾವಶ್ಚ ಪರ್ವತಾತ್ಸ ಪಪಾತಹ ॥ ೮ ॥
ಪತಿಶ್ಯಮಾಣೇ ನಾಗೇಂದ್ರೇ ಚಚಾಲ ಗಿರಿಕಾನನೇ ।
ಪೃಥಿವೀಚಾಭವನ್ರಾಜನ್ ತಂ ದೃಷ್ಟ್ವಾ ವಿಸ್ಮಿತಾಸ್ತದಾ ॥ ೯ ॥
ದೇವಾಶ್ಚ ಋಷಯಸ್ಸರ್ವೇ ಪರ್ವತೇ ಯೇಚ ಸಂಸ್ಥಿತಾಃ ।
ಗಜೋ ಮಮಾರ ರಾಜೇಂದ್ರ ತಸ್ಮಿನ್ನೇವ ಗಿರೌ ತದಾ ॥ ೧೦ ॥
ಪಂಚತ್ವಂ ಪ್ರಾಪ್ಯ ಗಂಧರ್ವಃ ಗಜ ದೇಹಂ ವಿಸೃಜ್ಯ ಚ ।
ಪೂರ್ವ ರೂಪಂ ಸಮಾಸ್ಥಾಯ ಪರಂ ವಿಸ್ಮಯಮಾಗತಃ ॥ ೧೧ ॥
ಕಥಂ ನಷ್ಟಂ ಸಾಂಪ್ರತಂ ತು ಗಜದೇಹಂ ಮಮೇತಿಚ ।

ಹೆಣ್ಣಾನೆಗಳಿಂದಲೂ ಕೂಡಿ, ಆ ಬೆಟ್ಟಾದ ಗುಹೆಯಲ್ಲಿ ವೈಶಖ ಮಾಸದಲ್ಲಿ ಬಿಸಿಲಿನಿಂದ ತಪ್ತನಾಗಿ ಜಲಪಾನ ಮಾಡುವುದಕ್ಕೆ ಇಂದ್ರತೀರ್ಥದ ಹತ್ತಿರಕ್ಕೆ ಬಂದು ಗಜೇಂದ್ರ ತೀರ್ಥದ ನೀರಿನಲ್ಲಿ ಮುಳಿಗಿ ಅತಿ ದಾಹದಿಂದ ಸೊಂಡಲಿನಲ್ಲಿ ನೀರುತುಂಬಿಕೊಂಡು ಮೈಮೇಲೆಲ್ಲಾ ಎರಚಿಕೊಂಡು ಆ ತೀರ್ಥದಘಟ್ಟದಲ್ಲಿರುವ ಉದ್ಯಾನವನದಲ್ಲಿ ವಿಹರಿಸುತ್ತಿದ್ದನು. ಆ ಗಂಧರ್ವನು ತನ್ನ ಸ್ಥಿತಿಯನ್ನು ಮರೆತು ಪರ್ವತದಿಂದ ಬೀಳಲು, ಆಗ ಆ ಬೆಟ್ಟವೂ, ಕಾಡೂ, ಭೂಮಿಯೂ ನಡುಗಿದವು. ಎಲೈ ರಾಜನೇ, ಆ ಪರ್ವತದಲ್ಲಿದ್ದ ಎಲ್ಲಾ ದೇವತೆಗಳೂ, ಋಷಿಗಳೂ, ಅದನ್ನು ನೋಡಿ ಆಶ್ಚರ್ಯಪಟ್ಟರು. ಆ ಆನೆಯು ಆ ಬೆಟ್ಟದಲ್ಲಿಯೇ ಪ್ರಾಣಬಿಟ್ಟಿತು. ಪ್ರಾಣಬಿಟ್ಟಮೇಲೆ ಆ ಗಂಧರ್ವನಿಗೆ ಗಜದೇಹವು ಹೋಗಿ ಪೂರ್ವರೂಪವು ಬರಲು ಪರಮಾಶ್ಚರ್ಯಪಟ್ಟಾವನಾಗಿ ತನ್ನ ಗಜದೇಹವು ಇಂದು ಹೇಗೆ ಹೋಯಿತು! ಎಂದು ಚಿಂತಾಕುಲಿತನಾದನು. ಈ

ಇತಿ ಚಿಂತಾಕುಲೋ ರಾಜನ್ ದೇವದತ್ತೋ ಬಭೂವಹ ॥ ೧೨ ॥
ಇತ್ಯೇವಂ ಚಿಂತ್ಯಮಾನಂತಂ ವಾಣೀಚಾಕಾಶಗೋಚರ ।
ಉವಾಚ ಗಾಯಕಂ ತಂ ತು ಶೃಣುಮೇ ವಚನಂ ಶುಭಮ್ ॥ ೧೩ ॥
ಭೋ ದೇವದತ್ತ ಧರ್ಮಜ್ಞ ಗಜದೇಹಸ್ಯ ಮೋಕ್ಷಣಮ್ ।
ತತ್ಕಾರಣಂ ಪ್ರವಕ್ಷ್ಯಾಮಿ ಯಸ್ಮಾತ್ಪಾಪಂ ವ್ಯಪೋಹತಿ ॥ ೧೪ ॥
ಇಂದ್ರತೀರ್ಥಸ್ಯ ಸಲಿಲೇ ನಿಮಜ್ಯ ಚ ವಿಲೋಲ್ಯಚ ।
ತೀರ್ಥೋದಕಂ ಪ್ರಪೀತ್ವಾವ್ಯೈ ವಿಧಿದೃಷ್ಟೇ ನ ಕರ್ಮಣ ॥ ೧೫ ॥
ಮೃತೋಽಸಿ ಗಾಯಕ ಶ್ರೇಷ್ಟ ಗಿರಿಗರ್ತೇ ಸುದುಃಖಿತಃ ।
ತಸ್ಮಾತ್ವಂ ಪೂರ್ವರೂಪಂ ಪ್ರಾಪ್ಯಮೋದಸಿ ಗಾಯಕ ॥ ೧೬ ॥
ಗಚ್ಛತೀರ್ಥಂ ಗಜೇಂದ್ರಂ ತಂ ತತ್ರ ಸ್ನಾತ್ವಾ ಸುನಿರ್ಮಲಃ ।
ಪ್ರಹ್ಲಾದ ವರದಂ ದೇವಂ ನಾರಸಿಂಹಂ ಸಮರ್ಚಯ ॥ ೧೭ ॥
ನಾರಸಿಂಹ ಪ್ರಸಾದೇನ ಗೀಯಮಾನಸ್ಸುರಾದಿಭಿಃ ।
ಸ್ವರ್ಲೋಕಂ ಗಚ್ಛ ಗಂಧರ್ವ ತಪಸಾ ತ್ವತ್ಕೃತೇನ ಚ ॥ ೧೮ ॥
ಏವಂ ಶೃತ್ವಾ ಸ ಗಂಧರ್ವಃ ತೀರಮಾಸಾದ್ಯ ತತ್ತದಾ ।

ರೀತಿಯಾಗಿ ಗಂಧರ್ವನು ಚಿಂತಿಸುತ್ತಿರಲು ಆಕಾಶವಾಣಿಯು ಆ ಗಾಯಕನನ್ನು ಕುರಿತು ಧರ್ಮಜ್ಞನಾದ ಎಲೈ ದೇವದತ್ತನೇ, ಮಂಗಳಕರನಾದ ನನ್ನ ಮಾತನ್ನು ಕೇಳು. ನಿನಗೆ ಗಜದೇಹವು ಹೋದುದನ್ನೂ ಪಾಪನಾಶಕವಾದ ಕಾರಣವನ್ನೂ ಹೇಳುತ್ತೇನೆ. ಇಂದ್ರತೀರ್ಥದ ನೀರಿನಲ್ಲಿ ಮುಳುಗಿ, ಚಲ್ಲಾಟವಾಡಿ ವಿಧಿವಶಾತ್ ಆ ತೀರ್ಥದ ಜಲವನ್ನು ಪಾನಮಾಡಿ ಆ ಪರ್ವತದ ಗುಹೆಯಲ್ಲಿ ವ್ಯಸನಪಡುತ್ತಾ ಮೃತನಾದೆ. ಎಲೈ ಗಾಯಕನೇ, ನೀನು ಪೂರ್ವರೂಪವನ್ನು ಹೊಂದಿ ಸಂತೋಷಪಡುತ್ತಿ. ಅಲ್ಲಿ ಸ್ನಾನಮಾಡಿ ನಿರ್ಮಲಾಂತಃಕರಣನಾಗಿ ಪ್ರಹ್ಲಾದನಿಗೆ ವರವನ್ನು ಕೊಟ್ಟ ಶ್ರೀನರಸಿಂಹಸ್ವಾಮಿಯನ್ನು ಪೂಜಿಸಿ ಶ್ರೀನೃಸಿಂಹನ ಅನುಗ್ರಹದಿಂದ ದೇವ್ಥದಿಗಳಿಂದ ಹೊಗಳಲ್ಪಟ್ಟವನಾಗಿ ನಿನ್ನ ತ್ಪಪಸ್ಸಿನಿಂದ ಸ್ವರ್ಗಲೋಕವನ್ನುಸೇರು, ಎಂದು ನುಡಿಯಿತು.

ಸ್ನಾತ್ವಾ ತೀರ್ಥೇ ಗಜೇಂದ್ರೇ ಚ ದೇವದತ್ತ ಸುನಿರ್ಮಲಃ ॥ ೧೯ ॥
ತಪಸ್ತೇಪೇ ಸ ಧರ್ಮಾತ್ಮಾ ವತ್ಸರಂ ನಿಯಮೇ ಸ್ಥಿತಃ ।
ತಪೋ ಬಲೇನ ಗಂಧರ್ವೇ ವರ್ತಮಾನೇ ನಗೋತ್ತಮೇ ॥ ೨೦ ॥
ಸಂತುಷ್ಟಸ್ತಪಸಾ ತಸ್ಯಾ ದೇವದೇವೋ ಜನಾರ್ಧನಃ ।
ಆವಿರಾಸೀತ್ಸ್ವಕಲಯಾ ತಟೇ ತೀರ್ಥಸ್ಯ ಭೂಮಿಪ ॥ ೨೧ ॥
ಗಂಧರ್ವಂ ತಂ ತಪಸ್ಯಂ ತಂ ವೀಕ್ಷ್ಯ ದೇವೋ ಜನಾರ್ಧನಃ ।
ಮೇಘಗಂಭೀರಯಾ ವಾಚಾ ಉವಾಚ ಪುರುಷೋತ್ತಮಃ ॥ ೨೨ ॥
ಗಂಧರ್ವ ಶೃಣು ಮದ್ವಾಕ್ಯಂ ತಪಸಾ ತೋಷಿತೋಸ್ಮ್ಯಹಮ್ ।
ವರಂ ವರಯ ಭದ್ರಂ ತೇ ವರದೋಹ ಮಿಹಾಗತಃ ॥ ೨೩ ॥
ದೇವದತ್ತೋಪಿ ಗಂಧರ್ವಃ ಆಕರ್ಣ್ಯ ವಚನಂ ಹರೇಃ ।
ಉವಾಚ ಪರಮಪ್ರೀತಃ ಸಂತೋಷಾಶ್ರುಕುಲೇಕ್ಷಣಃ ॥ ೨೪ ॥
ತುಷ್ಟಾವ ಪರಯಾ ಭಕ್ತ್ಯಾ ವಿಷ್ಣುಂ ಲೋಕೇಶ್ವರಂ ಪ್ರಭುಮ್ ।
ಶ್ರೀ ದೇವದತ್ತ ಉವಾಚ :
ನಮಸ್ತೇ ಪುಂಡರೀಕಾಕ್ಷ ನಮಸ್ತೇ ಕರುಣಾಕರ ॥ ೨೫ ॥
ನಮಸ್ತೇ ಸರ್ವ ಲೋಕೇಶ ಪ್ರಸೀದ ಪುರುಷೋತ್ತಮ ।

ಆ ಗಂಧರ್ವನು ಇದನ್ನು ಕೇಳಿ ಆ ತೀರ್ಥಕ್ಕೆ ಬಂದು ವರ್ಷ ಪರ್ಯಂತರವೂ ನಿಯಮದಿಂದ ತಪಸ್ಸನ್ನು ಮಾಡಿದನು. ಆ ಗಂಧರ್ವನು ಶ್ರೇಷ್ಠವಾದ ಪರ್ವತದಲ್ಲಿ ತಪೋಬಲದಿಂದ ಸಂತುಷ್ಟನಾಗಿ ಆ ತೀರ್ಥತಟದಲ್ಲಿ ತನ್ನ ರೂಪದಿಂದ ಆವಿರ್ಭವಿಸಿ ತಪಸ್ಸು ಮಾಡುತಿದ್ದ ಆ ಗಂಧರ್ವನನ್ನು ನೋಡಿ ಮೇಘಗಂಭೀರವಾದ ವಾಕ್ಯದಿಂದ ಎಲೈ ಗಂಧರ್ವನೇ ನನ್ನ ಮಾತನ್ನು ಕೇಳು; ನಿನ್ನ ತಪಸ್ಸಿನಿಂದ ನಾನು ಸಂತುಷ್ಟನಾಗಿ ನಿನಗೆ ವರವನ್ನು ಕೊಡಲು ಇಲ್ಲಿಗೆ ಬಂದಿದ್ದೇನೆ. ನಿನಗೆ ಹಿತವಾದ ವರವನ್ನುಬೇಡು ಎಂದು ಹೇಳಲು ಆ ಗಂಧರ್ವನು ಶ್ರೀನರಸಿಂಹನ ಮಾತನ್ನು ಕೇಳಿ ಪರಮ ಪ್ರೀತನಾಗಿ ಸಂತೋಷದಿಂದ ಕಣ್ಣೀರು ತುಂಬಿದವನಾಗಿ ಪರಮಭಕ್ತಿಯಿಂದ ಲೋಕನಾಯಕನಾದ ಆ ನರಸಿಂಹನನ್ನು ಈ ರೀತಿಯಾಗಿ ಸ್ತೋತ್ರ ಮಾಡಿದನು.

ಪಾಹಿಮಾಂ ಸರ್ವದಾ ದೇವ ಮದಮೋಹ ಸಮನ್ವಿತಮ್ ॥ ೨೬ ॥
ಪ್ರಸನ್ನೋ ಯದಿ ದೇವೇಶ ವರಂ ದೇಹಿ ಸನಾತನ ।
ಯನ್ಮಯಾ ಸೇವಿತಂ ತೀರ್ಥಂ ಗಜೇಂದ್ರನಾಮತೋ ಭುವಿ ॥ ೨೭ ॥
ಪ್ರಸಿದ್ಧೋಭವತು ಸ್ವಾಮಿನ್ ಕೃಪಯಾ ತವ ಸುವ್ರತ ।
ಇತಿವೈ ದೇವದತ್ತೇನ ವಿಭುರ್ವಿಜ್ಞಾಪಿತಸ್ತದಾ ॥ ೨೮ ॥
ಜಗಾದ ಪರಯಾ ವಾಣ್ಯಾ ದೇವದತ್ತಂ ಸುವಿಸ್ಮಿತಮ್ ।
ಶ್ರೀಭಗವಾನುವಾಚ :
ತಥಾಸ್ತು ಭೂಮ್ಯಾಂ ಪ್ರಥಿತೋ ಗಜೇಂದ್ರೇತೀತಿನಾಮತಃ ॥ ೨೯ ॥
ಭವಿಷ್ಯತಿ ತಥಾ ವಿದ್ವಾನ್ ನಾತ್ರಕಾರ್ಯಾ ವಿಚಾರಣ ।
ಗಜೇಂದ್ರ ತೀರ್ಥೇ ಯೇ ಸ್ನಾನಂ ಕುರ್ವಂತಿ ಭುವಿಮಾನವಾಃ ॥ ೩೦ ॥
ತೇ ಸರ್ವೇ ಪಾಪನಿರ್ಮುಕ್ತಾ ಯಾಂತಿ ವಿಷ್ಣೋಃ ಪರಂ ಪದಮ್ ।
ಇತ್ಯುಕ್ತ್ವಾ ಭಗವಾನ್ ವಿಷ್ಣುಃ ಸರ್ವೇಷಾಮೇವ ಪಶ್ಯತಾಮ್ ॥ ೩೧ ॥
ಅಂತರ್ದಧೇ ಭಗವಾನ್ ತತ್ರೈವ ಜಗದೀಶ್ವರಃ ।
ಶ್ರೀ ಸೂತ ಉವಾಚ :

ಪುಂಡರೀಕಾಕ್ಷನೇ, ಕರುಣಾಕರನೇ, ಸರ್ವಲೋಕೇಶ್ವರನೇ, ನಿನಗೆ ನಮಸ್ಕಾರ; ಎಲೈ ಪುರುಷೋತ್ತಮನೇ ಮದಮೋಹದಿಂದ ಕೂಡಿದ ನನ್ನನ್ನು ಸರ್ವದಾ ಕಾಪಾಡು; ಎಲೈ ದೇವೇಶನೇ, ನೀನು ಪ್ರಸನ್ನವಾದದ್ದೇ ಆದರೇ ನನ್ನಿಂದ ಸೇವಿಸಲ್ಪಟ್ಟ ಈ ತೀರ್ಥವು ಲೋಕದಲ್ಲಿ ನಿನ್ನ ಕೃಪೆಯಿಂದ ಗಜೇಂದ್ರತೀರ್ಥವೆಂದು ಪ್ರಸಿದ್ಧಿ ಹೊಂದಲಿ, ಈ ರೀತಿಯಾಗಿ ದೇವದತ್ತನಿಂದ ವಿಜ್ಞಾಪಿಸಲ್ಪಟ್ಟ ಆ ಶ್ರೀನೃಸಿಂಹನು ಆಶ್ಚರ್ಯಚಕಿತನಾದ ದೇವದತ್ತನಿಗೆ ಈ ರೀತಿ ಕೇಳಿದನು. ಹಾಗೆಯೇ ಆಗಲಿ; ಅದು ಭೂಲೋಕದಲ್ಲಿ ಗಜೇಂದ್ರತೀರ್ಥವೆಂಬ ಹೆಸರಿನಿಂದಲೇ ಪ್ರಸಿದ್ಧಿಯನ್ನು ಹೊಂದಲಿ; ಈ ವಿಷಯದಲ್ಲಿ ಯೋಚಿಸಬೇಡ. ಭೂಲೋಕದಲ್ಲಿ ಯಾವ ಜನರು ಈ ತೀರ್ಥದಲ್ಲಿ ಸ್ನಾನಮಾಡುವರೋ ಅವರೆಲ್ಲರೂ ಪಾಪಮುಕ್ತರಾಗಿ ವಿಷ್ಣುಪದವನ್ನು ಸೇರುವರು ಆ ವಿಷ್ಣುವು ಈ ರೀತಿಯಾಗಿ ಹೇಳಿ ಎಲ್ಲರೂ ನೋಡುತ್ತಿದ್ದ ಹಾಗೆಯೇ

ಗತೇ ವಿಷ್ಣೌ ಭಗವತಿ ಗಂಧರ್ವೋ ವಿಸ್ಮಿತೋನಘ ॥ ೩೨ ॥
ಅಥ ಸಂಚಿಂತ್ಯ ಮನಸಾ ವಿಸ್ಮಿತಾ ಮುನಯೋಭವನ್ ।
ವಿಜ್ಞಾಯ ಸ್ವಗತಿಂ ಕಾಲೇ ಆತ್ಮನೈವಸುಬುದ್ಧಿಮಾನ್ ॥ ೩೩ ।
ನೃಸಿಂಹಸ್ಯ ಪ್ರಸಾದಾರ್ಥಂ ದೇವಾಲಯಮುಪಾಗಮತ್ ।
ನೃಹರಿಂ ತೇ ಸಮಭ್ಯರ್ಚ್ಯ ಪರಿಕ್ರಮ್ಯ ಪ್ರಣಮ್ಯ ಚ ॥ ೩೪ ॥
ಜಗಾಮ ಭವನಂ ಸ್ವಸ್ಯ ಸ್ತೂಯಮಾನೋಪ್ಸರೋಗಣೈಃ ।
ತದಾ ಪ್ರಭೃತಿ ಲೋಕೇಚ ಪ್ರಸಿದ್ಧೋಭೂತ್ಸ ತೀರ್ಥರಾಟ್ ॥ ೩೫ ॥
ಇತಿಸರ್ವಂ ಮಯಾ ಖ್ಯಾತಂ ವೃತ್ತಾಂತಮಖಿಲಂ ಮಹತ್ ।
ಗಂಧರ್ವಯೋಶ್ಚ ಚರಿತಂ ತೀರ್ಥಾನಂ ಚ ವಿಶೇಷತಃ ॥ ೩೬ ॥
ಇದಾನೀಂ ಚ ಮಹಾಭಾಗ ಕಿಮನ್ಯಚ್ಛ್ರೋತುಮಿಚ್ಛಸಿ ।
ಶ್ರೀ ರಾಜೋವಾಚ :
ಕಾಶೀ ತೀರ್ಥಸ್ಯ ಮಾಹಾತ್ಮ್ಯಂ ದೂರ್ವಾಸ ಸಋುಷೇಸ್ತಥಾ ॥ ೩೭ ॥
ಶ್ರೋತುಮಿಚ್ಛಾಮಿ ಸರ್ವಜ್ಞ ಶ್ರೋತ್ರ್ಯಾಣಾಂಮಘನಾಶನಮ್ ।
ವದ ವಿಸ್ತರತೋ ಬ್ರಹ್ಮನ್ ಗಂಗಾಯಾಶ್ಚರಿತಂ ಚ ಯತ್ ॥ ೩೮ ॥

ಅಂತರ್ಧಾನನಾದನು.

ಆಗ ಶ್ರೀ ಸೂತರು ಹೇಳುತ್ತಾರೆ. ವಿಷ್ಣುವು ಅಂತರ್ಧಾನನಾಗಲು, ಪಾಪರಹಿತನಾದ ಆ ಗಂಧರ್ವನು ಆಶ್ಚರ್ಯಪಟ್ಟನು; ಋಷಿಶ್ರೇಷ್ಠರು ಮನಸ್ಸಿನಲ್ಲಿ ಇದನ್ನು ಯೋಚಿಸುತ್ತಾ ಸಂಭ್ರಾಂತರಾದರು. ಆ ಬುದ್ಧಿಶಲಿಯಾದ ಗಂಧರ್ವನು ಕಾಲಕ್ರಮದಲ್ಲಿ ತನ್ನ ಗತಿಯನ್ನು ತಾನೇ ತಿಳಿದು ನರಸಿಂಹನ ಅನುಗ್ರಹಾರ್ಥವಾಗಿ ದೇವಾಲಯಕ್ಕೆ ಬಂದು ಆ ನರಸಿಂಹನನ್ನು ಪೂಜಿಸಿ ಪ್ರದಕ್ಷಿಣ ನಮಸ್ಕಾರ ಮಾಡಿ ಅಪ್ಸರ ಸ್ತ್ರೀಯರು ಸಮೂಹಗಳಿಂದ ಹೊಗಳಲ್ಪಡುತ್ತಾ ತನ್ನ ಮನೆಗೆ ಹೋದನು. ಆಗಿನಿಂದಲೂ ಲೋಕದಲ್ಲಿ ಶ್ರೇಷ್ಠವಾದ ತೀರ್ಥವು ಪ್ರಸಿದ್ಧವಾಯಿತು. ಇಂತೆಂಬ ದೊಡ್ಡದಾದ ಆ ಸಮಸ್ತ ವೃತ್ತಾಂತವನ್ನೂ, ಗಂಧರ್ವರ ಮತ್ತು ತೀರ್ಥಗಳ ಚರಿತ್ರೆಯನ್ನೂ ನಾನು ನಿನಗೆ ಹೇಳಿದೆನು. ಈಗ ಇನ್ನು ಏನನ್ನು ಕೇಳಲಿಚ್ಛಿಸುತ್ತಿಯೆ? ಎಂದನು.

ಕಿಮರ್ಥಮಾಗತಾ ದೇವೀ ಜಾಹ್ನವೀ ಪರ್ವತೋತ್ತಮೇ ।
ಇತಿ ರಾಜ್ಞಾ ಸುಸಂಪೃಷ್ಟೋ ವಸಿಷ್ಠೋ ಬ್ರಹ್ಮನಂದನಃ ॥ ೩೯ ॥
ಉವಾಚ ಪರಯಾ ವಾಣ್ಯಾ ನೃಪಂ ವಿಷ್ಣುಪರಾಯಣಮ್ ।
ಶ್ರೀ ವಸಿಷ್ಠ ಉವಾಚ :
ಶೃಣುಷ್ವ ನರಶಾರ್ದೂಲ ಚರಿತಂ ಮಹದದ್ಭುತಮ್ ॥ ೪೦ ॥
ಪ್ರಾದುರ್ಭಾವಂ ಚ ಗಂಗಾಯಾಃ ಪರ್ವತೇ ಹಸ್ತಿನಾಮಕೇ ।
ಆಸೀತ್ಪುರಾ ಮಹಾತೇಜಾ ದುರ್ವಾಸಾ ನಾಮವೈ ಋಷಿಃ ॥ ೪೧ ॥
ಸಂಚರ್ಯ ಸರ್ವ ಲೋಕೇಷು ಆಜಗಾಮ ನೃಪಾಂತಿಕಮ್ ।
ಅಂಬರೀಷಂ ಮಹಾಭಕ್ತಂ ವಿಷ್ಣುವ್ರತಪರಾಯಣಮ್ ॥ ೪೨ ॥
ಅಬ್ರವೀತ್ಸ ಮುನಿಶ್ರೇಷ್ಠಃ ಪಾರಣಂ ಕರ್ತುಮುದ್ಯತಮ್ ॥ ೪೩ ॥
ಶ್ರೀ ದೂರ್ವಾಸ ಉವಾಚ :
ರಾಜನ್ ದೇಹಿ ಸುಮೃಷ್ಟಾನ್ನಂ ಕ್ಷುಧಿತಾಯ ತಪಸ್ವಿನೇ ।
ಇತಿಪೃಷ್ಟೋ ನರಪತಿಃ ತಂ ಮುನಿಂ ಶಂಸಿತವ್ರತಮ್ ॥ ೪೪ ॥
ಉವಾಚ ಪರಮಪ್ರೀತಃ ದಾಸ್ಯಾಮ್ಯನ್ನಂ ಸುನಿರ್ಮಲಮ್ ।

ಆಗ ರಾಜನು ಎಲೈ ಸರ್ವಜ್ಞನೇ, ಶ್ರೋತೃಗಳ ಪಾಪವನ್ನು ಹೋಗಲಾಡಿಸುವ ಕಾಶೀತೀರ್ಥದ ಮತ್ತು ದೂರ್ವಾಸರ ಮಹಾತ್ಮ್ಯೆಯನ್ನು ಕೇಳಲಿಚ್ಛಿಸುತ್ತೇನೆ. ಗಂಗೆಯ ಚರಿತ್ರೆಯನ್ನು ವಿಸ್ತಾರವಾಗಿ ಹೇಳು. ಆ ಗಂಗೆಯು ಈ ಶ್ರೇಷ್ಠವಾದ ಪರ್ವತದಲ್ಲಿ ಏಕೆ ಬಂದಳು? ಎಂದು ರಾಜನಿಂದ ಪ್ರಶ್ನಿಸಲ್ಪಟ್ಟು ಬ್ರಹ್ಮನಂದನನಾದ ವಸಿಷ್ಠನು ಸಂತುಷ್ಠನಾಗಿ ವಿಷ್ಣುಭಕ್ತನಾದ ಆ ರಾಜನಿಗೆ ಮಧುರವಾಣಿಯಿಂದ ಇಂತೆಂದು ಹೇಳಿದನು.

ಶ್ರೀ ವಸಿಷ್ಠರು : ಎಲೈ ನರಶ್ರೇಷ್ಠನೇ, ಅದ್ಭುತವಾದ ಆ ಚರಿತ್ರೆಯನ್ನೂ ಹಸ್ತಿನಾಮಕ ಪರ್ವತದಲ್ಲಿ ಗಂಗೆಯ ಪ್ರಾದುರ್ಭಾವವನ್ನು ಕೇಳು. ಪೂರ್ವದಲ್ಲಿ ಮಹಾತೇಜಸ್ವಿಯಾದ ದೂರ್ವಾಸನೆಂಬ ಋಷಿ ಇದ್ದನು. ಆತನು ಸಕಲಲೋಕಗಳಲ್ಲಿಯೂ ಸಂಚರಿಸುತ್ತಾ ವಿಷ್ಣುವ್ರತ ಪರಾಯಣನಾದ ಅಂಬರೀಷ ಮಹಾರಾಜನ ಸಮೀಪಕ್ಕೆ ಬಂದು

ಮುನಿವರ್ಯ ಮಹಾಭಾಗ ಪಾವಿತಂ ಚ ಕುಲಂ ಮಮ ॥ ೪೫ ॥
ಭವದಾಗಮನಂ ಮಹ್ಯಂ ಹೇತುಃ ಕಲ್ಯಾಣ ವೃದ್ಧಯೇ ।
ತೂರ್ಣಂ ಗಚ್ಛಮುನಿಶ್ರೇಷ್ಟ ಸ್ನಾನಾರ್ಥಂಚ ನದೀಂ ಶುಭಾಮ್ ॥ ೪೬ ॥
ಇತಿ ರಾಜ್ಞಸ್ತದಾ ವಿದ್ವಾನ್ ಶೃತ್ವಾವಾಚಸ್ಸುಪೂಜಿತಃ ।
ಜಗಾಮ ಸಮುನಿಸ್ತಾತ ಸ್ನಾನಾರ್ಥಂ ಚ ಸರೋವರಮ್ ॥ ೪೭ ॥
ತಸ್ಮಿನ್ದಿನೇಭವೇತ್ಸ್ವಲ್ಪಾ ದ್ವಾದಶೀ ಪಾರಣೋಚಿತಾ ।
ಅನಾಗತೇ ಋಷೌ ತಸ್ಮಿನ್ ಪಾರಣಾರ್ಥಂ ಸ ಭೂಭುಜಃ ॥ ೪೮ ॥
ಚಿಂತಯಾಮಾಸ ಧರ್ಮಾತ್ಮಾ ಮುನಿರದ್ಯಾಪಿ ನಾಗತಃ ।
ಕಿಂಕಾರ್ಯಂ ತು ಮಯಾಪ್ಯತ್ರ ದ್ವಾದಶೀಚಾಽತೀತ ವರ್ತತೇ ॥ ೪೯ ॥
ಇತಿ ಸಂಚಿಂತ್ಯ ವೈ ರಾಜಾ ಮತಿಂ ಕೃತ್ವಾ ವಿನಿಶ್ಚಯಮ್ ।
ಹರಿವ್ರತ ಪರಿತ್ಯಾಗದ್ವಿಪ್ರಶಾಪೋ ವರೋ ಮಮ ॥ ೫೦ ॥
ಇತಿ ನಿಶ್ಚಿತ್ಯ ವೈ ರಾಜಾ ಪಾರಣಂ ಕೃತವಾನ್ನೃಪ ।
ಅಂಬಸಾ ಕೇವಲೇನೈವ ಕರಿಷ್ಯೇ ವ್ರತಪಾರಣಮ್ ॥ ೫೧ ॥
ಪಾರಣೇತು ಕೃತೇ ತೇನ ದೂರ್ವಾಸಾಭೃಶಕೋಪತಃ ।

ಪಾರಣೆಯನ್ನು ಮಾಡಲು ಪ್ರಯತ್ನಿಸುತ್ತಿದ್ದ ಅಂಬರೀಷನನ್ನು ಕುರಿತು ಎಲೈ ರಾಜನೇ, ಹಸಿವುಗೊಂಡ ತಪಸ್ವಿಯಾದ ನನಗೆ ಮೃಷ್ಟಾನ್ನವನ್ನು ಕೊಡು ಎಂದು ಕೇಳಿದನು. ಈ ರೀತಿಯಾಗಿ ಕೇಳಲ್ಪಟ್ಟ ಆ ರಾಜನು ಪರಮಪ್ರೀತನಾಗಿ ಸ್ತೋತ್ರಾರ್ಹನಾದ ಆಚಾರಸಂಪನ್ನನಾದ ಆ ಋಷಿಯನ್ನು ಕುರಿತು ಮಹಾನುಭಾವನಾದ ಋಷಿಶ್ರೇಷ್ಠನೇ, ದಿವ್ಯವಾದ ಅನ್ನವನ್ನು ಕೊಡುತ್ತೇನೆ. ನನ್ನ ವಂಶವು ಪಾವನವಾಯಿತು. ತಾವು ಬರೋಣವು ನನ್ನ ಕಲ್ಯಾಣವೃದ್ಧಿಗೆ ಕಾರಣವಾಯಿತು. ಎಲೈ ಋಷಿಶ್ರೆಷ್ಠನೇ, ಪುಣ್ಯವಾದ ನದಿಗೆ ಸ್ನಾನಕ್ಕೆ ಜಾಗ್ರತೆ ದಯಮಾಡಿರಿ ಎಂದು ರಾಜನಿಂದ ವಿಜ್ಞಾಪಿಸಲ್ಪಟ್ಟ ಆ ದೂರ್ವಾಸನು ಸ್ನಾನಕ್ಕಾಗಿ ಸರೋವರಕ್ಕೆ ಹೋದನು. ಪಾರಣೆಗೆ ಯೋಗ್ಯವಾದ ದ್ವಾದಶಿಯು ಆ ದಿವಸ ಸ್ವಲ್ಪವೇ ಇದ್ದಿತು. ಆ ಋಷಿಯು ಸಕಾಲಕ್ಕೆ ಬರದಿರಲು ಆ ರಾಜನು ಋಷಿಯು ಇದುವರೆವಿಗೂ ಬರಲಿಲ್ಲ. ದ್ವಾದಶಿಯು ಕಳೆದು ಹೋಗುತ್ತೆ.

ತಾವತಾ ತು ಸಮಾಯಾತೋ ಲೋಚನಾಭ್ಯಾಂ ದಹನ್ನಿವ ॥ ೫೨ ॥
ಅಂಬರೀಶಂ ನೃಪಂ ದೃಷ್ಟ್ವಾ ಉವಾಚ ಋಷಿಸತ್ತಮಃ ।
ಶ್ರೀ ದೂರ್ವಾಸ ಉವಾಚ :
ಶಾಪಂ ಗೃಹಾಣ ದುರ್ಬುದ್ಧೇ ಯನ್ಮಯಾ ಸಮುದೀರಿತಮ್ ।
ಮೀನಃ ಕೂರ್ಮವರಾಹಸ್ತ್ವಂ ನೃಸಿಂಹೋ ವಿಕೃತಾನನಃ ॥ ೫೪ ॥
ಹ್ರಸ್ವಾಂಗೋ ಭವ ಕುಬ್ಜಶ್ಚ ಬ್ರಾಹ್ಮಣಃ ಕ್ರೂರ ಕರ್ಮಕೃತ್ ।
ಕ್ಷತ್ರಿಯೋ ಭವ ದುರ್ಬುದ್ಧೇ ಆತ್ಮಜ್ಞಾನ ವಿವರ್ಜಿತಃ ॥ ೫೫ ॥
ಮುನೀನಾಂ ಪುರತೋ ನಿತ್ಯಂ ಜಾರೋ ಭವ ವಿನಿಂದಿತಃ ।
ಪಾಷಂಡಜನ ಸಂವೇತ್ತಾ ಪುರಸ್ತ್ರೀಣಾಂ ವಿಶೇಷತಃ ॥ ೫೬ ॥
ಹಯಮಾರುಹ್ಯ ವಿಷ್ಣೋಶ್ಚ ಸುತಕೀರ್ತಿ ವಿವರ್ಧನಃ ।
ಇತಿ ತೇ ದಶ ಜನ್ಮಾನಿ ಸಂತು ಪಾಷಂಡಮಾನಿನಃ ॥ ೫೭ ॥
ಏವಂ ಶಾಪಂ ದದೌ ತಸ್ಮೈ ಅಂಬರೀಶಾಯ ಭೂಭುಜೇ ।
ಅಂಬರೀಶಸ್ಯ ಹೃದಯೇ ಬ್ರಹ್ಮಣ್ಯೇ ಮಧುಸೂದನಃ ॥ ೫೮ ॥
ಪ್ರತಿಜಗ್ರಾಹ ತಂ ಶಾಪಂ ವಿಪ್ರವರ್ಯೇಣ ಕೀರ್ತಿತಮ್ ॥

ಪಾರಣೆಗೆ ನಾನೇನು ಮಾಡಲಿ? ಎಂದು ಚಿಂತಿಸಿತ್ತಾ ಹರಿಭಕ್ತಿ ಪರಿತ್ಯಾಗಕ್ಕಿಂತಲೂ ನನಗೆ ವಿಪ್ರ ಶಾಪ ಉತ್ತಮ ಎಂದು ಮನಸ್ಸನ್ನು ದೃಢಮಾಡಿ ಬರೀ ಜಲದಿಂದ ಪರಣೆಯನ್ನು ಮಾಡುತ್ತೇನೆಂದು ಸಂಕಲ್ಪಿಸಿದನು. ಆ ರಾಜನು ಈ ರೀತಿ ಪಾರಣೆ ಮಾಡಲು ಅತ್ಯಂತ ಕೋಪಗೊಂಡ ಆ ದೂರ್ವಾಸಋಷಿಯು ಅಷ್ಟುಹೊತ್ತಿಗೆ ಬಂದು ಕಣ್ಣುಗಳಿಂದ ಸುಡುವನೋ ಎಂಬಂತೆ ಅಂಬರೀಷನೇ, ನಾನು ಹೇಳಿದ ಶಾಪವನ್ನು ಹಿಡಿ! ನೀನು ಆಮೆ, ಹಂದಿ, ವಿಕಾರವಾದ ಮುಖವುಳ್ಳ ನರಸಿಂಹ, ಸಂಕುಚಿತನಾದ ಅಂಗಗಳುಳ್ಳ ಕುಬ್ಜನೂ, ಕ್ರೂರಕರ್ಮವನ್ನು ಮಾಡುತಕ್ಕ ಬ್ರಾಹ್ಮಣನೂ ಆತ್ಮಜ್ಞಾನವಿಹೀನನಾದ ಕ್ಷತ್ರಿಯನೂ, ಋಷಿಗಳ ಎದುರಿನಲ್ಲಿ ಯಾವಾಗಲೂ ನಿಂದಿಸಲ್ಪಟ್ಟ ಜಾರನಾಗಿಯೂ, ಪಾಷಂಡಜನರಿಗೂ ಪುರಸ್ತ್ರೀಯರಿಗೂ ವಿಶೇಷವಾಗಿ ತಿಳಿದವನಾಗಿ ಹಯರೂಢನಾಗಿ ಮಹಾಕೀರ್ತಿವಂತನಾದ ವಿಷ್ಣುವಿನ ಮಗನೂ ಈ

ಶಾಪಂ ದತ್ವಾಥ ಮೇಧಾವೀ ದೇವಲೋಕಂ ಯಯೌ ತದಾ ॥ ೫೯ ॥
ದೇವಲೋಕಸ್ಥಿತೋ ವಿದ್ವಾನ್ ಚಿಂತಯಾಮಾಸಖಿನ್ನಧೀಃ ।
ಅಂಬರೀಷೋ ಮಹಾಭಕ್ತೋ ಹರೌ ಪಾಪಂ ಮಯಾಕೃತಮ್ ॥ ೬೦
ತತ್ಪಾಪಂ ತು ಕಥಂ ಮೇದ್ಯ ಗಚ್ಛೇದಿತಿ ವಿಶಂಕಿತಃ ।
ಪಾಪಂ ಪ್ರಶಮನಾರ್ಥಂ ತು ತಪಸ್ಯಾ ವಿದಿತವ್ರತಃ ॥ ೬೧ ॥
ಏವಂ ಚಿಂತಯತಾ ತೇನ ಋಷೀಣಾ ಪೂಜಿತೋಽಹರಿಃ ।
ಅಂತರಿಕ್ಷಂ ಸಮಾಸ್ಥಾಯ ತಂ ಋಷಿಂ ಪ್ರತ್ಯವಾಚಹ ॥ ೬೨ ॥
ಮುನಿವರ್ಯ ಮಹಾಭಾಗ ರುದ್ರತೇಜೋಂಶ ಸಂಭವ ।
ಭೂಲೋಕಂ ಗಚ್ಛ ಭದ್ರಂ ತೇ ಯತ್ರಾಸ್ತೇ ಸುಮಹಾನ್ಗಿರಿಃ ॥ ೬೩ ॥
ತತ್ರಂ ತ್ವಂ ಗಚ್ಛ ಧರ್ಮಾತ್ಮಾ ಪರ್ವತೇ ಹಸ್ತಿನಾಮಕೇ ।
ತಪಶ್ಚರ ಗುಹಾಯಾಂತು ಮತ್ಸ್ಯನಾಮ್ನಿ ಧೃತವ್ರತಃ ॥ ೬೪ ॥
ತವ ಪಾಪ ವಿಶುಧ್ಯರ್ಥಂ ನೃಸಿಂಹಂ ತಂ ಸಮರ್ಚಯ ।
ಏಷು ತೀರ್ಥೇಷು ಸರ್ವೇಷು ಸ್ನಾನಮಾಚರ ಸುವ್ರತ ॥ ೬೫ ॥
ತೀರ್ಥಾನಾಂ ಶೃಣುನಾಮಾನಿ ಪ್ರವದಿಶ್ಯೇ ಹರಾತ್ಮಜ ।

ರೀತಿಯಾಗಿ ಹತ್ತು ಜನ್ಮಗಳಲ್ಲಿ ಹುಟ್ಟು ಎಂದು ಆ ಅಂಬರೀಷ ಮಹಾರಜನಿಗೆ ಶಪವನ್ನು ಕೊಡಲ್ಪಟ್ಟ ಆ ಶಾಪವನ್ನು ಸ್ವೀಕರಿಸಿದನು. ಮೇಧಾವಿಯಾದ ಆ ದೂರ್ವಾಸನು ಶಾಪವನ್ನು ಕೊಟ್ಟು ದೇವಲೋಕಕ್ಕೆ ಹೋಗಿ ಅಲ್ಲಿ ಖಿನ್ನಮನಸ್ಕನಾಗಿ ಮಹಾಭಾಕ್ತನಾದ ವಿಷ್ಣುರೂಪನಾದ ಅಂಬರೀಷನಲ್ಲಿ ನಾನು ಬಹಳ ಪಾಪಕರ್ಮವನ್ನು ಮಾಡಿದೆ. ಈಗ ನನಗೆ ಆ ಪಾಪವು ಹೇಗೆ ಹೋದೀತು ಎಂದು ಚಿಂತಿಸುತ್ತಾ ಆ ಪಾಪವನ್ನು ನೀಗಲು ವ್ರತಪರಾಯಣನಾಗಿ ತಪಸ್ಸು ಮಾಡುತ್ತೇನೆ ಎಂದು ಚಿಂತಿಸುತ್ತಿದ್ದ ಆ ಋಷಿಯಿಂದ ಪೂಜಿಸಲ್ಪಟ್ಟ ವಿಷ್ಣುವು ಅಂತರಿಕ್ಷವನ್ನು ಸೇರಿ ಆ ಋಷಿಗೆ ಈ ರೀತಿ ಹೇಳಿದನು– ಮಹಾನುಭಾವನಾದ ರುದ್ರತೇಜೋಂಶ ಸಂಭೂತನಾದ 'ಎಲೈ ಋಷಿಶ್ರೇಷ್ಠನೇ, ಭೂಲೋಕದಲ್ಲಿ ಪ್ರಖ್ಯಾತವಾದ ಹಸ್ತಿನಾಮಕ ಪರ್ವತವು ಇರುವ ಸ್ಥಳಕ್ಕೆ ಹೋಗು. ನಿನಗೆ ಮಂಗಳವಾಗುತ್ತದೆ. ಎಲೈ ಧರ್ಮಾತ್ಮನೇ, ನೀನು ಅಲ್ಲಿಗೆ

ಶೃಣುವಿಪ್ರ ಮಹಾಭಾಗ ತೀರ್ಥಾನಾಂ ಧರ್ಮತತ್ಪರ ॥ ೬೬ ॥
ಪಾದಃ ಪರಾಶರೋ ನಾಮ ಗಜೇಂದ್ರೋ ವೃಷಭಸ್ತಥಾ ।
ಸುದರ್ಶನಂ ಧನುರ್ನಾಮ ರಾಮಸಂಜ್ಞೋ ನೃಸಿಂಹಕಃ ॥ ೬೭ ॥
ಜಯಮಂಗಲ ತೀರ್ಥಾನಿ ಸಂತಿ ತಸ್ಮಿನ್ ಮಹಾಗಿರೌ ।
ಇತಿ ಸಂಬೋಧ್ಯ ಭಗವಾನ್ ವಿರರಾಮ ಮುದಾನ್ವಿತಃ ॥ ೬೮ ॥
ಮುನಿಸ್ತು ವಿಸ್ಮಿತೋ ಭೂತ್ವಾ ಬಭೂವ ವಿಗತಜ್ವರಃ ॥ ೬೯ ॥

॥ ಇತಿ ಶ್ರೀ ಬ್ರಹ್ಮಾಂಡಪುರಾಣೇ ಶ್ರೀ ಕರಿಗಿರಿ ಮಾಹಾತ್ಮ್ಯೇ
ಪಂಚಮೋಧ್ಯಾಯಃ ಸಮಾಪ್ತಃ ॥

ಹೋಗಿ ಹಸ್ತಿನಾಮಕ ಪರ್ವತದಲ್ಲಿ ಮತ್ಸ್ಯನಾಮಕ ಗುಹೆಯಲ್ಲಿ ವ್ರತವನ್ನು ಕೈಗೊಂಡು ತಪಸ್ಸುಮಾಡು. ನಿನ್ನ ಪಾಪವಿಮೋಚನೆಗಾಗಿ ಆ ನರಸಿಂಹನನ್ನು ಪೂಜಿಸು. ಅಲ್ಲಿ ಸಮಸ್ತ ತೀರ್ಥಗಳಲ್ಲಿಯೂ, ಸ್ನಾನಮಾಡು. ಧರ್ಮತತ್ಪರನಾದ ಎಲೈ ರುದ್ರಸೂನುವೇ, ವೃಷಭತೀರ್ಥ, ಸುದರ್ಶನತೀರ್ಥ, ಧನುಷ್ಕೋಟಿತೀರ್ಥ, ರಾಮತೀರ್ಥ, ನೃಸಿಂಹತೀರ್ಥ, ಜಯಮಂಗಳ ತೀರ್ಥಗಳೆಂಬ ಈ ತೀರ್ಥಗಳು ಆ ಪರ್ವತದಲ್ಲಿ ಇವೆ, ಎಂದು ಹೇಳಿ ಸಂತೋಷಯುಕ್ತನಾಗಿ ಸುಮ್ಮನಾಗಲು ಋಷಿಯು ಆಶ್ಚರ್ಯಪಟ್ಟು ತಾಪರಹಿತವಾದನು.

ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿರುವ ಕರಿಗಿರಿ ಮಹಾತ್ಮೆಯಲ್ಲಿ ಐದನೆಯ ಅಧ್ಯಾಯವು ಮುಕ್ತಾಯವಾಯಿತು.

॥ ಶ್ರೀಅಶ್ವಿನೀಹಯಗ್ರೀವಾಯ ನಮಃ ॥

ಷಷ್ಠೋಽಧ್ಯಾಯಃ

ಶ್ರೀ ರಾಜೋವಾಚ :
ಏವಂ ಸಂಭೋದ್ಯ ಭಗವಾನ್ ಗತೇ ವಿಷ್ಣುಸ್ಸನಾತನೇ ।
ಮುನಿಃ ಕಿಂ ಕೃತವಾನ್ ವಿಪ್ರ ತನ್ಮೇ ಬ್ರೂಹಿ ಸುವಿಸ್ತರಮ್ ॥ ೧ ॥
ಶ್ರೀ ವಸಿಷ್ಠ ಉವಾಚ :
ವಕ್ಷ್ಯಾಮಿ ಗೋಪ್ಯಂ ಸರ್ವೇಷಾಂ ಕಲ್ಯಾಣಾಯ ನೃಪೋತ್ತಮೇ ।
ಶೃಣುಶ್ವ ಸಾವಧಾನೇನ ಕಥಾಂ ಕಲ್ಮಶನಾಶಿನೀಮ್ ॥ ೨ ॥
ಆಸೀತ್ ಕಲಿಯುಗೇ ಚಾದ್ರೀರ್ಹಸ್ತಿ ಭೂದರ ನಾಮಕಃ ।
ತಸ್ಯ ಶೈಲಸ್ಯ ಪ್ರಾಚ್ಯಾಂವೈ ದಶಯೋಜನ ದೂರತಃ ॥ ೩ ॥
ತೃಣಶೈಲೇತಿ ವಿಖ್ಯಾತಃ ಋಷಿಣಾಧ್ಯಾಸಿತೋ ಮಹಾನ್ ।
ತಸ್ಮಿನ್ ಶೈಲೇ ವಸನ್ ಭೂಪ ದೂರ್ವಾಸಾ ನಾಮ ವೈ ಋಷಿಃ ॥ ೪ ॥
ತಪಸ್ತೇಪೇ ಸ ಧರ್ಮಾತ್ಮಾ ಸದಾ ವಿಷ್ಣು ಪರಾಯಣಃ ।

ರಾಜನು ಕೇಳುತ್ತಾನೆ. ಎಲೈ ಋಷೀಶ್ವರನೇ, ಷಡ್ಗುಣೈಶ್ವರ್ಯ ಸಂಪನ್ನನಾದ, ಸನಾತನನಾದ ವಿಷ್ಣುವು ಈ ರೀತಿ ಹೇಳಿ ಅಂತರ್ಧಾನನಾಗಲು ದೂರ್ವಾಸನು ಏನು ಮಾಡಿದನು? ಅದನ್ನು ನನಗೆ ವಿಸ್ತಾರವಾಗಿ ಹೇಳಬೇಕು ಎಂದನು.

ಅದಕ್ಕೆ ಶ್ರೀ ವಸಿಷ್ಠರು : ಎಲೈ ರಾಜನೇ, ಗೋಪ್ಯವಾದ ಈ ವಿಷಯವನ್ನು ಸರ್ವರ ಕಲ್ಯಾಣಕ್ಕೋಸ್ಕರ ಹೇಳುತ್ತೇನೆ. ಪಾಪನಾಶಕವಾದ ಈ ಕಥೆಯನ್ನು ಸಾವಧಾನದಿಂದ ಕೇಳು. ಪೂರ್ವದಲ್ಲಿ ಕಲಿಯುಗದಲ್ಲಿ ಕರಿಗಿರಿಯೆಂಬ ಬೆಟ್ಟವು ಇದ್ದಿತು. ಆ ಬೆಟ್ಟದ ಪೂರ್ವದಿಕ್ಕಿನಲ್ಲಿ ಹತ್ತು ಯೋಜನದೂರದಲ್ಲಿ ಋಷಿಗಳು ವಾಸಿಸುತ್ತಿದ್ದ ತೃಣಶೈಲವೆಂಬ ಪರ್ವತವು ಇದ್ದಿತು. ದೂರ್ವಾಸರು ಆ ಬೆಟ್ಟದಲ್ಲಿ ವಾಸಮಾಡುತ್ತಾ ಧರ್ಮಾತ್ಮರಾಗಿ, ವಿಷ್ಣುಪರಾಯಣರಾಗಿ, ಗರಿಕೆ,ಬೇರುಗಳನ್ನು ತಂದು ಅರೆದು ಅದರ ರಸವನ್ನೇ ಆಹಾರವನ್ನಾಗಿ ಮಾಡಿಕೊಂಡು ಮಹತ್ತಾದ ತಪಸ್ಸನ್ನು ಮಾಡಿದರು. ಆ

ದೂರ್ವಾಮೂಲಾನಿ ಚಾದಾಯ ಪೇಶಯುತ್ವಾಚ ತದ್ರಸಮ್ ॥ ೫ ॥
ಆಹಾರಂ ಕಲ್ಪಯಿತ್ವಾಥ ಸಚಚಾರ ತಪೋಮಹತ್ ।
ದೂರ್ವಾಸ ಸಮುನೇಸ್ತಸ್ಯ ತಪಸಾ ತೇಜಸಾಪಿಚ ॥ ೬ ॥
ನಿಸ್ಪಿಷ್ಟ ತೃಣ ಸಂಘೈಶ್ಚ ದೃಶ್ಯತೇ ಮನುಜೈರ್ಗಿರಿಃ ।
ಋಷಿಸ್ತು ನಿಯತೋ ಭೂತ್ವಾ ಜಗಾಮಾದ್ರಿಂ ಹರೇಸ್ತದಾ ॥ ೭ ॥
ಅವಗಾಹ್ಯ ಸದಾ ತೀರ್ಥೇ ಪಾದಸಂಜ್ಞೇ ಮುನೀಶ್ವರಃ ।
ಮತ್ಸ್ಯನಾಮ್ನಿ ಗುಹಾಯಾಂತು ಚಚಾರ ತಪಮುತ್ತಮಮ್ ॥ ೮ ॥
ನೃಸಿಂಹಂ ಮನಸಾ ಧ್ಯಾಯನ್ ವತ್ಸರಾಣಾಂ ಸಹಸ್ರಕಮ್ ।
ಹರಿಂ ಸಮರ್ಚಯಾಮಾಸ ಪಾಂಚರಾತ್ರೈರ್ಮಹಾಮುನಿಃ ॥ ೯ ॥
ಪೂಜಯಿತ್ವಾ ಹರಿಂ ರಾಜನ್ ಪುನಸ್ಸ ಋಷಿಸತ್ತಮಃ ।
ವಸನ್ ಹಸ್ತಗಿರೌ ತಸ್ಮಿನ್ ಗುಹಾಯಾಂ ಸುಸಮಾಹಿತಃ ॥ ೧೦ ॥
ತಪಸ್ತೇಪೇ ನೃಪಶ್ರೇಷ್ಠ ದಾರುಣಂ ಲೋಕಭೀಷಣಮ್ ।
ತಪಸ್ತಪ್ತ್ವಾಥ ಮೇಧಾವೀ ದೂರ್ವಾಸ ಮುನಿಸತ್ತಮಃ ॥ ೧೧ ॥
ಮನಸ್ಸಮಾಧಿ ಸಂಯುಕ್ತೋ ಗಂಗಾಸ್ನಾನಮಚಿಂತಯತ್ ।

ದೂರ್ವಾಸಮಹರ್ಷಿಯ ತಪಸ್ಸಿನಿಂದಲೂ, ತೇಜಸ್ಸಿನಿಂದಲೂ ಅರೆಯಲ್ಪಟ್ಟ ಹುಲ್ಲುಗಳ ಸಮೂಹದಿಂದಲೂ, ಆ ಬೆಟ್ಟವು ಜನರ ಕಣ್ಣಿಗೆ ಕಣುತ್ತದೆ. ಆ ಋಷಿಯು ಶುಚಿರ್ಭೂತನಾಗಿ ಆ ಬೆಟ್ಟಕ್ಕೆ ಹೋಗಿ ಪಾದತೀರ್ಥದಲ್ಲಿ ಸ್ನಾನಮಾಡಿ ಮತ್ಸ್ಯಗುಹೆ ಎಂಬ ಗುಹೆಯಲ್ಲಿ ಉತ್ತಮವಾದ ತಪಸ್ಸನ್ನು ಮಾಡಿದನು. ಆ ಮಹರ್ಷಿಯು ನೃಸಿಂಹನನ್ನು ಮನಸ್ಸಿನಲ್ಲಿ ಧ್ಯಾನಮಾಡುತ್ತಾ ಪಾಂಚರಾತ್ರಾಗಮೋಕ್ತ ಪ್ರಕಾರ ಒಂದು ಸಾವಿರ ವರ್ಷಗಳು ಶ್ರೀನರಸಿಂಹನನ್ನು ಪೂಜೆಮಾಡಿದನು. ಈ ಋಷಿಶ್ರೇಷ್ಠನು ಶ್ರೀನರಸಿಂಹನನ್ನು ಪೂಜಿಸುತ್ತಾ ಆ ಬೆಟ್ಟದ ಗುಹೆಯಲ್ಲಿ ಸಮಾಧಿನಿಷ್ಠನಾಗಿ ಇರುತ್ತಾ ಲೋಕಭಯಂಕರವಾದ ಉಗ್ರವಾದ ತಪಸ್ಸನ್ನು ಮಾಡಿದನು. ಮೇಧಾವಿಯಾದ ಆ ದೂರ್ವಾಸಮಹರ್ಷಿಯು ತಪಸ್ಸನ್ನು ಮಾಡಿ ಸಮಾಧಿನಿಷ್ಠನಾಗಿ ಗಂಗಾ ಸ್ನಾನ ಮಾಡಬೇಕೆಂಬುದಾಗಿ ಯೋಚನೆಯನ್ನು ಮಾಡಿದನು.

ಚಿಂತ್ಯಮಾನೇ ಮುನೇ ತಸ್ಮಿತ್ ತತೋ ಜಾತಾऽಶರೀರವಾಕ್ ॥ ೧೨ ॥
ಮುನೀನಾಂ ಶ್ರೇಷ್ಠದೂರ್ವಾಸ ಶೃಣುಮದ್ವಾಕ್ಯ ಮುತ್ತಮಮ್ ।
ಕಾಶೀ ಕ್ಷೇತ್ರಂ ತಂ ನಗಚ್ಛ ಆಗಮಿಷ್ಯತಿ ಭಾಮಿನೀ ॥ ೧೩ ॥
ಭಾಗೀರಥೀ ಮಹಾಪುಣ್ಯಾ ಸಾಗಾರಾಣಾಂ ಸುಖಪ್ರದ ।
ಮಹಾರುದ್ರ ಜಟಾಜಾತಾ ಸರ್ವೇಷಾಮಘನಾಶಿನೀ ॥ ೧೪ ॥
ಭಗೀರಥ ಪ್ರಿಯಾರ್ಥಂ ವೈ ಆಗತಾ ಸುರವರ್ತ್ಮನಾ ।
ತದಂತರೇ ಋಷೇಸ್ತಸ್ಯ ಜಹ್ನೋರ್ವಿಷ್ಣುಪದಾಶ್ರಯ ॥ ೧೫ ॥
ಪ್ರಸಾದಾಚ್ಛ ಋಷೇರ್ಭೂಪ ಸಮಾಯಾತ ಸದಾಶಿವ ।
ಲೋಕೇ ನರಾಣಾಂ ಸರ್ವೇಷಾಂ ಪಾಪನಾಶಾಯ ಸರ್ವದಾ ॥ ೧೬ ॥
ಚರಿಷ್ಯತಿ ಮುನಿಶ್ರೇಷ್ಠ ತ್ರಿಸ್ರೋತಾಜಾಹ್ನವೀ ಶುಭಾ ।
ಕಪಿಲಾಖ್ಯ ಮುನೇಸ್ತಸ್ಯ ನಯನೋತ್ಥಹುತಾಶನಾತ್ ॥ ೧೭ ॥
ಭಸ್ಮೀಭೂತಾನೃಪಾಸ್ಸರ್ವೇ ತೇಷಾಂ ಮುಕ್ತಿಪ್ರದಾಯಿನೀ ।
ತವಾಂತಿಕಂ ಮುನಿಶ್ರೇಷ್ಠ ಪ್ರಾಪ್ಯ ಗಂಗಾ ಸುಪಾವನೀ ॥ ೧೮ ॥
ಸದಾಸ್ಯತಿ ಸುಖಂ ಚಾಥ ಹ್ಯಭೀಷ್ಟಂ ತವ ಸುವ್ರತ ।

ಆ ಮುನಿಯು ಈ ರೀತಿ ಯೋಚಿಸುತ್ತಿರಲು ಋಷಿಶ್ರೇಷ್ಠನಾದ ದೂರ್ವಾಸನೇ, ನಾನು ಹೇಳತಕ್ಕ ಈ ಒಳ್ಳೆಯಮಾತನ್ನು ಕೇಳು. ನೀನು ಕಾಶೀಕ್ಷೇತ್ರಕ್ಕೆ ಹೋಗಬೇಡ. ಸಗರಚಕ್ರವರ್ತಿಯ ವಂಶದವರಿಗೆ ಸುಖವನ್ನುಂಟುಮಾಡಿದ, ಪುಣ್ಯತಮಳಾದ, ಮಹಾ ರುದ್ರಜಟಾಜೂಟದಿಂದ ಹುಟ್ಟಿದ ಸಮಸ್ತರ ಪಾಪಗಳನ್ನು ಹೋಗಲಾಡಿಸುವ, ಭಾಗೀರಥನ ಹಿತಕ್ಕಾಗಿ ದೇವಲೋಕದಿಂದ ಬಂದು, ಈ ಮಧ್ಯೇ ಜಹ್ನುಋಷಿಯ ಅನುಗ್ರದಿಂದ ಹೊರಗೆ ಬಂದು, ಮಂಗಳಕರವಾದ ಲೋಕದಲ್ಲಿ ಸಕಲರ ಪಾಪನಾಶಕ್ಕಾಗಿ ಮೂರು ಪ್ರವಾಹವಾಗಿ ಹರಿಯುವ, ಕಪಿಲ ಮಹರ್ಷಿಯ ಕಣ್ಣುಗಳಲ್ಲಿ ಹುಟ್ಟಿದ ಅಗ್ನಿಯಿಂದ ಭಸ್ಮೀಭೂತರಾದ ಸಗರ ಚಕ್ರವರ್ತಿಯ ಸಮಸ್ತ ಮಕ್ಕಳಿಗೂ ಮುಕ್ತಿಯನ್ನು ಕೊಡುವ, ಪಾವನಳದ ಗಂಗೆಯು ನಿನ್ನ ಸಮೀಪಕ್ಕೆ ಬಂದು ನೀನು ಬಯಸುವ ಸುಖವನ್ನು ಕೊಟ್ಟು ನಿನ್ನ ಕೋರಿಕೆಯನ್ನು ನೆರವೇರಿಸುತ್ತಾಳೆ. ಲೋಕೊಪಾವನೆಯಾದ

ತ್ವಯಾ ಯದೀಪ್ಸಿತಂ ಕಾಮಂ ಅತ್ರ ತೇತು ಭವಿಷ್ಯತಿ ॥ ೧೯ ॥
ಅಸ್ಮಿನ್ ಕರಿಗಿರೌ ಗಂಗಾ ಶಿಖರೇ ಲೋಕಪಾವನೀ ।
ಗುಹಾಯಾಶ್ಚ ಸಮೀಪೇತು ಪ್ರತ್ಯಕ್ಷಾ ತೇ ಭವಿಷ್ಯತಿ ॥ ೨೦ ॥
ಏವಮುಕ್ತ್ವಾ ತದಾ ವಾಣೀ ವಿರರಾಮ ಖಗೋಚರ ।
ಇತ್ಯಾಕರ್ಣ್ಯ ನಭೋವಾಕ್ಯಂ ಸಂತೋಷಪುಲಕಾಂಕಿತಃ ॥೨೧ ॥
ಆಸೀನ್ನೃಪ ಸುಖಾಸೀನಃ ಪುನಶ್ಚ ಮುನಿಸತ್ತಮಃ ।
ಸಮಾಧಿನಾ ಸಮಾಯುಕ್ತೋ ಮೌನೀಚ ತಪಸಿ ಸ್ಥಿತಃ ॥ ೨೨ ॥
ಆಸ್ತೇ ತತ್ರ ಮುನಿಶ್ರೇಷ್ಠ ಪರ್ವತೇ ಕುಸುಮಾಚಲೇ ।
ಇತ್ಯೇವಂ ತಪ್ಯಮಾನಸ್ಯ ದೂರ್ವಾಸ ಋಷೇಸ್ತದಾ ॥ ೨೩ ॥
ಆವಿರಾಸೀತ್ತದಾ ಗಂಗಾ ಪುರತೋಽಸ್ಯ ನೃಪೋತ್ತಮ ।
ಸ್ತನಭಾರ ನಮನ್ಮಧ್ಯಾ ಕ್ವಣತ್ಕಂಕಣ ನಿಸ್ವನಾ ॥ ೨೪ ॥
ಜಿತೇಂದು ವದನಾ ಪುಣ್ಯಾ ವರದಾಭಯಪಾಣಿಕಾ ।
ತಾಂ ದೃಷ್ಟ್ವಾಥ ಋಷಿಶ್ಚಕ್ರೇ ಪ್ರಣಾಮಂ ಪ್ರಣಯಾನ್ವಿತಃ ॥ ೨೫ ॥

ಆ ಗಂಗೆಯು ಈ ಹಸ್ತಿನಾಮಕ ಪರ್ವತದಲ್ಲಿ ಮತ್ಸ್ಯನಾಮ ಗುಹೆಯ ಹತ್ತಿರ ನಿನಗೆ ಪ್ರತ್ಯಕ್ಷವಾಗುತ್ತಾಳೆ. ಎಂದು ಆಕಾಶವಾಣಿಯು ಆಗಿ ಸುಮ್ಮನಾಯಿತು.

ಆ ಋಷಿಶ್ರೇಷ್ಠನು ಈ ಆಕಾಶವಾಣಿಯನ್ನು ಕೇಳಿ ಸಂತೋಷದಿಂದ ಪುಲಕಾಂಕಿತನಾಗಿ, ಮೌನವಾಗಿ, ಸಮಾಧಿನಿಷ್ಟನಾಗಿ ಆ ಕುಸುಮಾಚಲ ನಾಮಕ ಪರ್ವತದಲ್ಲಿ ತಪಸ್ಸಿನಲ್ಲಿದ್ದನು. ಆ ದೂರ್ವಾಸಮಹರ್ಷಿಯು ಈ ರೀತಿ ತಪಸ್ಸು ಮಾಡುತ್ತಿರಲು ಗಂಗೆಯು ಸ್ತನಭಾರದಿಂದ ಬಗ್ಗಿದ ಕಟಿಪ್ರದೇಶದವಳಾಗಿಯೂ, ಝಣತ್ಕಾರ ಮಾಡುತ್ತಿರುವ ಕಂಕಣಗಳ ಶಬ್ದವುಳ್ಳವಳಾಗಿಯೂ, ಚಂದ್ರನನ್ನು ಹೀಯಾಳಿಸುತ್ತಿರುವ ಮುಖವುಳ್ಳವಳಾಗಿಯೂ, ವರಾಭಯಹಸ್ತವುಳ್ಳವಳಗಿಯೂ, ಆ ಋಷಿಯ ಎದುರಿಗೆ ಪ್ರಾದುರ್ಭವಿಸಿದಳು. ಋಷಿಯು ಆ ಗಂಗೆಯನ್ನು ನೋಡಿ ಸಂತೋಷದಿಂದ ಕಣ್ಣೀರು ತುಂಬಿದವನಾಗಿಯೂ ಮತ್ತು ಗದ್ಗದವಾಕುಳ್ಳವನಾಗಿಯೂ, ಮಂದಹಾಸ-ವುಳ್ಳವನಾಗಿಯೂ, ಸಂತೋಷಪಡುತ್ತಾ ಗಂಗೆಯನ್ನು ಕುರಿತು ಇಂತೆಂದನು.

ಸಂತೋಷಾಶ್ರು ಕಲಾಪಕ್ಷಃ ತಥಾ ಗದ್ಗತ ಭಾಷಣಃ ।
ಋಷಿಃಪ್ರೋವಾಚತಾಂ ಗಂಗಾಂ ಹರ್ಷಯನ್‌ಸುಸ್ಮಿತಾನನಾಮ್ ॥ ೨೬ ॥
ಶ್ರೀ ಋಷಿರುವಾಚ :
ತ್ವಂ ಮಾತಾ ಸರ್ವಲೋಕಾನಾಂ ಯಥಾ ತವ ಹಿತಾನಘೇ ।
ಮಾಂ ಪಾಹಿ ಗಂಗೇ ಲೋಕಾನಾಂ ಸರ್ವಪಾಪ ಪ್ರಣಾಶಿನೀ ॥ ೨೭ ॥
ಪಾಪಂ ಕೃತಂ ಮಯಾ ಪೂರ್ವಂ ಅಂಬರೀಶ ಸ್ಥಿತೇ ಹರೌ ।
ತಸ್ಮಾ ತ್ವಾಂ ಪ್ರಾರ್ಥಯಾಮ್ಯದ್ಯ ಪ್ರಸೀದ ಭವಪಾವನೀ ॥ ೨೮ ॥
ಇತಿ ತೇನ ಸ್ತುತಾ ಗಂಗಾ ಉವಾಚ ಋಷಿಸತ್ತಮಮ್ ।
ಶ್ರೀ ಗಂಗೋವಾಚ :
ತ್ವಂ ರುದ್ರೋsಸಿ ನ ಸಂದೇಹಃ ಲೋಕಾನಾಂ ಹಿತಕಾಮ್ಯಯಾ ॥
ಭೂಭಾರಹರಣಾರ್ಥಾಯ ವಿಷ್ಣುನಾ ಪ್ರೇರಿತೋ ಭವಾನ್ ॥ ೨೯ ॥
ದತ್ತವಾನಸಿ ಶಾಪಂ ತು ನೃಪೇ ವಿಷ್ಣುಪರಾಯಣೇ ।
ತ್ವಯಾ ಯತ್ಕೀರ್ತಿತಂ ಶಾಪಂ ಪ್ರತಿಜಗ್ರಾಹ ಮಾಧವಃ ॥ ೩೦ ॥

ನಿರ್ಧಿಷ್ಟಳಾದ ಎಲೈ ಗಂಗೆಯೇ, ನೀನು ಸರ್ವರಿಗೂ ತಾಯಿ! ಸಕಲರ ಪಾಪವನ್ನು ನಾಶ ಮಾಡತಕ್ಕ ನೀನು ನಿನಗೆ ಸೂಕ್ತತೋರಿದಂತೆ ನನ್ನನ್ನು ಕಾಪಾಡು. ಪೂರ್ವದಲ್ಲಿ ವಿಷ್ಣುರೂಪಿಯಾದ ಅಂಬರೀಷನ ವಿಷಯದಲ್ಲಿ ನಾನು ಪಾಪವನ್ನು ಮಾಡಿದ್ದೆ. ಆದ್ದರಿಂದ ಎಲೈ ಗಂಗೆಯೇ, ನಾನು ನಿನ್ನನ್ನು ಪ್ರಾರ್ಥಿಸುತ್ತೇನೆ. ನೀನು ಪ್ರಸನ್ನಳಾಗು. ಎಂದು ಸ್ತುತಿಸಲ್ಪಟ್ಟ ಆ ಗಂಗೆಯು ಋಷಿಶ್ರೇಷ್ಠನನ್ನು ಕುರಿತು ಇಂತೆಂದಳು.

ನೀನು ಸಾಕ್ಷಾತ್ ರುದ್ರನೇ ! ಇದರಲ್ಲಿ ಸಂದೇಹವಿಲ್ಲ. ಜನರ ಹಿತಕ್ಕೂ ಭೂಭಾರವನ್ನು ಹೋಗಲಾಡಿಸುವುದಕ್ಕೂ ನೀನು ವಿಷ್ಣುವಿನಿಂದ ಪ್ರೇರಿತನಾಗಿ ವಿಷ್ಣುಪರಾಯಣನಾದ ಅಂಬರೀಷನಿಗೆ ಶಾಪವನ್ನಿತ್ತೆ. ನೀನು ಕೊಟ್ಟ ಶಾಪವನ್ನು ವಿಷ್ಣುವು ದೇವತೆಗಳ ಸಂರಕ್ಷಣೆಗೋಸ್ಕರವೂ, ಭೂಮಿಯ ಉದ್ಧಾರಕೋಸ್ಕರವೂ, ರಾಕ್ಷಸರ ಸಂಹಾರಕ್ಕೋಸ್ಕರವೂ ತಾನು ಸ್ವೀಕರಿಸಿ ಸಮಸ್ತರ ಹೃದಯದಲ್ಲಿಯೂ ವಸಮಡತಕ್ಕ ಆ ವಿಷ್ಣುವು ಬೇರೆ ಬೇರೆ ಶರೀರಗಳನ್ನು ಹೊಂದುವನು. ಎಲೈ ಮುನಿಶ್ರೇಷ್ಠನೇ,

ದೇವಾನಾಂ ರಕ್ಷಣಾರ್ಥಾಯ ಭೂಮೇರುದ್ಧರಣಾಯಚ ।
ರಾಕ್ಷಸಾನಾಂ ವಧಾರ್ಥಾಯ ಧಾರಯಿಷ್ಯತಿ ಕೇಶವಃ ॥ ೩೧ ॥
ಶರೀರಾಣಿ ವಸಂದೇಹಃ ವಿಷ್ಣುಸ್ಸರ್ವಗುಹಾಶಯಃ ।
ಮುನಿವರ್ಯ ಮಹಾಭಾಗ ಗಂಗಾಯಾಂ ಸ್ನಾನಮಾಚರ ॥೩೨ ॥
ತವ ಪಾಪ ವಿಶುದ್ಧ್ಯರ್ಥಂ ನೃಸಿಂಹಂ ತಂ ಸಮರ್ಚಯ ।
ಇತಿ ಸಂಭೋದ್ಯ ಸಾ ಗಂಗಾ ಆಸ್ತೇ ತತ್ರ ನಗೋತ್ತಮೇ ॥ ೩೩ ॥
ಇತಿ ಸಂಶ್ರಾವ್ಯ ಗಂಗಾಯಾ ವಚನಂ ಋಷಿಸತ್ತಮಃ ।
ಉವಾಚ ಸುಚಿರಂ ಕಾಲಂ ಪರ್ವತೇ ಇಭನಾಮಕೇ ॥ ೩೪ ॥
ಕಾಶೀ ತೀರ್ಥೇ ಸದಾ ಸ್ನಾತ್ವಾ ಋಷಿರ್ವಿಷ್ಣುಪರಾಯಣಃ ।
ನಾರಸಿಂಹಂ ಪೂಜಯಿತ್ವಾ ಜಗಾಮ ಹರಿಮಂದಿರಮ್ ॥ ೩೫ ॥
ಯೇ ಸ್ನಾನಂ ಪ್ರಕುರ್ವಂತಿ ಗಂಗಾತೀರ್ಥೇ ಸುನಿರ್ಮಲೇ ।
ಸರ್ವ ಪಾಪಾನಿ ನಶ್ಯಂತಿ ತೇಷಾಂ ನಾಸ್ತಿ ಪುನರ್ಭವಃ ॥ ೩೬ ॥
ಯೇದಾನಂ ತತ್ರ ಕುರ್ವಂತಿ ತೇಷಾಂ ಪುಣ್ಯಮನಂತಕಮ್ ।
ಕಾಶೀ ತೀರ್ಥೇ ಸವತ್ಸಂ ಚ ಗೋದಾನಂ ತು ಕರೋತಿಯಃ ।

ನಿನ್ನ ಪಾಪವು ಹೋಗುವುದಕೋಸ್ಕರ ಈ ಗಂಗೆಯಲ್ಲಿ ಸ್ನಾನಮಾಡಿ ಆ ನರಸಿಂಹನನ್ನು ಪೂಜಿಸು ಎಂದು ಆ ಋಷಿಗೆ ಹೇಳಿ ಶ್ರೇಷ್ಠವಾದ ಆ ಪರ್ವತದಲ್ಲಿ ಗಂಗೆಯು ವಾಸಮಾಡುತ್ತಾಳೆ.

ಆ ಋಷಿಯು ಗಂಗೆಯ ಮಟನ್ನು ಕೇಳಿ ಹಸ್ತಿನಾಮಕ ಪರ್ವತದಲ್ಲಿ ಬಹುಕಾಲ ವಾಸವಾಗಿದ್ದನು. ವಿಷ್ಣು ಪರಾಯಣನಾದ ಆ ಋಷಿಯು ಕಾಶೀತೀರ್ಥದಲ್ಲಿ ಸ್ನಾನ ಮಾಡಿ ನರಸಿಂಹನನ್ನು ಪೂಜಿಸಿ ಹರಿ ಸನ್ನಿಧಿಯನ್ನೈದಿದನು. ನಿರ್ಮಲವಾದ ಆ ಗಂಗಾಜಲದಲ್ಲಿ ಯಾರು ಸ್ನಾನಮಾಡುವರೋ ಅವರಿಗೆ ಸಮಸ್ತ ಪಾಪಗಳೂ ನಾಶವಾಗುತ್ತವೆ. ಅವರಿಗೆ ಪೂನರ್ಜನ್ಮವಿಲ್ಲ ಮತ್ತು ಅಲ್ಲಿ ದಾನಮಾಡಿದವರಿಗೆ ಅನಂತ ಪುಣ್ಯ ಉಂಟಾಗುವುದು. ಯಾರು ಕಾಶೀ ತೀರ್ಥದಲ್ಲಿ ಕರುವಿನಿಂದ ಕೂಡಿದ ಗೋದಾನವನ್ನು ಮಾಡುತ್ತಾರೋ ಅವರ ಪಿತೃಗಳೆಲ್ಲರೂ ತೃಪ್ತರಾಗಿ ಇನ್ಯಾವ ಆಶೆಯೂ ಇಲ್ಲದವರಾಗುತ್ತಾರೆ.

ತೃಪ್ಯಂತಿ ಪಿತರಸ್ಸರ್ವೇ ನೇಚ್ಛಂತ್ಯನ್ಯ ಕದಾಚನ ॥ ೩೮ ॥
ಶಾಲಿಗ್ರಾಮ ಶಿಲಾದಾನಂ ಯಃ ಕರೋತಿ ನೃಪೋತ್ತಮಃ ।
ಚತುಸ್ಸಾಗರಪರ್ಯಂತಂ ಭೂದಾನಾದ್ಯತ್ಫಲಂ ಲಭೇತ್ ।
ತತ್ಫಲಂ ಸಮವಾಪ್ನೋತಿ ಶಾಲಿಗ್ರಾಮಸ್ಯ ದಾನತಃ ॥ ೩೯ ॥
ವಾಸೋದಾನಂ ಧಾನ್ಯದಾನಂ ಗೃಹದಾನಂ ತಥೈವಚ ।
ಶಯ್ಯಾದಾನಂ ನೃಪಶ್ರೇಷ್ಠ ಯಃ ಕರೋತಿ ಸ ಮುಕ್ತಿಭಾಕ್ ॥ ೪೦ ॥
ಯೇ ಶ್ರಾದ್ಧಂ ತತ್ರ ಕುರ್ವಂತಿ ಗಂಗಾ ತೀರ್ಥೇ ಸುನಿರ್ಮಲೇ ।
ಪ್ರೀಣಾತಿ ಪಿತರಸ್ಸರ್ವೇ ನೇಚ್ಛಂತ್ಯನ್ಯತ್ಕದಾಚನ ॥ ೪೧ ॥
ಹಿರಣ್ಯೇನೈವ ಯಃ ಶ್ರಾದ್ಧಂ ಕರೋತಿ ಕುಸುಮಾಚಲೇ ।
ಅವಗಾಹ್ಯ ಸದಾ ತೀರ್ಥೇ ದೇವರ್ಷಿಪಿತೃ ತರ್ಪಣಮ್ ॥
ಯಃಕರೋತಿ ಸಧರ್ಮಾತ್ಮಾ ಪಿತೄಣಾಂ ಸೋಮಪಾಭವೇತ್ ॥ ೪೨ ॥
ತತ್ರ ತೀರ್ಥೇ ತು ಯಃ ಸ್ನಾತ್ವಾ ಮಹಾತ್ಮ್ಯಂ ಪುಣ್ಯವರ್ಧನಮ್ ।
ಶೃಣೋತಿ ಸಾವಧಾನೇನ ಕ್ರತುಕೋಟಿ ಫಲಂ ಲಭೇತ್ ॥ ೪೩ ॥
ಅನ್ನದಾನಂ ತು ಯಃ ಕುರ್ಯಾತ್ ಪರ್ವತೇ ತೀರ್ಥ ಸಂಜ್ಞಕೇ ।

ಎಲೈ ನೃಪಶ್ರೇಷ್ಠನೇ, ಯಾರು ಅಲ್ಲಿ ಶಾಲಿಗ್ರಾಮ ದಾನಮಾಡುತ್ತಾರೋ ಅವರಿಗೆ ಚತುಸ್ಸಾಗರಪರ್ಯಂತವಾದ ಭೂದಾನದಿಂದ ಆಗುವ ಫಲವು ಉಂಟಾಗುತ್ತದೆ. ಹಾಗೆಯೇ ಯಾರಾದರು ಅಲ್ಲಿ ವಸ್ತ್ರದಾನ, ಧಾನ್ಯದಾನ, ಗೃಹದಾನ, ಶಯ್ಯಾದಾನಗಳನ್ನು ಮಾಡುತ್ತಾರೋ ಅವರು ಮೋಕ್ಷವನ್ನು ಹೊಂದುತ್ತಾರೆ. ಯಾರು ನಿರ್ಮಲವಾದ ಗಂಗಾತೀರ್ಥದಲ್ಲಿ ಶ್ರಾದ್ಧವನ್ನು ಮಾಡುತ್ತಾರೋ ಅವರ ಪಿತೃಗಳೆಲ್ಲರೂ, ಇನ್ನಾವ ಆಶೆಯೂ ಇಲ್ಲದೇ ಸಂತುಷ್ಟರಾಗುತ್ತಾರೆ. ಕುಸುಮಾಚಲದಲ್ಲಿ ಆ ತೀರ್ಥದಲ್ಲಿ ಸದಾಸ್ನಾನಮಾಡಿ ದೇವ, ಋಷಿ, ಆಚಾರ್ಯ, ಪಿತೃ ತರ್ಪಣವನ್ನು ಮಾಡಿ ಪಿತೃದೇವತೆಗಳಿಗೆ ಹಿರಣ್ಯಶ್ರಾದ್ಧವನ್ನು ಮಾಡಿದ ಧರ್ಮಾತ್ಮನು ಸೋಮಪಾನವನ್ನು ಮಾಡಿದವನಾಗುತ್ತಾನೆ.

ಯಾರು ಆ ತೀರ್ಥದಲ್ಲಿ ಸ್ನಾನಮಾಡಿ ಪುಣ್ಯವನ್ನು ಹೆಚ್ಚಿಸುತಕ್ಕ ಈ ಮಾಹಾತ್ಮ್ಯೆಯನ್ನು

ನೃಸಿಂಹ ಸನ್ನಿಧೌ ಭೂಪ ಏಕಬ್ರಾಹ್ಮಣ ಭೋಜನೇ ।
ಕೃತೇ ಸತಿ ಫಲಂ ತಸ್ಯ ಕೋನು ವರ್ಣಯಿತುಂ ಕ್ಷಮಃ ॥ ೪೪ ॥
ತಥಾಪಿ ಯತ್ಫಲಂ ರಾಜನ್ ಪ್ರವಕ್ಷ್ಯಾಮಿ ಸಮಾಸಿತಃ ।
ಶೃಣುಶ್ವೈಕಮನಾ ಭೂತ್ವಾ ರಾಜವಂಶ ವಿವರ್ಧನ ॥ ೪೫ ॥
ಗಂಗಾತೀರೇ ಸದಾ ಭೂಪ ಕೋಟಿ ಬ್ರಾಹ್ಮಣ ಭೋಜನಾತ್ ।
ಪುರಾಣಂ ಪುರತೋ ನಿತ್ಯಂ ನೃಸಿಂಹಸ್ಯ ಪಠೇತ್ತು ಯಃ ॥ ೪೬ ॥
ಅಷ್ಟಾದಶ ಪುರಾಣಾನಾಂ ಪಠನಾದ್ಯತ್ಫಲಂ ಲಭೇತ್ ।
ತತ್ಫಲಂ ಸಮವಾಪ್ನೋತಿ ಪುರಾಣ ಪಠನೇನತು ॥ ೪೭ ॥
ಯೇಚ ಶೃಣ್ವಂತಿ ಸತತಂ ವಾಚ್ಯಮಾನಂ ದ್ವಿಜೋತ್ತಮೈಃ ।
ತೇಷಾಂ ಪಾಪಾನಿವಿನಶ್ಯಂತಿ ಯಾಂತಿ ವಿಷ್ಣೋಃ ಪರಂಪದಮ್ ॥ ೪೮ ॥

॥ ಇತಿ ಶ್ರೀ ಬ್ರಹ್ಮಾಂಡಪುರಾಣೇ ಶ್ರೀ ಕರಿಗಿರಿ ಮಾಹಾತ್ಮ್ಯೇ
ಷಷ್ಠೋಽಧ್ಯಾಯಃ ಸಮಾಪ್ತಃ ॥

ಸಾವಧಾನದಿಂದ ಕೇಳುತ್ತಾರೋ ಅವರು ಕೋಟಿ ಯಜ್ಞಫಲವನ್ನು ಹೊಂದುತ್ತಾರೆ. ದಿವ್ಯ ತೀರ್ಥದಿಂದ ಕೂಡಿದ ಆ ಪರ್ವತದಲ್ಲಿ ಯಾರು ಅನ್ನದಾನ ಮಾಡುತ್ತಾರೋ ಮತ್ತು ಶ್ರೀನೃಸಿಂಹಸನ್ನಿಧಿಯಲ್ಲಿ ಒಬ್ಬ ಬ್ರಾಹ್ಮಣನಿಗಾದರೂ ಭೋಜನ ಮಾಡಿಸುತ್ತಾರೋ ಅವರಿಗೆ ಉಂಟಾಗುವ ಫಲವನ್ನು ವರ್ಣಿಸಲು ಯಾರಿಗೆ ತಾನೇ ಶಕ್ಯವು! ಆದಾಗ್ಯೂ ಎಲೈ ರಾಜನೇ ಒಟ್ಟಿಗೆ ಹೇಳುತ್ತೇನೆ ಏಕಚಿತ್ತದಿಂದ ಕೇಳು. ಆ ಗಂಗಾತೀರ್ಥದಲ್ಲಿ ಸದಾ ಕೋಟಿ ಬ್ರಾಹ್ಮಣ ಭೋಜನವನ್ನು ಮಾಡಿಸುವುದರಿಂದಲೂ, ಮತ್ತು ಅಷ್ಟಾದಶಪುರಾಣಗಳ ಪಠಣದಿಂದಲೂ ಯಾವ ಫಲ ಉಂಟಾಗುತ್ತದೋ ಆ ಫಲವು ನೃಸಿಂಹನ ಎದುರಿಗೆ ಈ ಪುರಾಣವನ್ನು ಪಠನಮಾಡುವುದರಿಂದ ಉಂಟಾಗುತ್ತದೆ. ಈ ಪುರಾಣವನ್ನು ಯಾರು ಕೇಳುವರೋ ಅವರ ಪಾಪಗಳೆಲ್ಲವೂ ನಾಶವಾಗಿ ಅವರು ವಿಷ್ಣು ಪದವನ್ನು ಹೊಂದುವರು.

ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿರುವ ಕರಿಗಿರಿ ಮಹಾತ್ಮೆಯಲ್ಲಿ ಆರನೆಯ ಅಧ್ಯಾಯವು ಮುಕ್ತಾಯವಾಯಿತು.

॥ ಶ್ರೀ ಸುಖಾನಾರಸಿಂಹಾಯ ನಮಃ ॥

ಸಪ್ತಮೋಧ್ಯಾಯಃ

ಶ್ರೀ ರಾಜೋವಾಚ :
ವಸಿಷ್ಠ ಜ್ಞಾನ ನಿಷ್ಠೋಽಸಿ ಋಷೀಣಾಂ ಪ್ರವರೋ ಯತಃ ।
ಅತೋ ಮಾಂ ರಕ್ಷ ಬೋಧೇನ ಕಥಾಯಾಃ ಶ್ರವಣಾದಪಿ ॥ ೧ ॥
ಶ್ರೀ ವಸಿಷ್ಠ ಉವಾಚ :
ಭೂಯಶ್ಶೃಣುಷ್ವ ಭೂಪಾಲ ಮಾಹಾತ್ಮ್ಯಂ ಪಾಪನಾಶನಮ್ ।
ಚಕ್ರತೀರ್ಥಸ್ಯ ಯಾ ಖ್ಯಾತಿಃ ಭುವಿಚಾಸೀತ್ಸಮಾಹಿತಃ ॥ ೨ ॥
ಆಸೀತ್ಪೂರ್ವಂ ಮಹಾರಾಜಾ ಧರ್ಮಜ್ಞೋ ಬ್ರಾಹ್ಮಣಪ್ರಿಯಃ ।
ವೈಷ್ಣವೋ ವಿಷ್ಣುಭಕ್ತೋಽಸೌ ವಿಷ್ಣುವ್ರತಪರಾಯಣಃ ॥ ೩ ॥
ಸದಾ ಧರ್ಮೇಷು ಮತಿಮಾನ್ ಋಷಿಭಿರ್ಬೋಧಿತೋ ನೃಪಃ ।
ಅಂಬರೀಷ ಇತಿ ಖ್ಯಾತೋ ಭೂಮ್ಯಾಂ ಕೃಷ್ಣಪದಾಶ್ರಯಃ ॥ ೪ ॥
ಸ ಶಶಾಸ ಕಿಯತ್ಕಾಲಂ ವಸುಧಾಂ ಪೃಥಿವೀಪತಿಃ ।

ಶ್ರೀ ರಾಜನು ಕೇಳುತ್ತಾನೆ. ಎಲೈ ವಸಿಷ್ಠನೇ ನೀನು ಜ್ಞಾನನಿಷ್ಠನೂ ಋಷಿಶ್ರೇಷ್ಠನೂ, ಆದುದರಿಂದ ಕಥಾಶ್ರವಣದಿಂದಲೂ, ಉಪದೇಶದಿಂದಲೂ ನನ್ನನ್ನು ಕಾಪಾಡು ಎಂದನು.

ಶ್ರೀ ವಸಿಷ್ಠರು ಹೇಳುತ್ತಾರೆ. ಎಲೈ ರಾಜನೇ, ಪಾಪನಾಶಕವಾದ ಮಾಹಾತ್ಮ್ಯೆಯನ್ನೂ, ಭೂಲೋಕದಲ್ಲಿ ಚಕ್ರತೀರ್ಥದ ಖ್ಯಾತಿಯನ್ನೂ ಕೇಳು. ಪೂರ್ವದಲ್ಲಿ ಭೂಲೋಕದಲ್ಲಿ ಧರ್ಮಜ್ಞನೂ, ಬ್ರಾಹ್ಮಣ ಪ್ರಿಯನೂ, ವಿಷ್ಣುಭಕ್ತನೂ, ವಿಷ್ಣುವ್ರತ ಪರಾಯಣನೂ, ಋಷಿಗಳಿಂದ ಬೋಧಿಸಲ್ಪಟ್ಟು ಸದಾ ಧರ್ಮಬುದ್ಧಿಯುಳ್ಳವನೂ, ವಿಷ್ಣುಪದಾಶ್ರಯನೂ ಆದ ಅಂಬರೀಷನೆಂಬ ಪ್ರಸಿದ್ಧನಾದ ರಾಜನು ಇದ್ದದ್ದು. ಆ ರಾಜಶ್ರೇಷ್ಠನು ಧರ್ಮದಿಂದ ರಾಜ್ಯಭಾರ ಮಡುತ್ತಾ ಕೆಲವು ಕಾಲ ಭೂಮಿಯನ್ನು ಆಳಿದನು. ಆ ಕಾಲದಲ್ಲಿ ಆ ನೃಪಶ್ರೇಷ್ಠನ ಬಳಿಗೆ ದೂರ್ವಾಸಋಷಿಯು ಬಂದು ಆಶ್ರಮ ಕೆಲಸಗಳನ್ನು

ಧರ್ಮೇಣ ರಾಜ್ಯಭಾರಂತು ಕೃತವಾನ್ ನೃಪಪುಂಗವಃ ॥ ೫ ॥
ಏವಂ ನರಪತೌ ರಾಜನ್ ಸ್ಥಿತೇಭೂಮ್ಯಾಂ ಸಮಾಹಿತೇ ।
ಮುನಿಸ್ತತ್ರಾಗಮತ್ಕಾಲೇ ಯತ್ರಾಸ್ತೇ ನೃಪಸತ್ತಮಃ ॥ ೬ ॥
ತಂ ನೃಪಂ ಚ ಶಶಾಪಾಥ ಅತಿಕ್ರಮಣ ಕಾರಣಮ್ ।
ಶಾಪಂ ರಾಜ್ಞೇ ಮುನಿರ್ದತ್ವಾ ಪುನಶ್ಶಾಪಾಯ ಚಾದದೇ ॥ ೭ ॥
ತೇನ ಶಪ್ತೋ ಮುನೀಂದ್ರೇಣ ಜಗಾಮ ಶರಣಂ ಹರಿಮ್ ।
ಹರಿಸ್ತುತಂ ಮುನಿಂ ದೃಷ್ಟ್ವಾ ದುರ್ವೃತ್ತಂ ಶಿಕ್ಷಿತಪ್ರಭುಮ್ ॥ ೮ ॥
ಪುನಃ ಶ್ಯಾಪ ಪ್ರದಾನಾಯ ಉದ್ಯುಕ್ತಂ ತಂ ನೃಪಂ ಪ್ರತಿ ।
ಕೋಟಿಸೂರ್ಯ ಪ್ರತೀಕಾಶಂ ಜ್ವಾಲಾವ್ಯಾಪ್ತ ದಿಗಂತರಮ್ ॥ ೯ ॥
ಸುದರ್ಶನಂ ಸಹಸ್ರಾರಂ ವ್ಯಸೃಜತ್ತಂ ಮಹಾಪ್ರಭುಃ ।
ವಿಷ್ಣುನಾ ಪ್ರೇರಿತಂ ಚಕ್ರಂ ತಂ ಮುನಿಂ ಪ್ರಾದ್ರವದ್ರುಷಾ ॥ ೧೦ ॥
ಆಗತಂ ಜ್ವಲಿತಂ ಚಕ್ರಂ ಸೂರ್ಯಕೋಟಿ ಸಮಪ್ರಭಮ್ ।
ದೃಷ್ಟ್ವಾ ಮುನಿಃ ಪ್ರದುದ್ರಾವೇ ರಕ್ಷಣಾರ್ಥಂ ಚಚಾತ್ಮನಃ ॥ ೧೧ ॥
ಸ್ವರ್ಗಾದಿ ನಿಖಿಲಾನ್ ಲೋಕಾನಟಿತ್ವೈವ ತ್ವರಾನ್ವಿತಃ ।

ಮಡಿದ ಆ ರಾಜನಿಗೆ ಶಾಪವನ್ನು ಕೊಟ್ಟು ಪುನಃ ಶಾಪವನ್ನು ಕೊಡಲು ಉದ್ಯುಕ್ತನಾಗಲು, ಋಷಿವರ್ಯನಿಂದ ಶಪಿಸಲ್ಪಟ್ಟ ಆ ರಾಜನು ವಿಷ್ಣುವನ್ನು ಶರಣುಹೋಗಲು, ವಿಷ್ಣುವು ಋಷಿಯ ದುರ್ವರ್ತನೆಯನ್ನೂ, ರಾಜನನ್ನೂ ಶಿಕ್ಷಿಸಿ ಆ ಋಷಿಯು ಪುನಃ ಆ ರಾಜನಿಗೆ ಶಾಪಕೊಡಲು ಉದ್ಯುಕ್ತನಾದುದನ್ನು ನೋಡಿ ಕೋಟಿಸೂರ್ಯರಿಗೆ ಸಮಾನವಾದ ದಿಕ್ಕುದಿಕ್ಕಿಗೂ ವ್ಯಾಪಿಸಿದ ಜ್ವಾಲೆಯುಳ್ಳ ಸುದರ್ಶನವೆಂಬ ಸಹಸ್ರಾರ ಚಕ್ರವನ್ನು ಬಿಟ್ಟನು. ವಿಷ್ಣು ಪ್ರೇರಿತವಾದ ಆ ಚಕ್ರವು ಕೋಪದಿಂದ ಋಷಿಯ ಬಳಿಗೆ ಓಡಿತು. ಕೋಟಿಸೂರ್ಯರಿಗೆ ಸಮಾನವಾದ ಕಾಂತಿಯುಳ್ಳ ಉರಿಯುತ್ತಿರುವ ಆ ಚಕ್ರವನ್ನು ನೋಡಿ ಆತ್ಮರಕ್ಷಣೆಗಾಗಿ ಲೋಕಗಳನ್ನೆಲ್ಲಾತಿರಿಗಿ ಇಂದ್ರನೇ ಮೊದಲಾದ ಲೋಕಪಾಲಕರಿಂದಲೂ, ಬ್ರಹ್ಮರುದ್ರಾದಿಗಳಿಂದಲೂ ನಿವಾರಿಸಲ್ಪಡದಾಗ್ಯೂ ವಿಷ್ಣುವಿನಿಂದ ರಕ್ಷಿಸಲ್ಪಟ್ಟ ವೈಕುಂಠಕ್ಕೆ ಹೋಗಿ ಅಲ್ಲಿ ವಿಷ್ಣುವನ್ನು ನೋಡಿ ನಮಸ್ಕರಿಸಿ

ಇಂದ್ರಾದ್ಯೈರ್ಲೋಕಪಾಲೈಶ್ಚ ಬ್ರಹ್ಮರುದ್ರೈರ್ನಿವಾರಿತಃ ॥ ೧೨ ॥
ಆಜಗಾಮಾಥ ವೈಕುಂಠಂ ವಿಷ್ಣುನಾ ಪರಿಪಾಲಿತಮ್ ।
ವೈಕುಂಠಸ್ತಂ ಹರಿಂ ದೃಷ್ಟ್ವಾ ಪ್ರಣಮ್ಯ ಮುನಿಸತ್ತಮಃ ॥ ೧೩ ॥
ಅಬ್ರವೀನ್ಮಧುರಂ ವಾಕ್ಯಂ ವಿನಯಾವನತೋನ್ನೃಪ ।
ಶ್ರೀ ದೂರ್ವಾಸ ಉವಾಚ :
ಪಾಹಿಪಾಹಿ ಮಹಾವಿಷ್ಣೋ ತ್ವಚ್ಚಕ್ರೇಣ ಹತಂ ಚ ಮಾಮ್ ॥ ೧೪ ॥
ಬ್ರಹ್ಮರುದ್ರ ಸಮೇತೈಶ್ಚ ದೇವೈಸ್ಸರ್ವೈರ್ನಿವಾರಿತುಮ್ ।
ರಕ್ಷಮಾಂ ಸರ್ವಥಾ ದೇವ ಯತಸಂರಕ್ಷ ಮಾಂ ತತಃ ॥ ೧೫ ॥
ಇತಿ ತೇನೋದಿತಂ ವಾಕ್ಯಂ ಶೃತ್ವಾವಿಷ್ಣುಸ್ಸನಾತನಃ ।
ಮೇಘಗಂಭೀರಯಾ ವಾಚಾ ಉವಾಚ ಕಮಲೇಕ್ಷಣಃ ॥ ೧೬ ॥
ಶ್ರೀ ಭಗವಾನುವಾಚ :
ದೂರ್ವಾಸ ಶೃಣು ಮದ್ವಾಕ್ಯಂ ಬ್ರಾಹ್ಮಣಾನಾಂ ಕದಾಚನ ।
ನಕರೋಮ್ಯಪ್ರಿಯಂ ಚೈವ ಸರ್ವ ಕಾಲೇ ಮುನೀಶ್ವರ ॥ ೧೭ ॥
ಮುನೀಶ ಬ್ರಾಹ್ಮಣಾದ್ದೈವಂ ಮಮ ನಾಸ್ತ್ಯತ್ರ ಸಂಶಯಃ ।

ವಿನಯದಿಂದ ನಮ್ರವಾಗಿ ಇಂತೆಂದನು.

ಶ್ರೀ ದೂರ್ವಾಸರು : ಎಲೈ ಮಹಾವಿಷ್ಣುವೇ, ನಿನ್ನ ಚಕ್ರದಿಂದ ಹತಾಶನಾದ ನನ್ನನ್ನು ರಕ್ಷಿಸು! ರಕ್ಷಿಸು! ಬ್ರಹ್ಮರುದ್ರರಿಂದ ಕೂಡಿದ ಸಕಲ ದೇವತೆಗಳಿಂದಲೂ, ಇದನ್ನು ನಿವಾರಿಸಲು ಶಕ್ಯವಲ್ಲವಾದುದರಿಂದ ನೀನೇ ನನ್ನನ್ನು ಕಾಪಾಡಬೇಕು. ಎಂದು ಹೇಳಿದ ಆ ಋಷಿಯ ಮಾತನ್ನು ಪುರಾಣಪುರುಷನೂ, ಕಮಲೇಕ್ಷಣನೂ ಆದ ವಿಷ್ಣುವು ಕೇಳಿ ಮೇಘಗಂಭಿರ ವಾಕ್ಕಿನಿಂದ ಈ ಪ್ರಕಾರ ಹೇಳಿದನು.

ಎಲೈ ದೂರ್ವಾಸನೆ, ನನ್ನ ಮಾತನ್ನು ಕೇಳು, ನಾನು ಬ್ರಾಹ್ಮಣರಿಗೆ ಅಹಿತವನ್ನು ಎಂದಿಗೂ ಮಾಡುವುದಿಲ್ಲ. ಎಲೈ ಋಷೀಶ್ವರನೇ ಬ್ರಾಹ್ಮಣರು ನನಗೆ ದೇವರು ಇದರಲ್ಲಿ ಸಂಶಯವಿಲ್ಲ. ಬ್ರಾಹ್ಮಣರು ಸರ್ವ ದೇವಮಯರು ಮತ್ತು ಸರ್ವತೀರ್ಥಮಯರು; ಆದಕಾರಣ ಅವರ ರಕ್ಷಣೆಗಾಗಿ ಯಾವಾಗಲೂ ದೇಹವನ್ನು

ಸರ್ವ ದೇವಮಯೋ ವಿಪ್ರಃ ಸರ್ವ ತೀರ್ಥಮಯೋ ಯಥಾ ॥ ೧೮ ॥
ಅತೋಽಹಂ ಸರ್ವದಾದೇಹಂ ಧಾರಯಿಷ್ಯೇಹ ರಕ್ಷಯೇ ।
ಗೋಬ್ರಾಹ್ಮಣಾನಾಂ ರಕ್ಷಾಯ ಲೋಕೇಷು ವಿಚರಾಮ್ಯಹಮ್ ॥ ೧೯ ॥
ನಾವಮಾನಂ ಮುನೀನಾಂತು ಕರಿಷ್ಯಾಮಿ ಕದಾಚನ ।
ಗಚ್ಛ ವಿಪ್ರ ಮಹಾಭಾಗ ಯತ್ರಾಸ್ತೇ ನೃಪಸತ್ತಮಃ ॥ ೨೦ ॥
ತತ್ರ ತೇ ಭವಿತಾ ಸ್ವಸ್ತಿ ಭೂಭುಜಸ್ಯ ಭವಿಷ್ಯತಿ ।
ಇತ್ಯಾಜ್ಞಪ್ತೋ ಭಗವತಾ ಮುನಿಶ್ಚಕ್ರಂ ಶಶಾಪಹ ॥ ೨೧ ॥
ಕೋಟಿ ಸೂರ್ಯ ಪ್ರಕಾಶೋಪಿ ನಿಷ್ಫಲೋ ಭವ ಮಾಂ ಯತಃ ।
ಕ್ಲೇಶಿತೋಸಿ ಸಹಸ್ರಾರ ಅತೋ ಮಾಂ ಗಚ್ಛ ತಂ ನೃಪಮ್ ॥ ೨೨ ॥
ಇತ್ಯುಕ್ತ್ವಾ ಸೃಷಿಶ್ಚಕ್ರಂ ಆಯಯೌ ನೃಪಸನ್ನಿಧಿಮ್ ।
ಸಮಾಯಾಂತಂ ಮುನಿಂ ದೃಷ್ಟ್ವಾ ಚಕ್ರಂ ಚ ನೃಪಪುಂಗವಃ ॥ ೨೩ ॥
ನನಾಮ ಪದಯೋರ್ಭೂಪ ಅನಯೋಋಷಿಚಕ್ರಯೋಃ ।
ಉವಾಚ ಪರಮಪ್ರೀತೋ ರಾಜಾ ಭಕ್ತಿ ಪರಾಯಣಃ ॥ ೨೪ ॥
ಶ್ರೀ ರಾಜೋವಾಚ :

ಧರಿಸುತ್ತೇನೆ. ಗೋವುಗಳ ಮತ್ತು ಬ್ರಾಹ್ಮಣರ ರಕ್ಷಣೆಗೋಸ್ಕರ ಲೋಕದಲ್ಲಿ ಸಂಚರಿಸುತ್ತೇನೆ. ಋಷಿಗಳಾದರೋ ನಾನು ಅವಮಾನವನ್ನು ಎಂದಿಗೂ ಮಾಡುವುದಿಲ್ಲ. ಎಲೈ ಮಹಾನುಭಾವನೇ ಆ ರಾಜಶ್ರೇಷ್ಠನು ಇರುವಲ್ಲಿಗೆ ಹೋಗು. ಅಲ್ಲಿ ನಿನಗೂ ರಾಜನಿಗೂ ಮಂಗಳವಾಗುತ್ತದೆ. ಎಂದು ಹೇಳಿದನು. ಈ ರೀತಿಯಾಗಿ ಭಗವಂತನಿಂದ ಆಜ್ಞಾಪಿಸಲ್ಪಟ್ಟ ಆ ಋಷಿಯು ಎಲೈ ಚಕ್ರವೇ ನೀನು ಕೋಟಿಸೂರ್ಯ ಪ್ರಕಾಶವುಳ್ಳದ್ದಾದರೂ ನನ್ನನ್ನು ಕ್ಲೇಶಪಡಿಸಿದ್ದರಿಂದ ನಿಸ್ತೇಜನಾಗು. ಆ ರಾಜನ ಬಳಿಗೆ ಹೋಗು. ಎಂದು ಚಕ್ರಕ್ಕೆ ಶಪವನ್ನು ಕೊಟ್ಟನು. ಆ ಋಷಿಯು ಚಕ್ರಕ್ಕೆ ಹೀಗೆ ಹೇಳಿ ತಾನು ರಾಜನ ಬಳಿಗೆ ಬಂದನು. ಆಗ ರಾಜಶ್ರೇಷ್ಠನು ಬರುತ್ತಿರುವ ಋಷಿಯನ್ನೂ ಚಕ್ರವನ್ನೂ ನೋಡಿ ಋಷಿಗೂ ಚಕ್ರಕ್ಕೂ ನಮಸ್ಕಾರ ಮಾಡಿ ಅತ್ಯಂತ ಪ್ರೀತಿಯಿಂದಲೂ, ಭಕ್ತಿಯಿಂದಲೂ ಇಂತೆಂದನು.

ತಿಷ್ಠ ತಿಷ್ಠ ನಮಸ್ತೇಸ್ತು ಸುದರ್ಶನ ಹರಿಪ್ರಿಯ ।
ನಮಾಮಿ ತ್ವಾಂ ಮಹಾಭಾಗ ಮುನಿಂ ಚ ಭಯವಿಹ್ವಲಮ್ ॥ ೨೫ ॥
ಯುವಾಭ್ಯಾಂ ರಕ್ಷಿತೋಹಂ ವೈ ಯತಃ ಪುನರುಪಾಗತೌ ।
ಅತೋ ಮೇ ರಕ್ಷಕೌ ದೇವೌ ಪ್ರಾಣದೌ ಪರಿಕೀರ್ತಿತೌ ॥ ೨೬ ॥
ಯೋ ರಕ್ಷತಿ ಭಯತ್ರಸ್ತಂ ಪಿತೇತಿ ಪರಿಕೀರ್ತಿತೇ ।
ತಸ್ಮಾತ್ಭವಧ್ಭ್ಯಾಂ ತ್ರಾತೋಸ್ಮಿ ಪ್ರಸೀದೇತಾಂ ಯುವಾಮುಭೌ ॥ ೨೭ ॥
ಸುದರ್ಶನಂ ತಸ್ಯ ವಾಕ್ಯಂ ಶೃತ್ವೋವಾಚಸುವಿಸ್ಮಿತಮ್ ।
ರಾಜಾನಂ ವಿನಯೋಪೇತಂ ಮಂತ್ರಿಭಿಃ ಪರಿವಾರಿತಮ್ ॥ ೨೮ ॥
ಶ್ರೀ ಸುದರ್ಶನ ಉವಾಚ :
ರಾಜಸ್ತ್ವಂ ಸುಪ್ರಸಿದ್ಧೋಽಸಿ ವಿಷ್ಣುಭಕ್ತೇಷು ಸುವ್ರತಃ ।
ಮಯಾತ್ಯಕ್ತೋ ಮುನಿಶ್ಶೀಘ್ರಂ ಯಾಸ್ಯಾಮಿ ಹರಿಸನ್ನಿಧಿಮ್ ॥ ೨೯ ॥
ತತಃ ಸುದರ್ಶನಂ ಭೂಪ ಯಯಾಚೇ ಮುನಿಸತ್ತಮಮ್ ।
ವಿನಯಾವನತೋ ಭೂತ್ವಾ ಸ್ಥಿತ್ವಾ ಪ್ರಾಂಜಲಿರಗ್ರತಃ ॥ ೩೦ ॥
ದೂರ್ವಾಸ ತಾಪಸಶ್ರೇಷ್ಠ ರುದ್ರತೇಜೋಂಶ ಸಂಭವ ।

ಹರಿಪ್ರಿಯನಾದ ಎಲೈ ಸುದರ್ಶನವೇ, ನಿಲ್ಲು! ನಿಲ್ಲು! ನಿನಗೆ ನಮಸ್ಕಾರ. ಎಲೈ ಮಹಾನುಭಾವನೇ ಭಯಭ್ರಾಂತನಾದ ಋಷಿಗೂ ನಮಸ್ಕಾರ ಮಾಡುತ್ತೇನೆ. ನೀವು ಪುನಃ ಬಂದದ್ದರಿಂದ ನನ್ನನ್ನು ಕಾಪಾಡಿರಿ. ಆದಕಾರಣ ನನ್ನನ್ನು ಕಾಪಾಡಿದ ನೀವು ಪ್ರಾಣದಾತೃಗಳೆನಿಸಿಕೊಳ್ಳುತ್ತೀರಿ. ಭಯಭ್ರಾಂತನನ್ನು ಕಾಪಾಡಿದವನು ತಂದೆ ಎನಿಸಿಕೊಳ್ಳುತ್ತಾನೆ. ಆದಕಾರಣ ನಾನು ನಿಮ್ಮಿಂದ ರಕ್ಷಿಸಲ್ಪಟ್ಟು ನೀವಿಬ್ಬರೂ, ಪ್ರಸನ್ನರಾಗಿರಿ ಎಂದನು. ಸುದರ್ಶನವು ಅವನ ಮಾತನ್ನು ಕೇಳಿ ಆಶ್ಚರ್ಯಪಟ್ಟು ಮಂತ್ರಿಗಳಿಂದ ಪ್ರೀತನಾದ ರಾಜನಿಗೆ ವಿನಯದಿಂದ ಎಲೈ ರಾಜನೇ ವಿಷ್ಣುಭಕ್ತರಲ್ಲಿ ನೀನು ಬಹಳ ಪ್ರಸಿದ್ಧನು. ನಾನು ಋಷಿಯನ್ನು ಬಿಟ್ಟೆನು. ವಿಷ್ಣುವಿನ ಬಳಿಗೆ ಬೇಗ ಹೋಗುತ್ತೇನೆ ಎಂದು ಹೇಳಿ ಕೈಗಳನ್ನು ಜೋಡಿಸಿಕೊಂಡು ವಿನಯದಿಂದ ನಮ್ರವಾಗಿ ಎದುರಿಗೆ ನಿಂತಿರುವ ರುದ್ರತೇಜೋಂಶ ಸಂಭೂತನೂ ತಾಪಸಶ್ರೇಷ್ಠನೂ ಆದ

ವಿಶಾಪಂ ದೇಹಿ ಮೇ ಬ್ರಹ್ಮನ್ ಯಾಸ್ಯಾಮಿ ಹರಿಮಂದಿರಮ್ ॥ ೩೧ ॥
ಇತಿ ಚಕ್ರೇಣ ಪೃಷ್ಟಸ್ಸನ್ ವಿಶಾಪಂ ಪ್ರದದೌ ಮುನಿಃ ।
ಯದಾತ್ವಂ ಹಸ್ತಿಶಿಖರೇ ಗುಹಾಯಾಶ್ಚ ಸಮೀಪತಃ ॥ ೩೨ ॥
ಗಂಗಾಯಾಸ್ಸಲಿಲೇ ನಿತ್ಯಂ ವರ್ಷಮೇಕಂ ನಿಮಜ್ಯಚ ।
ತಥಾ ಮತ್ಪೂಜಿತಂ ವಿಷ್ಣುಂ ಪೂಜಯಿಷ್ಯಸಿ ಸುವ್ರತ ॥ ೩೩ ॥
ತದಾ ತೇ ಭವಿತಾ ಮುಕ್ತಿಃ ಕೃಷ್ಣರೂಪೇಣ ವಿಷ್ಣುನಾ ।
ಇತಿ ದೂರ್ವಾಸಃ ಸಾಪ್ಯುಕ್ತಂ ಚಕ್ರಂ ಪರವಿದಾರಣಮ್ ॥ ೩೪ ॥
ಶೃತ್ವಾ ವಾಕ್ಯಂ ಮುನೇಸ್ತಸ್ಯ ಆಯಯೌ ಚ ಗಿರಿಂ ಪ್ರತಿ ।
ಅನೇಕ ಋಷಿಸಂಕೀರ್ಣಂ ನಾನಾದ್ರುಮಲತಾನ್ವಿತಮ್ ॥ ೩೫ ॥
ಅಥ ಶೈಲಂ ಸಮಾಸಾದ್ಯ ಚಕ್ರ ಸರ್ವೈಃ ಸುದುಸ್ಸಹಮ್ ।
ತತ್ರ ತೀರ್ಥೇಷು ಸರ್ವೇಷು ಸ್ನಾತ್ವಾ ವಿಷ್ಣುಂ ನೃಸಿಂಹಕಮ್ ॥ ೩೬ ॥
ಪುರುಷಸೂಕ್ತೇನ ವಿಧಿನಾ ಪಂಚರಾತ್ರಾಗಮೈಸ್ಸಹ ।
ಅರ್ಚಯಾಮಾಸ ಧರ್ಮಜ್ಞಂ ವಿಷ್ಣುನಾ ಪ್ರೇರಿತಂ ಸದಾ ॥ ೩೭ ॥
ಕಾಶೀತೀರ್ಥಂ ಸಮಾಸಾದ್ಯ ತತ್ರ ಸ್ಥಿತ್ವಾ ಚ ಸನ್ಮನಃ ।

ಎಲೈ ದೂರ್ವಾಸನೇ ನನಗೆ ಶಾಪಮೋಕ್ಷವನ್ನು ಮಾಡು ವಿಷ್ಣುವಿನ ಮನೆಗೆ ಹೋಗುತ್ತೇನೆ ಎಂದು ಚಕ್ರವು ಹೇಳಲು ಆ ಋಷಿಯು ನೀನು ಕರಿಗಿರಿ ಶಿಖರದಲ್ಲಿ ಗುಹೆಯ ಹತ್ತಿರ ಗಂಗೆಯಲ್ಲಿ ಒಂದು ವರುಷ ನಿತ್ಯವೂ ಮುಳುಗುವುದಲ್ಲದೆ ನಾನು ಪೂಜಿಸಿದ ವಿಷ್ಣುವನ್ನು ನೀನು ಪೂಜಿಸಿದಾಗ ಕೃಷ್ಣರೂಪನಾದ ವಿಷ್ಣುವಿನಿಂದ ನಿನಗೆ ಮುಕ್ತಿಯಾಗುವುದು. ಎಂದು ಹೇಳಿದ ದೂರ್ವಾಸ ಋಷಿಯ ಮಾತನ್ನು ಕೇಳಿ ಆ ಚಕ್ರವು ಕರಿಗಿರಿ ಪರ್ವತಕ್ಕೆ ಬಂದಿತು. ಅನೇಕ ಋಷಿಗಳಿಂದ ತುಂಬಿದ ನಾನಾವೃಕ್ಷಗಳಿಂದಲೂ, ಬಳ್ಳಿಗಳಿಂದಲೂ ಕೂಡಿದ ಆ ಪರ್ವತವನ್ನು ಸೇರಿ ಸರ್ವರಿಗೂ, ವಿಷ್ಣುವಿನಿಂದ ಪ್ರೇರಿಸಲ್ಪಟ್ಟು ಶ್ರೀನೃಸಿಂಹರೂಪನಾದ ವಿಷ್ಣುವನ್ನು ಪುರುಷಸೂಕ್ತ ವಿಧಾನದಿಂದಲೂ, ಪಂಚರಾತ್ರಾಗಮ ಪ್ರಕಾರವಾಗಿಯೂ ಪೂಜಿಸಿ ಕಾಶೀತೀರ್ಥವನ್ನು ಸೇರಿ ಸುಮನಸ್ಸಿನಿಂದ ಅಲ್ಲಿ ಇದ್ದು ಋಷಿಯಿಂದ ಹೇಳಲ್ಪಟ್ಟಂತೆ ಗಂಗಾಸ್ನಾನವನ್ನು

ಗಂಗಾಸ್ನಾನಂ ಚಕಾರಾಥ ಋಷಿಣಾ ಪ್ರೇರಿತಂ ಸದಾ ॥ ೩೮ ॥
ವರ್ಷಮೇಕಂ ಸಮೀಪೇತು ಋಷೇಸ್ತಸ್ಯ ಮಹಾತ್ಮನಃ ।
ಪ್ರಸಾದಾಚ್ಚ ತಪಸ್ತೇಪೇ ತೀರ್ಥೇ ಚಕ್ರಂ ಸುವಿಸ್ಮಿತಮ್ ॥ ೩೯ ॥
ನೃಸಿಂಹಂ ಮನಸಾ ಧ್ಯಾಯನ್ ಲಕ್ಷ್ಮೀ ಗರುಡಶೋಭಿತಮ್ ।
ಅನಂತಮಪರಿಚ್ಛಿನ್ನಂ ಸೇವ್ಯಮಾನಂ ಮಹಾತ್ಮಭಿಃ ॥ ೪೦ ॥
ಪೂರ್ಣೇ ವರ್ಷೇತು ದೇವೇಶೋ ಪ್ರತ್ಯಕ್ಷ ಸಮಜಾಯತ ।
ಸುದರ್ಶನಂ ತು ದೇವೇಶಂ ವೀಕ್ಷ್ಯವಿಸ್ಮಯಮಾಗತಮ್ ॥ ೪೧ ॥
ನನಾಮ ದಂಡವದ್ಭಕ್ತ್ಯಾ ಪಾದಯೋಃ ಪರಮಾತ್ಮನಃ ।
ವವಂದೇ ತಂ ಮಹಾ ವಿಷ್ಣುಃ ಋಗ್ಭಿರ್ವಾಗ್ಭಿಶ್ಚ ಕೇವಲಮ್ ॥ ೪೨ ॥
ಶ್ರೀ ಸುದರ್ಶನ ಉವಾಚ :
ನಮಸ್ಸಹಸ್ರ ಶಿರಸೇ ಪುರುಷಾಯ ಮಹಾತ್ಮನೇ ।
ನಮಸ್ಸಹಸ್ರ ಪಾದಾಯ ಸಹಸ್ರಾಕ್ಷಾಯ ತೇ ನಮಃ ॥ ೪೩ ॥
ದಶಾಂಗುಲಿ ಪ್ರಮಾಣೇಚ ಭುವಮಾಕ್ರಮ್ಯ ತಿಷ್ಠತೇ ।
ಪುರುಷಾಯ ನಮಸ್ತೇಸ್ತು ಪೂರ್ಣಷಾಡ್ಗುಣ್ಯ ಮೂರ್ತಯೇ ॥ ೪೪ ॥

ಮಾಡಿ ಋಷಿಯ ಅನುಗ್ರಹದಿಂದ ಆ ತೀರ್ಥದ ಸಮೀಪದಲ್ಲಿ ಒಂದು ವರುಷ ಆಶ್ಚರ್ಯಕರವಾದ ತಪಸ್ಸನ್ನು ಮಾಡಿದನು. ಲಕ್ಷ್ಮೀಗರುಡಶೋಭಿತನೂ, ಅನಂತನೂ, ಸರ್ವವ್ಯಾಪಿಯೂ ಆದ ಮಹಾತ್ಮರಿಂದ ಸೇವಿಸಲ್ಪಡುವ ಆ ನೃಸಿಂಹನನ್ನು ಮನಸ್ಸಿನಲ್ಲಿ ಧ್ಯಾನಮಾಡಿ ಒಂದುವರುಷ ಪೂರ್ತಿಯಾಗಲು ನೃಸಿಂಹನು ಪ್ರತ್ಯಕ್ಷನಾದನು. ಸುದರ್ಶನನು ಆ ದೇವದೇವನನ್ನು ನೋಡಿ ಆಶ್ಚರ್ಯಪಟ್ಟು ಪರಮಾತ್ಮನ ಪಾದಗಳಿಗೆ ಎರಗಿ ಕೇವಲ ವೇದಮಂತ್ರಗಳಿಂದಲೇ ಸ್ತೋತ್ರಮಾಡಿದನು.

ಸಹಸ್ರಶಿರಸ್ಸುಳ್ಳ ಮಹಾಪುರುಷನಾದ ಸಹಸ್ರ ಪಾದಗಳೂ, ಸಹಸ್ರ ನೇತ್ರಗಳೂ ಉಳ್ಳ ಹತ್ತು ಅಂಗುಲ ಪ್ರಮಾಣದಿಂದ ಭೂಮಿಯನ್ನು ಆಕ್ರಮಿಸಿ ನಿಂತಿರುವ ಪೂರ್ಣಷಾಡ್ಗುಣ್ಯಮೂರ್ತಿಯಾದ ನಿನಗೆ ನಮಸ್ಕಾರವು. ಯಾರ ಅಂಗಗಳಲ್ಲಿ ಬ್ರಾಹ್ಮ-ಕ್ಷತ್ರಿಯ, ವೈಶ್ಯ-ಶೂದ್ರರು ಹುಟ್ಟಿದರೋ ಆ ಸರ್ವಾತ್ಮ ನಿಕೇತನನಿಗೆ,

ಬ್ರಾಹ್ಮಣಕ್ಷತ್ರಿಯಾ ವೈಶ್ಯ ಶೂದ್ರಾಶ್ಚೈವ ಪ್ರಜಗ್ಮಿರೇ ।
ಅಂಗೇಷು ತವ ದೇವೇಶ ತಸ್ಮೈಸರ್ವಾತ್ಮನೇ ನಮಃ ॥ ೪೫ ॥
ಯಜ್ಞಭೋಕ್ತ್ರೇ ನಮಸ್ತೇಸ್ತು ಯಜ್ಞಾಯಜ್ಞಾನ ಮೂರ್ತಯೇ ।
ಇತಿ ಸೂಕ್ತೈರ್ಮಹಾಮಂತ್ರೈರ್ದೇವಸ್ಸರ್ವೈ ಮಹಾತ್ಮಭಿಃ ॥ ೪೬ ॥
ಋಷಿಭಿಶ್ಚ ಸದಾ ಯೋಗ್ಯೈಧ್ಯಾಯಸೇ ಜಗದೀಶ್ವರ ।
ಏತಾದೃಶಾಯ ತೇ ತಸ್ಮೈ ಪುರುಷಾಯ ಮಹಾತ್ಮನೇ ॥ ೪೭ ॥
ಇತಿ ಸ್ತುತ್ವಾ ಸಹಸ್ರಾರಂ ಯಯಾಚೇ ತಂ ಹರಿಂ ಪ್ರಭುಮ್ ।
ದೇವ ದೇವ ಮಹಾವಿಷ್ಣೋ ಋಷಿಣಾದಂಡಿತೋಸ್ಮ್ಯಹಮ್ ॥ ೪೮ ॥
ರಕ್ಷಮಾಂ ಕೃಪಯಾ ದೇವ ಪೂರ್ವವದ್ವಿಶ್ವಭಾವನ ।
ಏವಮಾಶ್ರುತ್ಯ ವಾಕ್ಯಂ ತು ಚಕ್ರೇ ಮೋದೀರಿತಂ ಹರಿಃ ॥ ೪೯ ॥
ಉವಾಚ ಪರಮಪ್ರೀತಂ ಚಕ್ರಂ ಸಂಹರ್ಷಯನ್ ಪ್ರಭುಃ ।
ಶ್ರೀ ಭಗವಾನುವಾಚ :
ನಾನೃತಂ ತು ವಚೋ ಭೂಯಾತ್ ಋಷೇಸ್ತಸ್ಯ ಮಹಾತ್ಮನಃ ।
ಉಪಾಯಂ ತವ ವಕ್ಷಾಮಿ ಶೃಣುಚಕ್ರ ಮಮಪ್ರಿಯಃ ॥ ೫೦ ॥

ಯಜ್ಞಭೋಕ್ತೃವೂ, ಜ್ಞಾನಮೂರ್ತಿಯೂ ಆದ ನಿನಗೆ ನಮಸ್ಕಾರವು. ಎಂದು ಸಕಲ ದೇವತೆಗಳೂ, ಮಹಾತ್ಮರೂ, ಋಷಿಗಳೂ, ಯೋಗಿಗಳೂ ನಿನ್ನನ್ನು ಧ್ಯಾನಿಸುತ್ತಾರೆ. ಎಲೈ ಜಗದೀಶ್ವರನೇ, ಇಂತಹ ಮಹಾಪುರುಷನಾದ ನಿನಗೆ ನಮಸ್ಕಾರವು. ಸಹಸ್ರಾರವು ಈ ರೀತಿ ಆ ವಿಷ್ಣುವನ್ನು ಸ್ತೋತ್ರಮಾಡಿ ದೇವದೇವನಾದ ಮಹಾವಿಷ್ಣುವೇ, ಋಷಿಯಿಂದ ದಂಡಿಸಲ್ಪಟ್ಟ ನನ್ನನ್ನು ದಯಮಾಡಿ ಮೊದಲಿನಂತೆ ಕಾಪಾಡು ಎಂದು ಬೇಡಿಕೊಳ್ಳಲು ವಿಷ್ಣುವು ಚಕ್ರವು ಹೇಳಿದ ಮಾತನ್ನು ಅಂಗೀಕರಿಸಿ ಪರಮಪ್ರೀತನಾಗಿ ಚಕ್ರವನ್ನು ಸಂತೋಷಪಡಿಸುತ್ತಾ ಇಂತೆಂದನು.

ನನಗೆ ಪ್ರಿಯವಾದ ಚಕ್ರವೇ, ಆ ಮಹರ್ಷಿಯ ಮಾತು ಸುಳ್ಳಾಗಲಾರದು. ನಿನಗೆ ಒಂದು ಉಪಾಯವನ್ನು ಹೇಳುತ್ತೇನೆ ಕೇಳು. ಕುರುಕ್ಷೇತ್ರದಲ್ಲಿ ಕೌರವಪಾಂಡವರ

ಕುರುಪಾಂಡವಯೋರ್ಯುದ್ಧೇ ಕುರುಕ್ಷೇತ್ರೇ ಮಹಾಬಲಾಃ ॥ ೫೧ ॥
ರಾಜಾನೌ ಯುದ್ಧದುರ್ಮತ್ತಾಃ ಪದ್ಮವ್ಯೂಹೇ ಕುಮಾರಕಮ್ ।
ಅಭಿಮನ್ಯುಂ ಯದಾ ಹನ್ಯುಸ್ತದಾ ಕೃಷ್ಣೇನ ವಿಷ್ಣುನಾ ॥ ೫೨ ॥
ಸೈಂಧವಸ್ಯ ವಧಾರ್ಥಾಯ ಅರ್ಜುನಸ್ಯ ಹಿತಾಯಚ ।
ಆಚ್ಛಾದ್ಯ ತವ ದೇಹೇನ ಚಕ್ರ ಸೂರ್ಯಸ್ಯ ಮಂಡಲಮ್ ॥ ೫೩ ॥
ಹನಿಷ್ಯತಿ ಯದಾ ಕೃಷ್ಣಃ ತದಾ ಮೋಕ್ಷೋ ಭವಿಷ್ಯತಿ ।
ತ್ವಯಾ ಯತ್ಸೇವಿತಂ ತೀರ್ಥಂ ಲೋಕೇ ಖ್ಯಾತಿಂ ಗಮಿಷ್ಯತಿ ॥ ೫೪ ॥
ತ್ವಯಾಕೃತಮಿದಂ ಸ್ತೋತ್ರಂ ಯೇ ಪಠಂತಿ ನರಾಃ ಕಲೌ ।
ತೇಷಾಂ ನಶ್ಯಂತಿ ಪಾಪಾನಿ ಗರುಡಾತ್ಪನ್ನಗಾ ಇವ ॥ ೫೫ ॥
ಏತತ್ತೀರ್ಥಂ ಚ ತನ್ನಾಮ್ನಾ ಭುವಿಖ್ಯಾತಿಂ ಗಮಿಷ್ಯತಿ ।
ಚಕ್ರ ತೀರ್ಥೇತಿ ಸರ್ವೇಚ ದೇವತಾಶ್ಚ ಮುನೀಶ್ವರಾಃ ॥ ೫೬ ॥
ಖ್ಯಾಪಯಿಷ್ಯಂತಿ ತೇ ಸರ್ವೇ ನಾತ್ರ ಕಾರ್ಯಾ ವಿಚಾರಣಾ ।
ಇತ್ಯುಕ್ತ್ವಾ ಸ ಹರಿರ್ಭೂಪ ತತ್ರೈವಾಂತರದಧೇ ವಿಭುಃ ॥ ೫೭ ॥
ತತಶ್ಚಕ್ರಂ ಸಮಾಕರ್ಣ್ಯ ವೈಕುಂಠಸ್ಯ ವಚೋಮೃತಮ್ ।

ಯುದ್ಧದಲ್ಲಿ ಮಹಾಬಲಶಾಲಿಗಳಾದ ಯುದ್ಧದುರ್ಮತ್ತರಾದ ರಾಜರು ಪದ್ಮವ್ಯೂಗದಲ್ಲಿ ಕುಮಾರನಾದ ಅಭಿಮನ್ಯುವನ್ನು ಮೋಸದಿಂ ಕೊಂದಾಗ ಕೃಷ್ಣನು ಸೈಂಧವನ ವಧೆಗೋಸ್ಕರ, ಅರ್ಜುನನ ಹಿತಕ್ಕೋಸ್ಕರವೂ ನಿನ್ನ ದೇಹದಿಂದ ಸೂರ್ಯಮಂಡಲವನ್ನು ಆಚ್ಛಾದಿಸಿ ವಧೆ ಮಾಡುವನೋ ಆಗ ನಿನಗೆ ಮೋಕ್ಷವಾಗುವುದು. ನಿನ್ನಿಂದ ಸೇವಿಸಲ್ಪಟ್ಟ ಆ ತೀರ್ಥವು ಲೋಕದಲ್ಲಿ ಖ್ಯಾತಿಯನ್ನು ಹೊಂದುತ್ತದೆ. ಕಲಿಯುಗದಲ್ಲಿ ಯಾರು ನಿನ್ನಿಂದ ಮಾಡಲ್ಪಟ್ಟ ಈ ಸ್ತೋತ್ರವನ್ನು ಪಠಿಸುತ್ತಾರೋ ಅವರ ಪಾಪಗಳು ಗರುಡನಿಂದ ಹಾವುಗಳು ನಾಶವಾಗುವಂತೆ ನಶಿಸುತ್ತವೆ. ಈ ತೀರ್ಥವು ಭೂಲೋಕದಲ್ಲಿ ನಿನ್ನ ಹೆಸರಿನಿಂದ ಖ್ಯಾತಿಯನ್ನು ಹೊಂದುತ್ತದೆ. ಸಕಲ ದೇವತೆಗಳೂ ಋಷಿಗಳೂ, ಚಕ್ರತೀರ್ಥವೆಂದು ಪ್ರಸಿದ್ಧಿಪಡಿಸುತ್ತಾರೆ. ಈ ವಿಷಯದಲ್ಲಿ ಯೋಚನೆಮಾಡತಕ್ಕದ್ದಲ್ಲ. ಎಂದು ಹೇಳಿ ಅಂತರ್ಧಾನನಾದನು. ಅನಂತರದಲ್ಲಿ ಆ ಚಕ್ರವು ವಿಷ್ಣುವಿನ

ಆಯಯೌ ನಾರಸಿಂಹಸ್ಯ ಆಲಯಂ ಚ ಸುದರ್ಶನಮ್ ॥ ೫೮ ॥
ಗಂಗಾದಿ ಸರ್ವತೀರ್ಥೇಷು ಸ್ನಾತ್ವಾಭ್ಯರ್ಚ ಜನಾರ್ಧನಮ್ ।
ಉವಾಸಾತ್ರ ಕಿಯತ್ಕಾಲಂ ಚಕ್ರಂ ಪರವಿದಾರಣಮ್ ॥ ೫೯ ॥
ದ್ವಾಪರೇಥ ಯುಗೇಪ್ರಾಪ್ತೇ ಕುರುಪಾಂಡವಯೋರ್ಯುಧೇ ।
ಕುರುಕ್ಷೇತ್ರಂ ಸಮಾಸಾದ್ಯ ಕೃಷ್ಣೇನ ಕ್ಲಿಷ್ಟ ಕರ್ಮಣಾ ॥ ೬೦ ॥
ಸವಿತೃಮಂಡಲಂ ಸಮ್ಯಗಾಚ್ಛಾದ್ಯ ಗತಕಲ್ಮಷಮ್ ।
ಸೈಂಧವಸ್ಯ ವಧಂ ದೃಷ್ಟ್ವಾ ಶಾಪಾನ್ಮುಕ್ತೋ ಬಭೂವಹ ॥ ೬೧ ॥
ಪರಿಕ್ರಮ್ಯ ನಮಸ್ಕೃತ್ಯ ಕೃಷ್ಣಂ ಕಮಲಲೋಚನಮ್ ।
ಅನುಜ್ಞಾತೋಽಥ ಕೃಷ್ಣೇನ ಪ್ರಯಯೌ ಹರಿಸನ್ನಿಧಿಮ್ ॥ ೬೨ ॥
ತಸ್ಮಾದ್ರಾಜ್ಞಾ ತ್ವಯಾ ತೀರ್ಥೇ ಕರ್ತವ್ಯಂ ಸ್ನಾನಮುತ್ತಮಮ್ ।
ತಸ್ಮಾದ್ರಾಜನ್ ಚಕ್ರತೀರ್ಥೇ ಸ್ನಾನಂ ತು ಹರಿತುಷ್ಟಯೇ ॥ ೬೩ ॥
ಯೇ ಕುರ್ವಂತಿ ನರಾಸ್ಸರ್ವೇ ತೇಷಾಂ ಪುಣ್ಯಮನಂತಕಮ್ ।
ತೇ ಸರ್ವೇ ಪಾಪನಿರ್ಮುಕ್ತಾಃ ಯಾಂತಿ ತತ್ಪದಮವ್ಯಯಮ್ ॥ ೬೪ ॥

ಅಮೃತವಾಕ್ಯವನ್ನು ಕೇಳಿ ನರಸಿಂಹನು ಇದ್ದ ಸ್ಥಳಕ್ಕೆ ಬಂದು ಶ್ರೀಪಾದತೀರ್ಥವೇ (ಗಂಗಾ) ಮೊದಲಾದ ಸಕಲ ತೀರ್ಥಗಳಲ್ಲಿಯೂ ಸ್ನಾನಮಾಡಿ ಸ್ವಲ್ಪಕಾಲ ಅಲ್ಲಿದ್ದು ದ್ವಾಪರವು ಬರಲು ಕೌರವ-ಪಾಂಡವರ ಯುದ್ಧದಲ್ಲಿ ಕುರುಕ್ಷೇತ್ರವನ್ನು ಸೇರಿದನು. ನಂತರ ಯುದ್ಧದಲ್ಲಿ ಶ್ರೀಕೃಷ್ಣನು ಸೂರ್ಯಮಂಡಲವನ್ನು ಈ ಚಕ್ರದಿಂದ ಚೆನ್ನಾಗಿ ಆಚ್ಛಾದಿಸಲು ಪಾಪಮುಕ್ತವಾಗಿ, ಸೈಂಧವನವಧೆಯನು ನೋಡಲು ಶಾಪವೋಕ್ಷವಾಯಿತು. ತರುವಾಯು ಕಮಲಾಕ್ಷನಾದ ಕೃಷ್ಣನಿಗೆ ಪ್ರದಕ್ಷಿಣೆ ನಮಸ್ಕಾರವನ್ನು ಮಾಡೀ ಕೃಷ್ಣನ ಅಪ್ಪಣೆಯನ್ನು ಪಡೆದು ವಿಷ್ಣುವಿನ ಸಮೀಪಕ್ಕೆ ಹೋಯಿತು. ಆದ ಕಾರಣ ಎಲೈ ರಾಜನೇ ಆ ತೀರ್ಥದಲ್ಲಿ ನೀನು ಸ್ನಾನಮಾಡು. ಆ ತೀರ್ಥದಲ್ಲಿ ಸ್ನಾನಮಾಡುವ ಜನರಿಗೆ ಅನಂತ ಪುಣ್ಯ ಉಂಟಾಗಿ ಅವರೆಲ್ಲರೂ ಪಾಪಮುಕ್ತರಾಗಿ ನಾಶರಹಿತವಾದ ಪರಮಪದವನ್ನು ಹೊಂದುತ್ತಾರೆ. ಆ ಮಹಾ

ಯೇ ತತ್ರ ದಾನಾನಿ ಕುರ್ವಂತಿ ಚಕ್ರ ತೀರ್ಥೇ ಮಹಾಗಿರೌ ।
ತೇ ಸರ್ವೇ ಪುಣ್ಯಶೀಲಾಶ್ಚ ಮುಕ್ತಾ ಏವ ನ ಸಂಶಯಃ ॥ ೬೫ ॥
ಇತಿ ಸರ್ವಂ ಮಯಾ ಖ್ಯಾತಂ ವೃತ್ತಾಂತಂ ಋಷಿಚಕ್ರಯೋಃ ।
ತೀರ್ಥಸ್ಯ ರಾಜನ್ ಮಹಿಮಾ ವರ್ಣಿತಂ ಸುಖದಂ ನೃಣಾಮ್ ॥ ೬೬ ॥
ಪೃಚ್ಛಮಾಂ ಗತಭೀತಸ್ತಾತ ಕಥಾಂ ಕಲ್ಮಶ ನಾಶಿನೀಮ್ ।
ಇತಿ ತಸ್ಯ ಋಷೇರ್ಭೂಪ ಶೃತ್ವಾ ವಾಕ್ಯಂ ಸುಖಪ್ರದಮ್ ॥ ೬೭ ॥
ಪೃಷ್ಟಂ ಸ ಪುನರಾರೇಭೇ ಸಂತೋಷಪುಲಕಾಂಕಿತಃ ।

॥ ಇತಿ ಶ್ರೀ ಬ್ರಹ್ಮಾಂಡಪುರಾಣೇ ಶ್ರೀ ಕರಿಗಿರಿ ಮಾಹಾತ್ಮ್ಯೇ
ಸಪ್ತಮೋಧ್ಯಾಯಃ ಸಮಾಪ್ತಃ ॥

ಪರ್ವತದ ಚಕ್ರತೀರ್ಥದಲ್ಲಿ ಸ್ನಾನಮಾಡುವ ಪುಣ್ಯಶೀಲರೆಲ್ಲರೂ ಮುಕ್ತರೆಂಬ ವಿಷಯದಲ್ಲಿ ಸಂಶಯವಿಲ್ಲ. ಇಂತು ಋಷಿಯ ಮತ್ತು ಚಕ್ರದ ಸಮಸ್ತ ವೃತ್ತಾಂತವೂ ನನ್ನಿಂದ ಹೇಳಲ್ಪಟ್ಟಿತು. ಜನರಿಗೆ ಸುಖವನ್ನುಂಟುಮಾಡುವ ತೀರ್ಥದ ಮಹಿಮೆಯೂ ವರ್ಣಿಸಲ್ಪಟ್ಟಿತು. ಪಾಪನಾಶಕವಾದ ಕಥೆಯನ್ನು ನಿರ್ಭೀತನಾಗಿ ನನ್ನನ್ನು ಕೇಳು. ಎಂದು ಹೇಳಿದ ಸುಖಪ್ರದವಾದ ಋಷಿಯ ಮಾತನ್ನು ರಾಜನು ಕೇಳಿ ಸಂತೋಷದಿಂದ ರೋಮಾಂಚನವುಳ್ಳವನಾಗಿ ಪುನಃ ಕೇಳಲು ಪ್ರಾರಂಭಿಸಿದನು.

ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿರುವ ಕರಿಗಿರಿ ಮಹಾತ್ಮೆಯಲ್ಲಿ ಏಳನೆಯ ಅಧ್ಯಾಯವು ಮುಕ್ತಾಯವಾಯಿತು.

॥ ಶ್ರೀ ನಿತ್ಯಾ ಅನಿರುದ್ಧಾಯ ನಮಃ ॥

ಅಷ್ಟಮೋಧ್ಯಾಯಃ

ಶ್ರೀ ರಾಜೋವಾಚ :

ಬ್ರಹ್ಮಾತ್ಮಜ ಮಹಾಭಾಗ ಸರ್ವಶಾಸ್ತ್ರ ವಿಶಾರದ ।
ಜಯಾಮಂಗಲಯೋಸ್ತಾತ ಆಖ್ಯಾನಂ ವಕ್ತುಮರ್ಹಸಿ ॥ ೧ ॥

ಶ್ರೀ ಋಷಿರುವಾಚ :

ಶೃಣುಷ್ವ ನೃಪಶಾರ್ದೂಲ ಜಯಮಂಗಲಯೋರ್ಶುಭಮ್ ।
ಚಾರಿತ್ರಂ ಸರ್ವಲೋಕಾನಾಂ ಪುಣ್ಯದಂ ಪುಣ್ಯಕರ್ಮಣಾಮ್ ॥ ೨ ॥
ವಕ್ಷ್ಯಾಮಿ ನೃಪಸಂಭೂತ್ಯೈ ಶ್ರವಣಾದ್ರೋಮಹರ್ಷಣಮ್ ।
ಆಸಿತ್ಪುರಾ ಮಹಾಪುಣ್ಯಾ ದಕ್ಷಕನ್ಯಾ ವರಾನನಾ ॥ ೩ ॥
ಜಯಾ ನಾಮ ಮಹಾಪ್ರಾಜ್ಞಾ ವಿಷ್ಣುಭಕ್ತಾ ಶುಚಿಸ್ಮಿತಾ ।
ಭೂಲೋಕಂ ಗಂತುಕಾಮಾ ಸಾ ಪಿತರಂ ಸಮಯಾಚತ ॥ ೪ ॥
ಹೇ ತಾತ ಶೃಣು ಮದ್ವಾಕ್ಯಂ ಪೂರ್ವಜಾ ಮಮ ಸುವ್ರತಾ ।

ಶ್ರೀ ರಾಜನು ಕೇಳುತ್ತಾನೆ. ಮಹಾನುಭಾವನೂ, ಸರ್ವಶಾಸ್ತ್ರವಿಶಾರದನೂ ಆದ ಎಲೈ ಬ್ರಹ್ಮನಂದನನೇ, ಜಯಾ ಮತ್ತು ಮಂಗಳೆಯ ಉಪಾಖ್ಯಾನವನ್ನು ಹೇಳಲು ನೀನು ತಕ್ಕವನು ಎಂದು ರಾಜನು ಅನ್ನಲು ಆ ಋಷಿಯು ಎಲೈ ರಾಜಶ್ರೇಷ್ಠನೇ ಸಕಲರಿಗೂ ಪುಣ್ಯವನ್ನುಂಟುಮಾಡುವ ಶ್ರವಣಮಾತ್ರದಿಂದ ರೋಮಾಂಚನಗೊಳ್ಳುವ ಮಂಗಳಕರವಾದ ಜಯಾಮಂಗಳೆಯರ ಚರಿತ್ರೆಯನ್ನು ಪುಣ್ಯಕರ್ಮಿಗಳ ಸಾಧನೆಗಾಗಿ ಹೇಳುತ್ತೇನೆ ಕೇಳು.

ಪೂರ್ವದಲ್ಲಿ ಮಹಾಪುಣ್ಯವಂತಳೂ, ಪ್ರಾಜ್ಞಳೂ, ವಿಷ್ಣುಭಕ್ತಳೂ ಆದ ಮಂದಹಾಸವುಳ್ಳ ಜಯೇ ಎಂಬ ದಕ್ಷಕನ್ಯೆಯು ಇದ್ದಳು. ಅವಳು ಭೂಲೋಕಕ್ಕೆ ಹೋಗಲಿಚ್ಛಿಸಿ ಎಲೈ ತಂದೆಯೇ ನನ್ನ ಮಾತನ್ನು ಕೇಳು, ಸದಾಚಾರ ಸಂಪನ್ನಳಾದ ಸತೀ ಎಂಬ ನನ್ನ ಅಕ್ಕ ಯಜ್ಞದಲ್ಲಿ ನಿನ್ನಿಂದ ಬಿಡಲ್ಪಟ್ಟ ಕಾರಣ ದೇಹತ್ಯಾಗವನ್ನು ಮಾಡಿ ಹಿಮವಂತನ

ಸತೀನಾಮ ತ್ವಯಾತ್ಯಕ್ತಾ ಸತ್ರೇತ್ಯಕ್ತ ಕಳೇಬರಾ ॥ ೫ ॥
ಜಜ್ಞೇ ಹಿಮವತಃ ಪುತ್ರೀ ಪಾರ್ವತೀ ಚ ಯಾಂ ವಿದುಃ ।
ಸಾ ಪಾರ್ವತೀ ಸದಾಶಂಭುಂ ಸೇವಮಾನಾ ಸಾ ತದ್ಗಿರೌ ॥ ೬ ॥
ಸೇವಯಾಸ್ಯಾಸ್ಸದಾಶಂಭುಃ ಪ್ರೀತಃ ಪ್ರೋವಾಚ ತಾಮುಮಾಮ್ ।
ವರಂ ವೃಣೀಶ್ವ ಭೋ ಭದ್ರೇ ವರಾಂ ದಾಸ್ಯಾಮಿ ಸುವ್ರತೇ ॥ ೭ ॥
ಇತ್ಯುಕ್ತಾ ಸಾ ತದಾಗೌರೀ ಶಂಭುನಾನಂಗ ಶತ್ರುಣಾ ।
ವರಂ ವವ್ರೇ ತದಾ ಗೌರೀ ಶಂಕರಂ ಲೋಕಶಂಕರಮ್ ॥ ೮ ॥
ದೇವದೇವ ಮಹಾದೇವ ವಿರೂಪಾಕ್ಷ ವರಾನನ ।
ಭೂಲೋಕಂ ಪ್ರತಿ ಯಾಸ್ಯಾಮಿ ಅನುಜ್ಞಾಂ ದೇಹಿ ಮೇ ಪ್ರಭೋ ॥ ೯ ॥
ಇತಿ ಪೃಷ್ಟಸ್ತದಾ ದೇವ್ಯಾ ಶಂಭುಃ ಪ್ರೋವಾಚ ಪಾರ್ವತೀಮ್ ।
ಗಚ್ಛ ಭದ್ರೇ ಭುವಂ ಶೀಘ್ರಂಪುಂಗವಾದ್ರಿ ವರಾನನೇ ॥ ೧೦ ॥
ತತ್ರಾಹಂ ವಿರಮಿಷ್ಯಾಮಿ ದೇವತಾಗಣ ಸಂಯುತಃ ।
ತತ್ರ ತ್ವಂ ವಸ ಕಲ್ಯಾಣಿ ಗುಹಾಯಾಂ ಸುಮನೋಹರೇ ॥ ೧೧ ॥
ಇತ್ಯುಕ್ತಾ ಸಾ ತದಾ ಗೌರೀ ಪಾರ್ವತೀ ಲೋಕಪೂಜಿತಾ ।

ಮಗಳಾಗಿ ಜನಿಸಿ, ಪಾರ್ವತಿ ಎಂದು ಜನರು ತಿಳಿದುಕೊಂಡಿರುವ ಅವಳು ಆ ಬೆಟ್ಟದಲ್ಲಿ ಸದಾ ಈಶ್ವರನ ಸೇವೆ ಮಾಡುತ್ತಾ ಇದ್ದಳು. ಇವಳ ಸೇವೆಯಿಂದ ಈಶ್ವರನು ಪ್ರೀತನಾಗಿ ಸುಶೀಲೆಯಾದ ಶೋಭನಾಂಗಿಯೇ, ವರವನ್ನು ಕೇಳು ಕೊಡುತ್ತೇನೆ ಎಂದು ಪಾರ್ವತಿಗೆ ಹೇಳಲು ಆಗ ಪಾರ್ವತಿಯು ಲೋಕಸುಖಕರನಾದ ಶಂಕರನನ್ನು ದೇವವೇವನೂ, ವಿರೂಪಾಕ್ಷನೂ, ವರಾನನನೂ, ಪ್ರಭುವೂ ಆದ ಎಲೈ ಮಹಾದೇವನೇ, ನಾನು ಭೂಲೋಕಕ್ಕೆ ಹೋಗಲು ನನಗೆ ಅಪ್ಪಣೆಯನ್ನು ಕೊಡು ಎಂದು ಕೇಳಲು, ಎಲೈ ಮಂಗಳಾಂಗಿಯೇ, ನೀನು ಭೂಲೋಕಕ್ಕೆ ಪುಂಗವಾದ್ರಿಗೆ ಬೇಗ ಹೋಗು. ನಾನು ಅಲ್ಲಿ ದೇವತೆಗಳ ಸಮೂಹಗಳಿಂದ ಯುಕ್ತನಾಗಿ ವಿಹರಿಸುತ್ತೇನೆ. ಅಲ್ಲಿ ನೀನು ದಿವ್ಯವಾದ ಗುಹೆಯಲ್ಲಿ ಇರು. ಎಂದು ಈಶ್ವರನು ಹೇಳಲು ಪಾರ್ವತಿಯು ಪುಂಗವಾದ್ರಿಗೆ ಹೋದಳು. ಅವಳು ಈಗ ಜನರಿಗೆ ಗುಹೆಯಲ್ಲಿ ಕಾಣಿಸುತ್ತಾಳೆ.

ಪುಂಗವಾದ್ರಿಂ ಗತಾ ಸಾ ತು ಗುಹಾಯಾಂ ದೃಶ್ಯತೇ ಜನೈಃ ॥ ೧೨ ॥
ತಾಂ ದ್ರಷ್ಟುಕಾಮಾ ಪೃಚ್ಛಾಮಿ ಚಂಚಲತ್ವಾದಹಂ ಭುವಿ ।
ಇತ್ಯುಕ್ತಸ್ಸ್ತಯಾ ದಕ್ಷಃ ಸಂಚುಕೋಪ ಸುತಾಂ ಪ್ರತಿ ॥ ೧೩ ॥
ಯಸ್ಮಾಚ್ಚಂಚಲ ಬುದ್ಧ್ಯಾ ಮಾಂ ಪೃಚ್ಛಸಿ ವರಾನನೇ ।
ತಸ್ಮಾತ್ವಂ ಚಂಚಲಾ ಭೂತ್ವಾ ಚರತ್ವಂ ಗಿರಿಕಾನನೇ ॥ ೧೪ ॥
ಇತಿ ಪಿತ್ರಾ ಜಯಾ ನಾಮ ಶಪ್ತಾ ಭೀತಾ ತದಾನಘ ।
ಯಯಾಚೇ ಪಿತರಂ ಕಾಲೇ ಶಾಪಮೋಕ್ಷಂ ಚಾತ್ಮನಃ ॥ ೧೫ ॥
ತಯಾ ವಿಜ್ಞಾಪಿತೋ ದಕ್ಷಃ ವಿಶಾಪಂ ಪ್ರತಿದತ್ತವಾನ್ ।
ಯದಾ ತ್ವಂ ಹಸ್ತಿಶಿಖರೇ ನೃಸಿಂಹಸ್ಯ ಸಮೀಪಗಾ ॥ ೧೬ ॥
ನದೀ ಭೂತ್ವಾ ತು ತ್ವಂ ಭದ್ರೇ ಚರಿಷ್ಯಸಿ ಶುಭಾನನೇ ।
ತದಾ ತವ ಮಹಾವಿಷ್ಣೋರ್ದರ್ಶನಾಚ್ಚ ಭವಿಷ್ಯತಿ ॥ ೧೭ ॥
ಮುಕ್ತಿಶ್ಚ ಸರ್ವಥಾ ದೇವೀ ಗಚ್ಛ ಭದ್ರೇ ಭುವಂ ಸುಖಮ್ ।
ತತಸ್ಸಾ ಪಿತೃವಾಕ್ಯಂ ತು ಶೃತ್ವಾ ಚ ಭುವನಂ ಗತಾ ॥ ೧೮ ॥
ಪುಂಗವಾದ್ರೌ ಕಿಯತ್ಕಾಲಂ ಅಂಬಿಕಾಯಾಸ್ಸಮೀಪತಃ ।

ಭೂಲೋಕದಲ್ಲಿ ಅವಳನ್ನು ನೋಡಲು ಕುತೂಹಲವುಳ್ಳವಳಾಗಿ ಚಾಪಲ್ಯದಿಂದ ನಾನು ನಿನ್ನನ್ನು ಕೇಳುತ್ತೇನೆ. ಅನ್ನಲು ದಕ್ಷಬ್ರಹ್ಮನು ಅವಳ ಮೇಲೆ ಕೋಪಗೊಂಡು ಎಲೈ ವರಾನನೆಯೇ, ಚಂಚಲ ಬುದ್ಧಿಯಿಂದ ನೀನು ನನ್ನನ್ನು ಕೇಳಿದ ಕಾರಣ ಚಂಚಲೆಯಾಗಿ ಬೆಟ್ಟದ ಕಾಡಿನಲ್ಲಿ ಸಂಚರಿಸು ಎಂದು ತಂದೆಯಿಂದ ಶಪಿಸಲ್ಪಟ್ಟ ಆ ಜಯೇಯು ಭಯಪಟ್ಟು ಕಾಲಾಂತರದಲ್ಲಿ ನನಗೆ ಶಾಪಮೋಕ್ಷವಾಗಬೇಕೆಂದು ತಂದೆಯನ್ನು ಬೇಡಿದಳು. ಹೀಗೆ ಬೇಡಲು ಆ ದಕ್ಷಬ್ರಹ್ಮನು ನೀನು ಕರಿಗಿರಿಪರ್ವತದ ಶಿಖರದಲ್ಲಿ ಶ್ರೀನರಸಿಂಹನ ಸಮೀಪದಲ್ಲಿ ಸಂಚರಿಸಿದಾಗ ಮಹಾವಿಷ್ಣುವಿನ ದರ್ಶನದಿಂದ ನಿನಗೆ ನಿಶ್ಚಯವಾಗಿ ಶಾಪಮೋಚನೆಯಾಗುವುದು. ನೀನು ಸುಖವಾಗಿ ಭೂಲೋಕಕ್ಕೆ ಹೋಗು ಎಂದು ಹೇಳಿದನು. ಅವಳು ತಂದೆಯ ಮಾತನ್ನು ಕೇಳಿ ಭೂಲೋಕಕ್ಕೆ ಹೋದಳು. ಪುಂಗವಾದ್ರಿಯಲ್ಲಿ ಕೆಲವು ಕಾಲ ಪಾರ್ವತಿಯ ಸಮೀಪದಲ್ಲಿದ್ದು

ಉವಾಸ ಸಾ ಚಿರಕಾಲಂ ಪಾತಾಲ ತಲವಾಸಿನೀ ॥ ೧೯ ॥
ಚಿಂತಯಾಮಾಸ ತತ್ರಸ್ಥಾ ಕಥಂ ಮುಕ್ತಾ ಭವಾಮ್ಯಹಮ್ ।
ಇತಿ ಸಂಚಿಂತ್ಯ ಮನಸಾ ಪಪ್ರಚ್ಛ ಗಿರಿಜಾಂಬಿಕಾ ॥ ೨೦ ॥
ಶ್ರೀ ಜಯೋವಾಚ :
ಗಚ್ಛಾಮಿ ಭದ್ರೇ ಶೈಲೇಶಂ ಹರಿಣಾಧ್ಯಾಸಿತಂ ಪುರಾ ।
ಸಿಂಹಾಚಲಮಿತಿ ಖ್ಯಾತಂ ತ್ರೇತಾಯಾಮೃಷಿಭಿರ್ದ್ಯೃವಮ್ ॥ ೨೧ ॥
ಅವಧಾರಯ ಮದ್ವಾಕ್ಯಂ ಪಿತ್ರಾ ಶಪ್ತೋಽಸ್ಮಿ ಮಾನಿನಿ ।
ತ್ವಾಂ ದ್ರಷ್ಟುಕಾಮಾ ಪೃಚ್ಛಂತೀ ಚಂಚಲಾ ಗತವಿಹ್ವಲಾ ॥ ೨೨ ॥
ಪಿತಾ ತು ಮಾಂ ನಿರೀಕ್ಷ್ಯಾಥ ಉವಾಚ ಭೃಶಕೋಪನಃ ।
ಚರ ಭೂಮ್ಯಾಂ ಕುಮಾರಿತ್ವಂ ನದೀ ಭೂತ್ವಾ ಗಿರೌ ವರೇ ॥ ೨೩ ॥
ಶ್ರೀಹಸ್ತಿ ಶಿಖರೇ ಪುಣ್ಯೇ ಸರ್ವತೀರ್ಥ ಸಮನ್ವಿತೇ ।
ಜನಕೇನ ಸಮಾದಿಷ್ಟಾ ಆಗತಾಸ್ಮಿ ತವಾಂತಿಕಮ್ ॥ ೨೪ ॥
ಯಾಸ್ಯಾಮಿ ಪರ್ವತ್ಂ ಶ್ರೇಷ್ಠಂ ಯತ್ರಾಸ್ತೇ ಸ ಹರಿಸ್ಸದಾ ।
ಇತ್ಯುಕ್ತ್ವಾ ಸಾ ತಯಾ ಭೂಪ ಪ್ರತ್ಯುವಾಚ ಜಯಾಂ ಪ್ರತಿ ॥ ೨೫ ॥

ಪಾತಾಳದಲ್ಲಿ ಬಹುಕಾಲ ವಾಸಿಸುತ್ತಾ ತಾನು ಅಲ್ಲಿ ಇದ್ದರೆ ತನಗೆ ಹೇಗೆ ಮುಕ್ತಿಯಾಗುವುದು ಎಂದು ಮನಸ್ಸಿನಲ್ಲಿ ಯೋಚಿಸಿ ಹಿಮವತ್ಪುತ್ರಿಯಾದ ಪಾರ್ವತಿಯನ್ನು ಕುರಿತು ಎಲೈ ಮಂಗಳಾಂಗಿಯೇ, ನನ್ನ ಮಾತನ್ನು ಕೇಳು. ನಾನು ತಂದೆಯಿಂದ ಶಪಿಸಲ್ಪಟ್ಟು ಪೂರ್ವದಲ್ಲಿ ವಿಷ್ಣುವು, ತ್ರೇತಾಯುಗದಲ್ಲಿ ಋಷಿಗಳು ವಾಸವಾಗಿದ್ದ ಸಿಂಹಾಚಲವೆಂದು ಖ್ಯಾತಿಗೊಂಡ ಕರಿಗಿರಿಪರ್ವತದ ಬಳಿಗೆ ಹೋಗುತ್ತೇನೆ. ಚಂಚಲೆಯಾಗಿಯೂ, ಏನೂ ತೋಚದೆಯೂ ಇದ್ದ ನಾನು ನಿನ್ನನ್ನು ನೋಡಲಿಚ್ಛಿಸಿ ಕೇಳುತ್ತಿರಲು ತಂದೆಯು ನನ್ನನ್ನು ನೋಡಿ ಬಹಳ ಕೋಪಗೊಂಡು ಎಲೈ ಕುಮಾರಿಯೇ, ನೀನು ಸಮಸ್ತ ತೀರ್ಥಗಳಿಂದ ಕೂಡಿದ ಶ್ರೇಷ್ಠವಾದ ಹಸ್ತಿನಾಮಕ ಪರ್ವತದ ಪುಣ್ಯಶಿಖರದಲ್ಲಿ ನದಿಯಾಗಿ ಹುಟ್ಟಿ ಭೂಲೋಕದಲ್ಲಿ ಸಂಚರಿಸು ಎಂದು ಹೇಳಿದ್ದರಿಂದ ನಿನ್ನ ಬಳಿಗೆ ಬಂದೆನು. ವಿಷ್ಣುವು ಇರುವ ಆ ಶ್ರೇಷ್ಠವಾದ ಪರ್ವತಕ್ಕೆ

ಗಚ್ಛ ಭದ್ರೇ ಸುಖಂ ತೂರ್ಣಂ ಯತ್ರಾಸ್ತೇ ಸ ಹರಿರ್ಗಿರೌ ।
ತತ್ರ ಗತ್ವಾ ಸಮಭ್ಯರ್ಚ್ಯ ನಾರಸಿಂಹಂ ಸನಾತನಮ್ ॥ ೨೬ ॥
ಸುಖಂ ವಸ ವಿಶಾಲಾಕ್ಷಿ ನದೀರೂಪಾ ಸಮೀಪಗಾ ।
ಸಿಂಹಾಚಲಸ್ಯ ಪರಿತಃ ವಲಯಾಕೃತಿಮೇಷ್ಯಸಿ ॥ ೨೭ ॥
ಮಂಗಳಾಯಾಸ್ಸಂಗಮೋಽಪಿ ತವತತ್ರ ಭವಿಷ್ಯತಿ ।
ಇತ್ಯುಕ್ತಾ ತು ತಯಾ ದೇವೀ ಆಜಗಾಮಾಚಲಂ ಶುಭಮ್ ॥ ೨೮ ॥
ಸಿಂಹಾದ್ರಿಂ ಪ್ರಾಪ್ಯ ಸಾ ರಾಜನ್ ವಿಚಚಾರ ವರಾನನಾ ।
ದೇವಾಗಾರಂ ಸಮಾಸಾದ್ಯ ಸಮಾರಾಧ್ಯ ಜನಾರ್ದನಮ್ ॥ ೨೯ ॥
ಪಾದತೀರ್ಥೇ ನಿಮಜ್ಜ್ಯಾಸೌ ಸ್ಥಿತಾ ತತ್ರ ಜಯಾ ಶುಭಾ ।
ತತ್ರ ತೀರ್ಥೇ ಪುರಾ ದೇವೋ ದ್ವೌ ಪಾದೌ ಕ್ಷಿಪ್ತವಾನ್ ಪ್ರಭುಃ ॥ ೩೦ ॥
ಯದಾ ತು ಪಾದೌ ಭಗವಾನ್ ನ್ಯಸ್ತವಾನ್ ಪುರುಷೋತ್ತಮಃ ।
ತದಾ ಪಾದೇನಚೋಕ್ಷಿಪ್ತಾ ಜಯಾ ನಾಮ ಚಚಾರ ಹ ॥ ೩೧ ॥
ಪಾದಾತ್ಪ್ರಸ್ಕಂದಿತಾತ್ತೀರ್ಥಾತ್ ಜಜ್ಞೇ ಸಾ ಜಯನಾಮಕಾ ।
ಸಿಂಹಾದ್ರೇಃ ಪರಿತಸ್ಸಮ್ಯಕ್ ಚಚಾರ ಋಷಿಸೇವಿತಾ ॥ ೩೨ ॥

ಹೋಗುತ್ತೇನೆ . ಎಂದು ಹೇಳಿದ ಜಯೆಯ ಮಾತನ್ನು ಕೇಳಿ ಪಾರ್ವತಿಯು ಜಯೆಯನ್ನು ಕುರಿತು ವಿಶಾಲಲೋಚನೆಯಾದ ಎಲೈ ಮಾಂಗಳಾಂಗಿಯೇ, ವಿಷ್ಣುವು ಇರುವ ಪರ್ವತಕ್ಕೆ ನೀನು ಬೇಗಹೋಗಿ ಸನಾತನನಾದ ನರಸಿಂಹನನ್ನು ಚೆನ್ನಾಗಿಪೂಜಿಸಿ ನದೀರೂಪಳಾಗಿ ಸುಖವಾಗಿ ಸಮೀಪದಲ್ಲಿ ಇರು. ಸಿಂಹಾಚಲದ ಸುತ್ತಲೂ ವಲಯಾಕಾರವನ್ನು ಹೊಂದುತ್ತೀ. ಅಲ್ಲಿ ನಿನಗೆ ಮಂಗಲೆಯ ಸಂಗಮವೂ ಆಗುತ್ತದೆ. ಎಂದು ಹೇಳಿದಳು. ಎಲೈ ರಾಜನೇ, ಪಾರ್ವತಿಯಿಂದ ಹೀಗೆ ಹೇಳಲ್ಪಟ್ಟ ಜಯೆಯು ಆ ಬೆಟ್ಟಕ್ಕೆ ಬಂದು ಸಿಂಹಾದ್ರಿಯನ್ನು ಸೇರಿ ಸಂಚಾರಮಾಡುತ್ತಾ ದೇವರ ಗರ್ಭಾಗಾರಕ್ಕೆ ಹೋಗಿ ವಿಷ್ಣುವನ್ನು ಆರಾಧಿಸುತ್ತಾ ಇದ್ದಳು. ನಂತರ ಪುರುಷೋತ್ತಮನಾದ ಆ ಭಗವಂತನು ತನ್ನ ಪಾದಗಳನ್ನು ಪಾದತೀರ್ಥದಲ್ಲಿ ಇಟ್ಟಾಗ ದಕ್ಷಕನ್ಯೆಯೇ ಜಯಾ ಎಂಬ ನಾಮದಿಂದ ನದಿಯಾಗಿ ಹುಟ್ಟಿ ಪಾದದಿಂದ ಮೇಲಕ್ಕೆ ಚಿಮ್ಮಲ್ಪಟ್ಟು ಸಂಚರಿಸಿತು.

ಅನ್ಯಾಸಾ ಮಂಗಳಾ ನಾಮಾ ವೈಕುಂಠಾದಾಗತ ಶುಭಾ ।
ಶ್ರೀ ರಾಜೋವಾಚ :
ಕಿಮರ್ಥಮಾಗತಾ ದೇವೀ ವೈಷ್ಣವೀ ವಿಮಲಪ್ರದಾ ॥ ೩೩ ॥
ಆಚಕ್ಷ್ವ ವಿಸ್ತರಾದ್ಬ್ರಹ್ಮನ್ ಮಂಗಳಾಯಾಃ ಕಥಾಂ ಶುಭಾಮ್ ।
ಶ್ರೀ ವಸಿಷ್ಠೋವಾಚ :
ಪುರಾತು ಮಂಗಳಾ ನಾಮ ವೈಕುಂಠಸ್ಥಾ ವರಾನನಾ ॥ ೩೪ ॥
ಪ್ರಾರ್ಥಯಾಮಾಸ ದೇವೇಶಂ ನಾರಾಯಣಮನಾಮಯಮ್ ।
ಋಷಿಭಿಃ ಪ್ರಾರ್ಥಿತಾ ದೇವಃ ಇಂದ್ರಾದ್ಯೈಶ್ಚ ಸುರೈರಪಿ ॥ ೩೫ ॥
ಭೂಲೋಕ ಗಮನಾರ್ಥಾಯ ಯಯಾಚೇಥ ಸನಾತನಮ್ ।
ಶ್ರೀ ಮಂಗಳೋವಾಚ :
ವೈಕುಂಠ ಸರ್ವಲೋಕೇಶ ಶೃಣುಷ್ವ ಪುರುಷೋತ್ತಮ ॥ ೩೬ ॥
ಗಮಿಷ್ಯೇಹಂ ಭುವಂ ತಾತ ಯತ್ರ ತ್ವಂ ವಾಸಮೇಷ್ಯಸಿ ।
ತತ್ರ ಗಚ್ಛಾಮಿ ದೇವೇಶ ಅನುಜ್ಞಾಂ ದೇಹಿಮೇ ಪ್ರಭೋ ॥ ೩೭ ॥
ತಯಾ ಸಂಪ್ರಾರ್ಥಿತೋ ದೇವಃ ವೈಕುಂಠಸ್ಥೋ ಜನಾರ್ದನಃ ।

ಆ ನದಿಯು ಪಾದದಿಂದ ಜಾರಿಬಂದು ಸಿಂಹಾದ್ರಿಯ ಸುತ್ತಲೂ ಋಷಿಗಳಿಂದ ಸೇವಿಸಲ್ಪಟ್ಟು ಸಂಚರಿಸಿತು. ಮಂಗಳಕರವಾದ ಮಂಗಳೆ ಎಂಬ ಇನ್ನೊಂದು ನದಿಯು ವೈಕುಂಠದಿಂದ ಬಂದಿತು.

ಶ್ರೀ ರಾಜನು ಕೇಳುತ್ತಾನೆ. ಎಲೈ ಬ್ರಹ್ಮರ್ಷಿಯೇ, ಪುಣ್ಯತಮವಾದ ವಿಷ್ಣು ಸಂಬಂಧವುಳ್ಳ ಆ ನದಿಯು ಏಕೆ ಬಂದಿತು? ಮಂಗಳಕರವಾದ ಮಂಗಳೆಯ ಕಥೆಯನ್ನು ವಿಸ್ತಾರವಾಗಿ ಹೇಳು ಎಂದು.

ಆಗ ಶ್ರೀ ವಸಿಷ್ಠರು ಹೇಳುತ್ತಾರೆ. ಪೂರ್ವದಲ್ಲಿ ವೈಕುಂಠದಲ್ಲಿದ್ದ ಮಂಗಳೆಯು ಋಷಿಗಳಿಂದಲೂ ಇಂದ್ರನೇ ಮೊದಲಾದ ದೇವತೆಗಳಿಂದಲೂ ಪ್ರಾರ್ಥಿಸಲ್ಪಟ್ಟು ಭೂಲೋಕಕ್ಕೆ ಹೋಗಲು ಸನಾತನನಾದ ವಿಷ್ಣುವನ್ನು ಬೇಡಿದಳು.

ಉವಾಚ ಪರಮಪ್ರೀತೋ ಮೇಘಗಂಭೀರಯಾ ಗಿರಾ ॥ ೩೮ ॥
ಶ್ರೀಭಗವಾನುವಾಚ :
ನಗಂತವ್ಯಂ ತ್ವಯಾದೇವೀ ಮಯಾವಾ ತು ಕದಾಚನ ।
ರಾಕ್ಷಸಾ ದಾನವಾಸ್ತತ್ರ ಚರಂತಿ ಮದಮೋಹಿತಾಃ ॥ ೩೯ ॥
ತಸ್ಮಾತ್ತ್ವಪ್ಷ್ಕರ ರೂಪೇಣ ವಿಚರತ್ವಂ ಯಥಾ ಸುಖಮ್ ।
ಇತ್ಯುಕ್ತ್ವಾ ಸಾ ವರಾ ನಾರೀ ನದೀರೂಪಾಭವತ್ತದಾ ॥ ೪೦ ॥
ಭೂಲೋಕಂ ಪ್ರಾಪ್ಯ ಸಾ ದೇವೀ ಮಂಗಳಾ ಶುಭದಾಯಿನೀ ।
ತಟೇ ಜಯಾಯಾಃ ಪ್ರಾಂತೇಷು ವನೇಷು ವಿಚಚಾರ ಸಾ ॥ ೪೧ ॥
ಯದಾ ಮಂಗಳಾ ನಾಮ್ನೀ ಸಾ ಸಿಂಹಾದ್ರೌ ವಿಚಚಾರ ಹ ।
ತದಾ ನೃಸಿಂಹೋ ಭಗವಾನ್ ಋಷಿಭಿಸ್ಸೇವಿತೋ ಮುದಾ ॥ ೪೨ ॥
ವಸನ್ ಸ ಸರ್ವತಃ ಪಶ್ಯನ್ ವಿಕಸತ್ಕುಸುಮಾವಲಿಮ್ ।
ಚಚಾರಾದ್ರೌ ನೃಸಿಂಹೋಥ ನದೀರೂಪಾಂ ದದರ್ಶ ಹ ॥ ೪೩ ॥
ಸಾ ಮಂಗಳಾ ತಥಾ ದೇವಂ ಅಭಿವಾದ್ಯುಪಸ್ಥಿತಾ ।
ಬದ್ಧಾಂಜಲಿ ಪುಟಾ ರಾಮಾ ವಿಸ್ಮಿತಾನಯ ಭಾಷಿಣೇ ॥ ೪೪ ॥

ಸರ್ವಲೋಕೇಶ್ವರನಾದ ಪುರುಷೋತ್ತಮನಾದ ಎಲೈ ವೈಕುಂಠನೇ, ನೀನು ವಾಸಮಾಡುವ ಭೂಲೋಕಕ್ಕೆ ನಾನು ಹೋಗುತ್ತೇನೆ. ಅಪ್ಪಣೆಯನ್ನು ಕೊಡು ಎಂದು ಪ್ರಾರ್ಥಿಸಿದಳು. ವೈಕುಂಠದಲ್ಲಿರುವ ವಿಷ್ಣುವು ಪರಮ ಪ್ರೀತನಾಗಿ ಮೇಘ ಗಂಭೀರವಾಕ್ಕಿನಿಂದ ಇಂತೆಂದನು

ಎಲೈ ದೇವಿಯೇ ನೀನು ಈ ರೂಪದಿಂದ ಎಂದಿಗೂ ಅಲ್ಲಿಗೆ ಹೋಗತಕ್ಕದ್ದಲ್ಲ. ಅಲ್ಲಿ ರಾಕ್ಷಸರು ಮದಮೋಹಿತರಾಗಿ ಸಂಚಾರಮಾಡುತ್ತಾರೆ. ಆದುದರಿಂದ ನೀನು ಜಲರೂಪದಿಂದ ಸುಖವಾಗಿ ಸಂಚಾರಮಾಡು ಎಂದು ವಿಷ್ಣುವಿನಿಂದ ಹೇಳಲ್ಪಟ್ಟ ಆ ಶುಭಪ್ರದಳಾದ ಮಂಗಳೆಯೇ ಭೂಲೋಕವನ್ನು ಸೇರಿ ಜಯಾನದಿಯ ದಡದ ಸಮೀಪದಲ್ಲಿ ವನಗಳಲ್ಲಿ ಸಂಚರಿಸಿದಳು.

ಆಹ ತಂ ನಾರಸಿಂಹಂ ಚ ವಿನಯಾವನತಾ ನೃಪ ।
ಕೇಶವಾಚ್ಯುತ ಗೋವಿಂದ ದಾಮೋದರ ಜನಾರ್ಧನ ॥ ೪೫ ॥
ರಕ್ಷ ರಕ್ಷ ಮಹಾಬಾಹೋ ತ್ವದ್ಭಕ್ತಾಂ ಗರುಡಧ್ವಜ ।
ಸಮೀಪೇ ತವ ಗೋವಿಂದ ವಸಾಮಿ ಸುರವಲ್ಲಭ ॥ ೪೬ ॥
ಪ್ರಸಾದಂ ಕುರು ವೈಕುಂಠ ಶ್ವೇತದ್ವೀಪೇ ಯಥ ತಥಾ ।
ತಯಾ ವಿಜ್ಞಾಪಿತೋ ದೇವಃ ಪ್ರಹಸನ್ನಬ್ರವೀದ್ವಚಃ ॥ ೪೭ ॥
ಶ್ರೀಭಗವಾನುವಾಚ –
ಮಂಗಳೇ ಸರ್ವಲೋಕಾನಾಂ ಭುಕ್ತಿಮುಕ್ತಿ ಪ್ರದಾಯುನೀ ।
ಸಮೀಪೇ ಮಮ ಸಂತಿಷ್ಠ ಸದಾಭೋಗ ಸಮನ್ವಿತಾ ॥ ೪೮ ॥
ಇತ್ಯುಕ್ತಾ ಸಾ ಭಗವತಾ ಮಂಗಳಾವಾಸಮಕರೋತ್ ।
ನೃಸಿಂಹಸ್ಯ ಪ್ರಸಾದೇನ ಋಷೀಣಾಂ ಚ ಪ್ರಸಾದತಃ ॥ ೪೯ ॥
ಸರ್ವೇಷಾಂ ಮೋಕ್ಷದಾ ತಸ್ಮಿನ್ ಸಿಂಹಾದ್ರೌ ವಿಚಚಾರ ಹ ।
ದೇವಸ್ಯ ವಾಮ ಪಾರ್ಶ್ವೇ ತು ಜಯಾನಾಮಾ ವಹನ್ನದೀ ॥ ೫೦ ॥
ದೇವಸ್ಯ ದಕ್ಷಿಣೇ ಭಾಗೇ ಮಂಗಳಾ ಚಾವಹತ್ತದಾ ।

ಮಂಗಳೆಯೆಂಬ ಆ ನದಿಯು ಸಿಂಹಾದ್ರಿಯಲ್ಲಿ ಸಂಚರಿಸುತ್ತಿದ್ದಾಗ, ಋಷಿಗಳಿಂದ ಸೇವಿಸಲ್ಪಟ್ಟ ಷಡ್ಗುಣೈಶ್ವರ್ಯ ಸಂಪನ್ನನಾದ ಶ್ರೀನರಸಿಂಹನು ಸಂತೋಷದಿಂದ ವಾಸಮಾಡುತ್ತಾ ಎಲ್ಲೆಲ್ಲಿಯೂ ಅರಳಿರುವ ಹೂವುಗಳ ಪಂಕ್ತಿಯನ್ನು ನೋಡುತ್ತಾ ಪರ್ವತದಲ್ಲಿ ಸಂಚರಿಸಿ, ನದೀರೂಪಳಾದ ಮಂಗಳೆಯನ್ನು ನೋಡಿದನು. ಮಂಗಳೆಯು ಆ ದೇವರಿಗೆ ನಮಸ್ಕಾರ ಮಾಡಿ ಆಶ್ಚರ್ಯಪಟ್ಟು ಕೈಗಳನ್ನು ಜೋಡಿಸಿ ನಿಂತುಕೊಂಡು ದೈನ್ಯದಿಂದ ಮಾತನಾಡುತ್ತಾ ವಿನಯದಿಂದ ಬಗ್ಗಿದವಳಾಗಿ, ಎಲೈ ಕೇಶವನೇ, ಅಚ್ಯುತನೇ, ಗೋವಿಂದನೇ, ದಾಮೋದರನೇ, ಜನಾರ್ಧನನೇ, ಮಹಾಬಾಹುವೇ, ಗರುಡಧ್ವಜನೇ, ನಿನ್ನ ಭಕ್ತಳನ್ನು ಕಾಪಾಡು. ಎಲೈ ದೇವತೆಗಳಿಗೆ ಪ್ರಿಯನಾದ ಗೋವಿಂದನೇ ನಿನ್ನ ಹತ್ತಿರ ನಾನು ಇರುತ್ತೇನೆ. ಎಲೈ ವೈಕುಂಠನೇ ಶ್ವೇತದ್ವೀಪದಲ್ಲಿ ಹೇಗೋ ಹಾಗೆ ಅನುಗ್ರಹಮಾಡು ಎಂದು ಶ್ರೀನರಸಿಂಹನಿಗೆ ಹೇಳಲು ಈ ರೀತಿ

ಜಯಾಮಂಗಳಯೋಸ್ತತ್ರ ಸಮೀಪೇ ಪರ್ವತಸ್ಯ ಚ ॥ ೫೧ ॥
ಜಾತಾ ಚ ಸಂಗತಿಶ್ಶೀಘ್ರಂ ತಯೋರ್ಮಿಲಿತಯೋಶ್ಶುಭಾ ।
ಜಯಾಮಂಗಳಯೋರ್ಯೋಗೇ ಸ್ನಾನಂ ಕುರ್ವಂತಿ ಯೇ ಜನಾಃ ॥ ೫೨ ॥
ತೇ ಸರ್ವೇ ಪಾಪನಿರ್ಮುಕ್ತಾ ಯಾಂತಿ ವಿಷ್ಣೋಃ ಪರಂ ಪದಮ್ ।
ಯೇಽತ್ರ ಸ್ನಾನಂ ಪ್ರಕುರ್ವಂತಿ ಪಿತೄಣಾಂ ಮುಕ್ತಯೇನಘ ॥ ೫೩ ॥
ತೇ ನರಾಃ ಪುಣ್ಯಶೀಲಾಶ್ಚ ಕೃತಕೃತ್ಯಾಃ ಕಲೌ ಯುಗೇ ।
ಸಿಂಹಾದ್ರೇಃ ಪರಿತಸ್ತಸ್ಯಾ ಜಯಾಯಾಶ್ಚ ಸಮೀಪತಃ ॥ ೫೪ ॥
ಪಿತೄನುದ್ದಿಶ್ಯ ಯಶ್ಶ್ರಾದ್ಧಂ ಕರೋತಿ ನೃಪಸತ್ತಮ ।
ತಸ್ಯ ಪುಣ್ಯಫಲಂ ವಕ್ಷ್ಯೇ ಶೃಣುಷ್ವ ಸುಸಮಾಹಿತಃ ॥ ೫೫ ॥
ಗಯಾಶ್ರಾದ್ಧಂ ಕೃತಂ ತೇನ ಶತಂ ಭವತಿ ಸಾಕ್ಷಯಮ್ ।
ಗೋಭೂತಿಲಹಿರಣ್ಯಾದೀನ್ ಯೋದದ್ಯಾದ್ದಾನಮುತ್ತಮಮ್ ॥ ೫೬ ॥
ಅನಂತ ಗುಣದಂ ಪ್ರೋಕ್ತಂ ತಸ್ಯಾಂ ದಾನಂ ನ ಸಂಶಯಃ ।
ಶೈಲಾಗ್ರೇತು ನೃಸಿಂಹಸ್ಯ ಪುರತೋ ಮೌಂಜಿ ಬಂಧನಮ್ ॥ ೫೭ ॥
ಯಃ ಕರೋತಿ ಸ ಧರ್ಮಾತ್ಮಾ ತಸ್ಯ ಪುತ್ರೈಸ್ತು ಕಿಂ ಫಲಮ್ ।

ಅವಳಿಂದ ವಿಜ್ಞಾಪಿಸಲ್ಪಟ್ಟ ಆ ಶ್ರೀನರಸಿಂಹನು ಮಂಗಳೆಯೇ ಸಕಲಜನರಿಗೂ ಭಕ್ತಿಯನ್ನು, ಮುಕ್ತಿಯನ್ನೂ ಕೊಡುವವಳಾಗಿ ಭೋಗಯುಕ್ತಳಾಗಿ ಯಾವಾಗಲೂ ನನ್ನ ಹತ್ತಿರ ಇರು ಎಂದು ಹೇಳಲು ಶ್ರೀನರಸಿಂಹನ ಮತ್ತು ಋಷಿಗಳ ಅನುಗ್ರಹದಿಂದ ಎಲ್ಲರಿಗೂ ಮೋಕ್ಷವನ್ನು ಕೊಡುವವಳಾಗಿ ಆ ಸಿಂಹಾದ್ರಿಯಲ್ಲಿ ಇದ್ದು ಸಂಚರಿಸುತ್ತಿದ್ದಳು. ಜಯಾ ಎಂಬ ನದಿಯು ದೇವರ ಎಡಭಾಗದಲ್ಲಿಯೂ, ಮಂಗಳೆಯು ಬಲಭಾಗದಲ್ಲಿಯೂ ಹರಿಯುತ್ತಿದ್ದವು. ಅಲ್ಲಿ ಪರ್ವತದ ಸಮೀಪದಲ್ಲಿ ಜಯಾ ಮತ್ತು ಮಂಗಳೆಯ ಮಂಗಳಕರವಾದ ಸಂಗಮವು ಜಾಗ್ರತೆಯಾಗಿ ಆಯಿತು. ಜಯಾ ಮತ್ತು ಮಂಗಳೆಯ ಸಂಗಮ ಸ್ಥಳದಲ್ಲಿ ಸ್ನಾನಮಾಡುವ ಜನರೆಲ್ಲರೂ ಪಾಪಮುಕ್ತರಾಗಿ ವಿಷ್ಣುವಿನ ಪರಮಪದವನ್ನು ಹೊಂದುವರು. ಎಲೈ ಪಾಪರಹಿತನೇ, ಅಲ್ಲಿ ಯಾರು ಪಿತೃಗಳ ಮುಕ್ತಿಗಾಗಿ ಸ್ನಾನ ಮಾಡುವರೋ ಅವರು ಕಲಿಯುಗದಲ್ಲಿ ಪುಣ್ಯಶೀಲರು,

ಯಃ ಕರೋತಿ ಸ ಧರ್ಮಾತ್ಮಾ ತಸ್ಯ ಪುತ್ರೈಸ್ತು ಕಿಂ ಫಲಮ್ ।
ವಿವಾಹಂ ಯಃ ಕರೋತ್ಯತ್ರ ಬ್ರಾಹ್ಮಣಾನಾಂ ಸುತಸ್ಯ ಚ ॥ ೫೮ ॥
ಗಂಗಾತೀರೇ ತು ಕನ್ಯಾನಾಂ ಕೋಟೀನಾಂ ಚ ವಿಶೇಷತಃ ।
ದಾನಾದ್ಯತ್ಫಲಮಾಪ್ನೋತಿ ತತ್ಫಲಂ ಲಭತೇ ನರಃ ॥ ೫೯ ॥
ಕೋಟಿಕನ್ಯಾ ಪ್ರದಾನಾತ್ತು ಗಂಗಾಯಾಂಚ ರವಿಗ್ರಹೇ ।
ಯತ್ಫಲಂ ಋಷಿಭಿಃ ಪ್ರೋಕ್ತಂ ತತ್ಫಲಂ ಲಭತೇ ನರಃ ॥ ೬೦ ॥
ಅನ್ನದಾನಂ ತು ಯಃ ಕುರ್ಯಾತ್ಸಿಂಹಾದ್ರೌ ನೃಪಪುಂಗವ ।
ತಸ್ಯ ಮುಕ್ತಿಃ ಕರಸ್ಥಾಹಿ ತಸ್ಯ ನಾಸ್ತಿ ಮಹದ್ಭಯಮ್ ॥ ೬೧ ॥
ಏಕಸ್ಯ ಚಾನ್ನದಾನೇನ ಗಿರೌ ದೇವಸ್ಯ ಸನ್ನಿಧೌ ।
ಗಂಗಾತೀರೇ ಚ ದುರ್ಭಿಕ್ಷೇ ಕೋಟಿ ಬ್ರಾಹ್ಮಣ ಭೋಜನಾತ್ ॥ ೬೨ ॥
ಯತ್ಫಲಂ ಸಮವಾಪ್ನೋತಿ ತತ್ಫಲಂ ಲಭತೇ ನರಃ ।
ಯದ್ದಾನಂ ಕುರುತೇ ತಸ್ಮಿನ್ ಗಿರೌ ತೀರ್ಥೇ ಚ ಸನ್ನಿಧೌ ॥ ೬೩ ॥
ದೇವಸ್ಯ ನಾರಸಿಂಹಸ್ಯ ಪ್ರಸಾದಾದಕ್ಷಯಂ ಭವೇತ್ ।
ಇತ್ಯೇತಸ್ಸರ್ವಮಾಖ್ಯಾತಂ ಮಯಾನೃಪವರೋತ್ತಮ ॥ ೬೪ ॥

ಕೃತಕೃತ್ಯರು ಎಲೈ ರಾಜಶ್ರೇಷ್ಠನೇ ಸಿಂಹಾದ್ರಿಯ ಸುತ್ತಲೂ ಮತ್ತು ಜಯಾನದಿಯ ಸಮೀಪದಲ್ಲಿಯೂ, ಪಿತೃಗಳನ್ನು ಉದ್ದೇಶಿಸಿ ಶ್ರಾದ್ಧವನ್ನು ಮಾಡುವವನ ಪುಣ್ಯವನ್ನು ಹೇಳುತ್ತೇನೆ ಸಾವಧಾನದಿಂದ ಕೇಳು. ಅವನಿಗೆ ಗಯಾಶ್ರಾದ್ಧದ ನೂರರಷ್ಟು ಅಕ್ಷಯವಾದ ಫಲವಾಗುತ್ತದೆ. ಆ ನದಿಯ ತೀರದಲ್ಲಿ ಗೋ, ಭೂ, ತಿಲ, ಸುವರ್ಣ ಮೊದಲಾದ ಉತ್ತಮವಾದ ದಾನಗಳನ್ನು ಮಾಡಿದರೆ ಆ ದಾನವು ಅನಂತಗುಣವುಳ್ಳದ್ದು ಎಂದು ಹೇಳಲ್ಪಟ್ಟಿದೆ. ಅದರಲ್ಲಿ ಸಂದೇಹವಿಲ್ಲ. ಆ ಪರ್ವತ ಶಿಖರದಲ್ಲಿ ನರಸಿಂಹನ ಎದುರಿಗೆ ಉಪನಯನ ಸಂಸ್ಕಾರವನ್ನು ಮಾಡುವ ಪುಣ್ಯಾತ್ಮನಿಗೆ ಮಕ್ಕಳಿಂದ ಹೆಚ್ಚು ಪ್ರಯೋಜನವು ಏನಿದೆ? ಅಲ್ಲಿ ಬ್ರಾಹ್ಮಣರ ಮಗನಿಗೆ ವಿವಾಹವನ್ನು ಮಾಡುವ ಮನುಜನು ಗಂಗಾತೀರದಲ್ಲಿ ಕೋಟಿ ಕನ್ಯಾದಾನವನ್ನು ಮಾಡುವುದರಿಂದ ಉಂಟಾಗುವ ಫಲವನ್ನು ಹೊಂದುತ್ತಾನೆ. ಮತ್ತು ಆ ಮನುಷ್ಯನು ಗಂಗಾತೀರದಲ್ಲಿ ಸೂರ್ಯಗ್ರಹಣ

ಯೇ ಶೃಣ್ವಂತಿ ಸದಾ ತಸ್ಯಾಂ ನದ್ಯಾಂ ಸ್ನಾತ್ವಾ ಸಮಾಹಿತಾಃ ।
ತೇ ಸರ್ವೇ ಪಾಪನಿರ್ಮುಕ್ತಾ ಯಾಂತಿ ವಿಷ್ಣೋಃ ಪರಂ ಪದಮ್ ॥ ೬೫

॥ ಇತಿ ಶ್ರೀ ಬ್ರಹ್ಮಾಂಡ ಪುರಾಣೇ ಶ್ರೀಕರಿಗಿರಿ ಮಾಹಾತ್ಮ್ಯೇ
ಅಷ್ಟಮೋಧ್ಯಾಯಃ ಸಮಾಪ್ತಃ ॥

ಕಾಲದಲ್ಲಿ ಕೋಟಿ ಕನ್ಯಾದಾನ ಮಾಡುವುದರುಂದ ಯಾವ ಫಲವು ಉಂಟಾಗುವುದೆಂದು ಋಷಿಗಳಿಂದ ಹೇಳಲ್ಪಟ್ಟಿದೆಯೋ ಆ ಫಲವನ್ನು ಹೊಂದುತ್ತಾನೆ. ಎಲೈ ರಾಜಶ್ರೇಷ್ಠನೇ ಸಿಂಹಾದ್ರಿಯಲ್ಲಿ ಅನ್ನದಾನವನ್ನು ಮಾಡುವವನಿಗೆ ಮುಕ್ತಿಯು ಹಸ್ತಗತವಾಗುತ್ತದೆ. ಅದಕ್ಕೆ ಭಯವೇ ಇಲ್ಲ. ಆ ಪರ್ವತದಲ್ಲಿ ದೇವರ ಸಾನ್ನಿಧ್ಯದಲ್ಲಿ ಒಬ್ಬರಿಗೆ ಅನ್ನದಾನ ಮಾಡುವುದರಿಂದ ದುರ್ಭಿಕ್ಷಕಾಲದಲ್ಲಿ ಗಂಗಾತೀರದಲ್ಲಿ ಕೋಟಿ ಬ್ರಾಹ್ಮಣ ಭೋಜನ ಮಾಡಿಸುವುದರಿಂದ ಉಂಟಾಗುವ ಫಲವನ್ನು ಹೊಂದುತ್ತಾನೆ. ಆ ಪರ್ವತದ ತೀರ್ಥದಲ್ಲಿ ನೃಸಿಂಹದೇವರ ಸನ್ನಿಧಿಯಲ್ಲಿ ಮಾಡುವ ದಾನವು ದೇವರ ಅನುಗ್ರಹದಿಂದ ಅಕ್ಷಯವಾಗುತ್ತದೆ. ಎಲೈ ರಾಜಶ್ರೇಷ್ಠನೇ ಇದೆಲ್ಲವನ್ನೂ ನಾನು ನಿನಗೆ ಹೇಳಿದೆನು. ಆ ನದಿಯಲ್ಲಿ ಸ್ನಾನಮಾಡಿ ಸಾವಧಾನದಿಂದ ಈ ಉಪಾಖ್ಯಾನವನ್ನು ಕೇಳುವ ಜನರೆಲ್ಲರೂ ಪಾಪಮುಕ್ತರಾಗಿ ವಿಷ್ಣುವಿನ ಪದವನ್ನು ಸೇರುತ್ತಾರೆ.

ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿರುವ ಕರಿಗಿರಿ ಮಹಾತ್ಮೆಯಲ್ಲಿ ಎಂಟನೆಯ ಅಧ್ಯಾಯವು ಮುಕ್ತಾಯವಾಯಿತು.

॥ ಶ್ರೀ ಸತ್ಯಾಪ್ರದ್ಯುಮ್ನಾಯ ನಮಃ ॥

ನವಮೋಧ್ಯಾಯಃ

ಶ್ರೀ ವಸಿಷ್ಠ ಉವಾಚ :
ಭೂಯಶ್ಶೃಣುಶ್ವ ಭೂಪಾಲ ಮಾಹಾತ್ಮ್ಯಂ ಪಾಪನಾಶನಮ್ ।
ಅನುಷ್ಠಾನವತಾಂ ಪುಂಸಾಂ ಕರ್ಮಗ್ರಂಥಿ ವಿಮೋಚನಮ್ ॥ ೧ ॥
ಮಂಗಳಾಯ ಪಿನಾಕಿನ್ಯಾ ಜಯಾಯಾಸ್ಸಂಗಮೇನ್ನೃಪ ।
ಯಸ್ತುಸ್ನಾನಂ ಪ್ರಕುರುತೇ ತಸ್ಯ ಪುಣ್ಯಮನಂತಕಮ್ ॥ ೨ ॥
ಸ್ನಾನಂ ದಾನಂ ತಪೋ ಹೋಮಂ ಯಃಕರೋತಿ ಸಮುಕ್ತಿಭಾಕ್ ।
ಸರ್ವ ರೋಗಯುತೋವಾಪಿ ಸರ್ವಪಾಪ ಯುತೋಪಿವಾ ॥ ೩ ॥
ಸ್ನಾನಮಾತ್ರೇಣ ನಿಷ್ಪಾಪಃ ಕುಷ್ಟರೋಗಾಚ್ಚ ಮುಚ್ಯತೇ ।
ಅತ್ರೈವೋದಾಹರಿಷ್ಯೇಽಹಂ ಇತಿಹಾಸಂ ಪುರಾತನಮ್ ॥ ೪ ॥
ಶೃಣುಶ್ವ ನೃಪಶಾರ್ದೂಲ ಕುಷ್ಟರೋಗ ವಿನಾಶನಮ್ ।

ಶ್ರೀವಸಿಷ್ಠರು ಹೇಳುತ್ತಾರೆ. ಎಲೈ ರಾಜನೇ, ಅನುಷ್ಠಾನಪರರಾದ ಕರ್ಮಗ್ರಂಥಿಯನ್ನು ಬಿಡಿಸುವ ಪಾಪವನ್ನು ಹೋಗಲಾಡಿಸುವ ಮಾಹಾತ್ಮ್ಯೆಯನ್ನು ಕೇಳು. ಜಯಾ, ಮಂಗಳಾ, ಪಿನಾಕಿನೀ ನದಿಗಳ ಸಂಗಮ ಸ್ಥಳದಲ್ಲಿ ಸ್ನಾನಮಾಡುವವನಿಗೆ ಅನಂತ ಪುಣ್ಯವು ಲಭಿಸುವುದು. ಸ್ನಾನವನ್ನೂ, ದಾನವನ್ನೂ, ತಪಸ್ಸನ್ನೂ, ಹೋಮವನ್ನೂ ಮಾಡುವವನು ಮೋಕ್ಷವನ್ನು ಪಡೆಯುವನು. ಸಕಲ ರೋಗಗಳಿಂದಲಾದರೂ ಸಕಲ ಪಾಪಗಳಿಂದಲಾದರೂ ಕೂಡಿದ್ದಾಗ್ಯೂ ಇಲ್ಲಿ ಸ್ನಾನಮಾಡಿದ ಮಾತ್ರದಿಂದಲೇ ಪಾಪಮುಕ್ತನಾಗುವುದಲ್ಲದೆ ಕುಷ್ಠರೋಗದಿಂದಲೂ ಮುಕ್ತನಾಗುತ್ತಾನೆ. ಎಲೈ ರಾಜಶ್ರೇಷ್ಠನೇ ಈ ವಿಷಯದಲ್ಲಿ ಕುಷ್ಠರೋಗ ನಿವಾರಣೆಯಾದ ಇತಿಹಾಸವನ್ನು ಹೇಳುತ್ತೇನೆ ಕೇಳು.

ಪೂರ್ವದಲ್ಲಿ ದುರಾಚಾರಿಯಾದ ನಿರ್ಮಲನೆಂಬ ಒಬ್ಬಾನೊಬ್ಬ ಬ್ರಾಹ್ಮಣನಿದ್ದನು.

ತಸ್ಯಭ್ರಾತಾ ಮಹಾಪ್ರಾಜ್ಞೋ ಜ್ಞಾನಿನಿಷ್ಠ ಇತಿ ಸ್ಮೃತಃ ।
ತಸ್ಯ ಪತ್ನೀ ಮಹಾಭಾಗ ಲಾವಣ್ಯಾದಿ ಗುಣೈರ್ಯುತಾ ॥ ೫ ॥
ತಾಂ ದೃಷ್ಟ್ವಾ ನಿರ್ಮಲೋ ರಾಜನ್ ಮೋಹಿತೋ ಭೂನ್ಮಹಾನಿಶಿ ।
ತಸ್ಯಾಂ ದೃಷ್ಟಿ ವಿನಕ್ಷೇಪನ್ನರಕೇ ಸಪಪಾತಹ ॥ ೬ ॥
ಯಾತನಾಂ ನಾರಕೀಂ ಭುಕ್ತ್ವಾ ತತೋ ಭೂಮೌ ವ್ಯಜಾಯತ ।
ಶೇಷದೋಷೇಣ ಕುಷ್ಠೋಭೂತ್ತತೋಭುವಿ ನೃಪೋತ್ತಮ ॥ ೭ ॥
ಕುಷ್ಟಂ ದ್ರುಷ್ಟ್ವಾ ಸ್ವಕೀಯಂ ಚ ವಿಷಣ್ಣೋಭೂನ್ನಿರಂತವಮ್ ।
ಅತ್ಯಂತ ದುಃಖಿತಸ್ತೇನ ಪಪೃಚ್ಛ ಮುನಿಪುಂಗವಮ್ ॥ ೮ ॥
ಲೋಮಶಂ ಲೋಕ ಸೇವ್ಯಂ ತಂ ಕುಷ್ಟಕಾರಣಮಂಜಸಾ ।
ಕಿಂಚಿಧ್ಯಾನಪರೋಭೂತ್ವಾ ತದ್ಧೇತುಂ ದೃಷ್ಟವಾನ್ಮುನಿಃ ॥ ೯ ॥
ನಿರ್ಮಲಂ ಪ್ರಾಹ ಧರ್ಮಾತ್ಮಾ ದಯಾಳುರ್ಜ್ಞಾನಸಂಯುತಃ ।
ಶೃಣುನಿರ್ಮಲ ವಕ್ಷ್ಯಾಮಿ ಕುಷ್ಟನಿರ್ಗಮಕಾರಣಮ್ ॥ ೧೦ ॥
ಮಂಗಲಾಯಾಪಿನಾಕಿನ್ಯಾ ಜಯಾಯಾಸ್ಸಂಗಮೇ ಸದಾ ।

ಅವನಿಗೆ ಮಹಾಪ್ರಜ್ಞಾಶಾಲಿಯಾದ ಜ್ಞಾನನಿಷ್ಠನೆಂಬ ಅಣ್ಣನಿದ್ದನು. ಅವನ ಹೆಂಡತಿಯು ಲಾವಣ್ಯಾದಿ ಗುಣಯುಕ್ತಳಾಗಿದ್ದಳು. ನಿರ್ಮಲನು ಆಕೆಯನ್ನು ನೋಡಿ ನಡುರಾತ್ರಿಯಲ್ಲಿ ಮೋಹಿತನಾಗಿ ಆಕೆಯ ಮೇಲೆ ಕಣ್ಣಿಟ್ಟ ಕಾರಣ ನರಕದಲ್ಲಿ ಬಿದ್ದು ಅಲ್ಲಿ ನರಕಯಾತನೆಯನ್ನನುಭವಿಸಿ ತರುವಾಯ ಭೂಲೋಕದಲ್ಲಿ ಹುಟ್ಟಿದನು. ಪಾಪಶೇಷದಿಂದ ಅವನಿಗೆ ಕುಷ್ಠರೋಗವು ಉಂಟಾಯಿತು. ತನ್ನ ಕುಷ್ಟವನ್ನು ನೋಡಿ ಸದಾ ಕ್ಲೇಶಪಡುತ್ತಾ ಅದರಿಂದ ಅತ್ಯಂತ ದುಃಖಿತನಾಗಿ ಲೋಕಸೇವ್ಯರಾದ ಲೋಮಶಮಹರ್ಷಿಯನ್ನು ಕುರಿತು ಕುಷ್ಠ ಕಾರಣವನ್ನು ಕೇಳಲು ಕೂಡಲೇ ಧ್ಯಾನಪರರಾಗಿ ಅದಕ್ಕೆ ಕಾರಣವನ್ನು ನೋಡಿ ಧರ್ಮಾತ್ಮನೂ, ದಯಾಳುವೂ, ಜ್ಞಾನಿಯೂ ಆದ ಋಷಿಯು ನಿರ್ಮಲನನ್ನು ಕುರಿತು ಎಲೈ ನಿರ್ಮಲನೇ ಕುಷ್ಠರೋಗವು ಹೋಗಲು ಉಪಾಯವನ್ನು ಹೇಳುತ್ತೇನೆ ಕೇಳು. ಜಯಾ, ಮಂಗಳಾ ಮತ್ತು ಪಿನಾಕಿನೀ ನದಿಗಳ ಸಂಗಮ ಸ್ಥಳದಲ್ಲಿ ಸ್ನಾನವನ್ನು, ದಾನವನ್ನೂ, ತಪಸ್ಸನ್ನೂ, ಹೋಮವನ್ನೂ,

ಸ್ನಾನಂ ದಾನಂ ತಪೋಹೋಮಂ ದೇವತಾಪ್ರಾರ್ಥನಾಂ ಕುರು ॥ ೧೧ ॥
ಪ್ರದಕ್ಷಿಣ ನಮಸ್ಕಾರೈಸ್ತೋಷಯಸ್ವ ಜನಾರ್ಧನಮ್ ।
ತತ್ಸಂಗಮೇ ಕುರು ಸ್ನಾನಂ ವರ್ಷಮೇಕಂ ನಿರಂತರಮ್ ॥ ೧೨ ॥
ತಥಾ ಕರಿಗಿರೌ ದೇವಂ ನಾರಸಿಂಹಂ ಸುಖಪ್ರದಮ್ ।
ಅರ್ಚಯಸ್ವ ಸದಾಸ್ನಾತ್ವಾ ಪಾದತೀರ್ಥೇ ತು ನಿರ್ಮಲಾ ॥ ೧೩ ॥
ತತೋ ಗಚ್ಛತಿ ಕುಷ್ಟಂ ವೈ ನಾತ್ರ ಕಾರ್ಯಾ ವಿಚಾರಣಾ ।
ಕುರುತಸ್ಮಾನ್ಮಹಾಭಾಗ ವರ್ಷಮೇಕಂ ನಿರಂತರಮ್ ॥ ೧೪ ॥
ಸ್ನಾನಂ ದಾನಂ ತಪೋ ಹೋಮಂ ದೇವತಾರ್ಚಾಂ ನಮಸ್ಕ್ರಿಯಾಮ್ ।
ಇತಿ ಶೃತ್ವಾ ನಿರ್ಮಲಸ್ತು ಜಯಾಮಂಗಲಯೋಸ್ಸದಾ ॥ ೧೫ ॥
ಸ್ನಾನಂ ಚಕಾರ ಧರ್ಮಾತ್ಮಾ ವರ್ಷಮೇಕಂ ನಿರಂತರಮ್ ।
ಪ್ರದಕ್ಷಿಣ ನಮಸ್ಕಾರಾನ್ ಕೃತವಾನ್ ವಿಷ್ಣವೇ ದ್ವಿಜಃ ॥ ೧೬ ॥
ಶೈಲಮಾರುಹ್ಯ ತದಂತೇ ಗಂಗಾ ಸ್ನಾನಂ ಚಕಾರಹ ।
ಕುಷ್ಟರೋಗಾದ್ವಿಮುಕ್ತೋಭೂದ್ಗಂಗಾಸ್ನಾನೇನ ತತ್ಕ್ಷಣಾತ್ ॥ ೧೭ ॥

ದೇವತಾಪ್ರಾರ್ಥನೆಯನ್ನೂ ಮಾಡಿ ಪ್ರದಕ್ಷಿಣೆ ನಮಸ್ಕಾರಗಳಿಂದ ವಿಷ್ಣುವನ್ನು ತೃಪ್ತಿಪಡಿಸುತ್ತಾ ಆ ನದಿಗಳ ಸಂಗಮಸ್ಥಳದಲ್ಲಿ ಒಂದು ವರುಷ ನಿರಂತರ ಸ್ನಾನಮಾಡುವುದಲ್ಲದೆ ಕರಿಗಿರಿ ಪರ್ವತದ ಶ್ರೀಪಾದತೀರ್ಥದಲ್ಲಿ ಸ್ನಾನಮಾಡಿ ಸುಖದಾಯಕನಾದ ಶ್ರೀನರಸಿಂಹ ದೇವರನ್ನು ಸದಾ ಪೂಜಿಸಲು ಕುಷ್ಠವು ಹೋಗುತ್ತದೆ. ಇದರಲ್ಲಿ ಸಂಶಯವಿಲ್ಲ. ಆದಕಾರಣ ಒಂದು ವರುಷ ನಿರಂತರವೂ ಸ್ನಾನವನ್ನೂ, ದಾನವನ್ನೂ, ತಪಸ್ಸನ್ನೂ, ಹೋಮವನ್ನೂ ಮತ್ತು ದೇವತಾಪೂಜೆಯನ್ನೂ ಮಾಡು ಎನ್ನಲು ಇದನ್ನು ಕೇಳಿ ನಿರ್ಮಲನು ಧರ್ಮ ಬುದ್ಧಿಯುಳ್ಳವನಾಗಿ ಜಯಾಮಂಗಳಾ ನದಿಗಳಲ್ಲಿ ಒಂದುವರುಷ ನಿರಂತರ ಸ್ನಾನವನ್ನೂ ವಿಷ್ಣುವಿಗೆ ಪ್ರದಕ್ಷಿಣೆ ನಮಸ್ಕಾರಗಳನ್ನೂ ಮಾಡಿ ಆ ಪರ್ವತವನ್ನು ಹತ್ತಿ ಅದರ ಶಿಖರದಲ್ಲಿ ಗಂಗಾಸ್ನಾನವನ್ನೂ, ಮಾಡಲು ಕೂಡಲೇ ಅವನಿಗೆ ಕುಷ್ಠರೋಗವು ಹೋಯಿತು. ಎಲೈ ರಾಜಶ್ರೇಷ್ಠನೇ ಪೂರ್ವದಲ್ಲಿ ಮಹಾ ತೇಜಸ್ವಿಯಾದ ಮೌದ್ಗಲನೆಂಬ

ಜಯಾಯಾಮಂಗಲಾಯಾಶ್ಚ ಪಿನಾಕಿನ್ಯಾಶ್ಚ ಸಂಗಮೇ ।
ಪುರಾ ಕಶ್ಚಿನ್ಮುನಿಶ್ರೇಷ್ಟ ತಪಸ್ತೇಪೇ ಮಹಾದ್ಯುತಿಃ ॥ ೧೮ ॥
ಮೌದ್ಗಲೋ ನಾಮ ರಾಜೇಂದ್ರ ಬ್ರಹ್ಮಾಣಂ ಪ್ರತಿಸತ್ತಮಃ ।
ದಶವರ್ಷೇ ಗತೇ ಬ್ರಹ್ಮ ಪ್ರಾದುರಾಸಿನ್ಮಹಾಮುನೇ ॥ ೧೯ ॥
ಮೌದ್ಗಲಂ ಸಂಪ್ರಾಹ ದೇವೇಶೋ ಮೇಘಗಂಭೀರಯಾ ಗಿರಾ ।
ವರಂ ವರಯ ಭೋ ಭದ್ರ ದಾಸ್ಯಾಮಿ ವರಮುತ್ತಮಮ್ ॥ ೨೦ ॥
ಇತ್ಯುಕ್ತೋ ಬ್ರಹ್ಮಣಾ ತೇನ ಮೌದ್ಗಲೋ ವಾಕ್ಯಮಬ್ರವೀತ್ ।
ಹರೇರ್ವೈರ್ದರ್ಶನಂ ಭೂಯಾನ್ನಾನ್ಯಂ ವಾಂಛಾಮಿ ಪದ್ಮಜ ॥ ೨೧ ॥
ಇತ್ಯುಕ್ತೋ ಮುನಿನಾ ತೇನ ಬ್ರಹ್ಮಾಚ ಪುನರಬ್ರವೀತ್ ।
ಶೃಣುತಾತ ಪ್ರವಕ್ಷ್ಯಾಮಿ ಯಾಹಿ ತ್ವಂ ಕುಸುಮಾಚಲಮ್ ॥ ೨೨ ॥
ನಂದ ಪುತ್ರಂ ಮಹಾದೈತ್ಯಂ ಪುಂಡರೀಕಂ ಮುನೀಶ್ವರ ।
ಹಂತುಮಿಚ್ಛತಿ ವೈ ಬ್ರಹ್ಮನ್ ದೇವದೇವೋ ಜನಾರ್ಧನಃ ॥ ೨೩ ॥
ಮಾಧವೋ ನಾಮ ದೇವೇಶೋ ಋಷಿಭಿಃ ಪ್ರಾರ್ಥಿತೋ ಹರಿಃ ।

ಒಬ್ಬಾನೊಬ್ಬ ಮುನಿವರನು ಜಯಾ ಮಂಗಳಾ ಪಿನಾಕಿನೀ ನದಿಗಳ ಸಂಗಮಸ್ಥಾನದಲ್ಲಿ ಬ್ರಹ್ಮನನ್ನು ಕುರಿತು ತಪಸ್ಸು ಮಾಡಿದನು ಹೀಗೆ ಹತ್ತು ವರ್ಷಗಳಾಗಲು ಆ ಮಹಾತ್ಮನಿಗೆ ಬ್ರಹ್ಮನು ಪ್ರತ್ಯಕ್ಷನಾಗಿ ಗಂಭೀರವಾಕ್ಕಿನಿಂದ ಎಲೈ ಮಂಗಳರೂಪನೇ ವರವನ್ನು ಬೇಡು, ಉತ್ತಮವಾದ ವರವನ್ನು ಕೊಡುತ್ತೇನೆ ಎಂದು ಮೌದ್ಗಲನಿಗೆ ಹೇಳಲು, ಅವನು ಎಲೈ ಬ್ರಹ್ಮನೇ ಹರಿಯ ದರ್ಶನವನ್ನು ಬಿಟ್ಟು ಬೇರೆಯಾವುದನ್ನೂ ನಾನು ಬಯಸುವುದಿಲ್ಲ ಎಂದು ಹೇಳಿದನು. ಆ ಋಷಿಯು ಹೀಗೆಂದು ಹೇಳಲು ಪುನಃ ಬ್ರಹ್ಮನು ಅವನನ್ನು ಕುರಿತು ಎಲೈ ತಂದೆಯೇ ನಾನು ಹೇಳುತ್ತೇನೆ ಕೇಳು. ನೀನು ಕುಸುಮಾಚಲಕ್ಕೆ ಹೋಗು. ದೇವ ದೇವನೂ ದುಷ್ಟಶಿಕ್ಷಕನೂ ರಮಾಕಾಂತನೂ ಆದ ವಿಷ್ಣುವು ಋಷಿಗಳಿಂದ ಪ್ರಾರ್ಥಿತನಾಗಿ ನಂದ ಪುತ್ರನಾದ ಪುಂಡರೀಕನೆಂಬ ಮಹಾರಾಕ್ಷಸನನ್ನು ಕೊಲ್ಲಲಿಚ್ಛಿಸಿ ಸಕಲ ತೀರ್ಥಗಳಿಂದ ಅಲಂಕೃತವಾದ ಆ ಮಹಾಪರ್ವತಕ್ಕೆ ಬಂದಾಗ ನಿನಗೆ ಹರಿಯ ದರ್ಶನವಾಗುತ್ತದೆಂದು ಹೇಳಿದನು.

ಯದಾ ಯಾತಿ ಮಹಾಶ್ಶೈಲಂ ಸರ್ವತೀರ್ಥೈರಲಂಕೃತಮ್ ॥ ೨೪ ॥
ತದಾ ತ್ವಂ ಪಶ್ಯಸಿ ಬ್ರಹ್ಮನ್ ತಸ್ಮಾದ್ಗಚ್ಛ ಮಹಾಗಿರಿಮ್ ।
ಶ್ರೀ ವಸಿಷ್ಠ ಉವಾಚ :
ಇತ್ಯುಕ್ತೋ ಬ್ರಹ್ಮಣಾ ತೇನ ಯಯೌ ಸ ಕುಸುಮಾಚಲಮ್ ॥ ೨೫ ॥
ಏತಸ್ಮಿನಂತರೇ ರಾಜನ್ ಪುಂಡರೀಕೋ ಮಹಾಸುರಃ ।
ಋಷೀಣಾಂ ಪೀಡನಂ ಚಕ್ರೇ ದುಃಸಹಂ ಧಾರುಣಂ ಭೃಶಮ್ ॥ ೨೬ ॥
ಯದಾ ಪೀಡನಂ ಚಕ್ರೇ ಪುಂಡರೀಕೋ ಮಹಾಸುರಃ ।
ತದಾ ತು ಮುನಯಸ್ಸರ್ವೇ ಕುಸುಮಾಚಲ ಸಂಸ್ಥಿತಾಃ ।
ಶಿರಸ್ಯಂಜಲಿಮಾದಾಯ ಸ್ಮೃತ್ವಾದೇವಂ ಜನಾರ್ಧನಮ್ ॥ ೨೭ ॥
ರುರುದುರ್ಮುನಿಶಾರ್ದೂಲ ದುಃಖಿತಾಃ ಕಾತರಾಭೃ್ರಶಮ್ ।
ತದಾ ದೇವೋ ಮಹಾವಿಷ್ಣುಃ ಋಷೀಣಾಮಾರ್ತನಿಸ್ವನಮ್ ॥ ೨೮ ॥
ಶೃತ್ವಾ ತದ್ಗತಿರ್ವಿಷ್ಣುರಾಯಯೌ ಕುಸುಮಾಚಲಮ್ ।
ಶಂಖಚಕ್ರಗದಾಪದ್ಮೈಸ್ಸಂಯುತೋ ಮಾಧವೋ ಹರಿಃ ॥ ೨೯ ॥

ಶ್ರೀ ವಸಿಷ್ಠರು ಹೇಳುತ್ತಾರೆ. ಬ್ರಹ್ಮನು ಹೀಗೆ ಹೇಳಲು ಮೌದ್ಗಲನು ಕುಸುಮಾಚಲಕ್ಕೆ ಹೋದನು. ಎಲೈ ರಾಜನೇ ಇಷ್ಟರಲ್ಲಿಯೆ ಪುಂಡರೀಕನೆಂಬ ರಾಕ್ಷಸನು ಋಷಿಗಳಿಗೆ ಸಹಿಸಲಶಕ್ಯವಾದ, ಅತ್ಯಂತಕ್ರೂರವಾದ ಹಿಂಸೆಯನ್ನು ಮಾಡಿದನು. ಆಗ ಕುಸುಮಾಚಲದಲ್ಲಿದ್ದ ಋಷಿಗಳೆಲ್ಲರೂ ತಲೆಯಮೇಲೆ ಕೈಗಳನ್ನು ಜೋಡಿಸಿ ವಿಷ್ಣುವನ್ನು ಸ್ಮರಿಸಿ ಬಹಳ ಕಾತರರಾಗಿ ದುಃಖಿಸುತ್ತಾ ರೋದನಮಾಡಿದರು. ಆಗ ಮಹಾವಿಷ್ಣುವು ಋಷಿಗಳ ಆರ್ತಧ್ವನಿಯನ್ನು ಕೇಳಿ ಶಂಖಚಕ್ರಗದಾಪದ್ಮಯುಕ್ತನಾಗಿ ಈಶ್ವರ, ಬ್ರಹ್ಮ, ಇಂದ್ರ, ವೊದಲಾದವರೊಡನೆ ಅತಿವೇಗದಿಂದ ಕುಸುಮಾಚಲಕ್ಕೆ ಬಂದು ಪುಂಡರೀಕನನ್ನು ನೋಡಿ ಅವನೊಡನೆ ಯುದ್ಧಮಾಡಿ ಮಹಾಸೈನ್ಯವುಳ್ಳ ಆ ರಾಕ್ಷಸನ ತಲೆಯನ್ನು ಚಕ್ರದಿಂದ ಕತ್ತರಿಸಿದನು. ಜನಾರ್ಧನನು ಆ ರಾಕ್ಷಸನನ್ನು ಸಂಹಾರಮಾಡಿದ ಪ್ರದೇಶವು ಋಷಿಗಳಿಗೆ ಪುಣ್ಯಪ್ರದವಾದದು. ಆ ಕ್ಷೇತ್ರವೂ ಆ ತೀರ್ಥವೂ ಜನರಿಗೆ ಸುಖವನ್ನುಂಟುಮಾಡುವುವು. ಅದು ಸಂಗಮಸ್ಥಾನವಾಗಿರುವುದರಿಂದ ಆ ತೀರ್ಥವು

ಭವಬ್ರಹ್ಮ ಸುರೇಶಾದ್ಯೈ ಸಂಯುತೋ ಜಗಧೀಶ್ವರಃ ।
ಆಜಗಾಮ ಮಹೀಪಾಲ ಕುಸುಮಾದ್ರಿಂ ಮಹಾಮತಿಃ ॥ ೩೦ ॥
ಪುಂಡರೀಕಂ ತದಾ ದೃಷ್ಟ್ವಾ ಯುದ್ಧಂ ತೇನ ಚಕಾರಹ ।
ಶಿರಶ್ಚಿಚ್ಛೇದ ಚಕ್ರೇಣ ಮಹಾನೀಕಸ್ಯ ಮಾಧವಃ ॥ ೩೧ ॥
ಯಸ್ಮಿನ್ ದೇಶೇ ನೃಪಶ್ರೇಷ್ಠ ವಧಂ ಚಕ್ರೇ ಜನಾರ್ಧನಃ ।
ತದ್ದೇಶಂ ತು ಮುನೀನಾಂವೈ ಪುಣ್ಯದಂ ನೃಪಸತ್ತಮ ॥ ೩೨ ॥
ಪುಣ್ಯಕ್ಷೇತ್ರಂ ಪುಣ್ಯತೀರ್ಥಂ ತತ್ತೀರ್ಥಂ ಸುಖದಂ ನೃಣಾಮ್ ।
ಪುಣ್ಯಕ್ಷೇತ್ರಂ ಪುಣ್ಯತೀರ್ಥಂ ತೋಯಂ ಸಂಗೋಸ್ತಿ ತತ್ರವೈ ॥ ೩೩ ॥
ತಸ್ಮಾತ್ ಸರ್ವಪ್ರಯತ್ನೇನ ತತ್ರ ಸ್ನಾನಂ ಚರೇದ್ಬುಧಃ ।
ಸರ್ವ ದಾನೇಷು ಯತ್ಪುಣ್ಯಂ ಸರ್ವತೀರ್ಥೇಷು ಯತ್ಫಲಮ್ ॥ ೩೪ ॥
ತತ್ಫಲಂ ಸಮವಾಪ್ನೋತಿ ಕುಸುಮಾಚಲ ದರ್ಶನಾತ್ ।
ತತ್ರ ತೀರ್ಥ ಸದೃಶಂ ನಭೂತಂ ನ ಭವಿಷ್ಯತಿ ॥ ೩೫ ॥
ಶ್ರೀ ರಾಜೋವಾಚ :

ಪುಣ್ಯತೀರ್ಥ. ಆ ಕ್ಷೇತ್ರವು ಪುಣ್ಯಕ್ಷೇತ್ರವು ಆದಕಾರಣ ತಿಳಿದವರು ಸರ್ವಪ್ರಯತ್ನದಿಂದಲೂ ಅಲ್ಲಿ ಸ್ನಾನವನ್ನು ಮಾಡಬೇಕು. ದಾನಗಳಲ್ಲಿ ಯಾವ ಪುಣ್ಯವೂ, ಸಮಸ್ತತೀರ್ಥಗಳಲ್ಲಿ ಯಾವ ಫಲವೂ ಉಂಟೋ ಆದು ಕುಸುಮಾಚಲ ದರ್ಶನದಿಂದ ಉಂಟಾಗುತ್ತದೆ. ಅಲ್ಲಿರುವ ತೀರ್ಥಗಳಿಗೆ ಸಮಾನವಾದದ್ದು ಹಿಂದೆ ಯಾವುದೂ ಇರಲಿಲ್ಲ. ಮುಂದೆ ಇರುವುದೂ ಇಲ್ಲ ಎಂದರು.

ಶ್ರೀ ರಾಜನು ಕೇಳುತ್ತಾನೆ. ತಾಪಸಶ್ರೇಷ್ಠನಾದ ಎಲೈ ವಸಿಷ್ಠನೇ, ಕುಸುಮಾದ್ರಿ ಎಂದು ನೀನು ಹೇಳಿದೆಯಲ್ಲ. ಅದು ಭೂಲೋಕದಲ್ಲಿ ಏಕೆ ಪ್ರಖ್ಯಾತವಾಯಿತು. ಎಲೈ ಋಷಿಶ್ರೇಷ್ಠನೇ ಅದರ ಹೆಸರುಗಳನ್ನು ಕಿವಿಯಲ್ಲಿ ಕೇಳಲು ನಿನ್ನನ್ನು ಪ್ರಶ್ನೆಮಾಡುತ್ತೇನೆ. ಸರ್ವಜ್ಞನಾದ ಋಷಿವರ್ಯನೇ ಅದೆಲ್ಲವನ್ನೂ ನನಗೆ ವಿಸ್ತಾರವಾಗಿ ಹೇಳು ಅಂದನು.

ವಸಿಷ್ಠ ತಾಪಸಶ್ರೇಷ್ಠ ಕುಸುಮಾದ್ರಿಃ ಕಿಲೇತಿಚ ।
ಉಕ್ತಸ್ತ್ವಯಾ ಗಿರಿಬ್ರಹ್ಮನ್ ಕಿಮರ್ಥಂ ಪ್ರಾರ್ಥಿತೋ ಭುವಿ ॥ ೩೬ ॥
ಅಸ್ಯನಾಮಾನ್ಯಹಂ ಶ್ರೋತುಮಿಚ್ಛಾಮಿ ಮುನಿಸತ್ತಮ ।
ವದಸರ್ವಜ್ಞ ಮೇ ಸರ್ವಂ ವಿಸ್ತಾರಾನ್ಮುನಿಸತ್ತಮ ॥ ೩೭ ॥
ಶೃಣುರಾಜನ್ ಪ್ರವಕ್ಷ್ಯಾಮಿ ತಸ್ಯನಾಮಾನಿ ಸುವ್ರತ ।
ಯದಾ ನಾರಾಯಣೋ ದೇವಃ ಪುಂಡರೀಕಂ ನಿಜಘ್ನವಾನ್ ॥ ೩೮ ॥
ತದಾ ದೇವಾಸ್ಸಗಂಧರ್ವಾಃ ಋಷಯಶ್ಚ ಸಕಿನ್ನರಾಃ ।
ಹರಿಂ ಸಮೇತ್ಯ ತೇ ಸರ್ವೇ ವವೃಷು ಕುಸುಮೈರ್ಗಿರಿಮ್ ॥ ೩೯ ॥
ಹರಿಂ ಚ ಸಹ ಸರ್ವೇಷಂ ಕುಸುಮೈರಾಕಿರಂ ಸ್ತದಾ ।
ಅಬ್ರುವನ್ ಸರ್ವದೇವಾಶ್ಚ ಕುಸುಮಾದ್ರಿರಿತಿಸ್ಮವೈ ॥ ೪೦ ॥
ತದಾಪ್ರಭೃತಿ ಲೋಕೇತು ಕುಸುಮಾಚಲ ನಾಮಕಃ ।
ಕೃತೇಯುಗೇ ಪ್ರಸಿದ್ಧೋಭೂದುತ್ಕೀಲೋ ಲೋಕವಿಶ್ರುತಃ ॥ ೪೧ ॥
ತ್ರೇತಾಖ್ಯೇ ಚ ಯುಗೇ ದೇವೈ ಸಿಂಹಾದ್ರಿರಿತಿಚೋಚ್ಯತೇ ।

ಶ್ರೀ ವಸಿಷ್ಠರು ಹೇಳುತ್ತಾರೆ. ಸದಾಚಾರಸಂಪನ್ನನಾದ ಎಲೈ ರಾಜನೇ ಅದರ ಹೆಸರುಗಳನ್ನು ಹೇಳುತ್ತೇನೆ ಕೇಳು. ನಾರಾಯಣನು ಪುಂಡರೀಕಾಸುರನನ್ನು ಕೊಲ್ಲಲು ಆಗ ಋಷಿಗಳಿಂದಲೂ ಗಂಧರ್ವರಿಂದಲೂ ಕಿನ್ನರರಿಂದಲೂ ಕೂಡಿದ ದೇವತೆಗಳು ಹರಿಯ ಬಳಿಗೆ ಬಂದು ಅವರೆಲ್ಲರೂ ಆ ಪರ್ವತದ ಮೇಲೂ ಸರ್ವೇಶ್ವರನಾದ ಹರಿಯಮೇಲೆ ನಾನಾವಿಧ ದೇವತಾ ಕುಸುಮಗಳನ್ನು ಚೆಲ್ಲಿದರು. ಅಂದಿನಿಂದ ಸಕಲ ದೇವತೆಗಳೂ ಅದನ್ನು ಕುಸುಮಾಚಲವೆಂಬ ಹೆಸರಿನಿಂದ ಕರೆದರು. ಅದು ಮೊದಲುಗೊಂಡು ಲೋಕದಲ್ಲಿ ಕುಸುಮಾಚಲವೆಂಬ ಹೆಸರಿನಿಂದ ಪ್ರಖ್ಯಾತವಾಯಿತು. ಕೃತಯುಗದಲ್ಲಿ ಉತ್ಕೀಲವೆಂದು ಪ್ರಸಿದ್ಧಿಯನ್ನು ಹೊಂದಿತ್ತು. ತ್ರೇತಾಯುಗದಲ್ಲಿ ದೇವತೆಗಳು ಸಿಂಹಾದ್ರಿ ಎಂದು ಹೇಳುತ್ತಿದ್ದರು. ದ್ವಾಪರಯುಗದಲ್ಲಿ ಸಕಲ ಸಿದ್ಧರೂ ಸಿದ್ಧಿಯನ್ನು ಕೊಡುವ ಪರ್ವತವೆಂದು ಹೇಳುವುದರಿಂದ ಸಮಸ್ತ ಲೋಕಗಳಲ್ಲಿಯೂ ಸಿದ್ಧಗಿರಿ ಎಂದು ಖ್ಯಾತಿಗೊಂಡಿತು, ಎಲೈ ರಾಜಶ್ರೇಷ್ಠನೇ ಋಷಿಗಳಿಗೂ ದೇವತೆಗಳಿಗೂ

ದ್ವಾಪರೇ ಸರ್ವಸಿದ್ಧ್ಯೈಶ್ಚ ಪ್ರೋಚ್ಯತೆ ಸಿದ್ಧಿದೋ ಗಿರಿಃ ॥ ೪೨ ॥
ಅಥ ಸ್ಸಿದ್ಧಗಿರಿರ್ನಾಮ ಸರ್ವಲೋಕೇಷು ವಿಶ್ರುತಃ ।
ಕಲೌ ಯುಗೇ ತದಾ ದೇವೈಃ ಋಷಿಭಿಸ್ಸಂಶ್ರಿತೋ ಗಿರಿಃ ॥ ೪೩ ॥
ತಥಾ ಚ ಗಜರೂಪತ್ವಾತ್ ನಾಮ್ನಾ ಕರಿಗಿರಿರ್ಭುವಿ ।
ಕಥ್ಯತೇ ನೃಪಶಾರ್ದೂಲ ದೇವರ್ಷಿಪಿತೃಮಾನವೈಃ ॥ ೪೪ ॥
ಗಜಾಚಲಸ್ಯ ಮಾಹಾತ್ಮ್ಯಂ ವರ್ಣಿತುಂ ಕೇನ ಶಕ್ಯತೆ ।
ತಸ್ಮಾತ್ಸರ್ವ ಪ್ರಯತ್ನೇನ ಕುಸುಮಾದ್ರೌ ಸದಾ ವಸೇತ್ ॥ ೪೫ ॥
ಅತ್ರ ತೀರ್ಥೇಷು ಸರ್ವೇಷು ಸ್ನಾನಮಾವಶ್ಯಕಂ ನೃಣಾಮ್ ।
ಕುಸುಮಾಚಲ ತೀರ್ಥೇಷು ಯೇ ನಿಮಜ್ಯಂತಿ ಮಾನವಾಃ ॥ ೪೬ ॥
ತೇ ಧನ್ಯಾಃ ಕೃತಿನೋ ಲೋಕೇ ಮುಕ್ತಾ ಏವ ನ ಸಂಶಯಃ ।
ಯೇ ಚ ದಾನಾನಿ ಕುರ್ವಂತಿ ಕುಸುಮಾದ್ರೌ ಚ ಮಾನವಾಃ ॥ ೪೭ ॥
ತೇ ಸರ್ವೇ ಪಾಪ ನಿರ್ಮುಕ್ತಾಃ ಯಾಂತಿ ವಿಷ್ಣೋಃ ಪರಂ ಪದಮ್ ॥

॥ ಇತಿ ಶ್ರೀ ಬ್ರಹ್ಮಾಂಡಪುರಾಣೇ ಶ್ರೀ ಕರಿಗಿರಿ ಮಾಹಾತ್ಮ್ಯೇ
ನವಮೋದ್ಯಾಯಃ ಸಮಾಪ್ತಃ ॥

ಆಶ್ರಯುವಾದ ಆ ಪರ್ವತವು ಗಜರೂಪ ಉಳ್ಳದ್ದಾದ ಕಾರಣ ಕಲಿಯುಗದಲ್ಲಿ ದೇವತೆಗಳೂ ಋಷಿಗಳೂ ಪಿತೃದೇವತೆಗಳೂ ಮನುಷ್ಯರೂ ಅದನ್ನು ಕರಿಗಿರಿ ಎಂದು ಕರೆಯುತ್ತಾರೆ. ಗಜಾಚಲದ ಮಹಿಮೆಯನ್ನು ವರ್ಣಿಸಲು ಯಾರಿಗೆ ಶಕ್ಯವು. ಆದುದರಿಂದ ಸರ್ವಪ್ರಯತ್ನದಿಂದಲೂ ಕುಸುಮಾಚಲದಲ್ಲಿ ಸದಾ ವಾಸಮಾಡಬೇಕು.ಅಲ್ಲಿರುವ ಸಮಸ್ತ ತೀರ್ಥಗಳಲ್ಲಿಯೂ ಜನರಿಗೆ ಸ್ನಾನವು ಅವಶ್ಯಕವು. ಕುಸುಮಾಚಲದ ತೀರ್ಥಗಳಲ್ಲಿ ಸ್ನಾನಮಾಡುವ ಜನರೇ ಲೋಕದಲ್ಲಿ ಧನ್ಯರು ಕುಶಲರು ಮತ್ತು ಮುಕ್ತರು. ಇದರಲ್ಲಿ ಸಂದೇಹವಿಲ್ಲ. ಕುಸುಮಾಚಲದಲ್ಲಿ ದಾನಗಳನ್ನು ಮಾಡುವ ಜನರೆಲ್ಲರೂ ಪಾಪಮುಕ್ತರಾಗಿ ವಿಷ್ಣುವಿನ ಪರಮಪದಕ್ಕೆ ಹೋಗುತ್ತಾರೆ.

ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿರುವ ಕರಿಗಿರಿ ಮಹಾತ್ಮೆಯಲ್ಲಿ ಒಂಬತ್ತನೆಯ ಅಧ್ಯಾಯವು ಮುಕ್ತಾಯವಾಯಿತು.

॥ ಶ್ರೀ ಹಿರಣ್ಯಾಸಂಕರ್ಷಣಾಯ ನಮಃ ॥

ದಶಮೋಽಧ್ಯಾಯಃ

ಶ್ರೀರಾಜೋವಾಚ :
ವಸಿಷ್ಠಶೃಣುಮದ್ವಾಕ್ಯಂ ತ್ವಯಾಪ್ಯುಕ್ತಂ ಪುರಾ ದ್ವಿಜಾ ।
ಬ್ರಹ್ಮಾಪರಾಶರೋ ವ್ಯಾಸಃ ಶುಕಶೌನಕ ಏವಚ ॥ ೧ ॥
ದೂರ್ವಾಸಾ ನಾರದಾಶ್ಚೈವ ಯೇಚಾನ್ಯೇ ಮುನಿಪುಂಗವಾಃ ।
ನಾರಸಿಂಹಂ ಸ ಲಕ್ಷ್ಮೀಕಂ ಪೂಜಯಾಮಾಸುರುತ್ತಮಾಃ ॥ ೨ ॥
ಇತಿ ಶೃತಂ ಮಯಾ ವಿಪ್ರ ನ ಶೃತಂ ರಾಜಸತ್ತಮೈಃ ।
ಕೃತಾಪರೇಶ್ಚ ಸೇವಾತು ಕಿಮರ್ಥಂ ಮುನಿಸತ್ತಮ ॥ ೩ ॥
ಪೂರ್ವಜೈರ್ಕುಲಜೈರ್ಭೂಪೈಃ ಇಕ್ಷ್ವಾಕುಪ್ರಮುಖೈರಪಿ ।
ನ ಸೇವಿತಃ ಕಿಮರ್ಥಂ ವೈ ಅದ್ರಿಃ ಪುಣ್ಯತಮಃ ಪುರಾ ॥ ೪ ॥
ಶ್ರೀ ವಸಿಷ್ಠ ಉವಾಚ :
ಶೃಣು ಭೂಪ ಪ್ರವಕ್ಷ್ಯಾಮಿ ಭೂಪಾನಾಂ ಭೂರಿತೇಜಸಾಮ್ ।

ಶ್ರೀರಾಜನು ಕೇಳುತ್ತಾನೆ. ಎಲೈ ವಸಿಷ್ಠನೇ ನನ್ನ ಮಾತನ್ನು ಆಲಿಸು. ಪೂರ್ವದಲ್ಲಿ ಬ್ರಹ್ಮ ಪರಾಶರ ವ್ಯಾಸ ಶುಕ ಶೌನಕ ದೂರ್ವಾಸ ನಾರದರೂ ಇನ್ನೂ ಇತರ ಋಷಿಶ್ರೇಷ್ಠರೂ ಲಕ್ಷ್ಮೀಸಮೇತನಾದ ನರಸಿಂಹನನ್ನು ಪೂಜಿಸಿದರೆಂದು ನೀನು ಹೇಳಿದ್ದನ್ನು ನಾನು ಕೇಳಿದೆನು. ಎಲೈ ಮುನಿವರ್ಯರೇ ರಾಜಶ್ರೇಷ್ಠರು ಹರಿಸೇವೆಯನ್ನು ಮಾಡಿದ್ದನ್ನು ಮೊದಲಿದ್ದ ಕುಲೀನರಾದ ಇಕ್ಷ್ವಾಕು ಮೊದಲಾದ ರಾಜರಿಂದ ಪುಣ್ಯತಮವಾದ ಆ ಪರ್ವತವು ಏಕೆ ಸೇವಿಸಲಡಲಿಲ್ಲ? ಎಂಬುದನ್ನು ನಾನು ಕೇಳಬಯಸುತ್ತೇನೆ.

ಶ್ರೀ ವಸಿಷ್ಠರು ರಾಜನ ಮಾತಿಗೆ ಈ ರೀತಿ ಹೇಳುತ್ತಾರೆ. ಎಲೈ ರಾಜನೇ ಸರ್ವಲೋಕ ಪ್ರಸಿದ್ಧವಾದ ಮಹಾಪರಾಕ್ರಮಶಾಲಿಗಳಾದ ರಾಜರ ಕಥೆಯನ್ನು ಹೇಳುತ್ತೇನೆ ಕೇಳು.

ಕಥಾಂ ತವ ಮಹಾಭಾಗ ಸರ್ವಲೋಕೇಷು ವಿಶ್ರುತಾಮ್ ॥ ೫ ॥
ಆಸೀತ್ಪೂರ್ವಂ ಮನೋಃ ಪುತ್ರಃ ವಿವಸ್ವಾನೀತಿ ವಿಶ್ರುತಃ ।
ತಸ್ಯ ಪುತ್ರ ಮಹಾಪ್ರಾಜ್ಞಾ ಅಭೂವನ್ನೃಪಸತ್ತಮ ॥ ೬ ॥
ಇಕ್ಷ್ವಾಕು ನೃಗಶರ್ಯಾತಿ ನಾಭಾಗಾ ಇತಿಚಾಪರೇ ।
ತೇಷಾಂ ಮಧ್ಯೇ ಮಹಾಪ್ರಾಜ್ಞೋ ವಿಷ್ಣುಭಕ್ತೋ ನೃಪೋತ್ತಮಃ ॥ ೭ ॥
ಇಕ್ಷ್ವಾಕುಶ್ಚ ಮಹಾರಾಜಾ ಬ್ರಹ್ಮಣಾ ಬೋಧಿತೋ ನೃಪಃ ।
ಕ್ಷೇತ್ರಾಣಾಂ ಚ ನದೀನಾಂ ಚ ತಿರ್ಥಾನಾಂ ಚ ಪರಂತಪ ॥ ೮ ॥
ಆಯಯೌ ಕ್ಷೇತ್ರ ತೀರ್ಥಾನಿ ದೇವತಾಯತನಾನಿ ಚ ।
ನಾರಾಯಣಾಶ್ರಮಂ ಚೈವ ಹರಿದ್ವಾರಂ ತಥೈವ ಚ ॥ ೯ ॥
ದ್ವಾರಕಾಂ ಚ ಕುರುಕ್ಷೇತ್ರಂ ತಥಾ ಕಾಶಿಂ ನರೇಶ್ವರ ।
ಪ್ರಯಾಗಂ ಚ ಗಯಾಂಯಾಂ ಚ ಅಯೋಧ್ಯಾಂ ಮಥುರಾಂ ತಥಾ ॥
ಕುರುಕ್ಷೇತ್ರಂ ಚ ಕೇದಾರಂ ಗಂಡಕೀಂ ಸುಮನೋಹರಾಮ್ ।
ಜಗನ್ನಾಥಂ ಚ ತೋತಾದ್ರಿಂ ಶ್ರೀಶೈಲಂ ಪುಷ್ಕರಂ ತಥಾ ॥ ೧೧ ॥
ವೈಕುಂಠಾದ್ರಿಂ ಮಹಾಪುಣ್ಯಂ ಯಾದವಾದ್ರಿಂ ನರೇಶ್ವರ ।

ಪೂರ್ವದಲ್ಲಿ ಪ್ರಸಿದ್ಧನಾದ ವಿವಸ್ವಂತನೆಂಬ ಮನುಪುತ್ರನಿದ್ದನು. ಅವನಿಗೆ ಮಹಾಪ್ರಾಜ್ಞರಾದ ಇಕ್ಷ್ವಾಕು, ನೃಗ, ಶರ್ಯಾತಿ, ನಾಭಾಗ ಎಂಬುವರೂ ಇನ್ನೂ ಇತರ ಮಕ್ಕಳೂ ಇದ್ದರು. ಅವರಲ್ಲಿ ಬಹು ಪ್ರಜ್ಞಾಶಾಲಿಯೂ ವಿಷ್ಣುಭಕ್ತನೂ ಆದ ಇಕ್ಷ್ವಾಕು ಮಹಾರಾಜನು ಬ್ರಹ್ಮ ಭೋಧಿತನಾಗಿ ಕ್ಷೇತ್ರಗಳ ನದಿಗಳ ಮತ್ತು ತೀರ್ಥಗಳ ಮಹಿಮೆಯನ್ನು ಕೇಳಿ ಕ್ಷೇತ್ರಗಳಿಗೂ ತೀರ್ಥಗಳಿಗೂ ದೇವಸ್ಥಾನಗಳಿಗೂ ಬಂದನು. ಹಾಗೆಯೇ ಧರ್ಮ ಪರಾಯಣನಾದ ಆ ರಾಜನು ನಾರಾಯಣಾಶ್ರಮ, ಹರಿದ್ವಾರ, ದ್ವಾರಕಾ, ಕುರುಕ್ಷೇತ್ರ, ಕಾಶೀ, ಪ್ರಯಾಗ, ಗಯೆ, ಅಯೋಧ್ಯಾ, ಮಥುರಾ, ಕೇದಾರ, ರಮಣೀಯವಾದ ಗಂಡಕೀ, ಜಗನ್ನಾಥ, ತೋತಾದ್ರಿ, ಶ್ರೀಶೈಲ, ಪುಷ್ಕರ , ಮಹಾ ಪುಣ್ಯಕರವಾದ ವೈಕುಂಠಾದ್ರಿ, ಯಾದವಾದ್ರಿ, ಕಾಂಚೀಪುರಿ, ಶ್ರೀಮುಷ್ಣಂ, ಅರುಣಾದ್ರಿ, ಸಕಲರಿಗೂ ಪುಣ್ಯಪ್ರದವಾದ ಮನುಜರಿಗೆ ದುರ್ಲಭವಾದ ವೃದ್ಧಾಚಲ, ಚಿದಂಬರ,

ಕಾಂಚೀಪುರೀಂ ಚ ಶ್ರೀಮುಷ್ಣಂ ಅರುಣಾದ್ರಿಂ ಮಹಾಗಿರಿಮ್ ॥ ೧೨ ॥
ವೃದ್ಧಾಚಲಂ ಚ ಸರ್ವೇಷಾಂ ಪುಣ್ಯದಂ ಶುಭದಂ ನೃಣಾಮ್ ।
ಚಿದಂಬರಂ ಕುಂಭಕೋಣಂ ಸಾರಕ್ಷೇತ್ರಂ ತಥೈವ ಚ ॥ ೧೩ ॥
ಮಧ್ಯಾರ್ಜುನಂ ರಂಗನಾಥಂ ಕೃಷ್ಣಕ್ಷೇತ್ರಂ ತಥೈವ ಚ ।
ಸೌಖ್ಯದಂ ದರ್ಭಶಯನಂ ಸೇತುಂ ಶಂಖಮುಖೀಂ ತಥಾ ॥ ೧೪ ॥
ಅನಂತಶಯನಂ ಚಾಽಥ ಕನ್ಯಾಕುಮಾರಿನಾಮಕಮ್ ।
ಜನಾರ್ಧನಂ ಚ ಗೋಕರ್ಣಂ ಕುಮಾರಪರ್ವತಂ ನೃಪ ॥ ೧೫ ॥
ಸುಬ್ರಹ್ಮಣ್ಯಂ ಪುಣ್ಯತೀರ್ಥಂ ಶೃಂಗೇರೀಂ ಚ ಪರಂತಪ ।
ಉಡುಪಂ ಯದುನಾಥೇನ ಅನಂತೇಶ್ವರ ಸಂಜ್ಞಿಕಮ್ ॥ ೧೬ ॥
ವಾಸಿತಂ ಸುಖದಂ ನೃಣಾಂ ಕಲೌ ಕಲಿಮಲಾಪಹಮ್ ।
ಕೋಟೇಶ್ವರಂ ಚ ಸುಕ್ಷೇತ್ರಂ ಹರಿಶಂಕರ ನಾಮಕಮ್ ॥ ೧೭ ॥
ಮೂಕಾಂಬಿಕಾ ಮಹಾಶೈಲಂ ಕಿಷ್ಕಿಂಧಾಂ ನಾಮವೈಗಿರಿಮ್ ।
ಮಾಲ್ಯವಂತಂ ಮತಂಗಂ ಚ ಹೇಮಕೂಟಂ ತಥೈವಚ ॥ ೧೮ ॥
ಶ್ರೀವೈಕುಂಠಂ ಜಂಬುನಾಥಂ ಭೂಮಿಪಾಲಂ ತಥೈವಚ ।

ಕುಂಭಘೋಣ, ಸಾರಕ್ಷೇತ್ರ, ಮಧ್ಯಾರ್ಜುನ, ರಂಗನಾಥ, ಕೃಷ್ಣಕ್ಷೇತ್ರ, ಸುಖಪ್ರದವಾದ ದರ್ಭಶಯನ, ಅನಂತಶಯನ, ಕನ್ಯಾಕುಮಾರಿ, ಜನಾರ್ಧನ, ಗೋಕರ್ಣ, ಕುಮಾರಪರ್ವತ, ಪುಣ್ಯತೀರ್ಥಗಳುಳ್ಳ ಸುಬ್ರಹ್ಮಣ್ಯ, ಶೃಂಗೇರೀ, ಕೃಷ್ಣವಾಸಸ್ಥಾನವಾದ ಜನರಿಗೆ ಸುಖವನ್ನುಂಟುಮಾಡುವ ಕಲಿಪಾಪನಾಶಕವಾದ ಉಡುಪಿ, ಅನಂತಶಯನ, ಕೋಟೇಶ್ವರ, ಹರಿಶಂಕರಕ್ಷೇತ್ರ, ಮೂಕಾಂಬಾ, ಕಿಷ್ಕಿಂಧಾ, ಮಾಲ್ಯವಂತ ಪರ್ವತ, ಮತಂಗ, ಹೇಮಕೂಟ, ವೈಕುಂಠ, ಜಂಬುನಾಥ, ಭೂಮಿಪಾಲ, ವಿಜಯಾಸನ, ಸುಖಪ್ರದವಾದ ದೇವೇಶ, ಸಕಲದೇವತೆಗಳಿಂದಲೂ, ವಿಧ್ವಾಂಸರಿಂದಲೂ ಸೇವಿಸಲ್ಪಟ್ಟ ಸರ್ವಾಭೀಷ್ಟವನ್ನೂ ಕೊಡುವ ಮಧುಸೂದನಕ್ಷೇತ್ರ, ವಿಶ್ವೇಶ್ವರ, ಚೋಳನಾಥ, ಪುಣ್ಯತಮ ತೀರ್ಥಗಳಿಂದ ವಿಶಿಷ್ಟವಾದ ಅಲ್ಲಘಾದ್ರಿ, ತೀರ್ಥಾದ್ರಿ, ಮಲಯಾಚಲ, ಗಜೇಂದ್ರಮೋಕ್ಷ, ಮಧುರಾಪುರಿ, ಶ್ವೇತಪರ್ವತ, ಚಿತ್ರಕೂಟ ಪರ್ವತ, ಗೋಪಾಲರಿಗೆ

ವಿಜಯಾಸನ ನಾಮಾನಂ ದೇವೇಶಂ ಚ ಸುಖಪ್ರದಮ್ ॥ ೧೯ ॥
ದೇವಂ ಚ ಸರ್ವದೇವೈಶ್ಚ ಸೇವಿತಂ ಚ ಮನೀಷಿಭಿಃ ।
ಮಧುಸೂದನ ನಾಮಾನಂ ಕ್ಷೇತ್ರಂ ಸರ್ವಾರ್ಥದಾಯಕಮ್ ॥ ೨೦ ॥
ವಿಶ್ವೇಶಂ ಚೋಳನಾಥಂ ಚ ವಿಶ್ವಸಂಜ್ಞಂ ಸುತೀರ್ಥಕಮ್ ।
ಅಲ್ಲಘಾದ್ರಿಂ ಮಹಾಕ್ಷೇತ್ರಂ ತೀರ್ಥಾದ್ರಿಂ ಮಲಯಾಚಲಮ್ ॥ ೨೧ ॥
ಗಜೇಂದ್ರಮೋಕ್ಷನಾಮಾನಂ ಮಧುರಾಖ್ಯ ಪುರೀನ್ನೃಪ ।
ಪರ್ವತಂ ಶ್ವೇತನಾಮಾನಂ ಚಿತ್ರಕೂಟಂ ತಥೈವಚ ॥ ೨೨ ॥
ಗೋವರ್ಧನ ಗಿರಿಂಚೈವ ಗೋಪಾಲಾನಾಂ ಸುಖಪ್ರದಮ್ ।
ಮಂಗಳಾದ್ರಿ ನೃಸಿಂಹೇನ ಆಶ್ರಿತಂ ಸುಮನೋಹರಮ್ ॥ ೨೩ ॥
ಪಿನಾಕಿನ್ಯಾಶ್ಚ ತೀರೇಚ ಸಂಸ್ಥಿತಂ ಪುಣ್ಯವರ್ಧನಮ್ ।
ತ್ರಿವಿಕ್ರಮಾಖ್ಯ ದೇವೇನ ವಾಮನೇನ ಸಮಾಶ್ರಿತಮ್ ॥ ೨೪ ॥
ನಂದೀಶ್ವರಂ ಚ ಸರ್ವೇಷಾಂ ಆನಂದವೃದ್ಧಿದಂ ತಥಾ ।
ಅಹೋಬಲಂ ಚ ಸುಕ್ಷೇತ್ರಂ ನಾರಸಿಂಹೈ ಸಮಾಶ್ರಿತಮ್ ॥ ೨೫ ॥
ಕಾವೇರೀತೀರ ಸಂಸ್ಥಾನಿ ಕ್ಷೇತ್ರಾಣಿ ವಿವಿಧಾನಿ ಚ ।

ಸುಖದಾಯಕವಾದ ಗೋವರ್ಧನ ಪರ್ವತ, ಪಿನಾಕಿನೀತೀರದಲ್ಲಿರುವ ಪುಣ್ಯವನ್ನು ಹೆಚ್ಚಿಸುವ ನರಸಿಂಹನಿಗೆ ಆಶ್ರಯವಾದ ಮನೋಹರವಾದ ಮಂಗಳಾದ್ರಿ, ತ್ರಿವಿಕ್ರಮಾಖ್ಯನಾದ ವಾಮನನಿಗೆ ವಾಸಸ್ಥಾನವಾದ ಸರ್ವರಿಗೂ ಆನಂದವೃದ್ಧಿ ಮಾಡುವ ನಂದೀಶ್ವರ, ನಾರಸಿಂಹ ಸಮಾಶ್ರಿತವಾದ ದಿವ್ಯವಾದ ಅಹೋಬಲಕ್ಷೇತ್ರ, ಕಾವೇರೀ ತೀರದಲ್ಲಿರುವ ವಿವಿಧಕ್ಷೇತ್ರಗಳು, ಗೌತಮ, ರಂಗನಾಥ ಮುಂತಾದ ಮಹಾಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಉತ್ತಮವಾದ ಧರ್ಮವನ್ನು ಮಾಡಿ ಬ್ರಹ್ಮಾಂಡಪುರಾಣದ ಕ್ಷೇತ್ರಕಾಂಡದಲ್ಲಿ ವರ್ಣಿಸಲ್ಪಟ್ಟ ಶ್ರೀನೃಸಿಂಹನ ವಾಸಸ್ಥಾನವಾದ ಮಂಗಳಕರವಾದ ಹಸ್ತಿನಾಮಕ ಪರ್ವತವನ್ನು ಕೇಳಿ ಋಷಿಗಳಿಂದ ಬೋಧಿಸಲ್ಪಟ್ಟು ಉತ್ಕೀಲಕ್ಕೂ, ಋಷಿಗಳಿಂದ ವಾಸಮಾಡಲ್ಪಟ್ಟ ಮತ್ತು ಇಷ್ಟಾರ್ಥಗಳನ್ನು ಕೊಡುವ ಉತ್ಕೀಲನಾಮಕ ಕುಸುಮಾಚಲಕ್ಕೂ ಬಂದನು. ಋಷಿಗಳು ಮತ್ತು ದೇವತೆಗಳ ಸಮೂಹಗಳಿಂದ

ತತ್ರಾಪಿ ಚ ಮಹಾಕ್ಷೇತ್ರಂ ಗೌತಮಾಖ್ಯಂ ನೃಪೋತ್ತಮಮ್ ॥ ೨೬ ॥
ರಂಗನಾಥಂ ಸಮಾಸಾದ್ಯ ರಾಜಾ ಧರ್ಮಪರಾಯಣಃ ।
ತತ್ರ ತತ್ರ ಮಹಾರಾಜಾ ಕೃತವಾನ್ ಧರ್ಮಮುತ್ತಮಮ್ ॥ ೨೭ ॥
ಕ್ಷೇತ್ರಖಾಂಡೇತು ಬ್ರಹ್ಮಾಂಡ ಪುರಾಣೇ ವಿಶ್ರುತಂ ಶುಭಮ್ ।
ಶೃತ್ವಾ ಗಿರಿಂ ನೃಸಿಂಹೇನ ಸೇವಿತಂ ನಾಗನಾಮಕಮ್ ॥ ೨೮ ॥
ಬೋಧಿತೋ ಋಷಿಭಿಶ್ಚೈವ ಉತ್ಕೀಲಂ ಚ ಸಮಾಯಯೌ ।
ಕುಸುಮಾದ್ರಿಂ ಚ ಋಷಿಭಿರಧ್ಯಾಸಿತಮಭೀಷ್ಟದಮ್ ॥ ೨೯ ॥
ಋಷಿದೇವ ಗಣೈಶ್ಚೈವ ಸೇವಿತಂ ಸುಮನೋಹರಮ್ ।
ಸಿದ್ಧಚಾರಣ ಗಂಧರ್ವೈರ್ವಿದ್ಯಾಧರ ಮಹೋರಗೈಃ ॥ ೩೦ ॥
ಸೇವಾರ್ಥಮಾಗತೈರನ್ಯೈಸ್ತೂರ್ಣಂ ಚ ಹರಿಸನ್ನಿಧಿಮ್ ।
ನೃಸಿಂಹೇನ ಸದಾರಾಜನ್ ಬ್ರಹ್ಮಣಾಸಮಲಂಕೃತಮ್ ॥ ೩೧ ॥
ಆಸಾದ್ಯ ತಂ ಗಿರಿಂ ಭೂಪಃ ಸ್ನಾತ್ವಾತೀರ್ಥೇ ಸುನಿರ್ಮಲಃ ।
ಋಷೇರ್ದೂರ್ವಾಸ ಸಂಸ್ನಾತಃ ಶ್ರುತವಾನ್ರಾಜಸತ್ತಮಃ ॥ ೩೨ ॥
ಲೋಕೇಪ್ರಸಿದ್ಧಂ ಸುಖದಂ ಮಾಹಾತ್ಮ್ಯಂ ಪುಣ್ಯದಂ ಶುಭಮ್ ।

ಸೇವಿಸಲ್ಪಟ್ಟ ಮನೋಹರವಾದ ಈ ಪರ್ವತದಲ್ಲಿ ಸೇವೆಗೋಸ್ಕರ ಜಾಗ್ರತೆಯಾಗಿ ಹರಿಸನ್ನಿಧಿಗೆ ಬಂದ ಸಿದ್ಧಚಾರಣ ಗಂಧರ್ವ ವಿಧ್ಯಾಧರ-ಮಹೋರಗಳಿಂದಲೂ, (ಶ್ರೇಷ್ಠ ಸರ್ಪಗಳು) ಶ್ರೀಬ್ರಹ್ಮದೇವರಿಂದಲೂ ಕೂಡಿದ ಈ ಶ್ರೀನೃಸಿಂಹನ ಪರ್ವತಕ್ಕೆ ರಾಜನು ಬಂದು ತೀರ್ಥದಲ್ಲಿ ಸ್ನಾನಮಾಡಿ ನಿರ್ಮಲನಾಗಿ ಲೋಕಪ್ರಸಿದ್ಧವಾದ ಸುಖವನ್ನು, ಪುಣ್ಯವನ್ನೂ ಉಂಟುಮಾಡುವ ಮಂಗಳಕರವಾದ ಮಹಾತ್ಮ್ಯೆಯನ್ನೂ ದೂರ್ವಾಸ ಋಷಿಯಿಂದ ಕೇಳಿ ಆದರ ಉಳ್ಳವನಾಗಿ ಧರ್ಮಾತ್ಮನೂ, ಧರ್ಮಜ್ಞನೂ ಆದ ಆ ಇಕ್ಷ್ವಾಕು ಮಹಾರಾಜನು ಋಷಿಗಳೊಡನೆ ಹರಿಯನ್ನು ಸೇವಿಸಿದನು. ಗೋ, ಭೂ, ಎಳ್ಳು, ಚಿನ್ನ ಮೊದಲಾದವುಗಳನ್ನು ಬ್ರಾಹ್ಮಣರಿಗೆ ದಾನ ಕೊಟ್ಟು ತನ್ನ ಮಂತ್ರಿಗಳಿಂದ ಸೇವಿಸಲ್ಪಡುತ್ತಾ ತನ್ನ ರಾಜ್ಯಕ್ಕೆ ಹೋದನು.

ಎಲ್ಲೈ ರಾಜನೇ ನಹುಷ, ಯಯಾತಿ ಮೊದಲಾದ ರಾಜರು ಆ ಪರ್ವತಕ್ಕೆ ಬಂದು

ಶ್ರುತ್ವಾ ಧೃತೋಮಹಾರಾಜಾ ಇಕ್ಷ್ವಾಕುಸ್ಸಹರಿಂ ತದಾ ॥ ೩೩ ॥
ಅರ್ಚಯಾಮಾಸ ಧರ್ಮಾತ್ಮಾ ಋಷಿಭಿಸ್ಸಹಧರ್ಮವಿತ್ ।
ಗೋಭೂತಿಲಹಿರಣ್ಯಾದೀನ್ ಬ್ರಾಹ್ಮಣೇಭ್ಯಃ ಪ್ರದತ್ತವಾನ್ ॥ ೩೪ ॥
ಗತವಾನ್ ಸ್ವಪುರೀಂ ತಾತ ಸೇವ್ಯಮಾನಸ್ಸ್ವಮಂತ್ರಿಭಿಃ ।
ನಹುಷಶ್ಚ ಯಯಾತಿಶ್ಚ ಯದುಶ್ಚ ನೃಪಸತ್ತಮ ॥ ೩೫ ॥
ಪ್ರಾಪ್ಯಶೈಲಂ ಮಹಾಪುಣ್ಯಂ ನಾರಸಿಂಹಂ ಜನಾರ್ದನಮ್ ।
ಪೂಜಯಾಮಾಸುರವ್ಯಗ್ರ ರಾಜಾನೋ ಪೃಥಿವೀಪತೇ ॥ ೩೬ ॥
ಅಂಬರೀಶೋ ನಲೋ ರಾಜಾ ಪುರುಕುತ್ಸುಪುರೂರವಾಃ ।
ಪೃಥುಶ್ಚ ಸಗರೋ ನಾಮ ಧ್ರುವಃ ಪರಮಧಾರ್ಮಿಕಃ ॥ ೩೭ ॥
ಪಾಂಡವೇಯಾಶ್ಚ ಕೃಷ್ಣೇನ ಸಹಿತಾಸ್ತಂ ಗಿರಿಂ ಯಯುಃ ।
ತೀರ್ಥೇಷು ತೇಷು ಸುಸ್ನಾತ್ವಾ ನರಸಿಂಹಂ ಮಹಾಪ್ರಭುಮ್ ॥ ೩೮ ॥
ಅರ್ಚಯಾಮಾಸುರೇವ್ಯೈತೇ ಋಷೀಣಾ ಶಿಕ್ಷಿತಾಸ್ತದಾ ।
ಹರಿಂ ದೃಷ್ಟ್ವಾಥ ದಾನಾನಿ ದತ್ವಾ ವಿಪ್ರಾನ್ ಪ್ರಪೂಜ್ಯಚ ॥ ೩೯ ॥
ಗತ್ವಾ ಸರ್ವೇ ನೃಪವರಾಃ ಸ್ವಪುರೀಂ ನೃಪಪುಂಗವ ।

ಚಿತ್ತೈಕಾಗ್ರತೆಯಿಂದ ಶ್ರೀನರಸಿಂಹನನ್ನು ಪೂಜೆಮಾಡಿದರು. ಅಂಬರೀಶ, ನಳ, ಪುರುಕುತ್ಸ, ಪುರೂರವ, ಪೃಥು, ಸಗರ, ಧರ್ಮಿಷ್ಠನಾದ ಧ್ರುವ ಮತ್ತು ಪಾಂಡುಪುತ್ರರು ಕೃಷ್ಣನೊಡನೆ ಆ ಪರ್ವತಕ್ಕೆ ಬಂದು ಋಷಿಚೋದಿತರಾಗಿ ತೀರ್ಥಗಳಲ್ಲಿ ಸ್ನಾನಮಾಡಿ ನರಸಿಂಹನನ್ನು ಪೂಜಿಸಿ ಹರಿದರ್ಶನವನ್ನು ಮಾಡಿ ಹಾಗೂ ಬ್ರಾಹ್ಮಣರ ಪೂಜೆಮಾಡಿ ದಾನಗಳನ್ನು ಕೊಟ್ಟು ಆ ರಾಜಶ್ರೇಷ್ಠರೆಲ್ಲರೂ ತಮ್ಮ ತಮ್ಮ ಪಟ್ಟಣಕ್ಕೆ ಹೊರಟುಹೋದರು. ಧರ್ಮಾತ್ಮನಾದ ಶ್ರೀರಾಮಚಂದ್ರನೂ ಆ ಪರ್ವತವನ್ನು ಸೇರಿ ಆಶ್ಚರ್ಯಪಟ್ಟು ಅಲ್ಲಿರುವ ತೀರ್ಥಗಳಲ್ಲಿ ಸ್ನಾನ ಮಾಡಿ ಗಂಧರ್ವನಿಗೂ, ಮನುಷ್ಯರಿಗೂ ಗತಿಯನ್ನು ಕೊಟ್ಟನು. ಆ ಸಿಂಹಾದ್ರಿಯಲ್ಲಿ ರಾಮನೂ ಪೂಜೆಮಾಡಿದನು. ರಾಜರ್ಷಿಯಾದ ಜನಮೇಜಯ ಮಹಾರಾಯನೂ ವೈಶಂಪಾಯನರಿಂದ ಬೋಧಿಸಲ್ಪಟ್ಟು ಅದ್ಭುತವಾದ ಆ ಪರ್ವತಕ್ಕೆ ಪರಿವಾರಸಮೇತ ಬಂದು ಪೂಜೆಮಾಡಿದನೆಂದು ಈ ಕಥೆಯನ್ನು ಪೂರ್ವದಲ್ಲಿ ನಾನು ಬ್ರಹ್ಮದೇವರಿಂದ ಕೇಳಿದೆನು.

ರಾಮದೇವಸ್ತು ಧರ್ಮಾತ್ಮಾ ಶೈಲಂ ಪ್ರಾಪ್ಯ ಸುವಿಸ್ಮಿತಃ ॥ ೪೦ ॥
ಗಂಧರ್ವಸ್ಯ ಗತಿಂ ಪ್ರಾದಾತ್ತೀರ್ಥೇ ಸ್ನಾತ್ವಾ ನೃಣಾಮಪಿ ।
ಅರ್ಚಯಾಮಾಸ ರಾಮೋಽಪಿ ಶೈಲೇಽಸ್ಮಿನ್ ಸಿಂಹನಾಮಕೇ ॥ ೪೧ ॥
ಜನಮೇಜಯಸ್ತು ರಾಜರ್ಷಿಃ ಸಾನುಗೋಗಿರಿಮದ್ಭುತಮ್ ।
ಸಮಾಯಯೌ ನೃಪಶ್ರೇಷ್ಠ ವೈಶಂಪಾಯನ ಬೋಧಿತಃ ॥ ೪೨ ॥
ಪೂಜಯಾಮಾಸ ಧರ್ಮಜ್ಞೋ ಜನಮೇಜಯ ಭೂಪತಿಃ ।
ಇತಿ ಪೂರ್ವಂ ಮಹಾರಾಜಾ ಬ್ರಹ್ಮಣಾ ಚ ಶೃತಾಕಥಾ ॥ ೪೩ ॥
ತಾಂ ತು ನೂನಮಹಂ ವೇದ್ಮಿ ಹರೇಶ್ಚ ಚರಿತಂ ಮಹತ್ ।
ನಜಾನಾಸಿ ಮಹಾರಾಜಾ ಇದಾನೀಂ ಶ್ರುತವಾನಸಿ ॥ ೪೪ ॥
ಗಚ್ಛ ಶೈಲಂ ನರಪತೇ ಪೂರ್ವಜೈಶ್ಚ ಸುಸೇವಿತಮ್ ।
ತತ್ರ ತೀರ್ಥೇಷು ಸರ್ವೇಷು ಸ್ನಾನಮಾಚರ ಸುವ್ರತ ॥ ೪೫ ॥
ನಾರಸಿಂಹಂ ಸಲಕ್ಷ್ಮೀಕಂ ಸಿಂಹಾಸನ ವರೇಸ್ಥಿತಮ್ ।
ಮಧುಪರ್ಕೈರರ್ಘ್ಯಪಾದ್ಯೈಃ ಸ್ನಾನವಸ್ತ್ರಾದಿಭಿರ್ಹರಿಮ್ ॥ ೪೬ ॥
ಕಿರೀಟನೂಪುರೈಶ್ಚೈವ ಕುಂಡಲೈಸ್ಸುಮನೋಹರೈಃ ।

ಆ ಕಥೆಯನ್ನು, ಹರಿಯಮಹಾಚರಿತ್ರೆಯನ್ನೂ, ನಾನು ಬಲ್ಲೆ ಅದು ನಿಶ್ಚಯ. ಎಲೈ ಮಹಾರಾಜನೆ, ಅದು ನಿನಗೆ ತಿಳಿಯದು ನೀನು ಈಗ ಅದನ್ನು ಕೇಳಿದಿ. ಎಲೈ ರಾಜನೆ, ಹಿರಿಯರಿಂದ ಸೇವಿಸಲ್ಪಟ್ಟ ಆ ಪರ್ವತಕ್ಕೆ ನೀನೂ ಹೋಗಿ ಅಲ್ಲಿ ಸಕಲ ತೀರ್ಥಗಳಲ್ಲಿಯೂ, ಸ್ನಾನಮಾಡಿ ಸಿಂಹಾಸನಾರೂಢನಾದ ಲಕ್ಷ್ಮೀಸಮೇತನಾದ ಶ್ರೀನರಸಿಂಹನನ್ನು ಮಧುಪರ್ಕಗಳಿಂದಲೂ, ಅರ್ಘ್ಯಪಾದ್ಯಾದಿಗಳಿಂದಲೂ ವಸ್ತ್ರಮೊದಲಾದವುಗಳಿಂದಲೂ ಕಿರೀಟ ಕಾಲಂದುಗೆಗಳಿಂದಲೂ, ಮನೊಹರವಾದ ಕುಂಡಲಗಳಿಂದಲೂ, ಭುಜಕೀರ್ತಿಗಳಿಂದಲೂ, ಕಂಕಣಗಳಿಂದಲೂ, ಮುತ್ತುಗಳಿಂದ ಒಪ್ಪುತ್ತಿರುವ ಹಾರಗಳಿಂದಲೂ, ಗಂಧಾಕ್ಷತೆಗಳಿಂದಲೂ, ದಿವ್ಯವಾದ ಷಡ್ರಸಾನ್ನಗಳಿಂದಲೂ, ಧೂಪ-ದೀಪಗಳಿಂದಲೂ, ಪ್ರದಕ್ಷಿಣೆ- ನಮಸ್ಕಾರಗಳಿಂದಲೂ, ನಾಟ್ಯಗಳಿಂದಲೂ, ಚೆನ್ನಾಗಿ ಆರಾಧಿಸಲ್ಪಟ್ಟ ಶ್ರೀನರಸಿಂಹನನ್ನು ಒಳ್ಳೆಯ ಭಕ್ತಿಯಿಂದ

ಅಂಗದೈಃ ಕಂಕಣೈಶ್ಚೈವ ಹಾರೈರ್ಮೌಕ್ತಿಕ ರಂಜಿತೈಃ ॥ ೪೭ ॥
ಗಂಧಾಕ್ಷತೈಶ್ಚ ತಾಂಬೂಲೈಃ ಷಡ್ರಸಾನ್ನೈರ್ಮನೋರಮ್ಯೈಃ ।
ಧೂಪದೀಪೈಸ್ಸಚ್ಚರಿತೈರ್ಮಂತ್ರಪುಷ್ಪೈರ್ಮನೋರಮ್ಯೈಃ ॥ ೪೮ ॥
ಪ್ರದಕ್ಷಿಣನಮಸ್ಕಾರರ್ನಟನೈಶ್ಚ ಸುಸಂಸ್ಕೃತಮ್ ।
ನಾರಸಿಂಹಂ ಸದಾರಾಜನ್ ಸಮರ್ಚಯ ಸುಭಕ್ತಿತಃ ॥ ೪೯ ॥
ಅರ್ಚಿತೇತು ಮಹಾರಾಜಾ ಭಗವಾನ್ ಭೂತಭಾವನಃ ।
ಸಂತುಷ್ಟೋ ದಾಸ್ಯತಿ ತದ ಕೈವಲ್ಯಂ ಸೌಖ್ಯದಂ ನೃಣಾಮ್ ॥ ೫೦ ॥
ಇತಿ ಸರ್ವಂ ಮಯಾ ಖ್ಯಾತಂ ರಾಜ್ಞಾಂ ಚ ಚರಿತಂ ಶುಭಮ್ ।
ಇತಃ ಪರಂ ಚ ರಾಜೇಂದ್ರ ಕಿಮನ್ಯಃ ಶ್ರೋತುಮಿಚ್ಛಸಿ ॥ ೫೧ ॥
ಶ್ರೀ ರಾಜೋವಾಚ :
ಅಸೌ ಗಿರಿರ್ದ್ವಿಜಶ್ರೇಷ್ಠ ಮನುಜೈರಖಿಲೈರಪಿ ।
ಶೇಷಸಿಂಹ ಗಜಾಕಾರೈರ್ವೈನತೇಯ ಇವಾಪರೈಃ ॥ ೫೨ ॥
ದೃಶ್ಯತೇತಿ ತ್ವಯಾಪ್ಯುಕ್ತೋ ಪೂರ್ವಂ ಭೂಧರಮುತ್ತಮಃ ।
ಕಿಂ ಕಾರಣಂ ಮಮ ಬ್ರೂಹಿ ರೂಪಾಣಾಂ ಚ ಗತಿಂ ಪ್ರಭೋ ॥ ೫೪ ॥

ಪೂಜಿಸು. ಎಲೈ ರಾಜನೇ, ಹರಿಯನ್ನು ಇಂತು ಪೂಜಿಸಲು ಭೂತಭಾವನನಾದ ಆ ಭಗವಂತನು ಸಂತುಷ್ಟನಾಗಿ ಮನುಷ್ಯರಿಗೆ ಸುಖವನ್ನುಂಟು ಮಾಡುವ ಜೊತೆಗೆ ಮೋಕ್ಷವನ್ನೂ ಕೊಡುತ್ತಾನೆ. ಈ ಮಂಗಳಕರವಾದ ಚಕ್ರವರ್ತಿಗಳ ಚರಿತ್ರೆಯು ನನ್ನಿಂದ ಹೇಳಲ್ಪಟ್ಟಿತು. ಎಲೈ ರಾಜಶ್ರೇಷ್ಟನೆ ಇದಲ್ಲದೇ ಬೇರೆ ಯಾವುದನ್ನು ಕೇಳಲಿಚ್ಛೈಸುತ್ತೀ ಎಂದನು.

ಎಲೈ ದ್ವಿಜವರನೇ, ಶ್ರೇಷ್ಠವಾದ ಈ ಪರ್ವತವು ಶೇಷ, ಸಿಂಹ, ಗಜ, ಮತ್ತು ಗರುಡಾಕಾರವಾಗಿಯೂ ಸಕಲ ಜನರಿಗೂ ಇಂದಿಗೂ ಕಾಣಿಸುತ್ತದೆ. ಎಂದು ನೀನು ಹೇಳಿದಯಲ್ಲವೆ ಅದಕ್ಕೆ ಕಾರಣವನ್ನೂ ಆ ರೂಪಗಳ ವೃತ್ತಾಂತವನ್ನೂ ನನಗೆ ಹೇಳೆಂದು ರಾಜನು ಕೇಳಲು ಶ್ರೀ ವಸಿಷ್ಠರು ಈ ರೀತಿ ಹೇಳುತ್ತಾರೆ.

ಎಲೈ ರಾಜವಂಶೋತ್ಪನ್ನನೇ, ಆ ರೂಪಗಳನ್ನು ಚೆನ್ನಾಗಿ ಹೇಳುತ್ತೇನೆ ಕೇಳು.

ಶ್ರೀ ವಸಿಷ್ಠ ಉವಾಚ :
ಆಕಾರಾನ್ಸಂಪ್ರವಕ್ಷ್ಯಾಮಿ ಶೃಣು ರಾಜ ಕುಲೋದ್ಭವ ।
ಪರ್ವತಶ್ಚ ಮಹಾಭಾಗ ಕುಸುಮಾಚಲ ನಾಮಕಃ ॥ ೫೫ ॥
ಪ್ರಾಜ್ಞಾಂ ದಿಶಿ ನೃಪಶ್ರೇಷ್ಠ ವಾರಣಾಕಾರವದ್ಭುವಿ ।
ಯಸ್ಮಾತ್ಪೂರ್ವಂ ತು ಶಾಪೇನ ಗಜೋಭೂತ್ವಾ ವಸದ್ಗಿರೌ ॥ ೫೬ ॥
ತಸ್ಮಾತ್ ಕರಿಗಿರಿರಿತಿ ಪ್ರೋಚ್ಯತೇ ಋಷಿಭಿಸ್ಸದಾ ।
ದ್ವಿರದೋಪಿ ಗಿರೌ ಯಸ್ಮಾನ್ಮೃತಿಂ ಪ್ರಾಪ್ತಸ್ವಕರ್ಮಣಾ ॥ ೫೭ ॥
ತಸ್ಮಾದ್ರಾಜನ್ ಸದಾಸರ್ವೈರ್ದೃಶ್ಯತೇ ಮನುಜೋತ್ತಮೈಃ ।
ಪೂರ್ವಸ್ಯಾಂದಿಶಿ ಶೈಲೋಸೌ ನಾಗರೂಪೇಣ ಸತ್ತಮ ॥ ೫೮ ॥
ದೃಶ್ಯತೆದಿಶಿಯಾಮ್ಯಾಂ ಅನಂತಾಕಾರವದ್ಗಿರಿಃ ।
ಶಾಪದೋಶೇಣ ಯುಕ್ತೋಭೂತ್ತಸ್ಮಾಫಣಿವಿರೂಪತಃ ॥ ೫೯ ॥
ವಸಿಷ್ಠ ವದತಾಂ ಶ್ರೇಷ್ಠ ಜ್ಞಾನನಿಷ್ಠ ತಪೋಧನ ।
ಸರ್ವಂ ತ್ವಂ ವೇತ್ಸಿಭಗವನ್ ಭೂತಂ ಭವ್ಯಂ ಭವಶ್ಚಯತ್ ॥ ೬೦ ॥
ತಸ್ಮಾದ್ಬ್ರೂಹಿ ಮಹಾಭಾಗ ಅನಂತಸ್ಯ ಮಹಾತ್ಮನಃ ।

ಕುಸುಮಾಚಲವೆಂಬ ಪರ್ವತವು ಭೂಲೋಕದಲ್ಲಿ ಪೂರ್ವದಿಕ್ಕಿನಲ್ಲಿ ಆನೆಯ ಆಕಾರವಾಗಿ ಕಾಣಿಸುತ್ತದೆ. ಪೂರ್ವದಲ್ಲಿ ಶಾಪದಿಂದ ಆನೆಯಾಗಿ ದೇವದತ್ತ-ಧನಂಜಯರು ಆ ಪರ್ವತದಲ್ಲಿ ವಾಸಮಾಡಿದ್ದರಿಂದ ಋಷಿಗಳು ಅದನ್ನು ಸದಾ ಕರಿಗಿರಿ ಎಂದು ಅನ್ನುತ್ತಾರೆ. ಆ ಆನೆಯೂ ತನ್ನ ಕರ್ಮಾನುಸಾರವಾಗಿ ಆ ಬೆಟ್ಟದಲ್ಲಿ ಮರಣವನ್ನೈದಿದ ಕಾರಣ ಸಕಲಜನರಿಗೂ ಸದಾ ಆ ಪರ್ವತವು ಪೂರ್ವದಿಕ್ಕಿನಲ್ಲಿ ಆನೆಯರೂಪವಾಗಿ ಕಾಣಿಸುತ್ತದೆ. ಆ ಪರ್ವತವು ಶೇಷನ ಶಾಪದೊಷದಿಂದ ದಕ್ಷಿಣದಿಕ್ಕಿನಲ್ಲಿ ಶೇಷಾಕಾರವಾಗಿ ಕಾಣಿಸುತ್ತದೆ ಎಂದು.

ಶ್ರೀರಾಜನು ವಸಿಷ್ಠರನ್ನು ಈ ರೀತಿ ಪ್ರಶ್ನಿಸುತ್ತಾನೆ. ವಕ್ತೃಶ್ರೇಷ್ಠನೂ, ಜ್ಞಾನನಿಷ್ಠನೂ, ತಪೋಧನನೂ, ಷಡ್ಗುಣೈಶ್ವರ್ಯಸಂಪನ್ನನೂ ಆದ ಎಲೈ ವಸಿಷ್ಠನೆ, ನೀನು ವರ್ತಮಾನ, ಭೂತ, ಭವಿಷ್ಯತ್ತು ಎಲ್ಲವನ್ನೂ ತಿಳಿದವನಾದ ಕಾರಣ, ಮಹಾತ್ಮನಾದ

ಕಿಮರ್ಥಂ ಶಾಪಮೋಕ್ಷೋಭೂತ್ಕೇನಪೂರ್ವಂ ತು ದಂಡಿತಃ ॥ ೬೧ ॥
ಏತದ್ವಿಸ್ತಾರ್ಯ ಮೇ ಬ್ರೂಹಿ ಶಾಪಕಾರಣ ಮಂಜಸಾ ।
ಶ್ರೀಋಷಿರುವಾಚ :
ಶೃಣುರಾಜನ್ ಮಹಾಭಾಗ ಶೇಷಶಾಪಸ್ಯಕಾರಣಮ್ ।
ವಕ್ಷ್ಯಾಮಿ ನೃಪಶಾರ್ದೂಲ ಸಂವಾದಂ ಋಷಿಶೇಷಯೋಃ ॥ ೬೨ ॥
ದ್ವಾಪರೇತು ಯುಗೇ ತಸ್ಮಿನ್ ಕೃಷ್ಣಃ ಕಮಲಲೋಚನಃ ।
ಶೋಣಿತಾಖ್ಯ ಪುರೇರಾಜನ್ ಸ್ಥಿತಾನಾಂ ಚ ಮಹೌಜಸಾಮ್ ॥ ೬೩ ॥
ರಾಕ್ಷಸಾನಾಂ ವಧಾರ್ಥಾಯ ಪ್ರತಸ್ಥೇ ಬಲಸಂಯುತಃ ।
ಯಾತೇ ಕೃಷ್ಣೇಚ ಮಾರ್ಗೇತು ದದರ್ಶ ಋಷಿಸತ್ತಮಮ್ ॥ ೬೪ ॥
ತೃತನಾಮ್ನಾ ಭುವಿಖ್ಯಾತಂ ವೇದವೇದಾಂಗ ಪಾರಗಮ್ ।
ತಂ ದೃಷ್ಟ್ವಾ ಭಗವಾನ್ ಕೃಷ್ಣಃ ಪ್ರಣಮ್ಯ ಮುನಿಸತ್ತಮಮ್ ॥ ೬೫ ॥
ಉವಾಚ ಪರಮಪ್ರೀತೋ ಹರ್ಷಯನ್ಮುನಿಸತ್ತಮಮ್ ।
ಶ್ರೀ ಭಗವಾನುವಾಚ :
ಋಷಿವರ್ಯ ಮಹಾಪ್ರಾಜ್ಞ ಶೃಣುಮದ್ವಾಕ್ಯಮುತ್ತಮಮ್ ॥ ೬೬ ॥

ಶೇಷನಿಗೆ ಯಾರಿಂದ ಏಕೆ ಶಾಪ ಬಂತು ಎಂಬುದನ್ನು ವಿಸ್ತಾರವಾಗಿ ಜಾಗ್ರತೆಯಾಗಿ ನನಗೆ ಹೇಳು ಎಂದು ರಾಜನು ಅಂದನು.
ಶ್ರೀ ವಸಿಷ್ಠರು ಹೇಳುತ್ತಾರೆ. ಎಲೈ ರಾಜಶ್ರೇಷ್ಠನೆ ಶೇಷನಿಗೆ ಶಾಪಬರುವುದಕ್ಕೆ ಕಾರಣವನ್ನೂ ಋಷಿ–ಶೇಷರ ಸಂವಾದವನ್ನೂ ಹೇಳುತ್ತೇನೆ ಕೇಳು.

ದ್ವಾಪರಯುಗದಲ್ಲಿ ಕಮಲಾಕ್ಷನಾದ ಕೃಷ್ಣನು ಶೋಣಿತವೆಂಬ ಪಟ್ಟಣದಲ್ಲಿದ್ದ ಮಹಾಪರಾಕ್ರಮಶಾಲಿಗಳಾದ ರಾಕ್ಷಸರ ವಧೆಗೋಸ್ಕರ ಸೇನಾಸಮೇತನಾಗಿ ಹೊರಟಾಗ, ದಾರಿಯಲ್ಲಿ ವೇದ–ವೇದಾಂಗ ಪರಂಗತನಾದ ತೃತನೆಂಬ ಋಷಿಶ್ರೇಷ್ಠನನ್ನು ನೋಡಿ, ಅವನಿಗೆ ನಮಸ್ಕಾರ ಮಾಡಿ ಪರಮಪ್ರೀತನಾಗಿ ಆ ಋಷಿಯನ್ನು ಹರ್ಷಪಡಿಸುತ್ತಾ ಶ್ರೀಕೃಷ್ಣನು ಈ ರೀತಿ ಹೇಳುತ್ತಾನೆ.

ಅಹಂತ್ವಿದಾನೀಂ ಸರ್ವೇಷಾಂ ರಾಕ್ಷಸಾನಾಂ ಮುನೀಶ್ವರ ।
ಗಮಿಶ್ಯಾಮಿ ವಧಾರ್ಥಾಯ ಸರ್ವಲೋಕ ಹಿತಾಯಚ ॥ ೬೭ ॥
ಗಚ್ಛಾಶ್ರಮಪದಂ ತಾತ ಸಂಗ್ರಾಮೇ ನಾಸ್ತಿ ವೈ ಸುಖಮ್ ।
ಇತಿ ಕೃಷ್ಣೇನ ಪ್ರತ್ಯುಕ್ತಸ್ತ್ರಿತೋನಾಮಹಾಮುನಿಃ ॥ ೬೮ ॥
ಕೃಷ್ಣಂ ಪ್ರೋವಾಚ ಧರ್ಮಾತ್ಮಾ ಹರ್ಷಯನ್ ಪೃಥಿವೀಪತೇ ।
ಶ್ರೀಕೃಷ್ಣಂ ಶೃಣು ಮದ್ವಾಕ್ಯಂ ಅಹಂ ಯಾಸ್ಯೇ ಮಹಾಬಲ ॥ ೬೯ ॥
ರಾಕ್ಷಸಾನಾಂ ತಥಾ ದೇವ ತವ ಯುದ್ಧಂ ಪ್ರಕುರ್ವತಃ ।
ನಿರೀಕ್ಷ್ಯಾರ್ಥ ಮಹಾಯುದ್ಧೇ ಯಾಸ್ಯಾಮಿ ಭವತಾಸಹ ॥ ೭೦ ॥
ತ್ರಿತೇನೋದೀರಿತಂ ಶೃತ್ವಾ ಕೃಷ್ಣೋಥ ಜಗದೀಶ್ವರಃ ।
ತಥಾಸ್ತ್ವಿತಿ ಸಮಾಭಾಷ್ಯಾ ಪ್ರಯಯೌ ರಾಕ್ಷಸಾನ್ಪ್ರತಿ ॥ ೭೧ ॥
ತಸ್ಮಿನ್ಕಾಲೇ ಮಹಾವೃಷ್ಟಿರಭೂನ್ಮಾರ್ಗೇ ನೃಪೋತ್ತಮ ।
ತದಾ ಶೇಷಸ್ತು ಭಗವಾನ್ ದೃಷ್ಟ್ವಾವೃಷ್ಟಿಂ ಜಗತ್ಪತೌ ॥ ೭೨ ॥
ಅಸಾರಂ ಸರ್ವತೋವ್ಯಾಪ್ತಂ ಭೀಮಮೇಕಾರ್ಣವಂ ಕೃತಮ್ ।
ಛತ್ರಭೂತಂ ಫಣಂ ಕೃತ್ವಾ ತಸ್ಥೌಕೃಷ್ಣಸ್ಯಚೋಪರಿ ॥ ೭೩ ॥

ಮಹಾಪ್ರಾಜ್ಞನಾದ ಎಲೈ ಋಷಿವರ್ಯನೆ, ನನ್ನಮಾತನ್ನು ಕೇಳು. ಸರ್ವಲೋಕಹಿತಕ್ಕೋಸ್ಕರ ಸಮಸ್ತ ರಾಕ್ಷಸರನ್ನು ಕೊಲ್ಲಲು ಈಗ ಹೋಗುವೆನು. ಎಲೈ ತಂದೆಯೇ, ಯುದ್ಧದಲ್ಲಿ ಸುಖವಿಲ್ಲ ನಿನ್ನ ಆಶ್ರಮಕ್ಕೆ ಹೋಗು ಎಂದು ಆ ತ್ರಿತಮಹರ್ಷಿಗೆ ಕೃಷ್ಣನು ಹೇಳಲು, ಧರ್ಮಾತ್ಮನಾದ ಆ ಋಷಿಯು ಮಹಾಬಲಶಾಲಿಯಾದ ಪೃಥಿವೀಪತಿಯಾದ ಕೃಷ್ಣನನ್ನು ಕುರಿತು ಇಂತೆಂದನು. ರಾಕ್ಷಸರೊಡನೆ ನೀನು ಯುದ್ಧಮಾಡುತ್ತಿರಲು ಆ ಮಹಾಯುದ್ಧವನ್ನು ನೋಡುವುದಕ್ಕೋಸ್ಕರ ನಿನ್ನೊಡನೆ ನಾನು ಹೊರಡುತ್ತೇನೆ ಎಂದು ತ್ರಿತನು ಹೇಳಿದ್ದನ್ನು ಕೇಳಿ ಜಗದೀಶ್ವರನಾದ ಕೃಷ್ಣನು ಹಾಗೆಯೇ ಆಗಲಿ ಎಂದು ಹೇಳಿ ರಾಕ್ಷಸರ ಬಳಿಗೆ ಹೊರಟನು. ಆಗ ದಾರಿಯಲ್ಲಿ ಭಯಂಕರವಾದ ಮಳೆಬಂತು. ಆ ಸಮಯದಲ್ಲಿ ಒಂದೇ ಸಮುದ್ರವನ್ನಾಗಿ ಮಾಡಿದ ಎಲ್ಲೆಲ್ಲಿಯೂ ವ್ಯಾಪಿಸಿದ್ದ ಧಾರೆಯಾಗಿ ಬೀಳುತ್ತಿದ್ದ

ತತಸ್ತು ವೃಷ್ಟಿನಾಶಾಂತ ಶೇಷಂ ತಂ ಪ್ರತ್ಯುವಾಚಹ ।
ಶ್ರೀ ತೃತ ಉವಾಚ :
ಅನಂತ ಶೃಣುಮದ್ವಾಕ್ಯಂ ವೃಷ್ಟಿರದ್ಯಾಪಿ ವರ್ತತೇ ।
ಅಹಂ ತವ ಫಣೇ ಶೇಷ ಆಶ್ರಯೇ ಸುಖದೇವ್ಯಯಾ ॥ ೭೪ ॥
ವಸಾಮಿತ್ವದ್ಯ ಶೀತಾರ್ತಂ ಆಶ್ರಯೋ ಭವ ಮೇ ಪ್ರಭೋ ।
ಇತ್ಯುಕ್ತ್ವೋಥ ತೃತೇನೈವ ಶೃತ್ವಾ ವಾಕ್ಯಂ ಚ ತಸ್ಯವೈ ॥ ೭೫ ॥
ದೃಷ್ಟ್ವಾತಂ ತೃತ ನಾಮಾನಂ ಶೇಷಂ ಪರಮಕೋಪತಃ ।
ಉವಾಚ ವಚನಂ ರಾಜನ್ ಕಂಪಯನ್ ವಸುಧಾಮಿಮಾಮ್ ॥ ೭೬ ॥
ಶ್ರೀ ಶೇಷ ಉವಾಚ :
ಶೃಣುಮೇ ವಚನಂ ಬ್ರಹ್ಮನ್ ಅಹಂ ವೃಷ್ಟ್ಯಾಸುಪೀಡಿತಃ ।
ದೇವದೇವಸ್ಯ ಸೇವಾರ್ಥಮಾಗತೋಸ್ಮಿ ತ್ವರಾನ್ವಿತಃ ॥ ೭೭ ॥
ಸೇವಾಂ ಕರೋಮಿ ದುರ್ಬುದ್ಧೇ ಕಿಮರ್ಥಮಿಹಮಾಗತಃ ।
ಆಶ್ರಯೋನಾಸ್ತಿ ಗಚ್ಛಾತ್ರ ಫಣೌ ಕೃಷ್ಣ ಸಮೀಪತಃ ॥ ೭೮ ॥
ಏವಂ ನಿರಾಕೃತಸ್ತೇನ ಋಷಿಃ ಪರಮಕೋಪತಃ ।

ಮಳೆಯು ಕೃಷ್ಣನ ಮೇಲೆ ಬೀಳುತ್ತಿದ್ದುದನ್ನು ನೋಡಿ ಶೇಷನು ತನ್ನ ಹೆಡೆಯನ್ನು ಛತ್ರಿಯಂತೆ ಮಾಡಿ ಕೃಷ್ಣನ ಮೇಲೆ ಆಚ್ಛಾದಿಸಿದನು . ತರುವಾಯ ಮಳೆಯಿಂದ ಬಳಲಿದ ಆ ತೃತನು ಎಲೈ ಅನಂತನೆ, ನನ್ನ ಮಾತನ್ನು ಕೇಳು. ಮಳೆಯು ಈಗಲೂ ಬರುತ್ತಾಇದೆ. ಶೀತದಿಂದ ಪೀಡಿತನಾದ ನಾನು ಸುಖಕರವಾದ ನಿನ್ನ ಹೆಡೆಯಲ್ಲಿ ಈಗ ನಾನೂ ಇರುತ್ತೇನೆ. ನನಗೆ ಸ್ಥಳವನ್ನು ಕೊಡು ಎಂದು ಕೇಳಲು, ಅವನ ಮಾತನ್ನು ಕೇಳಿ ಶೇಷನು ಬಹಳ ಕೋಪಗೊಂಡು ಭೂಮಿಯನ್ನು ನಡುಗಿಸುತ್ತಾ ಎಲೈ ಬ್ರಾಹ್ಮಣನೇ ನನ್ನ ಮಾತನ್ನು ಕೇಳು. ನಾನು ಮಳೆಯಿಂದ ಬಹಳವಾಗಿ ಪೀಡಿಸಲ್ಪಟ್ಟಾಗ್ಯೂ ಶ್ರೀಕೃಷ್ಣನ ಸೇವೆಗೋಸ್ಕರ ಜಾಗ್ರತೆಯಾಗಿ ಬಂದು ಸೇವೆಯನ್ನು ಮಾಡುತ್ತಿದ್ದೇನೆ. ಬುದ್ಧಿಯಿಲ್ಲದೆ ನೀನು ಇಲ್ಲಿಗೇಕೆ ಬಂದೆ? ಎಂದನು.

ಹೆಡೆಯಲ್ಲಿ ಕೃಷ್ಣನ ಹತ್ತಿರ ಸ್ಥಳವಿಲ್ಲ ಹೋಗು ಎಂದು ನಿರಾಕರಿಸಲ್ಪಟ್ಟ ಆ ಋಷಿಯು

ಶಶಾಪ ತಂ ನೃಪಶ್ರೇಷ್ಠ ವಿರೂಪವದನೋ ಭವ ॥ ೭೯ ॥
ಶೈಲೋಭೂತ್ವಾ ಪೃಥಿವ್ಯಾಂ ತು ಪಾಷಾಣಹೃದಯೋ ಯತಃ ।
ತಸ್ಮಾದ್ಭವ ಸುದುರ್ಬುದ್ಧೇ ಶೈಲಃ ಕರಿಸುನಾಮಕಃ ॥ ೮೦ ॥
ಇತಿ ತೇನ ಪ್ರಶಪ್ತಸ್ಸನ್ ಶೇಷೋ ನಿರ್ವೇದಮಾಗತಃ ।
ಪ್ರಾರ್ಥಯಾಮಾಸ ತಂ ವಿಪ್ರಂ ಶಾಪಮೋಕ್ಷಂ ತದಾತ್ಮನಃ ॥ ೮೧ ॥
ತದಾ ಶೇಷ ವಚಃ ಶ್ರುತ್ವಾ ಋಷಿಃ ಪರಮಧಾರ್ಮಿಕಃ ।
ವಿಶಾಪಂ ಪ್ರದದೌ ತಸ್ಮೈ ಶೇಷಾಯ ಪೃಥಿವೀಪತೇ ॥ ೮೨ ॥
ಶೇಷಾಕಾರ ಗಿರಿಭೂರ್ತ್ವಾ ಯದಾ ತ್ವಂ ವಾಸಮೇಷ್ಯಸಿ ।
ತದಾ ವಿಷ್ಣುಃ ವಧಾರ್ಥಾಯ ಪುಂಡರೀಕಂ ಮಹಾಸುರಮ್ ॥ ೮೩ ॥
ಆಯಾಸ್ಯತಿ ಮಹಾವಿಷ್ಣೋಸ್ತದಾ ಮೋಕ್ಷೋ ಭವಿಷ್ಯತಿ ।
ಇತ್ಯುಕ್ತೇ ಸತಿ ತೇನೈವ ತೃತೋನಾಮ ಮಹಾಮುನಿಃ ॥ ೮೪ ॥
ಇತಿವೈ ಶಾಪದೋಶೇಣ ಯುಕ್ತೋಭೂತ್ಫಣಿರಾಡಯಮ್ ।
ವಾರುಣ್ಯಾಂ ದಿಶಿ ಶೈಲಸ್ತು ಮೃಗೇಂದ್ರಕಾರವನ್ನೃಪ ॥ ೮೫ ॥
ದೃಶ್ಯತೇ ಮನುಜೈಸ್ತಾತ ನಿದಾನಂ ತು ಬ್ರವೀಮೆತೇ ।

ನೀನು ವಿರೂಪಮುಖಿನಾಗು; ಪಾಷಾಣಹೃದಯುನಾದ ಕಾರಣ ಭೂಲೋಕದಲ್ಲಿ ಹಸ್ತಿನಾಮಕ ಪರ್ವತವಾಗಿರು. ಎಂದು ಶಪಿಸಲ್ಪಟ್ಟ ಆ ಶೇಷನು ವ್ಯಸನಪಟ್ಟು ತನಗೆ ಶಾಪಮೋಕ್ಷ ಮಾಡಬೇಕೆಂದು ಆ ಬ್ರಾಹ್ಮಣನನ್ನು ಪ್ರಾರ್ಥಿಸಿದನು. ಮಹಾಧರ್ಮಿಷ್ಠನಾದ ಆ ಋಷಿಯು ಶೇಷನ ಮಾತನ್ನು ಕೇಳಿ ನೀನು ಶೇಷಾಕಾರವುಳ್ಳ ಪರ್ವತವಾಗಿ ಇರುವಾಗ ವಿಷ್ಣುವು ಪುಂಡರೀಕನೆಂಬ ರಾಕ್ಷಸನ ವಧೆಗಾಗಿ ಅವನ ಬಳಿಗೆ ಯಾವಾಗ ಬರುತ್ತಾನೋ ಆಗ ನಿನಗೆ ಶಾಪಮೋಕ್ಷವಾಗುವುದು. ಎಂದು ಹೇಳಿದನು. ಹೀಗೆ ಶೇಷನಿಗೆ ಶಾಪಮೋಕ್ಷವನ್ನು ಮಾಡಿ ತೃತನು ಕೃಷ್ಣನೊಡನೆ ಹೊರಟುಹೋದನು. ಶೇಷನಿಗೆ ಹೀಗೆ ಶಾಪ ಬಂದಿತು. ಆ ಪರ್ವತವು ಪಶ್ಚಿಮದಿಕ್ಕಿನಲ್ಲಿ ಜನರಿಗೆ ಸಿಂಹಾಕಾರವಾಗಿ ಕಾಣಿಸುತ್ತದೆ ಇದಕ್ಕೆ ಕಾರಣವನ್ನು ನಿನಗೆ ಹೇಳುತ್ತೇನೆ.

ನರಸಿಂಹನು ಆ ಬೆಟ್ಟದಲ್ಲಿ ಸದಾ ವಾಸಮಾಡಿದ್ದರಿಂದ ಆ ಬೆಟ್ಟವು ಸಿಂಹಾಕಾರವಾಗಿ

ಯಸ್ಮಾನ್ನೃಸಿಂಹೋ ದೇವೇಶ ಗಿರೌ ವಾಸಂ ಸದಾಕರೋತ್ ॥ ೮೬ ॥
ತಸ್ಮಾತ್ ಸಿಂಹರೂಪೇಣ ಗಿರಿಸ್ಸಂದೃಶ್ಯತೇ ನೃಪಃ ।
ಉತ್ತರಸ್ಯಾಂ ಜನೈಸ್ಸರ್ವೈರ್ವೈನತೇಯ ಇವಾಚಲಃ ॥ ೮೭ ॥
ಪ್ರದೃಶ್ಯತೇ ಭೂಮ್ಯಾಂ ವೈ ಜಾನೈಸರ್ವೈಸ್ಸುಧಾರ್ಮಿಕೈಃ ।
ಪಯೋಬ್ಧೇರುತ್ತರಾತೀರದಾಗತೋ ಗರುಡಾಸನಃ ॥ ೮೮ ॥
ಗರುಡಸ್ಯ ನಿವಾಸೇನ ಅದ್ರಿಸ್ತಾರ್ಕ್ಷ್ಯಸ್ವರೂಪತಃ ।
ತಸ್ಮಾದ್ಗರುಡ ರೂಪೇಣ ದೃಷ್ಯತೇ ನಿಖಿಲೈರಪಿ ॥ ೮೯ ॥
ಯತ್ಪೃಷ್ಟಂ ತು ತ್ವಯಾ ಸರ್ವಮಾಖ್ಯಾತಂ ಸಕಲಂ ನೃಪ ।
ದರ್ಶನಾತ್ತಸ್ಯ ಶೈಲಸ್ಯ ಭಕ್ತಿರ್ಮುಕ್ತಿರ್ಭವಿಷ್ಯತಿ ॥ ೯೦ ॥
ಸಂಪದಶ್ಚ ವಿವರ್ಧಂತೇ ನರಾಣಾಂ ಪಶ್ಯತಾಂ ಭುವಿ ॥ ೯೧ ॥

॥ ಇತಿ ಶ್ರೀ ಬ್ರಹ್ಮಾಂಡಪುರಾಣೇ ಶ್ರೀ ಕರಿಗಿರಿ ಮಾಹಾತ್ಮ್ಯೇ
ದಶಮೋಧ್ಯಾಯಃ ಸಮಾಪ್ತಃ ॥

ಕಾಣಿಸುತ್ತದೆ. ಆ ಬೆಟ್ಟವು ಉತ್ತರ ದಿಕ್ಕಿನಲ್ಲಿ ಸಕಲ ಜನರಿಗೂ, ಗರುಡನಂತೆ ಕಾಣಿಸುತ್ತದೆ. ವಿಷ್ಣುವು ಗರುಡಾರೂಢನಾಗಿ ಸಮುದ್ರದ ಉತ್ತರದಿಂದ ಬಂದನು. ಗರುಡನ ವಾಸದಿಂದ ಆ ಬೆಟ್ಟವು ಗರುಡರೂಪವುಳ್ಳದ್ದಾಗಿ ಗರುಡಾಕಾರವಾಗಿ ಎಲ್ಲರಿಗೂ ಕಾಣಿಸಲು ಕಾರಣವಾಯಿತು. ಎಲೈ ರಾಜನೇ, ನೀನು ಕೇಳಿದುದ್ದೆಲ್ಲವನ್ನು ನಿನಗೆ ಹೇಳಿದೆನು. ಆ ಪರ್ವತದ ದರ್ಶನದಿಂದ ಭೂಲೋಕದಲ್ಲಿ ಜನರಿಗೆ ಭಕ್ತಿಯೂ, ಮುಕ್ತಿಯೂ, ಆಗುವುದಲ್ಲದೆ ಸಂಪತ್ತುಗಳಲೂ ಹೆಚ್ಚುತ್ತವೆ ಎಂದು ಹೇಳಿದನು.

ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿರುವ ಕರಿಗಿರಿ ಮಹಾತ್ಮೆಯಲ್ಲಿ ಹತ್ತನೆಯ ಅಧ್ಯಾಯವು ಮುಕ್ತಾಯವಾಯಿತು.

॥ ಶ್ರೀ ವಸಂತ ವಲ್ಲಭಾಯನಮಃ ॥

ಏಕಾದಶೋಽಧ್ಯಾಯಃ

ಶ್ರೀ ರಾಜೋವಾಚ :

ವಸಿಷ್ಠ ಮುನಿಶಾರ್ದೂಲ ಬ್ರಹ್ಮಪುತ್ರ ಸುಧಾರ್ಮಿಕ ।
ಪುರಾಪ್ರೋಕ್ತಂ ತ್ವಯಾ ವಿದ್ವನ್ ಶೈಲೋಽಯಂ ಗಿರಿಭಿರಾವೃತಃ ॥ ೧ ॥
ಗಿರೀಣಾಂ ತತ್ರ ದೇವಾನಾಂ ಮಾಹಾತ್ಮ್ಯಂ ವದ ವಿಸ್ತರಾತ್ ।

ಶ್ರೀ ವಸಿಷ್ಠೋವಾಚ :

ಭೂಯ ಏವ ಮಹಾರಾಜ ಶ್ರುಣುಮೇ ಪರಮಂ ವಚಃ ॥ ೨ ॥
ತತ್ತೇಽಹಂ ಸಂಪ್ರವಕ್ಷ್ಯಾಮಿ ಕಥಾಂ ಕಲ್ಮಷನಾಶಿನೀಮ್ ।
ಆಸೀಚ್ಚ ಪೂರ್ವದಿಗ್ಭಾಗೇ ಅಚಲೋ ಲೋಕವಿಶ್ರುತಃ ॥ ೩ ॥
ಗರುಡಾದ್ರಿರಿತಿ ಖ್ಯಾತೋ ಅವನ್ಯಾಂ ನೃಪಸತ್ತಮ ।
ಶೇಷಾದ್ರೇಸ್ಸಸಮಾಯಾತೋ ಗರುಡೋ ಪರಿಸಂಸ್ಥಿತಃ ॥ ೪ ॥
ಗರುಡಾದ್ರೌ ತತ್ರ ವಿಷ್ಣುರ್ಗರುಡೋ ಪರಿಸಂಸ್ಥಿತಃ ।

ಶ್ರೀರಾಜನು ವಸಿಷ್ಠರನ್ನು ಕುರಿತು, ಬ್ರಹ್ಮಪುತ್ರನೂ, ಪರಮ ಧರ್ಮಿಷ್ಠನೂ, ಜ್ಞಾನಿಯೂ, ಋಷಿವರ್ಯನೂ ಆದ ವಸಿಷ್ಠನೇ ಈ ಪರ್ವತವು ಬಹುಶೃಂಗಗಳಿಂದ ಕೂಡಿದೆ ಎಂದು ಮೊದಲು ನೀನು ಹೇಳಿದೆ. ಆ ಶೃಂಗಗಳ ಮತ್ತೆ ಅಲ್ಲಿರುವ ದೇವರುಗಳ ಮಹಾತ್ಮ್ಯೆಯನ್ನು ವಿಸ್ತಾರವಾಗಿ ಹೇಳೆಂದನು.

ಶ್ರೀ ವಸಿಷ್ಠರು, ಎಲೈ ಮಹಾರಾಜನೆ, ಪಾಪನಾಶಕವಾದ ಆ ಕಥೆಯನ್ನು ನಾನು ನಿನಗೆ ಹೇಳುತ್ತೇನೆ ನನ್ನ ಮಾತನ್ನು ಕೇಳು. ಎಲೈ ರಾಜ ಶ್ರೇಷ್ಠನೇ, ಪೂರ್ವದಿಕ್ಕಿನಲ್ಲಿ ಲೋಕ ಪ್ರಸಿದ್ಧವಾದ ಗರುಡಾದ್ರಿ ಎಂಬ ಪರ್ವತವು ಇತ್ತು. ವಿಷ್ಣುವು ಗರುಡಾರೂಢನಾಗಿ ಕ್ರೀಡಾರ್ಥವಾಗಿ ತಾನೊಬ್ಬನೇ ಗರುಡಾದ್ರಿಗೆ ಬಿಲ್ಲು, ಬಾಣಗಳೊಡನೆ ಬಂದು ಸಿಂಹ, ಹುಲಿ, ಕರಡಿ, ಮೊದಲಾದ ಬಗೆಬಗೆಯ ಮೃಗಗಳನ್ನು ಕೊಂದು ವನದಲ್ಲಿಸಂಚರಿಸುತ್ತಿದ್ದನು. ಆಗ ಮೇಧಾವಿಯಾದ ಕೋಹಲನೆಂಬ ಋಷಿಯು

ಕ್ರೀಡಾರ್ಥಂ ಆಯಯೌ ದೇವಃ ಏಕಏವ ಜನಾರ್ಧನಃ ॥ ೫ ॥
ವನೇ ಚಚಾರ ದೇವೋಽಪಿ ಧನುರ್ಬಾಣ ಸಮನ್ವಿತಃ ।
ಮೃಗಾನ್ನಾನಾವಿಧಾನ್ ಹತ್ವಾ ಸಿಂಹಶಾರ್ದೂಲ ಭಲ್ಲುಕಾನ್ ॥ ೬ ॥
ಶಶಾಕಾದೀಂಸ್ತದಾ ಹತ್ವಾ ದೇವಃ ಪರಮಪೂರುಷಃ ।
ತಸ್ಮಿನ್ಕಾಲೇ ಚ ಶೈಲೇಸ್ಮಿನ್ ಕೋಹಲೋನಾಮವೈ ಋಷಿಃ ॥ ೭ ॥
ಹರಿಂ ದೃಷ್ಟ್ವಾಥ ಮೇಧಾವೀ ಪ್ರಾರ್ಥಯಾಮಾಸ ತಂ ವಿಭುಮ್ ।
ತೇನ ಸಂಪ್ರಾರ್ಥಿತೋ ದೇವಃ ಕೃತವಾನ್ವಾಸಮುತ್ತಮಮ್ ॥ ೮ ॥
ಪೂಜಯಾಮಾಸ ಧರ್ಮಾತ್ಮಾ ಕೋಹಲಸ್ಸರ್ವಧರ್ಮವಿತ್ ।
ತೇನ ಸಂಪ್ರಾರ್ಥಿತಃ ಶ್ರೀಮಾನ್ ಶ್ರೀನಿವಾಸೋ ಮಹಾಪ್ರಭುಃ ॥ ೯ ॥
ವಾಸಂ ಚಕಾರ ಸರ್ವೇಶಃ ವರದಸ್ಸರ್ವದಾ ನೃಪ ।
ಅದ್ಯಾಪಿ ದೃಶ್ಯತೇ ದೇವೋ ಜನೈಸ್ಸರ್ವೈರ್ಮಹಾಪ್ರಭುಃ ॥ ೧೦ ॥
ಪುಷ್ಪಾಚಲಸ್ಯ ಪ್ರಾಚ್ಯಾಂ ವೈ ಗರುಡಾಚಲ ನಾಮಕಃ ।
ಇದಾನೀಂ ಚ ಮಹಾಭಾಗ ದೃಶ್ಯತೇ ಭುವಿಮಾನವೈಃ ॥ ೧೧ ॥
ಆಗ್ನೇಯಾಂ ತು ನೃಪಶ್ರೇಷ್ಠ ಕೂರ್ಮಾಚಲ ಇತಿ ಶ್ರುತಃ ।

ವಿಷ್ಣುವನ್ನು ಪ್ರಾರ್ಥಿಸಲು ವಿಷ್ಣುವು ಅಲ್ಲಿ ವಾಸಿಸುತ್ತಿದ್ದನು. ಧರ್ಮಾತ್ಮನೂ ಸಕಲ ಧರ್ಮಜ್ಞನೂ, ಆದ ಆ ಕೋಹಲನು ವಿಷ್ಣುವನ್ನು ಪೂಜಿಸಿದನು. ಎಲೈ ರಾಜನೇ, ಶ್ರೀಯುತನೂ, ಸರ್ವೇಶ್ವರನೂ ಆದ ಶ್ರೀನಿವಾಸನು ಅವನಿಂದ ಪ್ರಾರ್ಥಿಸಲ್ಪಟ್ಟೂ ವರಗಳನ್ನು ಕೊಡುತ್ತ ಸರ್ವದಾ ಅಲ್ಲಿ ಇದ್ದನು. ಆ ಮಹಾಪ್ರಭುವು ಸಕಲಸುಜನರಿಗೂ, ಈಗಲೂ ಕಾಣಿಸುತ್ತಾನೆ. ಕುಸುಮಾಚಲಕ್ಕೆ ಪೂರ್ವದಿಕ್ಕಿನಲ್ಲಿ ಗರುಡಾಚಲವು ಭೂಲೋಕದಲ್ಲಿ ಜನರಿಗೆ ಈಗಲೂ ಕಾಣಿಸುತ್ತದೆ. ಆಗ್ನೇಯದಲ್ಲಿ ಕೂರ್ಮಾಚಲವೂ, ದಕ್ಷಿಣದಲ್ಲಿ ಶ್ರೇಷ್ಠವಾದ ಪುಂಗವಾದ್ರಿಯೂ, ನೈರುತ್ಯದಿಕ್ಕಿನಲ್ಲಿ ಪ್ರಸಿದ್ಧವಾದ ರಾಮಾಚಲವೂ, ಪಶ್ಚಿಮದಿಕ್ಕಿನಲ್ಲಿ ನಾರಾಯಣಾಚಲವೂ, ಈಶಾನ್ಯ ದಿಕ್ಕಿನಲ್ಲಿ ವೃಷಭಾಚಲವೂ, ಈ ರೀತಿಯಾಗಿ ಎಂಟು ದಿಕ್ಕುಗಳಲ್ಲೂ ಪುಣ್ಯಪ್ರದಗಳಾದ, ಉಪಪರ್ವತಗಳಿದ್ದವು. ಆ ಎಲ್ಲಾ ಪರ್ವತಗಳ ಮಧ್ಯದಲ್ಲಿ ಪ್ರಸಿದ್ಧವಾದ ಪರಮ

ದಕ್ಷಿಣಸ್ಯಾಂ ಮಹಾಶ್ರೇಷ್ಠಃ ಪುಂಗವಾದ್ರಿರಿತಿಶ್ರುತಃ ॥ ೧೨ ॥
ನೈಋತ್ಯಾಂ ದಿಶಿ ವಿಖ್ಯಾತೋ ರಾಮಾಚಲ ಇತಿ ಸ್ಮೃತಃ ।
ವಾರುಣಾಂ ದಿಶಿ ವೈ ಭೂಪ ಭೀಮಾಚಲ ಇತಿಸ್ಮ ಹ ॥ ೧೩ ॥
ವಾಯವ್ಯಾಂ ದಿಶಿ ವೈ ಚಾಸೀತ್ ಅಚಲೋ ಹೇಮನಾಮಕಃ ।
ಅಸ್ತ್ಯುತ್ತರಸಾಂ ಸಂಭೂತೋ ಶೈಲೋನಾರಾಯಣಾಹ್ವಯಃ ॥ ೧೪ ॥
ಈಶಾನ್ಯಾಂ ದಿಶಿ ವೈ ತಾತ ವೃಷಭಾಚಲನಾಮಕಃ ।
ಅಷ್ಟದಿಕ್ಷು ಚ ಸರ್ವಾಸು ಶೈಲಾಶ್ಚಾಸನ್ ಸುಪುಣ್ಯದಾಃ ॥ ೧೫ ॥
ತೇಷು ಸರ್ವೇಷು ಶೈಲೇಷು ಮೂರ್ತಯಂತಿ ಚ ಪುಣ್ಯದಾಃ ।
ನದ್ಯಸ್ತೀರ್ಥಾನಿ ವೈ ಸಂತಿ ಪರ್ವತೇಷು ಪೃಥಕ್ ಪೃಥಕ್ ॥ ೧೬ ॥
ಏತೇಷಾಂ ಚ ಗಿರೀಣಾಂ ವೈ ಮಧ್ಯೇ ಶೈಲಸ್ಸುಪುಣ್ಯದಃ ।
ವಿರರಾಜ ಮಹೀಪಾಲ ಖ್ಯಾತಃ ಕರಿಗಿರಿಃ ಕಿಲ ॥ ೧೭ ॥
ಆಗ್ನೇಯ್ಯಾಂ ದಿಶಿ ರಾಜೇಂದ್ರ ಪರ್ವತಶ್ಚ ಸುಪುಣ್ಯದಃ ।
ಕೂರ್ಮಾಚಲಸ್ಯ ಮಾಹಾತ್ಮ್ಯಂ ವಕ್ಷ್ಯಾಮಿ ಶ್ರುಣುಭೂಮಿಪ ॥ ೧೮ ॥
ಶೇಷಾದ್ರಿನಿಲಯೋ ದೇವಃ ಶ್ರೀನಿವಾಸಸ್ಸನಾತನಃ ।

ಪುಣ್ಯಪ್ರದವಾದ ಕರಿಗಿರಿ ಎಂಬ ಪರ್ವತವು ಇದೆ. ಎಲೈ ರಾಜನೆ, ಅದರ ಆಗ್ನೇಯದಿಕ್ಕಿನಲ್ಲಿ ಪ್ರಕಾಶಿಸುತ್ತಿರುವ ಕೂರ್ಮಾಚಲದ ಮಹಾತ್ಮ್ಯೆಯನ್ನು ಹೇಳುತ್ತೇನೆ ಕೇಳು. ಶೇಷಾದ್ರಿನಿಲಯನೂ, ಸನಾತನನೂ, ಆದ ಶ್ರೀನಿವಾಸನು ವಿಷ್ಣುವನ್ನು ನೋಡಲು ಮಲಯಪರ್ವತಕ್ಕೆ ಹೋಗಲಿಚ್ಛೈಸಿ ಗರುಡಾರೂಢನಾಗಿ ವೇಂಕಟಾದ್ರಿಯಿಂದ ಬಂದು, ಸದಾ ಋಷಿಗಳಿಂದ ಸೇವಿಸಲ್ಪಟ್ಟ ಕೂರ್ಮಾಚಲವನ್ನು ಸೇರಿ ಅಲ್ಲಿ ಋಷಿಗಳೊಡನೆಯೂ, ದೇವತೆಗಳೊಡೆನೆಯೂ ವಿಹರಿಸುತ್ತಿದ್ದನು.

ಅಲ್ಲಿ ಧರ್ಮಾತ್ಮನಾದ ಪೈಂಗಲನೆಂಬ ಪ್ರಸಿದ್ಧವಾದ ಒಬ್ಬಾನೊಬ್ಬ ಬ್ರಾಹ್ಮಣ ಶ್ರೇಷ್ಠನು ಇದ್ದನು. ಅವನು ಅದ್ಭುತನಾದ ಈ ವಿಷ್ಣುವನ್ನು ನೋಡಿ ನದಿಯಲ್ಲಿ ಸ್ನಾನಮಾಡಿ ಸದಾ ಭಕ್ತಿ ಯುತನಾಗಿ ಋಷಿಗಳೊಡನೆ ವರದಾಯಕನಾದ ಶ್ರೀವೇಂಕಟೇಶನನ್ನು

ಆಯಯೌ ಖಗಮಾರುಹ್ಯ ವೇಂಕಟಾದ್ರೇಶ್ಚ ಭೂಧರಾತ್ ॥ ೧೯ ॥
ಮಲಯಾದ್ರಿಂ ಚ ಗಂತುಕಾಮೋ ಕೇಶವಂ ತಂ ದಿದೃಕ್ಷಯಮ್ ।
ಕೂರ್ಮಾಚಲಂ ತು ಸಂಪ್ರಾಪ್ಯ ಋಷಿಭಿಸ್ಸೇವಿತಂ ಸದಾ ॥ ೨೦ ॥
ಋಷಿಭಿರ್ದೇವತೈಸ್ಸಾರ್ಧಂ ತತ್ರ ರೇಮೇ ಮಹಾಪ್ರಭುಃ ।
ತತ್ರ ಕಶ್ಚಿದ್ವಿಜಶ್ರೇಷ್ಠಃ ಆಸೀತ್ಪೂರ್ವಂ ಸವಿಶ್ರುತಃ ॥ ೨೧ ॥
ಪೈಂಗಲೋ ನಾಮ ಧರ್ಮಾತ್ಮಾ ದೃಷ್ಟ್ವಾ ತಂ ಹರಿಮದ್ಭುತಮ್ ।
ದೇವಗಾತೇ ಸದಾಸ್ನಾತ್ವಾ ವೇಂಕಟೇಶಂ ವರಪ್ರದಮಮ್ ॥ ೨೨ ॥
ಅರ್ಚಯಾಮಾಸ ಋಷಿಭಿಸ್ಸದಾ ಭಕ್ತಿಪರಾಯಣಃ ।
ಕುಸುಮಾದ್ರಿಂ ತಥಾ ಪ್ರಾಪ್ಯ ವೇಂಕಟೇಶಸ್ಸನಾತನಃ ॥ ೨೩ ॥
ನಾರಸಿಂಹಂ ತದಾ ದೃಷ್ಟ್ವಾ ಋಷೀಣಾಂ ಪುರತೋ ವಿಭುಃ ।
ಏಕೀಭೂಯ ಪುನರ್ದೇವಃ ಸರ್ವೇಷಾಂ ಪುರತೋ ಭುವಿ ॥ ೨೪ ॥
ಕೂರ್ಮಾಚಲೇ ತು ರೂಪಸ್ಯ ಏಕಂ ಸಂಸ್ಥಾಪ್ಯ ವಿಶ್ವಭುಕ್ ।
ಅಪರಂ ರೂಪಮಾಸ್ಥಾಯ ವೇಂಕಟೇಶಃ ಪ್ರತಾಪವಾನ್ ॥ ೨೫ ॥
ಜಗಾಮ ಮಲಯಾದ್ರಿಂ ಚ ಕೇಶವಂ ಪ್ರಾಪ್ಯ ಸಪ್ರಭುಃ ।

ಪೂಜಿಸಿದನು. ಸನಾತನನಾದ ಶ್ರೀವೇಂಕಟೇಶನು ಹಾಗೆಯೇ ಕುಸುಮಾಚಲಕ್ಕೆ ಬಂದು ಋಷಿಗಳ ಎದುರಿಗೆ ಶ್ರೀನರಸಿಂಹನನ್ನು ನೋಡಿ ಭೂಲೋಕದಲ್ಲಿ ಎಲ್ಲರ ಎದುರಿಗೂ, ಪುನಃ ಒಂದಾಗಿ ಕೂರ್ಮಾಚಲದಲ್ಲಿ ತನ್ನ ಒಂದು ರೂಪವನ್ನಿಟ್ಟು ಬೇರೆ ದೇವತೆಗಳೊಡನೆಯೂ, ಋಷಿಗಳೊಡನೆಯೂ ಅಲ್ಲಿ ವಾಸಮಾಡೂತ್ತಾ ಇದ್ದನು. ಷಡ್ಗುಣೈಶ್ವರ್ಯಸಂಪನ್ನನಾದ ಆ ಶ್ರೀವೇಂಕಟೇಶ ಮಹಾಪ್ರಭುವು ಸಕಲ ದೇವತೆಗಳಿಂದಲೂ, ಪೂಜಿಸಲ್ಪಟ್ಟು ಶೇಷಾದ್ರಿಯಲ್ಲಿ ಒಂದು ರೂಪದಿಂದ ಇದ್ದನು. ಸನಾತನನಾದ ಆ ಶ್ರೀವೇಂಕಟೇಶನು ಸರ್ವದೇವಾಲಂಕೃತನಾಗಿ ಸನಂದನ ಮೊದಲಾದ ಋಷಿಗಳಿಂದ ಸ್ತುತಿಸಲ್ಪಡುತ್ತಾ ಕೂರ್ಮಾದ್ರಿಯಲ್ಲಿ ವಾಸಮಾಡುತ್ತಾ ಇದ್ದಾನೆ. ಎಲೈ ರಾಜನೇ, ಇನ್ನು ಮುಂದೆ ಮಂಗಳಕರವಾದ ಪುಂಗವಾದ್ರಿಯ ಕಥೆಯನ್ನೂ ಅಲ್ಲಿ ಕೇಳುವ ಮತ್ತು ವಿಶೇಷವಾಗಿ ಹೇಳುವ ಸಮಸ್ತ ಜನರಿಗೂ ಕೂಡಲೇ ಮುಕ್ತಿಯನ್ನುಂಟು

ದೇವೈಶ್ಚ ಋಷಿಭಿಸ್ಸಾರ್ಥಂ ಸಂವಸನ್ ಮಲಯಾಚಲೇ ॥ ೨೬ ॥
ಏಕರೂಪೇಣಶೇಷಾದ್ರೌ ವೇಂಕಟೇಶೋ ಮಹಾಪ್ರಭುಃ ।
ವಾಸಂ ಚಕಾರ ಭಗವಾನ್ ಸರ್ವದೇವೈಸ್ಸುಪೂಜಿತಃ ॥ ೨೭ ॥
ಅನ್ಯಂ ರೂಪಂ ಸಮಾಶ್ರಿತ್ಯ ವೇಂಕಟೇಶಸ್ಸನಾತನಃ ।
ಕೂರ್ಮಾಚಲೇ ವಸನ್ ದೇವಸ್ಸರ್ವದೇವೈರಲಂಕೃತಃ ॥ ೨೮ ॥
ಸನಂದನಾದ್ಯೈರ್ಮುನಿಭಿಸ್ತೂಯಮಾನಸ್ಸನಾತನಃ ।
ಆಸ್ತೇ ತತ್ರ ನೃಪಶ್ರೇಷ್ಠ ಕೂರ್ಮಾದ್ರೌ ಚ ಪುರಾತನಃ ॥ ೨೯ ॥
ಇತಃ ಪರಂ ಪ್ರವಕ್ಷ್ಯಾಮಿ ಪುಂಗವಾದ್ರೇಃ ಕಥಾಂ ಶುಭಾಂ ।
ಮಾಹಾತ್ಮ್ಯಂ ತತ್ರ ದೇವಸ್ಯ ಧೂರ್ಜಟೇಶ್ಚ ನೃಪೋತ್ತಮ ॥ ೩೦ ॥
ಋಷೀಣಾಂ ಚರಿತಂ ತತ್ರ ತೀರ್ಥಾನಾಂ ಚ ಪರಂತಪ ।
ಮಹಾತ್ಮ್ಯಂ ಶೃಣುತಾಂ ಚೈವ ವದತಾಂ ಚ ವಿಶೇಷತಃ ॥ ೩೧ ॥
ಸರ್ವೇಷಾಂ ಚ ನರಾಣಾಂ ಚ ಸದ್ಯೋಮುಕ್ತಿ ವಿಧಾಯಕಮ್ ।
ಆಸೀತ್ಪುರಾಽಗಸ್ತ್ಯ ನಾಮಾ ಮುನಿಃ ಧರ್ಮಪರಾಯಣಃ ॥ ೩೨ ॥
ವೇದವೇದಾಂಗ ತತ್ವಜ್ಞಃ ಸತ್ಯವಾದೀ ಸದಾಶುಚಿಃ ।

ಮಾಡುವ ಈಶ್ವರನ ಮಹಿಮೆಯನ್ನೂ ಋಷಿಗಳ ಅರಿತ್ರೆಯನ್ನೂ ತೀರ್ಥಗಳ ಮಹಾತ್ಮ್ಯೆಯನ್ನೂ ಹೇಳುತ್ತೇನೆ. ಪೂರ್ವದಲ್ಲಿ ವೇದವೇದಾಂಗ ತತ್ವಜ್ಞನೂ ಸತ್ಯವಾದಿಯೂ ಯಾವಗಲೂ ಪವಿತ್ರನೂ ಆದ ಅಗಸ್ತ್ಯನೆಂಬ ಋಷಿಯು ಇದ್ದನು. ಆ ಋಷಿಶ್ರೇಷ್ಠನು ನಾರಾಯಣಾಶ್ರಮದಿಂದ ಅನೇಕ ಋಷಿಗಳೊಡನೆ ಪುಂಗವಾದ್ರಿಗೆ (ಈಗಿನ ಶಿವಗಂಗೆ ಬೆಟ್ಟ) ಬಂದನು. ಎಲೈ ರಾಜನೆ, ಬಂದ ಋಷಿಗಳ ಹೆಸರುಗಳನ್ನು ಹೇಳುತ್ತೇನೆ ಕೇಳು :- ಕಾತ್ಯಾನ, ಜಾಬಾಲಿ, ಕಾಶ್ಯಪ, ಪುಲಹ, ಕ್ರತು, ವಿಶ್ವಾಮಿತ್ರ, ಭರದ್ವಾಜ, ಗೌತಮ, ಚ್ಯವನ ಇವರೂ ಇನ್ನೂ ಇತರ ಋಷಿಗಳೂ ಇವರೆಲ್ಲರೂ ಅಗಸ್ತ್ಯರ ಮಾತಿನ ಮೇರೆಗೆ ನಡೆಯುತ್ತಾ ಅಲ್ಲಲ್ಲಿ ತೀರ್ಥಗಳನ್ನೂ ಆಶ್ರಮಗಳನ್ನೂ ಕಲ್ಪಿಸಿ, ಆ ತೀರ್ಥಗಳಲ್ಲಿ ಸ್ನಾನಮಾಡಿ, ಗಂಗಾಧರನೂ ಮಹಾದೇವನು, ಶಂಕರನು, ಶೂಲಪಾಣಿಯೂ, ತ್ರಿಪುರಾಂತಕನೂ, ಸ್ವರ್ಣಾಂಬಿಕಾಸಮೇತನು ಆದ ಈಶ್ವರನನ್ನು ಶೈವಮಂತ್ರಗಳಿಂದ ಪೂಜಿಸಿದರು. ಎಂದು ಹೇಳಿದನು.

ನಾರಾಯಣಾಶ್ರಮಾತ್ತಾತ ಆಗತೋ ಮುನಿಸತ್ತಮಃ ॥ ೩೩ ॥
ಅನೇಕಋಷಿಭಿಸ್ಸಾರ್ಧಂ ಪುಂಗವಾದ್ರಿಂ ಮಹಾಗಿರಿಮ್ ।
ಆಗತಾನಾಂ ಋಷೀಣಾಂ ತು ನಾಮಾನಿ ಶೃಣುಭೂಮಿಪ ॥ ೩೪ ॥
ಮೈತ್ರೇಯೋ ಮೌದ್ಗಲೋಽಗಸ್ತ್ಯಃ ಕಪಿಲಃ ಕಣ್ವ ಏವಚ ।
ಕಾತ್ಯಾಯನೋಥ ಜಾಬಾಲಿಃ ಕಾಶ್ಯಪಃ ಪುಲಹಃ ಕ್ರತುಃ ॥ ೩೫ ॥
ವಿಶ್ವಾಮಿತ್ರಭರದ್ವಾಜೌ ಗೌತಮಶ್ಚ್ಯವನಸ್ತಥಾ ।
ಏತೇಚಾನ್ಯೇಚ ಮುನಯಃ ಅಗಸ್ತ್ಯವಚನೇಸ್ಥಿತಾಃ ॥ ೩೬ ॥
ತತ್ರ ತತ್ರ ಚ ತೀರ್ಥಾನಿ ಆಶ್ರಮಾಣಿ ಚ ಚಕ್ರಿರೇ ।
ತೇಷು ತೀರ್ಥೇಷು ಋಷಯಸ್ಸ್ನಾತ್ವಾ ದೇವಂ ಜಟಾಧರಮ್ ॥ ೩೭ ॥
ಗಂಗಾಧರಂ ಮಹಾದೇವಂ ಶಂಕರಂ ಶೂಲಪಾಣಿನಮ್ ।
ಸ್ವರ್ಣಾಂಬಿಕಾ ಸಮೇತಂ ಚ ಧೂರ್ಜಟಿಂ ತ್ರಿಪುರಾಂತಕಮ್ ॥ ೩೮ ॥
ಋಷಯಶ್ಚಾರ್ಚಯಾಮಾಸುಃ ಶೈವೋಕ್ತೈಶ್ಚ ಸುಮಂತ್ರಕೈಃ ।
ಶ್ರೀ ರಾಜೋವಾಚ :
ವಸಿಷ್ಠ ಬ್ರಹ್ಮಣಃ ಪುತ್ರ ವದ ವಿಸ್ತರತೋಽನಘ ॥ ೩೯ ॥
ಯಾನಿತೀರ್ಥಾನಿ ಋಷಯಶ್ಚಕ್ರಿರೇ ಮುನಿಪುಂಗವ ।

ಶ್ರೀ ರಾಜನು, ಎಲೈ ಬ್ರಹ್ಮಪುತ್ರನಾದ ವಸಿಷ್ಠ ಮಹರ್ಷಿಯೆ, ಆ ಋಷಿಗಳು ಮಾಡಿದ ತೀರ್ಥಗಳ ಹೆಸರುಗಳನ್ನು ಕೇಳಲಿಚ್ಛಿಸುತ್ತೇನೆ. ಅವುಗಳನ್ನು ವಿಸ್ತಾರವಾಗಿ ಹೇಳೆಂದನು.

ಶ್ರೀ ವಸಿಷ್ಠರು, ಎಲೈ ರಾಜನೆ, ಆ ತೀರ್ಥಗಳ ಹೆಸರುಗಳನ್ನು ಹೇಳುತ್ತೇನೆ ಕೇಳು. ಆ ತೀರ್ಥಗಳ ಹೆಸರನ್ನು ಕೇಳಿದ ಮಾತ್ರದಿಂದಲೇ ಸಕಲ ಪಾಪಗಳೂ ನಾಶವಾಗುತ್ತವೆ. ಅವು ಯಾವುವೆಂದರೆ :– ಅಗಸ್ತ್ಯತೀರ್ಥ, ಚಕ್ರತೀರ್ಥ, ಮೈತ್ರೇಯತೀರ್ಥ, ಮೌದ್ಗಲ್ಯತೀರ್ಥ, ಕದಂಬತೀರ್ಥ, ಗಂಧವತೀ, ಪಾತಾಳಗಂಗೆ, ಪರ್ವತದ ಒರಳಲ್ಲಿ ಹುಟ್ಟಿದಗಂಗೆ, ಸರ್ವಪ್ರಾಣಿಗಳಿಗೂ ಪುಣ್ಯದಾಯಕವಾದ ಕಣಾದತೀರ್ಥ, ಕಪಿಲಋಷಿಯಿಂದ ಸೇವಿಸಲ್ಪಟ ಕಪಿಲತೀರ್ಥ ಎಂಬಿವೇ ತೀರ್ಥಗಳು ಮುಕ್ತಿಯನ್ನು ಕೊಡುತ್ತಕ್ಕವುಗಳು. ಇದರಲ್ಲಿ ಸಂದೇಹವಿಲ್ಲಾ. ಎಲೈ ಉತ್ತಮೋತ್ತಮನಾದ ರಾಜನೇ,

ತಾನಿ ನಾಮಾನ್ಯಹಂ ಶ್ರೋತುಮಿಚ್ಛಾಮಿ ಮುನಿಪುಂಗವ ॥ ೪೦ ॥
ಶ್ರೀ ವಸಿಷ್ಠ ಉವಾಚ :
ಶೃಣುನಾಮಾನಿ ವಕ್ಷ್ಯಾಮಿ ತೀರ್ಥಾನಾಂ ಚ ಪರಂತಪ ।
ಸರ್ವಪಾಪಾನಿ ನಶ್ಯಂತಿ ತೀರ್ಥಾನಾಂ ಶ್ರವಣಾತ್ಪ್ರಭೋ ॥ ೪೧ ॥
ಅಗಸ್ತ್ಯಂ ಚಕ್ರತೀರ್ಥಂ ಚ ಮೈತ್ರೇಯಂ ಮೌದ್ಗಲಂ ತಥಾ ।
ಕದಂಬನಾಮಾ ವೈ ತೀರ್ಥಂ ಗಂಗಾಗಂಧವತೀತಿ ಚ ॥ ೪೨ ॥
ಗಂಗಾಪಾತಾಲಸಂಜ್ಞಾ ವೈ ಗಂಗಾಸ್ತಂಭೋದ್ಭವಾ ಗಿರೌ ।
ಕಣಾದತೀರ್ಥಂ ಸರ್ವೇಷಾಂ ಪುಣ್ಯದಂ ಸರ್ವದೇಹಿನಾಮ್ ॥ ೪೩ ॥
ಕಪಿಲಾಖ್ಯಂ ಮಹಾತೀರ್ಥಂ ಕಪಿಲೇನ ಸುಸೇವಿತಮ್ ।
ಏತಾನಿ ತೀರ್ಥಜಾಲಾನಿ ಮುಕ್ತಿದಾನಿ ನ ಸಂಶಯಃ ॥ ೪೪ ॥
ಇತಿ ತೀರ್ಥಾನಿ ಸಂತ್ಯಸ್ಮಿನ್ ಗಿರೌನೃಪ ವರೋತ್ತಮ ।
ತೇಷು ತೀರ್ಥೇಷು ಯಸ್ನಾತ್ಃ ಸರ್ವ ಪಾಪೈಃ ಪ್ರಮುಚ್ಯತೇ ॥ ೪೫ ॥
ವಿಮುಕ್ತ ಕಲುಷಸ್ಸದ್ಯಃ ಕೈವಲ್ಯಂ ಪ್ರತಿಪದ್ಯತೇ ।
ನೈಋತ್ಯಾಂತು ಮಹಾಭಾಗ ರಾಮಾಚಲ ಇತಿಶ್ರುತಃ ॥ ೪೬ ॥

ಈ ತೀರ್ಥಗಳು ಈ ಪರ್ವತದಲ್ಲಿ ಇವೆ. ಅವುಗಳಲ್ಲಿ ಸ್ನಾನಮಾಡುವವನು ಸಮಸ್ತ ಪಾಪಗಳಿಂದಲೂ ಮುಕ್ತನಾಗಿ ಮೋಕ್ಷವನ್ನು ಹೊಂದುತ್ತಾನೆ. ಎಲೈ ಮಹಾರಾಜನೇ ಭೂಲೋಕದಲ್ಲಿ ಪ್ರಸಿದ್ಧವಾದ ರಾಮಚಂದ್ರನಿಂದ ಸೇವಿಸಲ್ಪಟ್ಟ ರಾಮಾಚಲವೆಂಬ ಪರ್ವತವು ಇತ್ತು. ಆ ರಾಮಾಚಲದಲ್ಲಿ (ಮಧುಗಿರಿ ಬೆಟ್ಟ) ರಾಮಚಂದ್ರನಿಂದ ಪೂಜಿಸಲ್ಪಟ್ಟ ರಾಮೇಶ್ವರನೆಂಬ ಮಹಾಲಿಂಗವು ಸ್ಥಾಪಿಸಲ್ಪಟ್ಟಿತ್ತು. ಆ ಉಪಪರ್ವತದಲ್ಲಿ ಋಷಿಗಳಿಂದ ಸೇವಿಸಲ್ಪಟ್ಟ ರಾಮತೀರ್ಥವೆಂಬ ನಿರ್ಮಲವಾದ ತೀರ್ಥವು ರಾಮನಿಂದ ಮಾಡಲ್ಪಟ್ಟಿತು. ಆ ತೀರ್ಥದಲ್ಲಿ ಮುಳುಗಿ ಆ ಲಿಂಗವನ್ನು ನೋಡಿದ ಮನುಜನು ರಾಮನ ಅನುಗ್ರಹದಿಂದ ಮೋಕ್ಷವನ್ನು ಹೊಂದುತ್ತಾನೆ. ಎಲೈ ರಾಜಶ್ರೇಷ್ಠನೆ, ಪಶ್ಚಿಮದಿಕ್ಕಿನಲ್ಲಿ ಭೀಮಾಚಲವು ಇದೆ. ಅಲ್ಲಿ ಪೂರ್ವದಲ್ಲಿ ಭೀಮನ ಗದೆಯಿಂದ ಮಾಡಲ್ಪಟ್ಟ ಭೀಮತೀರ್ಥವು ಮತ್ತು ಭೀಮೇಶ್ವರನೆಂಬ ಲಿಂಗವೂ ಇತ್ತು.

ಅಭೂದವನ್ಯಾಂ ಪ್ರಥಿತೋ ರಾಮಚಂದ್ರೇಣ ಸೇವಿತಃ ।
ರಾಮಾದ್ರೌ ರಾಮಚಂದ್ರೇಣ ಪೂಜಿತಂ ಸ್ಥಾಪಿತಂ ಮಹತ್ ॥ ೪೭ ॥
ಲಿಂಗಂ ರಾಮೇಶ್ವರಂ ನಾಮ ಆಸೀನ್ನರವರೋತ್ತಮ ।
ತತ್ರಾದ್ರೌ ರಾಮದೇವೇನ ಕೃತಂ ತೀರ್ಥಂ ಸುನಿರ್ಮಲಮ್ ॥ ೪೮ ॥
ರಾಮತೀರ್ಥಮಿತಿ ಖ್ಯಾತಂ ಮುನಿಭಿಶ್ಚ ಸುಸೇವಿತಮ್ ।
ತತ್ರ ತೀರ್ಥೇ ನಿಮಜ್ಯಾಥ ಲಿಂಗಂ ಪಶ್ಯತಿ ಯಃ ಪುಮಾನ್ ॥ ೪೯ ॥
ರಾಮದೇವಪ್ರಸಾದೇನ ಕೈವಲ್ಯಂ ಪ್ರತಿಪದ್ಯತೇ ।
ವಾರುಣ್ಯಾಂ ಚ ನೃಪಶ್ರೇಷ್ಠ ಭೀಮಾಚಲ ಇತಿಶ್ರುತಃ ॥ ೫೦ ॥
ತತ್ರ ಭೀಮೇಶ್ವರಂ ನಾಮ ಆಸೀತ್ಪೂರ್ವಂ ಪ್ರತಿಷ್ಠಿತಮ್ ।
ಭೀಮೇನ ಋಷಿಭಿಸ್ಸಾರ್ಧಂ ತೀರ್ಥಂತು ಗದಯಾಕೃತಮ್ ॥ ೫೧ ॥
ಭೀಮಸ್ತು ಗದಯಾತತ್ರ ಪರ್ವತೇ ಸುಮನೋಹರೇ ।
ಚಕಾರ ನಿರ್ಮಲಂ ತೀರ್ಥಂ ಸೇವ್ಯಮಾನಂ ಮಹಾತ್ಮಭಿಃ ॥ ೫೨ ॥
ತತ್ರ ತೀರ್ಥೇತು ಯಸ್ಸ್ನಾತ್ವಾ ದರ್ಶನಂ ಚ ಕರೋತಿವೈ ।
ಭೀಮೇಶ್ವರಸ್ಯ ಭರ್ಗಸ್ಯ ತಸ್ಯ ಮುಕ್ತಿಃ ಕರೇಸ್ಥಿತಾ ॥ ೫೩ ॥

ಮನೋಹರವಾದ ಆ ಪರ್ವತದಲ್ಲಿ ಮಹಾತ್ಮರಿಂದ ಸೇವಿಸಲ್ಪಡುವ ನಿರ್ಮಲವಾದ ಆ ತೀರ್ಥದಲ್ಲಿ ಸ್ನಾನಮಾಡಿ ಭೀಮೇಶ್ವರನ ದರ್ಶನವನ್ನು ಮಾಡುವವನಿಗೆ ಮುಕ್ತಿಯು ಹಸ್ತಗತವಾಗುತ್ತದೆ. ವಾಯುವ್ಯದಿಕ್ಕಿನಲ್ಲಿ ಹೇಮಾಚಲವು ಇತ್ತು. ವಲಯಾಕಾರವುಳ್ಳ ನಾನಾವೃಕ್ಷಗಳಿಂದ ಕೂಡಿದ ನಾನಾ ಮೃಗಗಳ ಸಮೂಹದಿಂದ ವ್ಯಾಪ್ತವಾದ ಅನೇಕ ಗೈರಿಕಾದಿ ಧಾತುಗಳುಳ್ಳ ಆ ಬೆಟ್ಟವು ತಾಪಸಶ್ರೇಷ್ಠರಾದ ಋಷಿಗಳಿಂದ ಸೇವಿಸಲ್ಪಟ್ಟು ಕಂಗೊಳಿಸುತ್ತಿತ್ತು. ಈ ಸಮಯದಲ್ಲಿ ಷಡ್ಗುಣೈಶ್ವರ್ಯಸಂಪನ್ನನೂ, ಪುರುಷೋತ್ತಮನೂ, ವೈಕುಂಠಾಧಿಪತಿಯೂ ಆದ ವಿಷ್ಣುವು ಲಕ್ಷ್ಮೀಸಮೇತನಾಗಿ ಲೋಕಗಳ ಪರೀಕ್ಷಾರ್ಥವಾಗಿ ಭೂಲೋಕಕ್ಕೆ ಬಂದು, ಅಲ್ಲಲ್ಲಿ ವನಪ್ರದೇಶಗಳಲ್ಲಿಯೂ ಪರ್ವತಗಳಲ್ಲಿಯೂ ಗುಹೆಗಳಲ್ಲಿಯೂ ದೇವತೆಗಳೊಡನೆ ಸಂಚರಿಸುತ್ತಾ ನಾನಾವೃಕ್ಷಗಳಿಂದ ರಂಜಿಸುತ್ತಿದ್ದ ಹೇಮಾದ್ರಿಯನ್ನು ನೋಡಿ, ಅಲ್ಲಿ ವಾಸಿಸುತ್ತಿದ್ದ ಋಷಿಗಳ ಸಂರಕ್ಷಣೆಯನ್ನು ಮಾಡಿದನು. ಆ ಬೆಟ್ಟದಲ್ಲಿ ಶಾಕಲನೆಂಬ ಒಬ್ಬಾನೊಬ್ಬ

ವಾಯವ್ಯಾಂಚ ಪುರಾ ಚಾಸೀತ್ ಹೇಮಾಚಲ ಇತಿ ಶ್ರುತಃ ।
ನಾನಾವೃಕ್ಷೈಶ್ಚ ಸಂಯುಕ್ತಃ ಪರಿತೋವಲಯಾಕೃತಿಃ ॥ ೫೪ ॥
ನಾನಾ ಮೃಗಗಣಾಕೀರ್ಣೋ ನಾನಾಧಾತುಭಿರನ್ವಿತಃ ।
ಋಷಿಭಿಸ್ತಾಪಸಶ್ರೇಷ್ಠೈಸ್ಸೇವಿತೋ ವಿರರಾಜಹ ॥ ೫೫ ॥
ಏತಸ್ಮಿನ್ನಂತರೇ ಕಾಲೇ ಭಗವಾನ್ ಪುರುಷೋತ್ತಮಃ ।
ವೈಕುಂಠೇಶೋಽಪಿ ಭಗವಾನ್ ಮಾಯಯಾ ಸಹಿತೋ ವಿಭುಃ ॥ ೫೬ ॥
ಪರೀಕ್ಷಾರ್ಥಂ ತು ಲೋಕಾನಾಂ ಮಾಯಯಾವಬ್ಧಿಮೇಖಲಾಮ್ ।
ತತ್ರ ತತ್ರ ವನೋದ್ದೇಶೇ ಪರ್ವತೇಷು ಗುಹಾಸುಚ ॥ ೫೭ ॥
ವಿಚಚಾರ ಮಹಾವಿಷ್ಣುರ್ದೇವೈಸ್ಸಾರ್ಧಂ ಮಹಾಪ್ರಭುಃ ।
ಹೇಮಾದ್ರಿಂ ಚ ತತೋ ದೃಷ್ಟ್ವಾ ನಾನಾವೃಕ್ಷೈಸ್ಸುರಂಜಿತಃ ॥ ೫೮ ॥
ತತ್ರ ವಾಸಂ ಚಕಾರಾಸೌ ಭಗವಾನ್ ಭೂತಭಾವನಃ ।
ತತ್ರಸ್ಥಿತ್ವಾ ಋಷೀಣಾಂ ಚ ಚಕ್ರೇ ಸಂರಕ್ಷಣಂ ಪ್ರಭುಃ ॥ ೫೯ ॥
ತತ್ರ ಕಶ್ಚಿದೃಷಿಶ್ರೇಷ್ಠಃ ಶಾಕಲೋ ನಾಮ ವೈ ಋಷಿಃ ।
ಆಸೀಕ್ತಿಲ ಮಹಾಶೈಲೇ ರಂಗನಾಥಂ ಸಮರ್ಚಯನ್ ॥ ೬೦ ॥

ಋಷಿಶ್ರೇಷ್ಠನು ರಂಗನಾಥನನ್ನು ಪೂಜಿಸುತ್ತಿದ್ದನು. ಎಲೈ ಮಹಾರಾಜನೇ ಅಲ್ಲಿ ಋಷಿಯಿಂದ ಪೂಜಿಸಲ್ಪಟ್ಟ ರಂಗನಾಥನು ಹೇಮಾದ್ರಿಯಲ್ಲಿ ಇದ್ದನು. ಯಾವ ಜನರು ನಿತ್ಯವೂ ಆ ಮಹಾವಿಷ್ಣುವಿನ ದರ್ಶನವನ್ನು ಮಾಡುತ್ತಾರೋ ಅವರೆಲ್ಲರೂ ಪಾಪಮುಕ್ತರಾಗಿ ಪರಮಗತಿಯನ್ನು ಹೊಂದುತ್ತಾರೆ.

ಭೂಲೋಕದಲ್ಲಿ ರಂಗನಾಥನನ್ನು ಪೂಜಿಸುವ ಮನುಷ್ಯರು ಕೃತಕೃತ್ಯರಾಗಿ ಮುಕ್ತರೇ ಆಗುತ್ತಾರೆ. ಇದರಲ್ಲಿ ಸಂದೇಹವಿಲ್ಲ. ಮಾಘಮಾಸದಲ್ಲಿ ಸೂರ್ಯನು ಮಕರದಲ್ಲಿರುವಾಗ ರಂಗನಾಥನನ್ನು ಪೂಜಿಸುವ ಧರ್ಮಾತ್ಮನು ಮೋಕ್ಷವನ್ನು ಪಡೆಯುತ್ತಾನೆ. ಆದ ಕಾರಣ ಎಲೈ ರಾಜನೇ, ಪುಣ್ಯತಮವೆಂದೆಣಿಸುವ ಆ ಬೆಟ್ಟವು ನಿನ್ನಿಂದ ಸೇವಿಸಲ್ಪಡತಕ್ಕದ್ದು. ಎಲೈ ತಂದೆಯೇ ಉತ್ತರದಿಕ್ಕಿನಲ್ಲಿ ನಾರಾಯಣಾಚಲವು

ಪೂಜಿತಸ್ತತ್ರ ಋಷಿಣಾ ರಂಗನಾಥೋ ಮಹಾಪ್ರಭುಃ ।
ಅಭೂತತ್ರ ಮಹಾರಾಜ ಪರ್ವತೇ ಹೇಮನಾಮಕೇ ॥ ೬೧॥
ಯೇ ಜನಾಸ್ತಂ ಮಹಾವಿಷ್ಣುಂ ನಿತ್ಯಮಾಲೋಕಯಂತಿ ವೈ ।
ತೇ ಸರ್ವೇ ಪಾಪನಿರ್ಮುಕ್ತಾ ಯಾಸ್ಯಂತಿ ಪರಮಾಂ ಗತಿಮ್ ॥ ೬೨ ॥
ರಂಗನಾಥಸ್ಯ ಪೂಜಾಂಚ ಯೇ ಕುರ್ವಂತಿ ನರಾಭುವಿ ।
ತೇ ನರಾ ಕೃತಕೃತ್ಯಾಶ್ಚ ಮುಕ್ತಾ ಏವ ನಸಂಶಯಃ ॥ ೬೩ ॥
ಮಕರಸ್ಥೇ ರವೌ ಮಾಘೇ ರಂಗನಾಥಂ ಮಹಾಪ್ರಭುಮ್ ।
ಯಃ ಪೂಜಯತಿ ಧರ್ಮಾತ್ಮಾ ಕೈವಲ್ಯಂ ಪ್ರತಿಪದ್ಯತೇ ॥ ೬೪ ॥
ತಸ್ಮಾದ್ಗಿರಿಸ್ತ್ವಯಾ ರಾಜನ್ ಸೇವ್ಯಃ ಪುಣ್ಯತಮಃ ಸ್ಮೃತಃ ।
ಕೌಬೇರ್ಯಾಂ ದಿಶಿ ವೈ ತಾತ ಆಸೀನ್ನಾರಾಯಣಾಚಲಃ ॥ ೬೫ ॥
ದಿವ್ಯಸಾನು ಸಮಾಯುಕ್ತಃ ಕಾಸಾರೈಸ್ಸಮಲಂಕೃತಃ ।
ನಾನಾವೃಕ್ಷೈಲಸ್ಸುಪುಸ್ಪಾಢ್ಯೈಲಸ್ಸರ್ವತೋಲಂಕೃತೋ ಗಿರಿಃ ॥ ೬೬ ॥
ರರಾಜ ನರಶಾರ್ದೂಲ ಮೇದಿನ್ಯಾಂ ತು ಸುವಿಶ್ರುತಃ ।
ಮಲಯಾದ್ರೌ ಸ್ಥಿತೋ ವಿಷ್ಣುಃ ಕೇಶವಃ ಕ್ಲೇಶಮರ್ದನಃ ॥ ೬೭ ॥

ಇತ್ತು. ಆ ಬೆಟ್ಟವು ದಿವ್ಯವಾದ ಸಾನುಪ್ರದೇಶಗಳಿಂದ ತುಂಬಿದ ನಾನಾ ವೃಕ್ಷಗಳಿಂದಲೂ ಅಲಂಕೃತವಾಗಿ ಭೂಲೋಕದಲ್ಲಿ ಬಹಳ ಖ್ಯಾತಿಯಿಂದ ಮೆರೆಯುತ್ತಿತ್ತು. ಮಲಯ ಪರ್ವತದಲ್ಲಿದ್ದ, ಕ್ಲೇಶವನ್ನು ಹೋಗಲಾಡಿಸುವ ವಿಷ್ಣುವು, ಶೇಷಾದ್ರಿಯನ್ನು ನೋಡಲಿಚ್ಛಿಸಿ ಗರುಡಾರೂಢನಾಗಿ ಹೊರಟು ಮಧ್ಯೆ ನಾರಾಯಣಾಚಲವನ್ನು ನೋಡಿ ಆಶ್ಚರ್ಯಪಟ್ಟು ಅಲ್ಪಸ್ವಲ್ಪ ಕಾಲವಿದ್ದು ಸ್ತ್ರೀಪರಿವೃತನಾಗಿ ವಿಹರಿಸಿದನು.

ಅನಂತರದಲ್ಲಿ ತ್ರಿಲೋಕ ವಿಖ್ಯಾತನಾದ ಆ ಕೇಶವನು ಶ್ರೀನಿವಾಸಾಧಿಷ್ಠಿತವಾದ ವೇಂಕಟಾದ್ರಿಗೆ ಋಷಿಗಳೊಡನೆ ಜಾಗ್ರತೆಯಾಗಿ ಹೊರಟನು. ಕೇಶವನು ವಾಸಮಾಡಿದ್ದರಿಂದ ಕೇಶವಾದ್ರಿ ಎಂದು ಕರೆಯಲ್ಪಟ್ಟ ಆ ಪರ್ವತವು ಋಷಿಗಳಿಂದ ನಾರಾಯಣಾದ್ರಿ ಎಂದು ಪ್ರಸಿದ್ಧಿಯಾಯಿತು.

ಶೇಷಾದ್ರಿಂ ಗಂತುಕಾಮೋಸೌ ಪ್ರತಸ್ಥೇ ಗರುಡಾಸನಃ ।
ನಾರಾಯಣಾದ್ರಿ ಮಧ್ಯೇತು ದೃಷ್ಟ್ವಾ ವಿಸ್ಮಯಮಾಗತಃ ॥ ೬೮ ॥
ತತ್ರಸ್ಥಿತ್ವಾ ಕಿಯತ್ಕಾಲಂ ರೇಮೇ ರಾಮಾಭಿರಾವೃತಃ ।
ಪ್ರಖ್ಯಾತೋ ಋಷಿಭಿರ್ಭೂಪ ತ್ರಿಷುಲೋಕೇಷು ಸರ್ವದಾ ॥ ೬೯ ॥
ತತಃ ಕೇಶವೋ ರಾಜನ್ ಯಯೌ ತೀವ್ರಂ ಶಿಲೋಚ್ಚಯಮ್ ।
ವೇಂಕಟಾದ್ರಿರಿತಿ ಖ್ಯಾತಂ ಶ್ರೀನಿವಾಸೇನ ಸೇವಿತಮ್ ॥ ೭೦ ॥
ಕೇಶವೇನ ಕೃತೇ ವಾಸೇ ಕೇಶವಾದ್ರಿರಿತಿ ಶ್ರುತಃ ।
ಪ್ರಖ್ಯಾತೋ ಋಷಿಭಿರ್ಭೂಪ ಶೈಲೋ ನಾರಾಯಣಾಹ್ವಯಃ ॥ ೭೧ ॥
ತಸ್ಮಿನ್ ಶೈಲೇತು ತ್ವಂ ರಾಜನ್ ತೀರ್ಥೇ ಸ್ನಾನಂ ಸಮಾಚರ ।
ಇತಿ ಸರ್ವಂ ಮಯಾಖ್ಯಾತಂ ವೃತ್ತಾಂತಮಖಿಲಂ ಶುಭಮ್ ॥ ೭೨ ॥
ಇತ್ಯುಕ್ತಸ್ತು ವಸಿಷ್ಠೇನ ನಿಮಿಃ ಪರಮಧಾರ್ಮಿಕಃ ।
ಉವಾಚ ಚ ಮುನಿಶ್ರೇಷ್ಠಂ ವಿನಯಾವನತೋನೃಪ ॥ ೭೩ ॥
ಶ್ರೀರಾಜೋವಾಚ :
ಈಶಾನ್ಯೇಚ ಮಹಾಪ್ರಾಜ್ಞ ಆಸೀದ್ವೃಷಭ ನಾಮಕಃ ।

ವಸಿಷ್ಠನಿಂದ ಈ ರೀತಿಯಾಗಿ ಹೇಳಲ್ಪಟ್ಟ ಪರಮಧರ್ಮಿಷ್ಠನಾದ ನಿಮಿಯು ವಿನಯದಿಂದ ನಮ್ರನಾಗಿ ಆ ಋಷಿಶ್ರೇಷ್ಠನನ್ನು ಕುರಿತು

ಶ್ರೀ ರಾಜನು, ಎಲೈ ಮಹಾಪ್ರಾಜ್ಞನೇ, ಈಶಾನ್ಯದಿಕ್ಕಿನಲ್ಲಿ ವೃಷಭಾದ್ರಿ (ಈಗಿನ ನಂದೀಬೆಟ್ಟ) ಇತ್ತೆಂತಲೂ, ಆ ಶಿಖರವು ಪುಣ್ಯಪ್ರದವೆಂತಲೂ, ನಿನ್ನಿಂದ ಹೇಳಲ್ಪಟ್ಟಿತು. ಆ ವೃಷಭಾದ್ರಿಯ ಮಾಹಾತ್ಮೆಯನ್ನು ವಿಸ್ತಾರವಾಗಿ ಹೇಳು ಎಂದು ಕೇಳಿದನು.

ಆಗ ಶ್ರೀ ವಸಿಷ್ಠರು, ಎಲೈ ರಾಜನೇ, ನಾನಾ ಮೃಗಗಳ ಸಮೂಹಗಳಿಂದ ಕೂಡಿದ ಅನೇಕ ವೃಕ್ಷಗಳಿಂದ ವ್ಯಾಪ್ತವಾದ ಐದು ಶಿಖರಗಳುಳ್ಳ ಒಂದಾನೊಂದು ಶ್ರೇಷ್ಠವಾದ ಪರ್ವತವಿದ್ದಿತು. ಆ ಬೆಟ್ಟದ ಐದು ಶಿಖರಗಳಲ್ಲಿಯೂ ದೇವತೆಗಳು ವಾಸವಾಗಿದ್ದರು.

ಇತಿ ತ್ವಯಾ ಪುರಾಪ್ರೋಕ್ತಂ ಕೋಟಿಃ ಪುಣ್ಯಪ್ರದಶ್ಶುಭಃ ॥ ೭೪ ॥
ವೃಷಭಾಖ್ಯ ಗಿರೇಸ್ತಸ್ಯ ಮಾಹಾತ್ಮ್ಯಂ ವದವಿಸ್ತರಾತ್ ।
ಶ್ರೀ ವಸಿಷ್ಠೋವಾಚ :
ಆಸೀದ್ಗಿರಿವರಃ ಕಶ್ಚಿಪಂಚಶೃಂಗ ಸಮನ್ವಿತಃ ॥ ೭೫ ॥
ಪಂಚಶೃಂಗೇಷು ಸರ್ವೇಷು ದೇವ್ಯೈರದ್ಯಾಸಿತೋ ಗಿರಿಃ ।
ರರಾಜಾಥ ಮಹೀಪಾಲ ಭೂಮೌ ಗಿರಿವರೋತ್ತಮಃ ॥ ೭೬ ॥
ವಿಖ್ಯಾತಿಂ ಚ ಗಿರೇಸ್ತಸ್ಯ ಪ್ರವಕ್ಷ್ಯಾಮಿ ಸಮಾಗ್ರತಃ ।
ಏಕದಾ ಭ್ಯಗವಾನ್ ಶಂಭುರ್ಮಲಯಾದ್ರೌ ಮಹಾಗಿರೌ ॥ ೭೭ ॥
ಅಸುರಂ ವಿಪ್ರರೂಪಂ ತು ದೃಷ್ಟ್ವಾ ತಸ್ಮಿನ್ ಸುವಿಸ್ಮಿತಃ ।
ಬಭೂವ ಪುರುಷ ಶ್ರೇಷ್ಠ ಮಾಯಿನಂತಂ ಸುರೂಪಿಣಮ್ ॥ ೭೮ ॥
ಜನಾರ್ಧನಾನ್ಮಹಾವಿಷ್ಣೋರ್ವಿಪ್ರರೂಪಂ ಸಮಾಶ್ರಿತಮ್ ।
ಪಿನಾಕಂ ಧನುರಾದಾಯ ಹತ್ವಾ ತಂ ಧೂಮ್ರನಾಮಕಮ್ ॥ ೭೯ ॥
ತತ್ರ ರೇಮೇ ಮಹಾಶಂಭುರ್ದೇವ್ಯ ಸಹ ಹರಸ್ವರಾಟ್ ।
ಉಶಿತ್ವಾಸು ಚಿರಂ ಕಾಲಂ ನಂದಿನಾ ಸಹ ಭೂಮಿಪ ॥ ೮೦ ॥

ಇಂತಹ ಪರ್ವತವು ಭೂಲೋಕದಲ್ಲಿ ಕಂಗೊಳಿಸುತ್ತಿತ್ತು. ಆ ಪರ್ವತದ ಪ್ರಖ್ಯಾತಿಯನ್ನು ಸಮಗ್ರವಾಗಿ ಹೇಳುತ್ತೇನೆ. ಒಂದಾನೊಂದು ಕಾಲದಲ್ಲಿ ಷಡ್ಗುಣೈಶ್ವರ್ಯ ಸಂಪನ್ನನಾದ ಈಶ್ವರನು, ಮಲಯ ಪರ್ವತದಲ್ಲಿ ರೂಪವಂತನಾದ ಮಾಯಾಕಾರದ ಬ್ರಾಹ್ಮಣರೂಪವನ್ನು ಧರಿಸಿದ ಒಬ್ಬ ರಾಕ್ಷಸನನ್ನು ನೋಡಿ, ಆಶ್ಚರ್ಯಪಟ್ಟು ವಿಷ್ಣುವಿನಿಂದ ಪಿನಾಕವೆಂಬ ಧನುಸ್ಸನ್ನು ತೆಗೆದುಕೊಂಡು ಬ್ರಾಹ್ಮಣರೂಪವನ್ನು ತಾಳಿದ ಧೂಮ್ರನೆಂಬ ಆ ರಾಕ್ಷಸನನ್ನು ಕೊಂದು, ಪಾರ್ವತಿಯೊಡನೆ ವಿಹರಿಸುತ್ತ ನಂದಿಯೊಡನೆ ಬಹುಕಾಲ ವಾಸವಾಗಿದ್ದನು. ಲೋಹಿತಾಕ್ಷನೆಂಬ ಮತ್ತೊಬ್ಬ ರಾಕ್ಷಸನು ಆ ಪರ್ವತದಲ್ಲಿಯೇ ಸಞ್ಚರಿಸುತ್ತಿದ್ದನು.

ಒಂದಾನೊಂದು ದಿನ ಈಶ್ವರನು ವಸ್ತ್ರರಹಿತಳಾದ ಪಾರ್ವತಿಯೊಡನೆ ಕ್ರೀಡಿಸುತ್ತಿರಲು,

ತಸ್ಮಿತ್ಕಾಲೇ ಲೋಹಿತಾಕ್ಷ ಚಚಾರ ಗಿರಿಕಾನನೇ ।
ಲೋಹಿತಾಕ್ಷೋಪಿ ತಾಂ ದೇವೀಂ ವಿವಸ್ತ್ರಾಂ ಗಿರಿಜಾಂ ತದಾ ॥ ೮೧ ॥
ದೃಷ್ಟ್ವಾ ಮೋಹಂ ಸಮಾಪನ್ನಃ ಪ್ರದ್ಯುಮ್ನಸ್ಯ ವಶಂ ಗತಃ ।
ನಗ್ನಾಂ ದೇವೀಂ ಸಮಾಲೋಕ್ಯ ಸಮಾಹರ್ತುಂ ಪ್ರಚಕ್ರಮೇ ॥ ೮೨ ॥
ಯೇತತ್ ಜ್ಞಾತ್ವಾ ಮಹಾದೇವೋ ಪಿನಾಕಂ ಧನುರಾದಧೇ ।
ಶರಾನ್ ವವರ್ಷ ದೇವೇಶಃ ಲೋಹಿತಾಕ್ಷೇ ಮಹಾಸುರೇ ॥ ೮೩ ॥
ಸೋಽಪಿ ಖಡ್ಗಂ ಸಮಾದಾಯ ಯುದ್ಧಂ ತೇನ ಚಕಾರ ಹ ।
ತತಃ ಶಂಕರದೇವೋಸೌ ಚಿತ್ವಾ ಖಡ್ಗಂ ಶರೇಣ ವೈ ॥ ೮೪ ॥
ಶಿರಶ್ಚ ಕರ್ತ ಖಡ್ಗೇನ ಬಾಹೂನ್ಛಿತ್ವಾ ಶರೈರಪಿ ।
ಮಖೇ ರಮೇಶ ದೈವತ್ಯೆ ಯುದ್ಧ ರೂಪೇ ಮಹಾಪ್ರಭುಃ ॥ ೮೫ ॥
ಪಶುಂ ಚಕಾರ ಯೋ ದೇವಃ ರಾಕ್ಷಸಂ ನೃಪಪುಂಗವ ।
ವವೃಷುಪುಷ್ಪವೃಷ್ಟಿಂ ಚ ದೇವಲೋಕೇಸ್ಥಿತಾಃ ಸುರಾಃ ॥ ೮೬ ॥
ತುಷ್ಟುವುರ್ವಿವಿಧೈಃ ಸ್ತೋತ್ರೈಃ ಶಂಕರಂ ಲೋಕಶಂಕರಮ್ ।
ತತಃ ಶಂಕರ ದೇವೇಶ ಸರ್ವದೇವೈರಭೀಷ್ಟುತಃ ॥ ೮೭ ॥

ಲೋಹಿತಾಕ್ಷನು ವಸ್ತ್ರರಹಿತಳಾದ ಪಾರ್ವತಿಯನ್ನು ನೋಡಿ ಮೋಹಾವಿಷ್ಟನಾಗಿ ಅವಳನ್ನು ತೆಗೆದುಕೊಂಡು ಬರಲು ಉದ್ಯುಕ್ತನಾದನು. ಮಹಾದೇವನು ಇದನ್ನು ತಿಳಿದು ಪಿನಾಕವೆಂಬ ಧನುಸ್ಸನ್ನು ತೆಗೆದುಕೊಂಡು ಮಹಾರಾಕ್ಷಸನಾದ ಆ ಲೋಹಿತಾಕ್ಷನ ಮೇಲೆ ಬಾಣಗಳನ್ನು ಸುರಿಸಿದನು. ಆ ರಾಕ್ಷಸನು ಕತ್ತಿಯನ್ನು

ತೆಗೆದುಕೊಂಡು ಅವನೊಡನೆ ಯುದ್ಧಮಾಡಿದನು. ಅನಂತರದಲ್ಲಿ ಶಂಕರನು ಬಾಣದಿಂದ ಅವನ ಕತ್ತಿಯನ್ನು ಕತ್ತರಿಸಿ ತನ್ನ ಖಡ್ಗದಿಂದ ಅವನ ತಲೆಯನ್ನೂ, ಬಾಣಗಳಿಂದ ಅವನ ಬಾಹುಗಳನ್ನೂ ಕತ್ತರಿಸಿ, ಯುದ್ಧರೂಪವಾದ ವಿಷ್ಣು ಯಜ್ಞದಲ್ಲಿ ಆ ರಾಕ್ಷಸನನ್ನು ಪಶುವನ್ನಾಗಿ ಮಾಡಲು ದೇವಲೋಕದಲ್ಲಿದ್ದ ದೇವತೆಗಳು ಹೂಮಳೆಯನ್ನು ಕರೆದು ಲೋಕಸುಖಕರನಾದ ಈಶ್ವರನನ್ನು ಬಗೆಬಗೆಯಾದ ಸ್ತೋತ್ರಗಳಿಂದ ತೃಪ್ತಿಪಡಿಸಿದರು. ಅನಂತರದಲ್ಲಿ ಸಕಲ ದೇವತೆಗಳಿಂದಲೂ

ಪಿನಾಕಂ ಧನುರಾದಾಯ ಪ್ರತಸ್ಥೇ ಸಮಿತಿಂ ಪ್ರತಿ ।
ಮಧ್ಯೇ ದೃಷ್ಟ್ವಾ ಮಹಾ ಶೈಲಂ ಪಂಚಶೃಂಗಂ ಮಹೋಚ್ಛ್ರಯಮ್ ॥
ತಂ ದೃಷ್ಟ್ವಾ ವಿಸ್ಮಯಾವಿಷ್ಟಸ್ತಸ್ಥೌ ತತ್ರ ಮಹಾಗಿರೌ ।
ಜಟ ವಿಸ್ಸೃಜ್ಯ ಪಿಂಗಾಬಾಃ ಸ್ನಾತೋ ನಂದಿ ಸರೋವರೇ ॥ ೮೯ ॥
ಸ್ನಾನಂ ಚಕಾರ ದೇವೇಶಃ ಪಾರ್ವತ್ಯಾ ಸಹಿತೋಮಲೇ ।
ಸ್ನಾತ್ವಾ ತತ್ರ ಮಹಾರಾಜ ಗಿರೌ ನಂದಿಸರೋವರೇ ॥ ೯೦ ॥
ಸರೋವರಸ್ಯ ತೀರೇತು ಸ್ಥಿತವಾನ್ ಶಂಕರಃ ಪ್ರಭುಃ ।
ಜಟಾಜೂಟಾ ಸುನದ್ಯಶ್ಚ ಪಂಚೋತ್ಪನ್ನಾ ಸುಪಂಚಸು ॥ ೯೧ ॥
ಶಿಖರೇಷು ಚ ಶೈಲಸ್ಯ ಸರ್ವ ದೇಶೇಷು ವಿಶ್ರುತಾಃ ।
ಪಿನಕಿನೀ ಚ ಪಾಪಘ್ನಿ ತಥಾ ಚಿತ್ರಾವತೀ ಶುಭಾ ॥ ೯೨ ॥
ನದೀ ಸ್ವರ್ಣಮುಖೀ ನಾಮಾ ಪಿಂಗಲಾಕ್ಷೀ ತಥೈವ ಚ ।
ಏವಂ ಪಂಚ ಮಹಾನದ್ಯಾ ಸರ್ವ ಕಾಮ ಫಲಪ್ರದಾಃ ॥ ೯೩ ॥
ತಸ್ಮಿನ್ ಗಿರೌ ಮಹಾರಾಜಾ ಸಂತಿ ತೀರ್ಥಾನಿ ವೈ ಶ್ರುತಮ್ ।
ತಸ್ಮಾತ್ ಸರ್ವ ಪ್ರಯತ್ನೇನ ತಾಸು ಸ್ನಾನಂ ಸಮಾಚರೇತ್ ॥ ೯೪ ॥

ಸ್ತುತಿಸಲ್ಪಟ್ಟ ದೇವದೇವನಾದ ಆ ಶಂಕರನು ಪಿನಾಕಧನುಸ್ಸನ್ನು ತೆಗೆದುಕೊಂಡು ಹೊರಟನು. ದಾರಿಯಲ್ಲಿ ಐದು ಶಿಖರಗಳುಳ್ಳ ಅತ್ಯುನ್ನತವಾದ ಮಹಾಪರ್ವತವನ್ನು ನೋಡಿ ಆಶ್ಚರ್ಯಪಟ್ಟು ಆ ಪರ್ವತದಲ್ಲಿ ನಿಂತು ಹೊಂಬಣ್ಣದ ಜಡೆಗಳನ್ನು ಬಿಚ್ಚಿ ಪಾರ್ವತಿಯೊಡನೆ ನಿರ್ಮಲವಾದ ನಂದಿಸರಸ್ಸಿನಲ್ಲಿ ಸ್ನಾನಮಾಡಿ, ಆ ಸರೋವರದ ದಡದಲ್ಲಿ ಇದ್ದನು. ಶಿವನ ಜಟಾಜೂಟಗಳಿಂದ ಆ ಐದು ಶಿಖರಗಳಲ್ಲಿ, ಪಾಪನಾಶಕವಾದ ಪಿನಾಕಿನೀ, ಪಾಪಘ್ನೀ, ಮಂಗಳಕರವಾದ ಚಿತ್ರಾವತೀ, ಸ್ವರ್ಣಮುಖೀ, ಪಿಂಗಳಾಕ್ಷೀ ಎಂಬ ಕೋರಿದ ಫಲಗಳೆಲ್ಲವನ್ನೂ ಕೊಡುವ ಐದು ಮಹಾನದಿಗಳು ಹುಟ್ಟಿದವು. ಎಲೈ ರಾಜನೇ, ಆ ಪರ್ವತದಲ್ಲಿ ತೀರ್ಥಗಳು ಇವೆ ಎಂದು ಕೇಳಲ್ಪಟ್ಟಿತು. ಆದ ಕಾರಣ ಸರ್ವಪ್ರಯತ್ನದಿಂದಲೂ ಅವುಗಳಲ್ಲಿ ಸ್ನಾನವನ್ನು ಮಾಡಬೇಕು. ಎಂಟು ದಿಕ್ಕುಗಳಲ್ಲಿಯೂ ಪುಣ್ಯಪ್ರದಗಳೂ, ಮಂಗಳಕರಗಳೂ ಆದ

ಅಷ್ಟ ದಿಕ್ಷು ಚ ಸರ್ವಾಸು ಶೈಲಾಃ ಪುಣ್ಯಪ್ರದಾಃ ಶುಭಾಃ ।
ಅಸ್ತಿ ಮಧ್ಯೇ ವನಾನಾಂತು ತೇಷಾಂ ಚ ಸುಮಹಾನ್ಗಿರಿಃ ॥ ೯೫ ॥
ಋಷಿದೇವಗಣೈರ್ಯುಕ್ತೋ ಹರಿಣಾದಿಷ್ಟಿತೋ ಭುವಿ ।
ವಿರರಾಜ ಮಹಾರಾಜ ಗಿರಿಶೈಲೇಷು ಮಧ್ಯಗಃ ॥ ೯೬ ॥
ಧಾತುಭಿಸ್ಸಾನುಭಿಶ್ಚೈವ ತೀರ್ಥಾನಾಂ ಚ ಗಣೈಸ್ಸಹ ।
ತಸ್ಮಿನ್ಗಿರೌ ಚ ಭೂಪಾಲ ಭೂದಾನಂ ಯಃ ಕರೋತಿ ಚ ॥ ೯೭ ॥
ಚತುಸ್ಸಾಗರ ಪರ್ಯಂತಂ ಭೂದಾನಾದ್ಯತ್ಫಲಂ ಲಭೇತ್ ।
ತತ್ಫಲಂ ಸಮವಾಪ್ನೋತಿ ಅಲ್ಪಭೂಮಿಪ್ರದಾನತಃ ॥ ೯೮ ॥
ಗೋದಾನಂ ಯೇ ಪ್ರಕುರ್ವಂತಿ ಶ್ರೀ ಹಸಿಶಿಖರೇಮಲೇ ॥ ೯೯ ॥
ಸನ್ನಿಧೌ ಚ ಹರೇಸ್ತಸ್ಯ ತದಕ್ಷಯ ಫಲಂ ಲಭೇತ್ ।
ಏಕಧೇನು ಪ್ರದಾನೇನ ವಕ್ಷ್ಯೇ ಪುಣ್ಯ ಫಲಂ ಶೃಣು ॥ ೧೦೦ ॥
ಗೋ ಸಹಸ್ರ ಫಲಂ ರಾಜನ್ ಗಂಗಾತೀರೆ ರವಿಗ್ರಹೇ ।
ದಾನಾದ್ಯತ್ಫಲಮಾಪ್ನೋತಿ ತತ್ಫಲಂ ಪ್ರಾಪ್ಯತೇ ನರೈಃ ॥ ೧೦೧ ॥
ಶ್ರೀಹಸ್ತಿ ಶಿಖರೇ ತತ್ರ ತೀರ್ಥೇ ಸ್ನಾತ್ವಾ ತು ಯೋ ನರಃ ।
ತಿಲದಾನಂ ಸ್ವರ್ಣದಾನಂ ರೌಪ್ಯಂ ತಾಮ್ರಂ ಚ ಸೀಸಕಂ ॥ ೧೦೨ ॥

ಪರ್ವತಗಳು ಇವೆ. ಆ ಕಾಡುಗಳ ಮಧ್ಯೆ ಋಷಿಗಳಿಂದಲೂ ದೇವಗಣಗಳಿಂದಲೂ ಕೂಡಿದ ಭೂಲೋಕದಲ್ಲಿ ವಿಷ್ಣುವಿಗೆ ವಾಸಸ್ಥಾನವಾದ ಮಹಾ ಪರ್ವತವು ಇದೆ.

ಆ ಪರ್ವತವು ಗೈರಿಕಾದಿ ಧಾತುಗಳಿಂದಲೂ, ಬೆಟ್ಟದ ಮೇಲಿನ ಸಮಭೂಮಿಗಳಿಂದಲೂ, ತೀರ್ಥಗಳ ಸಮೂಹಗಳಿಂದಲೂ ಕಂಗೊಳಿಸುತ್ತಿತ್ತು. ಎಲೈ ರಾಜನೇ ಆ ಪರ್ವತದಲ್ಲಿ ಭೂದಾನ ಮಾಡುವವನು ನಾಲ್ಕು ಸಮುದ್ರಗಳವರೆವಿಗೂ ಇರುವ ಭೂಮಿಯ ದಾನದಿಂದ ಉಂಟಾಗುವ ಫಲವನ್ನು ಹೊಂದುತ್ತಾನೆ. ಪವಿತ್ರವಾದ ಕರಿಗಿರಿ ಶಿಖರದಲ್ಲಿ ಆ ವಿಷ್ಣುಸಾನ್ನಿಧ್ಯದಲ್ಲಿ ಗೋದಾನ ಮಾಡಿದವರಿಗೆ ಅಕ್ಷಯವಾದ ಫಲವು ಲಭಿಸುವುದು. ಒಂದು ಗೋದಾನ ಮಾಡಿದುದರಿಂದ ಉಂಟಾಗುವ ಪುಣ್ಯಫಲವನ್ನು ಹೇಳುತ್ತೇನೆ ಕೇಳು. ಗಂಗಾತೀರದಲ್ಲಿ ಸೂರ್ಯಗ್ರಹಣಕಾಲದಲ್ಲಿ

ಅಯಸಶ್ಚ ತಥಾ ಕಾಸ್ಯಂ ಆಜ್ಯಂ ತೂಲಂ ಚ ಭೂಮಿಪ ।
ಏತೇಷಾಂ ಚ ಪ್ರದಾನೇನ ಸನ್ನಿಧೌ ಶಾಙ್ಗಧನ್ವನಃ ॥ ೧೦೩ ॥
ಅಪಮೃತ್ಯುಂ ಕಾಲಮೃತ್ಯುಂ ಜಿತ್ವಾ ಮೋಕ್ಷಮವಾಪ್ನುಯಾತ್ ।
ವಾಸೋದಾನಂ ತು ಯಃ ಕುರ್ಯಾತ್ ಶೈಲೇ ಕುಸುಮನಾಮಕೇ ॥
ತೀರ್ಥೇಷು ಸ್ನಾನಶೀಲಾಯಾ ಶೀತಾರ್ಥಾಯಚ ಭೂಪತೇ ।
ಬರ್ಹಿಷ್ಠಾಯ ಬ್ರಾಹ್ಮಣಾಯ ಪುರಾಣ ಪಠಣಾಯ ಚ ॥ ೧೦೪ ॥
ಯೋ ದಧಾತಿ ಚ ದಾನಾನಿ ತಸ್ಯ ಪುಣ್ಯ ಫಲಂ ಶ್ರುಣೂ ।
ಆಯುಶ್ಯಂ ಪರಮಾರೋಗ್ಯಂ ಯಶೋ ಧೈರ್ಯಂ ಚ ವಿಂದತಿ ॥ ೧೦೫
ಧಾನ್ಯದಾನಂ ತು ಯಃ ಕುರ್ಯಾತ್ ಬ್ರಾಹ್ಮಣಾಯ ಕುಟುಂಬಿನೇ ।
ಅನ್ನವಾನ್ ಧನವಾನ್ ಲೋಕೇ ಜಾಯತೇ ನಾತ್ರ ಸಂಶಯಃ ॥ ೧೦೬ ॥
ಗಜಾಶ್ವ ಮಹಿಷಾಣಾಂ ಚ ಯಃ ಕುರ್ಯಾದ್ದಾನಮುತ್ತಮಮ್ ।
ಸಾರ್ವಭೌಮೋ ಭವೇದ್ರಾಜನ್ ಕೋಟಿ ಜನ್ಮ ನಸಂಶಯಃ ॥ ೧೦೭ ॥
ಅಜಡುಶ್ಚ ಗಯೋರ್ದಾನಂ ಮಾರ್ದಕೃಷ್ಣಾಜಿನಶ್ಚ ಚ ।
ತುಲಾ ಪುರುಷ ದಾನಾನಿ ಯಃ ಕರೋತಿ ನರೇಶ್ವರಃ ॥ ೧೦೮ ॥

ಸಾವಿರ ಗೋವುಗಳ ದಾನದಿಂದ ಉಂಟಾಗುವ ಫಲವನ್ನು ಜನರು ಹೊಂದುತ್ತಾರೆ. ಆ ಶಿಖರದ ತೀರ್ಥದಲ್ಲಿ ಸ್ನಾನಮಾಡಿ ಎಳ್ಳು, ಚಿನ್ನ, ಬೆಳ್ಳಿ, ತಾಮ್ರ, ಸೀಸ, ಕಬ್ಬಿಣ, ಕಂಚು, ತುಪ್ಪ, ಹತ್ತಿ ಇವುಗಳನ್ನು ಆ ವಿಷ್ಣುವಿನ ಸನ್ನಿಧಿಯಲ್ಲಿ ದಾನಮಾಡುವ ಮನುಜನು ಅಪಮೃತ್ಯುವನ್ನು, ಕಾಲಮೃತ್ಯುವನ್ನು ಗೆದ್ದು ಮೋಕ್ಷವನ್ನು ಪಡೆಯುವನು. ಕುಸುಮಾಚಲದ ತೀರ್ಥಗಳಲ್ಲಿ ಸ್ನಾನಮಾಡುವ ಸ್ವಭಾವವುಳ್ಳವನಿಗೂ ಚಳಿಯಿಂದ ಪೀಡಿಸಲ್ಪಟ್ಟವನಿಗೂ, ವಸ್ತ್ರದಾನವನ್ನು ಬ್ರಹ್ಮನಿಷ್ಠನಾದ ಬ್ರಾಹ್ಮಣನಿಗೂ, ಪುರಾಣಪಠಣವನ್ನು ಮಾಡುವವನಿಗೂ, ದಾನಗಳನ್ನು ಕೊಡುವ ಮನುಜನಿಗೆ ಉಂಟಾಗುವ ಫಲವನ್ನು ಕೇಳು. ಅವನು ಆಯುಸ್ಸನ್ನೂ, ಪರಮಾರೋಗ್ಯವನ್ನೂ, ಯಶಸ್ಸನ್ನೂ, ಧೈರ್ಯವನ್ನೂ ಪಡೆಯುತ್ತಾನೆ. ಕುಟುಂಬಿಯಾದ ಬ್ರಾಹ್ಮಣನಿಗೆ ಧಾನ್ಯವನ್ನು ಕೊಟ್ಟವನು ಲೋಕದಲ್ಲಿ ಅನ್ನವಂತನೂ, ಧನವಂತನೂ ಆಗಿ ಹುಟ್ಟುತ್ತಾನೆ. ಇದರಲ್ಲಿ ಸಂದೇಹವಿಲ್ಲ. ಉತ್ತಮವಾದ ಗಜದಾನ, ಮಹಿಷ ದಾನವನ್ನು ಮಾಡಿದವನು

ತಸ್ಯ ಪುಣ್ಯ ಫಲಂ ವಕ್ತುಂ ವಿಷ್ಣುನಾಪಿ ನ ಶಕ್ಯತೇ ।
ಗೃಹೋಪಸ್ಕರ ಯುಕ್ತಂ ಚ ಗೃಹದಾನಂ ಹರೇರ್ಗಿರೌ ॥ ೧೧೦ ॥
ಸನ್ನಿಧೌ ದೇವದೇವಸ್ಯ ಸರ್ವಾಲಂಕಾರ ಸಂಯುತಮ್ ।
ಯಃ ಕುರ್ಯಾತ್ ಭಕ್ತಿಭಾವೇನ ತಸ್ಯ ಪುಣ್ಯಫಲಂ ಶ್ರುಣು ॥ ೧೧೧ ॥
ಅನ್ನವಾನ್ ಧನವಾನ್ ಲೋಕೇ ಪುತ್ರವಾನ್ ಜಾಯತೇ ನರ ।
ಸರ್ವೇಷಾಮಶ್ರಯೋ ಭೂತ್ವಾ ಭುವಿಸಾಮ್ರಾಜ್ಯಮಶ್ನುತೇ ॥ ೧೧೨ ॥
ಅನ್ನದಾನಂ ಯಃ ಕುರ್ಯಾತ್ ಬ್ರಾಹ್ಮಣೇಭ್ಯಃ ಸ್ವಶಕ್ತಿತಃ ।
ಏಕಸ್ಯ ಚಾನ್ನದಾನೇನ ಅಕ್ಷಯಂ ಫಲಮಶ್ನುತೇ ॥ ೧೧೩ ॥
ಕಿಂ ಪುನರ್ವಿಷ್ಣುಭಕ್ತಸ್ಯ ಬ್ರಾಹ್ಮಣಸ್ಯ ವಿಶೇಷತಃ ।
ಸಿಕ್ತೇ ಸಿಕ್ತೇ ಭವತ್ಯೇವ ಕೋಟಿ ಬ್ರಾಹ್ಮಣ ಭೋಜನಮ್ ॥ ೧೧೪ ॥
ಅನ್ನವಾನ್ ಜಾಯತೇ ಭೂಮೌ ನಿಶ್ಪಾಪೋ ಮೋಕ್ಷಮಾಪ್ನುಯಾತ್ ।
ಮೌಂಜೀ ವಿವಾಹೌ ಯಃ ಕುರ್ಯಾತ್ ಬ್ರಾಹ್ಮಣಾನಾಂ ಸುತಾಯ ವೈ ॥
ತಸ್ಯ ಪುಣ್ಯ ಫಲಂ ವಕ್ತುಂ ನಾಹಂ ಶಕ್ತೋಽಸ್ಮಿ ಭೂಮಿಪ ।
ಶ್ರೋತ್ರಿಯಾಣಾಂ ಕುಲೇ ಜಾತೋ ಜ್ಞಾನಮಾಸಾದ್ಯ ವೈ ಭುವಿ ॥ ೧೧೬

ನಿಜವಾಗಿಯೂ ಕೋಟಿಜನ್ಮಗಳಲ್ಲಿ ಚಕ್ರವರ್ತಿಯಾಗುತ್ತಾನೆ. ಎತ್ತು, ಹೋತ, ಕೃಷ್ಣಾಜಿನ, ತುಲಾಭಾರ, ಈ ದಾನಗಳನ್ನು ಮಾಡುವ ಮನುಷ್ಯನ ಪುಣ್ಯವನ್ನು ಹೇಳಲು ವಿಷ್ಣುವಿಗೂ ಶಕ್ಯವಲ್ಲ. ಸಂಸಾರಕ್ಕೆ ಬೇಕಾದ ಪದಾರ್ಥಗಳಿಂದಲೂ, ಸರ್ವಾಲಂಕಾರಗಳಿಂದಲೂ ಕೂಡಿದ ಮನೆಯನ್ನು ಆ ಬೆಟ್ಟದಲ್ಲಿ ದೇವರ ಸಾನ್ನಿಧ್ಯದಲ್ಲಿ ಭಕ್ತಿಪೂರ್ವಕವಾಗಿ ದಾನಮಾಡುವವನ ಪುಣ್ಯವನ್ನು ಕೇಳು. ಅವನು ಲೋಕದಲ್ಲಿ ಅನ್ನವಂತನಾಗಿಯೂ ಧನವಂತನಾಗಿಯೂ, ಪುತ್ರವಂತನಾಗಿಯೂ ಹುಟ್ಟುತ್ತಾನೆ. ಬ್ರಾಹ್ಮಣರಿಗೆ ತನ್ನ ಶಕ್ತ್ಯಾನುಸಾರ ಅನ್ನದಾನ ಮಾಡುವವನು ಭೂಲೋಕದಲ್ಲಿ ಸಕಲರಿಗೂ ಆಶ್ರಯನಾಗಿ ಸಾಮ್ರಾಜ್ಯವನ್ನು ಪಡೆಯುತ್ತಾನೆ. ಒಬ್ಬರಿಗೆ ಅನ್ನ ಕೊಡುವುದರಿಂದ ಅಕ್ಷಯಫಲವುಂಟಾಗುವುದು. ಹೀಗಿರುವಲ್ಲಿ ವಿಷ್ಣುಭಕ್ತನಾದ ಬ್ರಾಹ್ಮಣರಿಗೆ ಅನ್ನದಾನಮಾಡುವುದರಿಂದ ಉಂಟಾಗುವ ಫಲವನ್ನು ಹೇಳಬೇಕಾದ್ದೇನಿದೆ. ಪ್ರತಿಯೊಂದು ಅನ್ನದಗುಳಿಗೂ ಕೋಟಿ ಬ್ರಾಹ್ಮಣರ ಭೋಜನದ

ಧ್ಯಾನಾರೂಢಃ ಪದಂ ಯಾತಿ ಚಕ್ರಿಣಃ ಪರಮಾತ್ಮನಃ ।
ಇತಿ ಸರ್ವಂ ಮಯಾ ಖ್ಯಾತಂ ಯಥಾ ದೃಷ್ಟಂ ಯಥಾ ಶ್ರುತಮ್ ॥
ಶ್ರೋತವ್ಯಮಸ್ತಿಚೇದ್ರಾಜನ್ ಪೃಚ್ಛಮಾಂ ಮನಸಿಸ್ಥಿತಮ್ ॥ ೧೧೭ ॥

॥ ಇತಿ ಶ್ರೀ ಬ್ರಹ್ಮಾಂಡ ಪುರಾಣೇ ಶ್ರೀ ಕರಿಗಿರಿ ಮಹಾತ್ಮ್ಯೇ
ಏಕಾದಶೋಧ್ಯಾಯಃ ॥

ಫಲವುಂಟಾಗಿ ಅವನು ಭೂಲೋಕದಲ್ಲಿ ಶಾಶ್ವತ ಅನ್ನವಂತನಾಗಿ ಹುಟ್ಟಿ ಪಾಪಮುಕ್ತನಾಗಿ ಮೋಕ್ಷವನ್ನು ಪಡೆಯುವನು. ಎಲೈ ರಾಜನೇ, ಬ್ರಾಹ್ಮಣರ ಮಗನಿಗೆ ಉಪನಯವನ್ನೂ, ವಿವಾಹವನ್ನೂ ಮಾಡುವವನ ಪುಣ್ಯವನ್ನು ಹೇಳಲು ನಾನು ಶಕ್ತನಲ್ಲ. ಅವನು ಭೂಲೋಕದಲ್ಲಿ ಶ್ರೋತ್ರಿಯರ ಕುಲದಲ್ಲಿ ಹುಟ್ಟಿ ಜ್ಞಾನವನ್ನು ಪಡೆದು ಧ್ಯಾನಾರೂಢನಾಗಿ ವಿಷ್ಣುಪದವನ್ನು ಸೇರುವನು. ಇದನ್ನೆಲ್ಲಾ ನಾನು ಹೇಗೆ ನೋಡಿದ್ದೆನೋ ಹೇಗೆ ಕೇಳಿದ್ದೆನೋ ಹಾಗಿಯೇ ಹೇಳಿದ್ದೇನೆ. ಎಲೈ ರಾಜನೇ, ಕೇಳಬೇಕಾದ್ದು ಏನಾದರೂ ಮನಸ್ಸಿನಲ್ಲಿದ್ದರೆ ನನ್ನನ್ನು ಕೇಳು ಎಂದನು.

ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿರುವ ಕರಿಗಿರಿ ಮಹಾತ್ಮೆಯಲ್ಲಿ ಒಂದನೆಯ ಅಧ್ಯಾಯವು ಮುಕ್ತಾಯವಾಯಿತು.

॥ ಶ್ರೀ ಪ್ರಹ್ಲಾದ ವರದ ಶ್ರೀ ಲಕ್ಷ್ಮೀನರಸಿಂಹಾಯ ನಮಃ ॥

ದ್ವಾದಶೋಧ್ಯಾಯಃ

ಶ್ರೀ ರಾಜೋವಾಚ :
ವಶಿಷ್ಠ ಸರ್ವ ಶಾಸ್ತ್ರಜ್ಞ ಸರ್ವವೇದಾರ್ಥ ತತ್ವವಿತ್ ।
ಜಾನಾಸಿ ಮಂತ್ರತಂತ್ರಾಂಶ್ಚ ಇತಿ ಮೇ ನಿಶ್ಚಿತಾಮತಿಃ ॥ ೧ ॥
ಉತ್ಸವಾನ್ವದದೇವಸ್ಯ ನಾರಸಿಂಹಸ್ಯ ಚಕ್ರಿಣಃ ।
ಕೇನ ಚಾದೌ ಪುರಾಚೀರ್ಣಂ ಭುವಿ ಕೇನಪ್ರಕಾಶಿತಮ್ ॥ ೨ ॥
ಸಂವತ್ಸರೋತ್ಸವಬ್ರಹ್ಮರ್ಷೆ ವಿಸ್ತರಾದ್ವಕ್ತುಮರ್ಹಸಿ ।
ಶ್ರೀ ವಸಿಷ್ಠೋವಾಚ :
ಆದೌಚಾಸೀನ್ಮಹಾವಿಷ್ಣುರ್ಹಂಸರೂಪೀ ಜನಾರ್ಧನಃ ॥ ೩ ॥
ಬ್ರಹ್ಮಾಣಂ ಬೋಧಿತುಂ ಚಾಬ್ಧಾವಾವಿರಾಸೀನ್ಮಹಾಪ್ರಭುಃ ।
ತತಃ ಪದ್ಮಜ ದೇವೋಸೌ ಹಂಸರೂಪಂ ನಿರೀಕ್ಷ್ಯ ಚ ॥ ೪ ॥

ಶ್ರೀ ರಾಜನು ವಸಿಷ್ಠರನ್ನು ಕುರಿತು, ಸಕಲಶಾಸ್ತ್ರಗಳನ್ನೂ, ಸರ್ವವೇದಾರ್ಥ ತತ್ವವನ್ನೂ, ತಿಳಿದ ಎಲೈ ವಸಿಷ್ಠನೇ, ಮಂತ್ರಗಳನ್ನೂ, ತಂತ್ರಗಳನ್ನೂ ನೀನು ಬಲ್ಲವನು ಎಂದು ನನ್ನ ಮನಸ್ಸು ದೃಡವಾಗಿದೆ. ದೇವದೇವನಾದ ಶ್ರೀನರಸಿಂಹನ ಉತ್ಸವವನ್ನು ಹೇಳು. ಪೂರ್ವದಲ್ಲಿ ಸಂವತ್ಸರೋತ್ಸವವನ್ನು ಮೊದಲು ಭೂಲೋಕದಲ್ಲಿ ಯಾರು ಮಾಡಿದರು ಅದನ್ನು ಯಾರು ಪ್ರಸಿದ್ಧಪಡಿಸಿದರು ಎಂಬುದನ್ನು ವಿಸ್ತಾರವಾಗಿ ಹೇಳಲು ನೀನು ತಕ್ಕವನೆಂದು ರಾಜನು ಅಂದನು.

ಅದಕ್ಕೆ ವಸಿಷ್ಠರು ಎಲೈ ರಾಜನೇ, ಪೂರ್ವದಲ್ಲಿ ದುಷ್ಟಶಿಕ್ಷಕನಾದ ಮಹಾವಿಷ್ಣುವು ಬ್ರಹ್ಮನಿಗೆ ಬೊಧಿಸುವುದಕ್ಕೆ ಹಂಸರೂಪದಿಂದ ಸಮುದ್ರದಲ್ಲಿ ಪ್ರಾದುರ್ಭವಿಸಿದನು. ಅನಂತರದಲ್ಲಿ ಬ್ರಹ್ಮನು ಹಂಸನನ್ನು ನೋಡಿ, ಅವನ ಕಾಲಿಗೆ ಬಿದ್ದು ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣಭೂತನು, ಸರ್ವೇಶ್ವರನು, ಹಂಸರೂಪಿಯಾದ ಮಹಾವಿಷ್ಣುವನ್ನು

ಪಪಾತ ಪಾದಯೋಸ್ತಸ್ಯ ಹಂಸರೂಪಸ್ಯ ಪಾರ್ಥಿವ ।
ತಮುವಾಚ ತದಾಬ್ರಹ್ಮಾ ಹಂಸರೂಪಂ ಜನಾರ್ಧನಮ್ ॥ ೫ ॥
ನಾರಾಯಣಾಖ್ಯಂ ಸರ್ವೇಶಂ ಸೃಷ್ಟಿಸ್ಥಿತ್ಯಂತಕಾರಣಮ್ ।
ಶ್ರೀ ಬ್ರಹ್ಮೋವಾಚ :
ನಮೋಽನಮೋ ಹಂಸರೂಪಿಣೇ ನಮಃ
ಕಾರುಣ್ಯಮೂರ್ತೇ ಮಮಸೌಖ್ಯದಾಯಿನೇ ।
ವಿಜ್ಞಾನ ನೇತ್ರಾಯ ಭವಚ್ಛಿದೇ ನಮೋ
ಜ್ಞಾನಪ್ರದಾಯಾ- ಖಿಲಪೂಜಿತಾಯ ॥ ೬ ॥
ಹಂಸಾಯ ಪರಮಹಂಸಾಯ ಹಂಸಸೇವಿತವಾಸಿನೇ ।
ನಮಃ ಕಲ್ಯಾಣಗಾತ್ರಾಯ ಪವಿತ್ರಗುಣಕರ್ಮಣೇ ॥ ೭ ॥
ದಯಾಂಕುರು ಮಹಾಭಾಗ ಮಯಿಸರ್ವಜ್ಞಸಾದರಾತ್ ।
ಹೇತಾತ ಕುರುಮಂತ್ರಾಣಾಮುಪದೇಶಂ ಯಥಾ ಕ್ರಮಮ್ ॥ ೮ ॥
ಮುನಿಭಿಶ್ಚ ಸದಾಧ್ಯೇಯಂ ಪ್ರಣವಂ ಪುರುಷಾರ್ಥದಮ್ ।
ಅಷ್ಟಾಕ್ಷರಂ ಮಾತೃಕಾಂಣಾಂ ದ್ವಾದಶಾಕ್ಷರ ನಾಮಕಮ್ ॥ ೯ ॥

ಕುರಿತು ಶ್ರೀ ಬ್ರಹ್ಮದೇವರು ಇಂತೆಂದರು.

ಎಲೈ ದಯಾಸ್ವರೂಪನೆ, ಹಂಸರೂಪಿಯೂ, ವಿಜ್ಞಾನನೇತ್ರನೂ, ಜನನ ಮರಣ ನಾಶಕನೂ, ಜ್ಞಾನಪ್ರದನೂ, ಕ್ಷೀರಸಾಗರವಾಸಿಯೂ, ಮಂಗಳಮೂರ್ತಿಯೂ, ಆದ ಶ್ರೇಷ್ಠವಾದಗುಣಗಳು, ಕರ್ಮಗಳೂ ಉಳ್ಳ ನಿನಗೆ ನಮಸ್ಕಾರ. ಸರ್ವಜ್ಞನಾದ ಎಲೈ ಮಹಾನುಭಾವನೇ, ವಿಶ್ವಾಸದಿಂದ ನನ್ನಲ್ಲಿ ದಯೆಮಾಡಿ ಅರ್ಚಾಕ್ರಮವನ್ನು ತಪ್ಪದಂತೆ ಮಂತ್ರಗಳ ಉಪದೇಶವನ್ನು ಮಾಡು. ಋಷಿಗಳಿಂದ ಸರ್ವದಾ ಧ್ಯಾನಮಾಡಲ್ಪಡಲು ಯೋಗ್ಯವಾದ ಪುರುಷಾರ್ಥವನ್ನು ಕೊಡುವ ಓಂಕಾರ, ದ್ವಾದಶಾಕ್ಷರ, ಷಡಾಕ್ಷರ, ಪುರುಷಸೂಕ್ತ, ಶ್ರೇಷ್ಟವಾದ ತತ್ವಮಂತ್ರ, ಕೃಷ್ಣಮಂತ್ರ, ಸಂತಾನಗೋಪಾಲಮಂತ್ರ, ನರಸಿಂಹಮಂತ್ರ ಎಂಬ ಮುಖ್ಯವಾದ ಮಂತ್ರಗಳನ್ನು ನನಗೆ ಹೇಳು ಎಂದನು. ಬ್ರಹ್ಮನು ಹೀಗೆ ಕೇಳಲು, ಹಂಸರೂಪಿಯಾದ ವಿಷ್ಣುವು ಎಲೈ ಬ್ರಹ್ಮನೇ, ದ್ವಾದಶಾಕ್ಷರ

ಷಡಕ್ಷರಂ ಮಾತೃಕಾಣಾಂ ಮಂತ್ರಂ ಹಂಸವದಸ್ವಮೇ ।
ಸೂಕ್ತಂ ಪುರುಷನಾಮಾನಂ ತತ್ವನಾಂ ಮಂತ್ರಮುತ್ತಮಮ್ ॥ ೧೦ ॥
ಕೃಷ್ಣಾಖ್ಯಮಂತ್ರಂ ಸಂತಾನಗೋಪಾಲಾಖ್ಯಂ ನೃಸಿಂಹಕಮ್ ।
ಏತಾನಿ ಮಂತ್ರಮುಖ್ಯಾನಿ ವದಮೇ ಹಂಸಸತ್ತಮ ॥ ೧೧ ॥
ಇತ್ಯುಕ್ತೋ ಬ್ರಹ್ಮಣಾ ಹಂಸಃ ಪ್ರತ್ಯುವಾಚ ಪಿತಾಮಹಮ್ ।
ಶ್ರೀ ಹಂಸೋವಾಚ :
ಶೃಣು ವಕ್ಷ್ಯಾಮಿ ತೇ ಬ್ರಹ್ಮನ್ ಅರ್ಚನಾಯ ವಿಧಿನ್ನೃಪ ॥ ೧೨ ॥
ದ್ವಾದಶಾಕ್ಷರ ಮಂತ್ರೇಣ ಮಂತ್ರಾಣಾಂ ಸಂಭವಂ ಪುರಾ ।
ಓಂಕಾರಃ ಪುರುಷೋಽಹಂ ವೈ ಬ್ರಹ್ಮಣೇ ಹಂಸರೂಪವಾನ್ ॥ ೧೩ ॥
ಉಪಾದಿಶ ಸದಾ ವಿಷ್ಣುರಾದಿಕಾಲೇ ಮಹಾಪ್ರಭುಃ ।
ಉಪದೇಶೇಕೃತೇತೇನ ಹಂಸರೂಪೇಣ ವಿಷ್ಣುನಾ ॥ ೧೪ ॥
ನಮಸ್ಕೃತ್ಯ ತದಾ ಹಂಸಂ ಭಕ್ತಿಭಾವೇನ ವಿಶ್ವಕೃತ್ ।
ತತೋ ಬ್ರಹ್ಮಾ ಮಹಾಯೋಗೀ ಜಜಾಪ ಪ್ರಣವಾದಿಕಾನ್ ॥ ೧೫ ॥

ಮಂತ್ರದಿಂದ ಅರ್ಚನೆ ಮಾಡುವ ವಿಧಾನವನ್ನೂ, ಪೂರ್ವದಲ್ಲಿ ಮಂತ್ರಗಳು ಹುಟ್ಟಿದ್ದನ್ನೂ ನಾನು ಹೇಳುವೆನು. ಎಂದು ಪ್ರತ್ಯುತ್ತರವನ್ನಿತ್ತು ಪ್ರಣವ ಮೊದಲಾದ ಮಂತ್ರಗಳನ್ನು ಬ್ರಹ್ಮನಿಗೆ ಉಪದೇಶ ಮಾಡಿದನು. ಹಂಸರೂಪಿಯಾದ ವಿಷ್ಣುವು ಉಪದೇಶಮಾಡಲು ಜಗತ್ಕರ್ತನಾದ ಬ್ರಹ್ಮನು ಭಕ್ತಿಭಾವದಿಂದ ಹಂಸನಿಗೆ ನಮಸ್ಕಾರಮಾಡಿ ಮಹಾಯೋಗಿಯಾಗಿ ಪ್ರಣವ ಮೊದಲಾದವುಗಳನ್ನು ಜಪಿಸಿ ಪಾಂಚರಾತ್ರಾಗಮದಲ್ಲಿ ಪದ್ಮಪುಷ್ಕರಸಂಹಿತೆ ಎಂಬ ಮಹಾತಂತ್ರದಲ್ಲಿ ಹಂಸರೂಪನಿಂದ ಹೇಳಲ್ಪಟ್ಟ ಪೂಜಾಕ್ರಮದಂತೆ ದ್ವಾದಶಾಕ್ಷರ ಮಂತ್ರದಿಂದ ವಿಷ್ಣುವನ್ನು ಪೂಜಿಸಿದನು. ಬ್ರಹ್ಮನಿಂದ ಚೆನ್ನಾಗಿ ಪೂಜಿಸಲ್ಪಟ್ಟ ಜಗದ್ವ್ಯಾಪ್ತನೂ, ಮಹಾನುಭಾವನೂ, ವಾಸುದೇವನು, ಪರಮಪುರುಷನೂ ಆದ ಶ್ರೀನರಸಿಂಹನು ಪ್ರಳಯಾಬ್ಧಿಯಲ್ಲಿ ಲಕ್ಷ್ಮಿಯೊಡನೆ ವಾಸಮಾಡುತ್ತಿದ್ದನು. ತರುವಾಯ ಮಹಾಸಮರ್ಥನಾದ ಬ್ರಹ್ಮನು ತನ್ನಲ್ಲಿಯೇ ಆಲೋಚಿಸಿ ಭೂಲೋಕಕ್ಕೆ ಬಂದು ಋಷಿಗಳೂ ಮತ್ತು ದೇವತೆಗಳು ಇರುವ ಸಮೂಹಗಳಿಂದ ಸೇವಿಸಲ್ಪಟ್ಟು ಅಲಂಕೃತವಾದ ಹಸ್ತಿನಾಮಕ (ಕರಿಗಿರಿ)

ಜಪಿತ್ವಾ ಲೋಕಕರ್ತಾ ಸಾದಿಕಾಲೇ ಮಹಾಪ್ರಭುಃ ।
ಪಾಂಚರಾತ್ರೇ ಮಹಾತಂತ್ರೇ ಪದ್ಮಪುಷ್ಕರ ಸಂಹಿತೇ ॥ ೧೬ ॥
ಯದುಕ್ತ್ವೋ ಹಂಸರೂಪೇಣ ಅರ್ಚನಾಯ ವಿಧಿರ್ನೃಪ ।
ದ್ವಾದಶಾಕ್ಷರ ಮಹಾಮಂತ್ರೇಣ ಅರ್ಚಯಾಮಾಸ ತಂ ಹರಿಮ್ ॥ ೧೭ ॥
ಬ್ರಹ್ಮಣಾ ಸ್ವರ್ಚಿತೋ ದೇವಃ ನಾರಸಿಂಹೋ ಜನಾರ್ಧನಃ ।
ಪ್ರಳಯಾಬ್ಧೌ ಮಹಾದೇವೋ ಲಕ್ಷ್ಮ್ಯಾ ಸಹ ಜಗನ್ಮಯಃ ॥ ೧೮ ॥
ಉವಾಸ ಚ ಮಹಾಭಾಗೋ ವಾಸುದೇವಃ ಪುರಃ ಪುಮಾನ್ ।
ಅಥ ಬ್ರಹ್ಮಾ ಸಮಾಲೋಚ್ಯ ಸ್ವಸ್ಮಿನ್ನೇವ ಮಹಾಪ್ರಭುಃ ॥ ೧೯ ॥
ಭೂಲೋಕಂ ಚ ಸಮಾಸಾದ್ಯ ಆಗತೋದ್ರಿಂ ಸುಮಂಡಿತಮ್ ।
ಮುನಿದೇವಗಣೈರ್ಭೂಪ ಸೇವಿತಂ ಹಸ್ತಿನಾಮಕಮ್ ॥ ೨೦ ॥
ತತ್ರಸ್ಥಂ ಚ ಹರಿಂ ನತ್ವಾ ಚಿಂತಯಾಮಾಸ ವಿಶ್ವಕೃತ್ ।
ಕರಿಷ್ಯೇಽಹಂ ನೃಸಿಂಹಸ್ಯ ಉತ್ಸವಂ ಪರಮಂ ಶುಭಮ್ ॥ ೨೧ ॥
ಇತಿ ಸಂಚಿಂತ್ಯ ವೈ ಬ್ರಹ್ಮಾ ಉತ್ಸವಂ ಸ ಚಕಾರಹ ।

ಪರ್ವತಕ್ಕೆ ಬಂದು ಅಲ್ಲಿ ಹರಿಗೆ ನಮಸ್ಕಾರ ಮಾಡಿ ತಾನು ಅತ್ಯುತ್ತಮವೂ, ಮಂಗಳಕರವೂ ಆದ ಶ್ರೀನರಸಿಂಹನ ಮಹೋತ್ಸವವನ್ನು ಮಾಡುತೇನೆಂದು ಆಲೋಚಿಸಿ ಉತ್ಸವವನ್ನು ಮಾಡಿದನು. ಪದ್ಮಪುಷ್ಕರ ಸಂಹಿತೆಯಲ್ಲಿ ಹಂಸನಿಂದ ಹೇಳಲ್ಪಟ್ಟ ಪ್ರಕಾರ ಪರಮಾತ್ಮನ ಉತ್ಸವವನ್ನು ಮಾಡಲು ದೀಕ್ಷೆಗೋಸ್ಕರ ಶಾಂತನೂ ದಯಾನಿಧಿಯೂ ಆದ ಕಶ್ಯಪನಿಗೆ ವರ್ತಮಾನವನ್ನು ಕೊಟ್ಟನು.

ಆಗ ಶ್ರೀ ಬ್ರಹ್ಮದೇವರು ಕಶ್ಯಪರನ್ನು ಕುರಿತು ಮಹಾನುಭವನಾದ ಎಲೈ ಕಶ್ಯಪನೇ, ಉತ್ತಮನಾದ ನನ್ನ ಮಾತನ್ನು ಕೇಳು, ಎಲೈ ಬುದ್ಧಿ ಶಾಲಿಯೇ, ನರಸಿಂಹನ ಉತ್ಸವವನ್ನು ಮಾಡುತ್ತೇನೆ. ಎಲೈ ಮರೀಚಿ ಪುತ್ರನೇ, ಉತ್ಸವಕ್ಕೋಸ್ಕರ ದೀಕ್ಷಿತನಾಗು ಎಂದು ಕಶ್ಯಪನಿಗೆ ಹೇಳಲು, ಕಶ್ಯಪನು ಕೈಗಳನ್ನು ಜೋಡಿಸಿಕೊಂಡು ಎಲೈ ಬ್ರಹ್ಮನೇ, ನನ್ನ ಮಾತನ್ನು ಕೇಳು. ಇದನ್ನು ನಾನು ಮೊದಲೇ ಬೇಡಿದ್ದೇನೆ. ನಿನ್ನಿಂದ ಹೇಳಲ್ಪಟ್ಟವನಾಗಿ ಹರಿಯ ಸೇವೆಯನ್ನು ಮಾಡುತ್ತೇನೆ ಎಂದು ಹೇಳಿ

ಪದ್ಮಪುಷ್ಕರಯೋಸ್ತಾತ ಸಂಹಿತೇ ಹಂಸರೂಪಿಣಾ ॥ ೨೨ ॥
ಯದುಕ್ತಂ ತದ್ವಿಧೌ ಬ್ರಹ್ಮಾ ಉತ್ಸವಂ ಪರಮಾತ್ಮನೇ ।
ಕರ್ತುಂ ತತ್ರ ಸದೀಕ್ಷಾರ್ಥಂ ಕಶ್ಯಪಂ ನೃಪಸತ್ತಮ ॥ ೨೩ ॥
ಸಂದಿದೇಶ ಚ ದೀಕ್ಷಾರ್ಥಂ ಶಾಂತಂ ದಾಂತಂ ದಯನಿಧಿಮ್ ।
ಶ್ರೀ ಬ್ರಹ್ಮೋವಾಚ :
ಕಶ್ಯಪ ತ್ವಂ ಮಹಾಭಾಗ ಶೃಣುಮದ್ವಾಕ್ಯಮುತ್ತಮಮ್ ॥ ೨೪ ॥
ಕರಿಷ್ಯಾಮಿ ನೃಸಿಂಹಸ್ಯ ಉತ್ಸವಂ ತಂ ಮಹಾಮತೇ ।
ಉತ್ಸವಾರ್ಥಂ ಮಹಾಪ್ರಾಜ್ಞ ದೀಕ್ಷಯಸ್ವ ಮರೀಚಿಜ ॥ ೨೫ ॥
ಇತ್ಯುಕ್ತಃ ಕಶ್ಯಪೇನ ಪ್ರತ್ಯುವಾಚ ಕೃತಾಂಜಲಿಃ ।
ಭೋ ಬ್ರಹ್ಮನ್ ಶೃಣು ಮದ್ವಾಕ್ಯಂ ಪೂರ್ವಮೇವ ಮಯಾರ್ಥಿತಮ್ ॥
ಕರಿಷ್ಯಾಮಿ ಹರೇಸ್ಸೇವಾಂ ಉತ್ಸವೇನ ತ್ವಯೋದಿತಃ ।
ಏವಮುಕ್ತ್ವಾ ಕಶ್ಯಪೋಸೌ ದೀಕ್ಷಾಂ ಚಕ್ರೇ ಮಹಾಮುನಿಃ ॥ ೨೭ ॥
ದೀಕ್ಷಿತಸ್ತು ತದಾಭೂಪ ಕಶ್ಯಪೋ ಬ್ರಹ್ಮನಂದನಃ ।
ಋತ್ವಿಜೋವರಯಾಮಾಸ ಬ್ರಹ್ಮಿಷ್ಠಾನ್ ಬ್ರಹ್ಮವಾದಿನಃ ॥ ೨೮ ॥

ದೀಕ್ಷೆಯನ್ನು ವಹಿಸಿದನು. ಎಲೈ ರಾಜನೇ, ದೀಕ್ಷಿತನಾದ ಬ್ರಹ್ಮನಂದನನಾದ ಕಶ್ಯಪನು ಮಹಾಯೋಗಿಯಾದ ಋಷ್ಯಶೃಂಗ, ಶ್ರೇಷ್ಠನಾದ ಗೌತಮ, ಸರ್ವಶಾಸ್ತ್ರಜ್ಞನಾದ ಅಗಸ್ತ್ಯ ಮತ್ತು ಭಾರದ್ವಾಜ ಎಂಬ ಬ್ರಹ್ಮವಾದಿಗಳೂ, ಬ್ರಹ್ಮನಿಷ್ಠರೂ ಆದ ಋಷಿಗಳನ್ನು ಋತ್ವಿಕ್ಕುಗಳನ್ನಾಗಿ ಕೋರಿ ಪುಣ್ಯಾಹವನ್ನು ಮಾಡಿ, ಶುಭದಿನದಲ್ಲಿ ಶುಭಲಗ್ನ ಮತ್ತು ಸುಮುಹೂರ್ತದಲ್ಲಿ ಕಂಕಣವನ್ನು ಕಟ್ಟಿಕೊಂಡು ಅಂಕುರಾರ್ಪಣವನ್ನು ಮಾಡಿದನು. ದೇವತೆಗಳಿಗೆ ಜ್ಞಾಪಕಾರ್ಥವಾಗಿ ಸುಖವಾಗಿ ಭೇರೀತಾಡನವನ್ನು ಮಾಡಿದರು. ಎಲೈ ರಾಜನೇ, ಮೃಗಶೀರ್ಷಾ ನಕ್ಷತ್ರದಲ್ಲಿ ಧ್ವಜಾರೋಹಣವನ್ನು ಮಾಡಿ, ಬ್ರಹ್ಮ ಮೊದಲಾದ ದೇವತೆಗಳನ್ನು ಕರೆದರು. ಋಷ್ಯಶೃಂಗ, ಗೌತಮ, ಅಗಸ್ತ್ಯ, ಭರದ್ವಾಜ ಈ ಋಷಿಗಳು ದೀಕ್ಷಾಬದ್ಧರಾಗಿದ್ದರು. ಕಶ್ಯಪನು ಫಾಲ್ಗುಣಮಾಸದಲ್ಲಿ ಪುಬ್ಬಾ ನಕ್ಷತ್ರದಲ್ಲಿ ಸಿಂಹಲಗ್ನದಲ್ಲಿ, ನೃಸಿಂಹರೂಪನಾದ ಮಹಾವಿಷ್ಣುವಿನ ರಥೋತ್ಸವವನ್ನು ಮಾಡಿದನು. ಎಲೈ ಪಾಜ್ಞನೇ, ಪರಮಾರ್ಥವನ್ನು ತಿಳಿದ ಆ ಋಷಿಯು ಈ ಉತ್ಸವವನ್ನು

ಋಷ್ಯಶೃಂಗ ಮಹಾಯೋಗಿಂ ಗೌತಮ ಋಷಿಸತ್ತಮಮ್ ।
ಅಗಸ್ತ್ಯಂ ಸರ್ವಶಾಸ್ತ್ರಜ್ಞಂ ಭರದ್ವಾಜಂ ತಥಾನೃಪ ॥ ೨೯ ॥
ಋತ್ವಿಜೋವರಯಿತ್ವಾಥ ಪುಣ್ಯಾಹಂ ಕೃತವಾನ್ಮುನಿಃ ।
ಸುಮುಹೂರ್ತೇ ಶುಭಲಗ್ನೇ ತಥಾ ಶುಭದಿನೇ ನೃಪ ॥ ೩೦ ॥
ರಕ್ಷಾಮಾಬಧ್ಯ ಧರ್ಮಾತ್ಮಾ ಕೃತವಾನಂಕುರಾರ್ಪಣಮ್ ।
ಭೇರ್ಯಾಸ್ತು ತಾಡನಂ ಚಕ್ರುರ್ದೇವಾನಾಂ ಜ್ಞಪ್ತಯೇ ಸುಖಮ್ ॥ ೩೧
ಋಷೇಮೃಗಶಿರೇ ರಾಜನ್ ಧ್ವಜಸ್ಯಾರೋಹಣಂ ತಥಾ ।
ಬ್ರಹ್ಮಾದೀನಾಂ ಚ ಸರ್ವೇಷಾಂ ಆಹ್ವಾನಂ ಚಕ್ರಿರೇ ನೃಪ ॥ ೩೨॥
ಋಷ್ಯಶೃಂಗೋಗೌತಮಶ್ಚ ಅಗಸ್ತ್ಯೋಽಥ ನರೇಶ್ವರ ।
ಭರದ್ವಾಜಶ್ಚ ಏವೈತೇ ಋಷಯಸ್ಸಂಶ್ರಿತವ್ರತಾಃ ॥ ೩೩ ॥
ಫಾಲ್ಗುಣ್ಯಾಂ ಫಲ್ಗುಣೇ ಋಕ್ಷೇ ಮುಹೂರ್ತೇ ಸಿಂಹಲಗ್ನಕೇ ।
ರಥೋತ್ಸವಂ ಮಹಾವಿಷ್ಣೋರ್ನೃಸಿಂಹಸ್ಯ ಚ ಕಶ್ಯಪ ॥ ೩೪ ॥
ಚಕಾರ ಸರ್ವಲೋಕಾನಾಂ ವೃದ್ಧಯೇ ಪರಮಾರ್ಥವಿತ್ ।
ಮುಖಜಾನಾಂ ಬಾಹುಜಾನಾಮೂರುಜಾನಾಂ ತಥೈವಚ ॥ ೩೫ ॥

ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು ಮೊದಲಾದ ಸಕಲ ಜನರ ಏಳಿಗೆಗೂ ತಪಸ್ವಿಗಳಿಗೂ ಸುಶೀಲರೂ ಆದ ಋಷಿಗಳ ಜ್ಞಾನಸಿದ್ಧಿಗೂ ಅಗ್ನಿಹೋತ್ರಗಳನ್ನು ಇಟ್ಟುಕೊಂಡಿರುವ ಬ್ರಾಹ್ಮಣರ ಮತ್ತು ದೇವತೆಗಳ ಅಭಿವೃದ್ಧಿಗೂ ಋಷಿಗಳ ಮಧ್ಯೆ ಮಾಡಿದನು. ಮಹಾತೇಜಸ್ವಿಯೂ, ಧರ್ಮಜ್ಞನೂ, ಬ್ರಹ್ಮಪುತ್ರನೂ ಆದ ಕಶ್ಯಪನು ಬ್ರಹ್ಮ, ಇಂದ್ರ ಮೊದಲಾದ ದೇವತೆಗಳೊಡನೆಯೂ, ಬ್ರಾಹ್ಮಣರೊಡನೆಯೂ, ಋತ್ವಿಕ್ಕುಗಳೊಡನೆಯೂ, ಋಷಿಗಳೊಡನೆಯೂ ಸೇರಿ ಸರ್ವತೀರ್ಥಗಳಿಂದ ಕೂಡಿರುವ ನೃಸಿಂಹತೀರ್ಥದಲ್ಲಿ ಹಸ್ತಾನಕ್ಷತ್ರದಲ್ಲಿ ಅವಭೃತಸ್ನಾನವನ್ನು ಮಾಡಿದನು. ಆ ಋಷಿಯು ಬ್ರಹ್ಮನಿಂದ ಬೋಧಿಸಲ್ಪಟ್ಟು ಉತ್ಸವವನ್ನು ಮಾಡಿದ್ದರಿಂದ ಬ್ರಹ್ಮೋತ್ಸವವೆಂದು ಋಷಿಗಳು ಹೇಳುತ್ತಾರೆ. ಮಹಾತೇಜಸ್ವಿಯಾದ ಬ್ರಹ್ಮನಂದನನಾದ ಕಶ್ಯಪನು ಬ್ರಹ್ಮನು ಮತ್ತು ಋಷಿಗಳು ಇವರೊಡನೆ ಲಕ್ಷ್ಮೀಸಮೇತನಾದ ಶ್ರೀನರಸಿಂಹನನ್ನು ಭಕ್ತಿಯಿಂದ

ಪಾದಜಾನಾಂ ಮಹಾಪ್ರಾಜ್ಞಾವೃದ್ಧ್ಯರ್ಥಂ ಕೃತವಾನ್ನೃಷಿಃ ।
ತಪಸ್ವಿನಾಂ ಸುಶೀಲಾನಾಂ ಋಷೀಣಾಂ ಜ್ಞಾನಸಿದ್ಧಯೇ ॥ ೩೬ ॥
ದ್ವಿಜಾನಾಮಗ್ನಿಹೋತ್ರ್ಯಾಣಾಂ ದೇವಾನಾಂ ಚ ಪರಂತಪ ।
ಸ್ವಾಭಿವೃದ್ಧ್ಯೈ ಮಹಾಪ್ರಾಜ್ಞಾಃ ಕಶ್ಯಪೋ ಬ್ರಹ್ಮನಂದನಃ ॥ ೩೭ ॥
ಚಕಾರ ಋಷಿಮಧ್ಯೇತು ಉತ್ಸವಂ ಕೇಶವಸ್ಯ ಚ ।
ಸ್ನಾನಂ ಚಾವಭೃತಂ ನಾಮ ಋಕ್ಷೇಸವಿತೃನಾಮಕೇ ॥ ೩೮ ॥
ತೀರ್ಥೇ ಚ ಸರ್ವ ತೀರ್ಥೇಶ್ಚ ಸಂಯುತೇ ಋಷಿಭಿರ್ಯುತಃ ।
ನೃಸಿಂಹನಾಮಕೇ ತೀರ್ಥೇ ಋತ್ವಿಜೈಸ್ಸಹಧರ್ಮವಿತ್ ॥ ೩೯ ॥
ಬ್ರಹ್ಮಾದ್ಯೈಸ್ಸರ್ವದೇವೈಶ್ಚ ಇಂದ್ರಾದ್ಯೈರ್ದಿವಿಜೈಸ್ಸಹ ।
ಕೃತವಾನ್ ಕಶ್ಯಪೋನಾಮ ಬ್ರಹ್ಮಪುತ್ರೋ ಮಹಾದ್ಯುತಿಃ ॥ ೪೦ ॥
ಉತ್ಸವಂ ಬ್ರಹ್ಮಣಾ ಯಸ್ಮಾದ್ಬೋಧಿತೋಕೃತವಾನ್ನೃಷಿಃ ।
ತಸ್ಮಾದ್ಬ್ರಹ್ಮೋತ್ಸವಂ ನಾಮ ಕಥ್ಯತೇ ಋಷಿಭಿಸ್ಸದಾ ॥ ೪೧ ॥
ಆತ್ಮಭೂಃ ಕಶ್ಯಪಯುತಃ ಋತ್ವಿಗ್ಭಿಶ್ಚ ಮಹಾದ್ಯುತಿಃ ।
ನಾರಸಿಂಹಂ ಸಲಕ್ಷ್ಮೀಕಂ ಪೂಜಯಿತ್ವಾ ತು ಭಕ್ತಿತಃ ॥ ೪೨ ॥

ಪೂಜಿಸಿ ಪ್ರದಕ್ಷಿಣೆ ನಮಸ್ಕಾರ ಮಾಡಿದನು. ಉತ್ಸವವು ಮುಗಿಯಲು ಅವರೆಲ್ಲರೂ ತಮ್ಮ ತಮ್ಮ ಆಶ್ರಮಕ್ಕೆ ತೆರಳಿದರು. ಇಂದ್ರನೇ ಮೊದಲಾದ ಲೋಕಪಾಲಕರು ಆ ಮಹೋತ್ಸವವನ್ನು ಅನುಭವಿಸಿ ಸ್ವರ್ಗಲೋಕಕ್ಕೆ ಹೊರಟರು. ಧರ್ಮತತ್ಪರರಾದ ರಾಜರು ಆನೆ, ಕುದುರೆ, ರಥಸಮೂಹಗಳೊಡನೆ ತಮ್ಮ ತಮ್ಮ ರಾಜ್ಯಕ್ಕೆ ತೆರಳಿದರು.

ಎಲೈ ಪುರುಷೋತ್ತಮನೇ, ಲೋಕದಲ್ಲಿ ಯಾರು ಶ್ರೀನರಸಿಂಹನ ಉತ್ಸವವನ್ನು ನೋಡುತ್ತಾರೋ ಅವರು ಬ್ರಹ್ಮಪದವನ್ನು ಸೇರುತ್ತಾರೆ. ಎಲೈ ನರಶ್ರೇಷ್ಠನೇ, ಭೂಲೋಕದಲ್ಲಿ ಆ ಪರಮಾತ್ಮನಿಗೆ ಉತ್ಸವವನ್ನು ಮಾಡುವ ಧರ್ಮಾತ್ಮನು ಮೋಕ್ಷವನ್ನು ಹೊಂದುತ್ತಾನೆ. ಧರ್ಮಜ್ಞನಾದ ಯಾವ ಮನುಜನು ರಥದಲ್ಲಿರುವ ಹರಿಯನ್ನು ನೋಡಿ ಬ್ರಾಹ್ಮಣರೊಡನೆ ಆ ಮಹಾಭಾವನ ರಥವನ್ನು ಎಳೆಯುತ್ತಾನೋ ಅವನು ಅಷ್ಟುಮಾತ್ರದಿಂದಲೇ ಪಾಪಮುಕ್ತನಾಗಿ ಬ್ರಹ್ಮಪದಕ್ಕೆ ಹೋಗುತ್ತಾನೆ.

ಪ್ರಣನಾಮ ಪರಿಕ್ರಮ್ಯ ಋಷಿಭಿಸ್ಸಹ ಭೂಮಿಪ ।
ಉತ್ಸವಾಂತೇ ಚ ತೇ ಸರ್ವೇ ಜಗ್ಮುಸ್ಸ್ವಂಚ ನಿಕೇತನಮ್ ॥ ೪೩ ॥
ಇಂದ್ರಾದ್ಯಾ ಲೋಕಪಾಲಾಶ್ಚ ಅನುಭೂಯ ಮಹೋತ್ಸವಮ್ ।
ಗತಾಶ್ಚ ಸರ್ವೇ ಸ್ವಲೋಕಂ ರಾಜಾನೋ ಧರ್ಮ ತತ್ಪರಾಃ ॥ ೪೪ ॥
ಸ್ವಾಂಸ್ವಾಂ ಪುರೀಂ ಸಮಾಜಗ್ಮುಃ ಹಸ್ತ್ಯಶ್ವರಥ ಸಂಕುಲಾಃ ।
ಯೇ ಲೋಕೇ ನರಸಿಂಹಸ್ಯ ಉತ್ಸವಂ ಪುರುಷೋತ್ತಮ ॥ ೪೫ ॥
ಆಲೋಕಯಂತಿ ತೈಸ್ಸರ್ವೈಃ ಪ್ರಾಪ್ಯತೇ ಬ್ರಹ್ಮಣಃ ಪದಮ್ ।
ಭೂಮ್ಯಾಂತು ನರಶಾರ್ದೂಲ ಉತ್ಸವಂ ಪರಮಾತ್ಮನೇ ॥ ೪೬ ॥
ಯಃ ಕರೋತಿ ಸ ಧರ್ಮಾತ್ಮಾ ಕೈವಲ್ಯಂ ಪ್ರತಿಪದ್ಯತೇ ।
ರಥಸ್ಥಂ ಚ ಹರಿಂ ದೃಷ್ಟ್ವಾ ಬ್ರಾಹ್ಮಣೈಸ್ಸಹ ಧರ್ಮವಿತ್ ॥ ೪೭ ॥
ಸಮಾಕರ್ಷತಿ ಯೋ ಮರ್ತ್ಯೋ ರಥಂ ತಸ್ಯ ಮಹಾತ್ಮನಃ ।
ತಾವನ್ಮಾತ್ರೇಣ ನಿಷ್ಪಾಪೋ ಬ್ರಹ್ಮಭೂಯಾಯ ಕಲ್ಪತೇ ॥ ೪೮ ॥
ರಥಸ್ಯಾಕರ್ಷಣೇ ಕಾಲೇ ಕೇಶವಸ್ಯ ಮಹಾತ್ಮನಃ ।
ಪುರತಃ ಪೃಷ್ಠತಶ್ಚೈವ ವೇದಘೋಷಂ ಕರೋತಿ ಯಃ ॥ ೫೦ ॥

ಮಹಾತ್ಮನಾದ ಆ ವಿಷ್ಣುವಿನ ರಥವನ್ನು ಎಳೆಯುವಾಗ ಅದರ ಹಿಂಭಾಗದಲ್ಲಿಯೂ, ಮುಂಭಾಗದಲ್ಲಿಯೂ ವೇದಘೋಷವನ್ನು ಮಾಡುವವನ ಪುಣ್ಯವನ್ನು ಹೇಳಲು ವಿಷ್ಣುವೂ ಶಕ್ತನಲ್ಲ. ಎಲೈ ರಾಜನೇ ರಥಕ್ಕೆ ಕಟ್ಟಿದ ದೊಡ್ಡ ಹಗ್ಗವನ್ನು ಗಟ್ಟಿಯಾಗಿ ಕೈಯಲ್ಲಿ ಹಿಡಿದುಕೊಂಡು ಬ್ರಾಹ್ಮಣರೊಡನೆ ರಥವನ್ನು ಎಳೆಯುವವನು ಸಕಲಪಾಪಗಳಿಂದಲೂ ಮುಕ್ತನಾಗಿ ಅಪ್ಸರಾಸ್ತ್ರೀಯರ ಸಮೂಹಗಳಿಂದ ಸೇವಿಸಲ್ಪಡುತ್ತಾನೆ. ಸೂರ್ಯ ವರ್ಚಸ್ಸಿನಿಂದ ವಿಮಾನದಲ್ಲಿ ಬ್ರಹ್ಮಲೋಕವನ್ನು ಸೇರುತ್ತಾನೆ. ಸುಬುದ್ಧಿವುಳ್ಳ ಎಲೈ ರಾಜನೇ, ಶ್ರೀನರಸಿಂಹನ ಉತ್ಸವವನ್ನು ಸಮಗ್ರವಾಗಿ ಹೇಳಿದೆನು. ಕೇಳಬೇಕಾದದು ಮತ್ತೇನಾದರೂ ಇದ್ದರೆ ಧರ್ಮದಿಂದ ಕೇಳು ಎಂದನು.

ವಸಿಷ್ಠರ ಮಾತಿಗೆ ರಾಜನು ಇಂತೆಂದನು. ಮುನಿವರನಾದ ಎಲೈ ವಸಿಷ್ಠನೆ, ಸಮಸ್ತ ಪಾಪಗಳನ್ನೂ ನಾಶ ಮಾಡುವ ಆ ಮಹಾನುಭವನಾದ ಶ್ರೀನರಸಿಂಹನ

ತಸ್ಯಪುಣ್ಯಫಲಂ ವಕ್ತುಂ ವಿಷ್ಣುನಾಪಿ ನ ಶಕ್ಯತೇ ।
ರಥಬದ್ಧಂ ಮಹಾರಜ್ಜುಂ ಬ್ರಾಹ್ಮಣೈಸ್ಸಹಿತೋನ್ನೃಪ ॥ ೫೧ ॥
ಧೃಡಂಧೃತ್ವಾ ಕರೇಸಮ್ಯಕ್ ಸಮಾಕರ್ಷತಿ ಯೋ ನರಃ ।
ಸರ್ವಪಾಪೈರ್ವಿನಿರ್ಮುಕ್ತೋ ವಿಮಾನೇನಾರ್ಕವರ್ಚಸಾ ॥ ೫೨ ॥
ಬ್ರಹ್ಮಲೋಕಮವಾಪ್ನೋತಿ ಸೇವ್ಯಮಾನೋಪ್ಸರೋಗಣೈಃ ।
ಇತ್ಯೇತತ್ಸರ್ವಮಾಖ್ಯಾತಮುತ್ಸವಂ ನೃಹರೇರ್ನೃಪ ॥ ೫೩ ॥
ಶ್ರೋತವ್ಯಮಸ್ತಿಚೇದ್ರಾಜನ್ ಪೃಚ್ಛಮಾಂ ಧರ್ಮತಸ್ಸುಧೀಃ ।
ಶ್ರೀ ರಾಜೋವಾಚ :
ವಸಿಷ್ಠ ಮುನಿಶಾರ್ದೂಲ ನೃಸಿಂಹಸ್ಯ ಮಹಾತ್ಮನಃ ।
ಬ್ರೂಹಿಮೇರ್ಚಾವಿಧಾನಂ ಚ ಸರ್ವ ಪಾಪ ಪ್ರಣಾಶನಮ್ ॥ ೫೪ ॥
ಶ್ರೀ ವಸಿಷ್ಠೋವಾಚ :
ಶೃಣುಧರ್ಮಜ್ಞ ವಕ್ಷ್ಯಾಮಿ ವಿಷ್ಣೋರಮಿತ ತೇಜಸಃ ।
ಅರ್ಚಾಂತು ನಾರಸಿಂಹಸ್ಯ ಶ್ರವಣಾಚ್ಚ ಫಲಪ್ರದಾಮ್ ॥ ೫೫ ॥
ಸಾತ್ವಿಕಂ ಪುಷ್ಕರಂ ಚೇತಿ ಸಂಹಿತೇ ಪಾಂಚರಾತ್ರಕೇ ।

ಪೂಜಾವಿಧಾನವನ್ನು ಹೇಳು.

ಎಲೈ ಧರ್ಮಜ್ಞನೆ, ಕೇಳುವ ಮಾತ್ರದಿಂದಲೇ ಫಲವನ್ನು ಕೊಡುವ ಅಪಾರವಾದ ತೇಜಸ್ಸುಳ್ಳ ಶ್ರೀನರಸಿಂಹರೂಪನಾದ ವಿಷ್ಣುವಿನ ಪೂಜಾವಿಧಾನವನ್ನು ಕೇಳು. ಪಾಂಚರಾತ್ರಾಗಮದ ಸಾತ್ವಿಕ–ಪುಷ್ಕರವೆಂಬ ಸಂಹಿತೆಗಳಲ್ಲಿ ಫಲದಾಯಕವಾದ ವಿಷ್ಣುವಿನ ಪೂಜಾವಿಧಾನವು ಇದೆ. ಭಕ್ತಿಯುಳ್ಳ ಮನುಷ್ಯನು ಅದರಲ್ಲಿ ಹೇಳಿರುವ ಪ್ರಕಾರವಾಗಿಯೇ ದ್ವಾದಶಾಕ್ಷರ ವಿದ್ಯೆಯಿಂದ, ಸ್ನಾನಮಾಡಿ ಶುದ್ಧನಾಗಿ ಪ್ರತಿದಿವಸವೂ ನೇಮದಿಂದ ನಿತ್ಯಕರ್ಮಗಳನ್ನು ಮಾಡಿ, ಧರ್ಮಮಾರ್ಗದಲ್ಲಿ ಇರುತ್ತಾ ಚಕ್ರಾಂಕಿತ ಭುಜಗಳುಳ್ಳವನೂ, ಶುಚಿಭೂತನೂ, ಆಗಿ ಅಷ್ಟಾಂಗ ವಿಧಾನದಿಂದ ಪೂಜಿಸಬೇಕು. ಎಲೈ ರಾಜನೆ, ಅರ್ಚನೆಯು ನಾಲ್ಕು ಪ್ರಕಾರವೆಂದು, ಆಗಮಗಳಲ್ಲಿ ಹೇಳಲ್ಪಟ್ಟಿದೆ. ಎಲ್ಲಾ ಗುಡಿಗೋಪುರಗಳೂ ಪ್ರತಿಮೆಗೆ ತಕ್ಕವುಗಳಾಗಿರಬೇಕು. ಪ್ರತಿಮೆಗಳಲ್ಲಿ ದಿವ್ಯ, ಸೈದ್ಧ, ಸ್ವಯಂವ್ಯಕ್ತ ಎಂದು ಮೂರುಬಗೆಯುಂಟು. ಮತ್ತು ಪ್ರತಿಮೆಗಳಲ್ಲಿ

ತತ್ರಾಸ್ತಿ ವಿಷ್ಣೋಃ ಪೂಜಾಯ ವಿಧಾನಂ ತು ಫಲಪ್ರದಮ್ ॥ ೫೬ ॥
ತದುಕ್ತೇನ ಕ್ರಮೇಣೈವ ದ್ವಾದಶಾಕ್ಷರವಿದ್ಯಯಾ ।
ಸ್ನಾತ್ವಾ ನಿಯಮತಶ್ಶುದ್ಧಃ ನಿತ್ಯಕರ್ಮಾಣಿ ನಿತ್ಯಶಃ ॥ ೫೭ ॥
ಕೃತ್ವಾಽಥ ಧರ್ಮಮಾರ್ಗಸ್ಥಃ ಚಕ್ರಾಂಕಿತ ಭುಜಶ್ಶುಚಿಃ ।
ಅಷ್ಟಾಂಗೇನ ವಿಧಾನೇನಹ್ಯರ್ಚಯೇದ್ಭಕ್ತಿಮಾನ್ನರಃ ॥ ೫೮ ॥
ಅರ್ಚಾ ಚತುರ್ವಿಧಾಭೂಪ ಆಗಮೇಷು ಪ್ರಕೀರ್ತಿತಾಃ ।
ವಿಮಾನಾನಿಚ ಸರ್ವಾಣಿ ಪ್ರತಿಮಾಸದೃಶಾನಿ ಚ ॥ ೫೯ ॥
ದಿವ್ಯಂ ಸೈದ್ಧಂ ಸ್ವಯಂವ್ಯಕ್ತಂ ತ್ರಯಂ ವಸ್ತ್ವೇಕವಸ್ತುನಿ ।
ಏಕಂವಸ್ತು ದ್ವಿಧಾಪ್ರೋಕ್ತಮಚಲಂಚಲಮೇವಚ ॥ ೬೦ ॥
ವ್ಯೂಹವ್ಯೂಹಾಂತರಾದೀನಾಂ ಪರಸ್ಯ ವಿಭವಸ್ಯ ಚ ।
ಆವೇಶಾಂಶಾವತಾರಾಣಾಂ ಆವಿರ್ಭಾವಸ್ಯ ಚಾಕೃತಿಃ ॥ ೬೧ ॥
ಸುರೂಪಪ್ರತಿಮಾಪ್ರೋಕ್ತಾ ಶೋಭನಾದೃಷ್ಟಿಹಾರಿಣೀ ।
ಮನೋಹರಾಪ್ರಸನ್ನಾಚ ಮಾಮಕೀ ಶಿಲ್ಪಿಚೋದಿತಾ ॥ ೬೨ ॥

ಚಲವೆಂತಲೂ, ಅಚಲವೆಂತಲೂ ಎರಡು ಬಗೆಉಂಟು. ಆ ಮೂರ್ತಿಯು ವ್ಯೂಹ, ವ್ಯೂಹಾಂತರ, ಪರ, ವಿಭವ, ಆವೇಶ, ಅಂಶ, ಅವತಾರ, ಆವಿರ್ಭಾವ, ವಿಶೇಷ, ವಿಭವ, ವಿಹಿತ ಎಂಬ ಆಕಾರವುಳ್ಳದ್ದಾಗಿರುತ್ತದೆ. ಶಿಲ್ಪಿಯಿಂದ ಮಾಡಲ್ಪಟ್ಟ ದೃಷ್ಟಿಯನ್ನೂ, ಮನಸ್ಸನ್ನೂ, ಆಕರ್ಷಿಸುವ ಒಳ್ಳೆಯ ರೂಪವುಳ್ಳ ವಿಷ್ಣು ಪ್ರತಿಮೆಯು ಮಂಗಳಕರವು.

ಪ್ರತಿಮೆಗಳಲ್ಲಿ ಮುಖ್ಯವಾಗಿ ಊರ್ಧ್ವದೃಷ್ಟಿಯುಳ್ಳದ್ದನ್ನೂ, ಅಧೋದೃಷ್ಟಿಯುಳ್ಳದ್ದನ್ನೂ, ಪಾರ್ಶ್ವದೃಷ್ಟಿಯುಳ್ಳದ್ದನ್ನೂ ತ್ಯಜಿಸಬೇಕು. ಪ್ರತಿಮೆಯನ್ನು ಕೇವಲ ಅತ್ಯಂತ ಸಣ್ಣದಾಗಿ ಅಥವಾ ಅತ್ಯಂತ ಬೃಹದಾಕಾರವಾಗಿ ಮಾಡಬಾರದು. ಪರಿಶುದ್ಧವಾದ ಪದಾರ್ಥದಿಂದ ಮಾಡಿರಬೇಕು (ಶಿಲೆ, ಮರ, ಮಣ್ಣು, ಮರಳು, ಲೋಹ, ಬಣ್ಣದ ಬರಹ). ಶ್ರೀರಂಗ, ವೇಂಕಟಾದ್ರಿ, ಶ್ರೀಮುಷ್ಣ, ನೈಮಿಷಾರಣ್ಯ, ಸಾಲಗ್ರಾಮ, ತೋತಾದ್ರಿ, ಪುಷ್ಕರ, ಬದರೀ ಇವುಗಳನ್ನು ದಿವ್ಯಸ್ಥಳಗಳೆಂದು ತಿಳಿಯಬೇಕು. ಅಲ್ಲಿ ಇರುವ

ಊರ್ಧ್ವದೃಷ್ಟಿಮಧೋದೃಷ್ಟಿಂ ತಿರ್ಯಗ್ದೃಷ್ಟಿಂ ಚ ವರ್ಜಯೇತ್ ।
ಅನೂನಾಮನತಿ ಸ್ಥೂಲಾಂ ಶುಚಿದ್ರವ್ಯಾಂ ಪ್ರಕಲ್ಪಯೇತ್ ॥ ೬೩ ॥
ಶ್ರೀರಂಗಂ ವೇಂಕಟಾದ್ರಿಶ್ಚ ಶ್ರೀಮುಷ್ಣಂನೈಮಿಷಂ ತಥಾ ।
ಸಾಲಗ್ರಾಮಂ ಚ ತೋತ್ರಾದ್ರಿಂ ಪುಷ್ಕರಂ ಬದರೀ ತಥಾ ॥ ೬೪ ॥
ದಿವ್ಯಸ್ಥಲಮಿತಿಜ್ಞೇಯಂ ತತ್ರ ಯಾಪ್ರತಿಮಾಸ್ಥಿತಾ ।
ತಾಂ ದಿವ್ಯಮೂರ್ತಿಂ ಮುನಯಃ ಪ್ರವದಂತಿ ಮನೀಷಿಣಃ ॥ ೬೫ ॥
ವಿಮಾನೇ ಗೋಪುರೇಚೈವ ಶಿಖರೇ ನೃಪಸತ್ತಮ ।
ವಿಲೇಪೇನ ಕೃತಾಂಮುರ್ತಿಂ ಸೈದ್ಧಂತು ಪ್ರತಿಚಕ್ಷತೇ ॥ ೬೬ ॥
ಸ್ವಯಮೇವ ಮಹಾವಿಷ್ಣುಃ ಆವಿರ್ಭಾವಂಚಾತ್ಮನಃ ।
ಕೃತವಾಂಸ್ತತ್ಸ್ವಯಂ ವ್ಯಕ್ತಂ ಪ್ರೋಚ್ಯತೇ ಋಷಿಭಿಸ್ಸದಾ ॥ ೬೭ ॥
ಮಾನುಷ್ಯೈಸ್ತುಕೃತಂ ಯತ್ತು ಮಾನುಷಂ ಪರಿಕೀರ್ತಿತಮ್ ।
ಏತಾಶ್ಚ ಮೂರ್ತಯೋ ಭೂಪ ನಿತ್ಯಂ ಸೇವ್ಯಾನೃಭಿಸ್ಸದಾ ॥ ೬೮ ॥
ತತ್ತದ್ವಿಗ್ರಹ ಭೇದೇನ ಪೂಜಾಂ ವಕ್ಷ್ಯೇ ನೃಪೋತ್ತಮ ।

ಪ್ರತಿಮೆಗಳನ್ನು ಪ್ರಾಜ್ಞರಾದ ಋಷಿಗಳು ದಿವ್ಯಮೂರ್ತಿಗಳು ಎಂದು ಹೇಳುತ್ತಾರೆ.

ರಾಜಶ್ರೇಷ್ಟನೆ, ಗುಡಿಯಲ್ಲಿಯೂ, ಗೋಪುರದಲ್ಲಿಯೂ, ಶಿಖರದಲ್ಲಿಯೂ, ಬಣ್ಣಮುಂತಾದ್ದನ್ನು ಬಳಿದು ಮಾಡಿದ ಮೂರ್ತಿಯನ್ನು ಸೈದ್ಧವೆಂದು ಹೇಳುತ್ತಾರೆ. ಮಹಾವಿಷ್ಣುವು ತಾನಾಗಿಯೇ ಆವಿರ್ಭವಿಸಲು ಅದು ಸ್ವಯಂವ್ಯಕ್ತವೆಂದು ಋಷಿಗಳಿಂದ ಹೇಳಲ್ಪಡುವುದು. ಮನುಷ್ಯರಿಂದ ಮಾಡಲ್ಪಟ್ಟಿದ್ದು ಮಾನುಷವೆನಿಸಿಕೊಳ್ಳುತ್ತದೆ. ಎಲೈ ರಾಜನೆ, ಈ ಮೂರ್ತಿಗಳು ಸದಾ ಜನರ ನಿತ್ಯಸೇವೆಗೆ ಯೋಗ್ಯವಾದವುಗಳು.

ಎಲೈ ರಾಜಶ್ರೇಷ್ಟನೆ, ಆಯಾವಿಗ್ರಹಭೇಧ ಪ್ರಕಾರ ಪೂಜೆಯನ್ನು ಹೇಳುತ್ತೇನೆ. ಬೇರೆ ಬೇರೆ ಅರ್ಚನೆ ಮೊದಲಾದದ್ದು ಒಂಭತ್ತು ವಿಧವೆಂದು ನಾನು ಏನು ಹೇಳಿದೆನೋ ಅದು ವರ್ಣಮಂತ್ರ ಬೇಧದಿಂದ ಐದು ಬಗೆಯಾಗಿ ಹೇಳಲ್ಪಟ್ಟಿದೆ. ಲೋಕದಲ್ಲಿ ಅದೇ ವಿಷ್ಣು ಪೂಜೆಯೋ ವೈದಿಕಾರ್ಚನೆ ಎಂದೂ,

ಯನ್ಮಯಾ ಕೀರ್ತಿತಂ ಭೂಪ ನವ ಧ್ಯಾನಾರ್ಚನಾದಿಕವ್ ॥ ೬೯ ॥
ತದ್ವರ್ಣಮಂತ್ರಭೇದೇನ ಪಂಚಧಾ ಪರಿಕೀರ್ತಿತವ್ ।
ತದೇವಪೂಜನಂ ಲೋಕೇ ಚತುರ್ಧಾ ಪರಿಕಲ್ಪಿತವ್ ॥ ೭೦ ॥
ವೈದಿಕಾರ್ಚನಂ ವಿಷ್ಣೋಸ್ತತೋ ವೈದಿಕತಾಂತ್ರಿಕವ್ ।
ಪೌರಾಣಿಕಾರ್ಚನಂ ಚೈವ ಕೇವಲಂತಾಂತ್ರಿಕಾರ್ಚನವ್ ॥ ೭೧ ॥
ವೈದಿಕಂ ಬ್ರಾಹ್ಮಣಾನಾಂ ಚ ರಾಜ್ಞಾಂ ವೈದಿಕತಾಂತ್ರಿಕವ್ ।
ಪೌರಾಣಮರ್ಚನಂ ತಾತ ರಾಜ್ಞಾಕುತ್ರಚಿದೀರಿತವ್ ॥ ೭೨ ॥
ವೈಶ್ಯಾನಾವ್ ಭಕ್ತಿಯುಕ್ತಾನಾಂ ತಾಂತ್ರಿಕಾರ್ಚನಮೇವ ಚ ।
ಸ್ತ್ರೀಶೂದ್ರಾಣಾಂ ನೃಪಶ್ರೇಷ್ಠ ಕೇವಲಂ ತಾಂತ್ರಿಕಾರ್ಚನವ್ ॥ ೭೩ ॥
ವೇದಮಂತ್ರಾವಿಹೀನಂ ಚ ತಂತ್ರಯಂತ್ರೋಪ ವರ್ಜಿತವ್ ।
ಕ್ರಿಯತೇ ಪೂಜನಂ ತಸ್ಮೈ ತದ್ವೈದಿಕಮಿತಿಶ್ರುತವ್ ॥ ೭೪ ॥
ವೇದಮಂತ್ರಾ ವಿಹೀನಂ ಯತ್ಪೂಜನಂ ಕ್ರಿಯತೇ ಹರೇಃ ।
ತತ್ಪೂಜನಂ ಹರೇಶ್ರೇಷ್ಠಂ ತತೋ ವೈದಿಕತಾಂತ್ರಿಕವ್ ॥ ೭೫ ॥

ವೈದಿಕತಾಂತ್ರಿಕಾರ್ಚನೆ ಎಂದೂ ಪೌರಾಣಿಕಾರ್ಚನೆ ಎಂದೂ ಕೇವಲ ತಾಂತ್ರಿಕಾರ್ಚನೆ ಎಂದೂ, ನಾಲ್ಕು ವಿಧವಾಗಿ ಮಾಡಲ್ಪಟ್ಟಿದೆ. ಬ್ರಾಹ್ಮಣರಿಗೆ ವೈದಿಕಾರ್ಚನೆಯೂ, ರಾಜರಿಗೆ ವೈದಿಕ ತಾಂತ್ರಿಕಾರ್ಚನೆಯೂ, ಹೇಳಲ್ಪಟ್ಟಿದೆ. ಕೆಲವು ರಾಜರಿಗೆ ಪೌರಾಣಿಕಾರ್ಚನೆಯೂ, ಭಕ್ತಿಯುಕ್ತರಾದ ವೈಶ್ಯರಿಗೆ ತಾಂತ್ರಿಕಾರ್ಚನೆಯೂ ಹೇಳಲ್ಪಟ್ಟಿದೆ.

ಎಲೈ ರಾಜಶ್ರೇಷ್ಠನೇ, ಸ್ತ್ರೀ ಶೂದ್ರರಿಗೆ ಕೇವಲ ತಾಂತ್ರಿಕಾರ್ಚನೆಯೇ ವಿಹಿತವು. ವೇದಮಂತ್ರಸಹಿತವಾಗಿಯೂ, ತಂತ್ರ ಯಂತ್ರರಹಿತವಾಗಿಯೂ ವಿಷ್ಣುವಿಗೆ ಮಾಡುವ ಪೂಜೆಯು ವೈದಿಕಾರ್ಚನೆ ಎನ್ನಿಸಿಕೊಳ್ಳುತ್ತದೆ. ವೇದಮಂತ್ರ ಸಹಿತವಾಗಿ ವಿಷ್ಣುವಿಗೆ ಶ್ರೇಷ್ಠವಾದದ್ದು. ಆದರ ತರುವಾಯ ವೈದಿಕಾತಾಂತ್ರಿಕಾರ್ಚನೆಯು ಪುರಾಣದಲ್ಲಿ ಹೇಳಿರುವ ಪ್ರಕಾರ ಮಾಡುವ ವಿಷ್ಣುಪೂಜೆಯು ತಾಂತ್ರಿಕಾರ್ಚನೆ ಎಂದೆನಿಸಿಕೊಳುತ್ತದೆ. ಎಲೈ ರಾಜಶ್ರೇಷ್ಠನೆ, ಬ್ರಾಹ್ಮಣನೂ, ಕ್ಷತ್ರಿಯನೂ, ಶುದ್ರನೂ, ಸ್ತ್ರೀಜನವೂ

ಪುರಾಣೋತ್ಪನ್ನಮಾರ್ಗೇಣ ಕ್ರಿಯತೇ ಪೂಜನಂ ಚ ಯತ್ ।
ತತ್ಪೂಜನಂ ಹರೇಸ್ತಾತ ಪೌರಾಣೀಕಮಿತೀರಿತಮ್ ॥ ೭೬ ॥
ತಂತ್ರಾಂತರಪ್ರಧಾನಂ ಯದ್ವೇದಮಂತ್ರವಿವರ್ಜಿತಮ್ ।
ಪೂಜನಂ ತು ಹರೇರ್ವಿಷ್ಣೋಃ ತತ್ತಾಂತ್ರಿಕಮುದಾಹೃತಮ್ ॥ ೭೭ ॥
ಬ್ರಾಹ್ಮಣಃ ಕ್ಷತ್ರಿಯೋವೈಶ್ಯಃ ಶೂದ್ರಶ್ಚೈವ ನೃಪೋತ್ತಮ ।
ಸ್ತ್ರೀಜನೋ ನವಧಾಪೂಜಾ ಕರ್ಮಾಣಿ ಸುಸಮಾಚರೇತ್ ॥ ೭೮ ॥
ವೈದಿಕಾದಿವಿಭಾಗೇನ ಕರ್ತವ್ಯಾಚ ದ್ವಿಜಾತಿಭಿಃ ।
ಪಂಚಕಾಲವಿಧಾನೇನ ಪಾಂಚರಾತ್ರೋಕ್ತ ವರ್ತ್ಮನಾ ॥ ೭೯ ॥
ಆರಾಧನಂ ಸಮೀಹಸ್ವ ಪಂಚಕಾಲೇ ಹರಿಂಸದಾ ।
ಅಭಿಗಮನಮುಪಾದಾನಂ ಇಜ್ಯಾ ಚ ಸ್ವಯಮನ್ವಹಮ್ ॥ ೮೦ ॥
ಯೋಗಶ್ಚ ಪಂಚಮಂ ಜ್ಞೇಯಂ ಪಂಚಕಾಲೋಕ್ತ ಕರ್ಮಣಾ ।
ಯಃ ಕರೋತಿ ಮಹಾಭಾಗ ನಿರ್ವಾಣಂ ಪ್ರತಿಪದ್ಯತೇ ॥ ೮೧ ॥
ರಾಜಂಸ್ತ್ವಂ ಗಚ್ಛಶೈಲೇಶಂ ನಾಗಾಹ್ವಯಂ ಹರಿಣಾಯುತಮ್ ।

ಪೂಜಾಕರ್ಮಗಳನ್ನು ಒಂಬತ್ತು ಪ್ರಕಾರ ಮಾಡಬೇಕು. ಬ್ರಾಹ್ಮಣರು ವೈದಿಕಾದಿ ವಿಭಾಗದಿಂದಲೂ, ಪಂಚಕಾಲ ವಿಧಾನದಿಂದಲೂ, ಪಾಂಚರಾತ್ರಾಗಮದಲ್ಲಿ ಹೇಳಿರುವ ಪ್ರಕಾರವಾಗಿಯೂ ಮಾಡತಕ್ಕದ್ದು.

ಯಾವಾಗಲೂ ವಿಷ್ಣುವಿಗೆ ಪಂಚಕಾಲದಲ್ಲಿ ಪೂಜೆಯನ್ನು ಮಾಡು. ಅಭಿಗಮನ, ಉಪಾದಾನ, ಇಜ್ಯಾ, ಸ್ವಯಂ, ಯೋಗ ಐದನ್ನೂ, ತಿಳಿದು ಪಂಚಕಾಲೋಕ್ತವಾದ ಕಾರ್ಯಕ್ರಮದಿಂದ ಪ್ರತಿ ದಿವಸವೂ, ಪೂಜೆಯನ್ನು ಮಾಡುವವನು ಮೋಕ್ಷವನ್ನು ಪಡೆಯುತ್ತಾನೆ.

ಎಲೈ ರಾಜನೆ, ಹರಿಯಿಂದ ಕೂಡಿದ ಹಸ್ತಿನಾಮಕ ಪರ್ವತಕ್ಕೆ ನೀನು ಹೋಗಿ ಅಲ್ಲಿ ನರಸಿಂಹನನ್ನು ಪೂಜಿಸಲು ಕೋರಿದ ವರಗಳನ್ನು ಕೊಡುತ್ತಾನೆ. ದುಷ್ಟಶಿಕ್ಷಕನಾದ ಶ್ರೀನರಸಿಂಹನನ್ನು ಸದ್ಭಕ್ತಿಯಿಂದ ಪೂಜಿಸುವವನು ಇತರರಿಗೆ ದುರ್ಲಭವಾದ

ತತ್ರಗತ್ವಾನಾರಸಿಂಹಂ ಅರ್ಚಯಸ್ವ ಮಹಾಭುಜ ॥ ೮೨ ॥
ಅರ್ಚಿತೇ ನಾರಸಿಂಹೇ ಚ ದದಾತೀಷ್ಟಾನ್ಮನೋರಥಾನ್ ।
ಯೇ ಚಾರ್ಚಯಂತಿ ಸದ್ಭಕ್ತ್ಯಾ ನಾರಸಿಂಹಂ ಜನಾರ್ಧನಮ್ ॥ ೮೩ ॥
ತೇ ಯಾಂತಿ ವೈಷ್ಣವಂ ಧಾಮ ಇತರೇಷಾಂ ಸುದುರ್ಲಭಮ್ ।
ಕಿಮತ್ರ ಬಹುನೋಕ್ತೇನ ಶೈಲೇ ತಸ್ಮಿನ್ನೃಪೋತ್ತಮ ॥ ೮೪ ॥
ಕರ್ತವ್ಯಾಶ್ಚ ಕ್ರಿಯಾಸ್ತತ್ರ ಆತ್ಮನಸ್ಸುಖಮಿಚ್ಛತಾ ।
ನಾಗಾಹ್ವಯೇ ತಚ್ಛೈಲೇ ಭಗವಾನ್ವಿಷ್ಣುರವ್ಯಯಃ ॥ ೮೫ ॥
ಪ್ರೀತೋ ದಾಸ್ಯತಿ ವೈಕುಂಠಮಿತರೇಷಾಂ ಸುದುರ್ಲಭಮ್ ।
ಇತಿ ಸರ್ವಂ ಮಯಾಖ್ಯಾತಂ ತುಭ್ಯಂ ನೃಪವರೋತ್ತಮ ॥ ೮೬ ॥
ಮಹಾತ್ಮ್ಯಂ ಯಶ್ಶೃಣೋತ್ಯಸ್ಯ ವಾಚ್ಯಮಾನಂ ದ್ವಿಜೋತ್ತಮೈಃ ।
ನಿರ್ಧೂತಖಿಲಪಾಪಸ್ತು ಬ್ರಹ್ಮಭೂಯಾಯ ಕಲ್ಪತೇ ॥ ೮೭ ॥
ಯಃಪಠೇದಿದಮಾಖ್ಯಾನಂ ಶ್ರಾವಯೇದ್ವಾ ಸಮಾಹಿತಃ ।
ಮುಕ್ತೋ ಭೂತ್ವಾ ತು ವೈಕುಂಠೇ ವಸೇನ್ನಿತ್ಯಂ ನ ಸಂಶಯಃ ॥ ೮೮ ॥

ವಿಷ್ಣುಸ್ಥಾನವನ್ನು ಸೇರುವವನು. ಈ ವಿಷಯದಲ್ಲಿ ಹೆಚ್ಚಾಗಿ ಹೇಳಿ ಏನು ಪ್ರಯೋಜನ? ತನ್ನ ಸುಖವನ್ನು ಬಯಸುವವನು ಅಲ್ಲಿ ಈ ಕೆಲಸಗಳನ್ನು ಮಾಡಬೇಕು. ಹಸ್ತಿನಾಮಕ ಪರ್ವತದಲ್ಲಿ ನಾಶರಹಿತವಾದ ವಿಷ್ಣುವು ಸಂತುಷ್ಟನಾಗಿ ಇತರರಿಗೆ ದುರ್ಲಭವಾದ ವೈಕುಂಠವನ್ನು ಕೊಡುವನು. ಎಲೈ ರಾಜಶ್ರೇಷ್ಠನೆ, ಈ ಸಮಸ್ತವನ್ನೂ ನಾನು ನಿನಗೆ ಹೇಳಿದ್ದೇನೆ. ಬ್ರಾಹ್ಮಣರಿಂದ ಹೇಳಲ್ಪಡುವ ಈ ಪರ್ವತದ ಮಾಹಾತ್ಮ್ಯೆಯನ್ನು ಕೇಳುವವನು ಸರ್ವಪಾಪ ಮುಕ್ತನಾಗಿ ಬ್ರಹ್ಮಪದವನ್ನು ಸೇರಲುಸಮರ್ಥನಾಗುತ್ತಾನೆ.

ಈ ಕಥೆಯನ್ನು ಸ್ಥಿರಮನಸ್ಸಿನಿಂದ ಓದಿದವನೂ, ಅಥವಾ ಶ್ರವಣ ಮಾಡಿದವನೂ ಮುಕ್ತನಾಗಿ ಸದಾ ವೈಕುಂಠದಲ್ಲಿ ಇರುವನು. ಇದರಲ್ಲಿ ಸಂದೇಹವಿಲ್ಲ. ನಿನಗೆ ಮಂಗಳವಾಗಲಿ. ನನ್ನ ಯಜ್ಞವು ಸಂಪೂರ್ಣವಾಗುವುದು. ನಾನು ನಾಳೆ ಹೊರಡುವೆನು ಎಂದು ಹೇಳಿದ ಋಷಿಯನ್ನು ಆ ರಾಜನು ದಿವ್ಯವಾದ ವಸ್ತ್ರಗಳಿಂದಲೂ, ಗಂಧದಿಂದಲೂ, ಹೂಮಾಲೆಗಳಿಂದಲೂ, ಚೆನ್ನಾಗಿ ಪೂಜಿಸಿ ಮೂರು ಕೋಟಿ ದ್ರವ್ಯವನ್ನು

ಸ್ವಸ್ತಿತೇಸ್ತು ಗಮಿಷ್ಯಾಮಿ ಶ್ವೋ ಯಜ್ಞೋಭವಿತಾಮಮ ।
ಇತ್ಯುಕ್ತವಂತಂ ಮುನಿಪಂ ಸ ರಾಜಾ ಸಮಪೂಜಯತ್ ॥ ೮೯ ॥
ವಸ್ತ್ರೈರಾಭರಣೈಶ್ಚೈವ ಗಂಧಮಾಲ್ಯೈರ್ಮನೋರಮೈಃ ।
ಕೋಟಿತ್ರಯಂ ತದಾದತ್ವಾ ಪ್ರಾಹಿಣೋದಾಶ್ರಮಾಯ ಚ ॥ ೯೦ ॥
ಪರಿಕ್ರಮ್ಯ ಪ್ರಣಮ್ಯಾಥ ತನ್ಮುನಿಂ ಸೂರ್ಯವರ್ಚಸಮ್ ।
ಪ್ರಾಪಯಾಮಾಸ ಧರ್ಮಾತ್ಮಾ ನಿಮಿಃ ಪರಮಧರ್ಮವಿತ್ ॥ ೯೧ ॥
ಸ್ವಯಂ ಪೃಷ್ಠಮಾಗಾದ್ಭೂಪೋ ಹಸ್ತ್ಯಶ್ವರಥಸಂಕುಲಃ ।
ಶ್ರೀ ಸೂತಃ ಉವಾಚ :
ಪುರಂಪ್ರಾಪ್ಯ ಮಹೀಪಾಲಃ ಪುನಃ ಪುನರಚಿಂತಯತ್ ॥
ಋಷೀಣಾಂ ಚ ಗಿರೇಸ್ತತ್ರ ನಾರಸಿಂಹಸ್ಯ ಹೇದ್ವಿಜಾಃ ।
ಚರಿತಂ ಚ ಪುನಸ್ಸ್ಮೃತ್ವಾ ವಿಸ್ಮಯೋಭೂನ್ಮಹೀಪತಿಃ ॥ ೯೩ ॥
ಇತ್ಯೇತತ್ಸರ್ವಮಾಖ್ಯಾತಂ ಮಯಾವ್ಯೆ ಮುನಿಸತ್ತಮಾಃ ।
ವರ್ಣಿತುಂ ಶುಭದಂ ಸರ್ವೇ ಗಚ್ಛಧ್ವಂ ಕುಸುಮಾಚಲಮ್ ॥ ೯೪ ॥

ಕೊಟ್ಟು ಆಶ್ರಮಕ್ಕೆ ಕಳುಹಿಸಿದನು. ಧರ್ಮಾತ್ಮನೂ, ಪರಮ ಧರ್ಮಜ್ಞನೂ ಆದ ನಿಮಿಚಕ್ರವರ್ತಿಯು ಸೂರ್ಯತೇಜಸ್ಸುಳ್ಳ ಆ ಋಷಿಗೆ ಪ್ರದಕ್ಷಿಣೆ ನಮಸ್ಕಾರವನ್ನು ಮಾಡಿ ಆನೆ, ಕುದುರೆ, ರಥಗಳೊಡನೆ ತಾನೂ ಋಷಿಯನ್ನು ಆಶ್ರಮದವರೆಗೆ ಬೀಳ್ಕೊಟ್ಟನು.

ಸೂತರು ಈ ರೀತಿ ಬ್ರಾಹ್ಮಣನಿಗೆ ಹೇಳುತ್ತಾರೆ. ಎಲೈ ಬ್ರಾಹ್ಮಣನೆ, ಆ ರಾಜನು ಪಟ್ಟಣಕ್ಕೆ ಹೋಗಿ ಅಲ್ಲಿ ಋಷಿಗಳು ಹೇಳಿದ ಆ ಕರಿಗಿರಿ ಪರ್ವತ ಮತ್ತು ಶ್ರೀನರಸಿಂಹನ ಚರಿತ್ರೆಯನ್ನು ಬಾರಿಬಾರಿಗೂ ಸ್ಮರಿಸಿ, ಆಲೋಚನೆ ಮಾಡುತ್ತಾ ಆಶ್ಚರ್ಯ ಪಟ್ಟನು. ಎಲೈ ಋಷಿಶ್ರೇಷ್ಠರೇ, ಇದನ್ನೆಲ್ಲಾ ನಾನು ನಿಮಗೆ ಹೇಳಿದೆನು. ವರ್ಣಿಸಲು ಮಂಗಳಕರವಾದ ಕುಸುಮಾಚಲಕ್ಕೆ ನೀವು ಹೋಗಿ; ದುಷ್ಟ ಶಿಕ್ಷಕನಾದ ಶ್ರೀನರಸಿಂಹರೂಪಿಯೂ, ಲಕ್ಷ್ಮೀಸಮೇತನೂ ಆದ ನಾರಾಯಣ ಸ್ವಾಮಿಯನ್ನೂ ಧ್ಯಾನಮಾಡಿ ಮೋಕ್ಷವನ್ನು ಪಡೆಯಿರಿ.

ತತ್ರ ನಾರಾಯಣಂ ದೇವಂ ನಾರಸಿಂಹಂ ಜನಾರ್ಧನಮ್ ।
ಸ ಲಕ್ಷ್ಮೀಕಂ ಹರಿಂ ಧ್ಯಾತ್ವಾ ಮೋಕ್ಷಮಾರ್ಗಮವಾಪ್ಸ್ಯಥ ॥ ೯೫ ॥
ಯಶ್ಶೃಣೋತಿ ಸದಾಭಕ್ತ್ಯಾ ಮಾಹಾತ್ಮ್ಯಂ ಕೇಶವಸ್ಯ ಚ ।
ಬ್ರಾಹ್ಮಣೈಸ್ಸಹಧರ್ಮಜ್ಞೋ ಯಃ ಕೋವಾಪಿ ಸಮಾಹಿತಃ ॥ ೯೬ ॥
ಸಯಾತಿ ಬ್ರಹ್ಮ ಸಾಯುಜ್ಯಂ ನಾತ್ರಕಾರ್ಯಾ ವಿಚಾರಣಾ ।
ವದತಾಂ ಶೃಣ್ವತಾಂ ಚೈವ ಮಾಹಾತ್ಮ್ಯಮಘನಾಶನಮ್ ॥ ೯೭ ॥
ಮಾಹಾತ್ಮ್ಯಂ ಪಠತೇ ಯಸ್ತು ಸ ಯಾತಿ ಹರಿಮಂದಿರಮ್ ।
ಶ್ರುಣೋತಿ ಶ್ರದ್ಧಯಾಯುಕ್ತೋ ನರಃ ಪಾಪೈಃ ಪ್ರಮುಚ್ಯತೇ ॥ ೯೮ ॥
ಯಶ್ಶೃಣೋತಿ ಸದಾ ಭಕ್ತ್ಯಾ ಕೈವಲ್ಯಂ ಪ್ರತಿಪದ್ಯತೇ ।
ಪ್ರಾಪ್ನೋತಿ ಮುನಿಶಾರ್ದೂಲಾಃ ಸತ್ಯಂ ಸತ್ಯಂ ಮಯೋದಿತಮ್ ॥ ೯೯ ।
ಕೃತ್ಸ್ನಾನ್ವಕ್ತುಂ ಬ್ರಹ್ಮಣಾಪಿ ನಾಲಂ ವರ್ಷ ಶತೈರಪಿ ॥ ೧೦೦ ॥
ಅಹಂ ತು ವಿಸ್ತರಾದ್ವಕ್ತುಂ ನಶಕ್ನೋಮಿ ದ್ವಿಜೋತ್ತಮಾಃ ।
ತಸ್ಮಾತ್ಸಮಾಸತಸ್ಸರ್ವಂ ವರ್ಣಿತಂ ಚರಿತಂ ಮಯಾ ॥ ೧೦೧ ॥
ಯಶ್ಶೃಣೋತಿ ಸದಾ ಭಕ್ತ್ಯಾ ಮಾಹಾತ್ಮ್ಯಂ ಚ ಹರೇಸ್ಸದಾ ।

ಧರ್ಮಜ್ಞನಾದ ಯಾವ ಮನುಷ್ಯನೇ ಆಗಲಿ ಸ್ಥಿರಮನಸ್ಕನಾಗಿ ಭಕ್ತಿಯಿಂದ ಬ್ರಾಹ್ಮಣರೊಡನೆ ಈ ಮಾಹಾತ್ಮ್ಯೆಯನ್ನು ಸದಾ ಕೇಳುವನೋ ಅವನು ಬ್ರಹ್ಮಸಾಯುಜ್ಯವನ್ನು ಹೊಂದುವನು. ಇದರಲ್ಲಿ ಯೋಚನೆ ಮಾಡಬೇಕಾದ್ದಿಲ್ಲ. ಈ ಮಾಹಾತ್ಮ್ಯೆಯನ್ನು ಹೇಳುವವರಿಗೂ, ಕೇಳುವವರಿಗೂ ಪಾಪವು ನಾಶಾವಾಗುವುದು. ಈ ಮಾಹಾತ್ಮ್ಯೆಯನ್ನು ಯಾರು ಕೇಳುವರೋ ಅವರು ವಿಷ್ಣುವಿನ ಮನೆಯನ್ನು ಸೇರುವರು. ಇದನ್ನು ಶ್ರದ್ಧೆಯಿಂದ ಕೇಳಿದವನು ಪಾಪ ಮುಕ್ತನಾಗುತ್ತಾನೆ. ಭಕ್ತಿಯಿಂದ ಸದಾ ಕೇಳುವವನು ಮೋಕ್ಷವನ್ನು ಹೊಂದುತ್ತಾನೆ. ಎಲೈ ಋಷಿಶ್ರೇಷ್ಠರೇ, ನಾನು ಹೇಳಿದ್ದು ಸತ್ಯವು! ಸತ್ಯವು! ಕುಸುಮಾಚಲದ ಮಾಹಾತ್ಮ್ಯೆಯನ್ನು ನಾನು ಸ್ವಲ್ಪ ವರ್ಣಿಸಿದ್ದೇನೆ. ಸಮಗ್ರವಾಗಿ ಹೇಳಲು ನೂರು ವರ್ಷಗಳಾದರೂ ಬ್ರಹ್ಮನಿಗೂ ಸಾಲದು. ನಾನಾದರೋ ವಿಸ್ತಾರಾವಾಗಿ ಹೇಳಲು ಶಕ್ತನಲ್ಲ. ಆದಕಾರಣ ಈ

ಸಸಪ್ತಕುಲಮುದ್ಧೃತ್ಯ ವಿಷ್ಣುಲೋಕೇ ಮಹೀಯತೇ ॥ ೧೦೨ ॥
॥ ಇತಿ ಶ್ರೀ ಬ್ರಹ್ಮಾಂಡಪುರಾಣೇ ಶ್ರೀ ಕರಿಗಿರಿ ಮಾಹಾತ್ಮ್ಯೇ
ದ್ವಾದಶೋಧ್ಯಾಯಃ ಸಮಾಪ್ತಃ ॥

॥ ಶ್ರೀ ಕೃಷ್ಣಾರ್ಪಣಮಸ್ತು ॥

ಚರಿತ್ರೆಯನ್ನೆಲ್ಲಾ ಒಟ್ಟಿಗೆ ವರ್ಣಿಸಿದ್ದೇನೆ.

ಶ್ರೀಹರಿಯ ಈ ಮಾಹಾತ್ಮ್ಯೆಯನ್ನು ಭಕ್ತಿಯಿಂದ ಸದಾ ಕೇಳುವವನು ಏಳು ಕುಲಗಳನ್ನು ಉದ್ಧಾರಮಾಡಿ ವಿಷ್ಣುಲೋಕದಲ್ಲಿ ವಿರಾಜಿಸುತ್ತಾನೆ.

ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿರುವ ಕರಿಗಿರಿ ಮಹಾತ್ಮೆಯಲ್ಲಿ ಹನ್ನೆರಡನೆಯ ಅಧ್ಯಾಯವು ಮುಕ್ತಾಯವಾಯಿತು.

॥ ಶ್ರೀ ಕೃಷ್ಣಾರ್ಪಣಮಸ್ತು ॥

ಇತರೆ ಪ್ರಕಟಣೆಗಳು:

ಶ್ರೀ ಸಹ್ಯಾದ್ರಿ ಖಂಡಸ್ಥ ಸೋದಾಕ್ಷೇತ್ರ ಮಹಿಮೆ

ಸ್ತ್ರೀ ಧರ್ಮಾನುಷ್ಠಾನ ಪದ್ಧತಿ

ಶ್ರೀ ಲಕ್ಷ್ಮೀ ಶೋಭಾನೆ (ಕನ್ನಡ ಅನುವಾದ ಸಹಿತ)

ಶ್ರೀ ಮಾಧವಸ್ಥವರಾಜ (ಕನ್ನಡ ಅನುವಾದ ಸಹಿತ)

ಶ್ರೀ ಜಿತಂತೇ ಸ್ತೋತ್ರ (ಕನ್ನಡ ಅನುವಾದ ಸಹಿತ)

ಶ್ರೀ ನಾರದೀಯ ಭಕ್ತಿ ಸೂತ್ರಗಳು

ಶ್ರೀ ಶಾಂಡಿಲ್ಯ ಭಕ್ತಿ ಸೂತ್ರಗಳು

ದ್ವಾದಶ ಪುರಾಣಾಂತರ್ಗತ ಶ್ರೀ ವೇಂಕಟಗಿರಿ ಮಹಾತ್ಮೇ